"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

**156ನೇ ಅಧಿವೇಶನ**

**ಗುರುವಾರ, 21ನೇ ಆಗಸ್ಟ್ 2025**

## ವಿಷಯಾನುಕ್ರಮಣಿಕೆ (INDEX)

### 01. ಸಭೆಯ ಮುಂದಿಡಲಾದ ಕಾಗದ ಪತ್ರ

"ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿ

### 02. ವಿತ್ತೀಯ ಕಾರ್ಯಕಲಾಪ

**"2025-26ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಒಪ್ಪಿಸುವುದು."**

**- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)**

### 03. ಚುನಾವಣಾ ಪ್ರಸ್ತಾವ

**"ವಿಧಾನಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ."**

**(ಪ್ರಸ್ತಾವ ಅಂಗೀಕೃತವಾಯಿತು)**

### 04. ಶಾಸನ ರಚನೆ

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)
- ಶ್ರೀ ಐವನ್ ಡಿ'ಸೋಜಾ
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಗೋವಿಂದರಾಜು
- ಶ್ರೀ ಶರವಣ ಟಿ.ಎ.
- ಶ್ರೀ ಡಿ.ಎಸ್.ಅರುಣ್
- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)

- ಶ್ರೀ ಚಿದಾನಂದ ಎಂ. ಗೌಡ
- ಶ್ರೀ ಹೆಚ್.ಎಸ್.ಗೋಪಿನಾಥ್
- ಡಾ॥ ಉಮಾಶ್ರೀ
- ಶ್ರೀಮತಿ ಬಲ್ಕೀಸ್ ಬಾನು
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)
- ಶ್ರೀ ಗೋವಿಂದರಾಜು
- ಶ್ರೀ ಶರವಣ ಟಿ.ಎ.
- ಶ್ರೀ ಹೆಚ್.ಎಸ್.ಗೋಪಿನಾಥ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**೦5. “ಚಿತ್ರದುರ್ಗದ ಅಂಬೇಡ್ಕರ್ ಹಾಸ್ಟೆಲ್‌ನಲ್ಲಿದ್ದುಕೊಂಡು ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯನ್ನು ಬರ್ಬರವಾಗಿ ಹತ್ಯೆಗೈದು ನಂತರ ಸುಟ್ಟು ಹಾಕಿರುವ ಕುರಿತು.”**

- ಶ್ರೀ ಕೆ.ಎಸ್. ನವೀನ್
- ಡಾ॥ ಜಿ. ಪರಮೇಶ್ವರ (ಗೃಹ ಸಚಿವರು)

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಇ) ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2025**

- ಡಾ.ಜಿ.ಪರಮೇಶ್ವರ (ಗೃಹ ಸಚಿವರು)
- ಶ್ರೀ ಐವನ್ ಡಿ’ಸೋಜಾ
- ಶ್ರೀ ಶರವಣ ಟಿ.ಎ.
- ಶ್ರೀ ಗೋವಿಂದರಾಜು
- ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಡಿ.ಎಸ್. ಅರುಣ್
- ಶ್ರೀ ಕೆ.ಎಸ್.ನವೀನ್
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಕೆ.ವಿವೇಕಾನಂದ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ವಿಧೇಯಕ, 2025**

– ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025**

– ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)
– ಶ್ರೀ ಕೇಶವ ಪ್ರಸಾದ್ ಎಸ್.
– ಶ್ರೀ ಡಿ.ಎಸ್.ಅರುಣ್
– ಡಾ॥ ಧನಂಜಯ ಸರ್ಜಿ
– ಶ್ರೀ ಶರವಣ ಟಿ.ಎ.
– ಶ್ರೀ ನಸೀರ್ ಅಹ್ಮದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**೦7. ಶಾಸನ ರಚನೆ**

**ವಿಧೇಯಕಗಳನ್ನು ಹಿಂಪಡೆಯುವುದು.**

**ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**ಆ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**ಇ) ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024**

ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ)

**(ವಿಧೇಯಕವನ್ನು ಹಿಂಪಡೆಯಲಾಯಿತು)**

**೦8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಊ) ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯ ಸಚಿವರು(ಪೌರಾಡಳತ ಮತ್ತು ಹಜ್ ಸಚಿವರ ಪರವಾಗಿ)
- ಶ್ರೀ ಎಸ್.ವ್ಹಿ. ಸಂಕನೂರ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಋ) ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಶರವಣ ಟಿ.ಎ.
- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

## 09. ಪ್ರಕಟಣೆ

**"ವಿಧಾನಸಭೆಯಲ್ಲಿ ಅಂಗೀಕೃತಗೊಂಡ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡುವ ಬಗ್ಗೆ."**

## 10 ವರದಿಯನ್ನೊಪ್ಪಿಸುವುದು

**"ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 5ನೆಯ ವರದಿಯ ಮಂಡನೆ"**

## 11. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

**1218 - ರಾಜ್ಯದಲ್ಲಿನ ನೇಮಕಾತಿ ಪ್ರಾಧಿಕಾರಗಳ ವಿಭಿನ್ನ ನಿಯಮಗಳ ಅನುಸಾರ ನೇಮಕಾತಿ ಮಾಡಲು ಅವಕಾಶ ಮಾಡಿಕೊಟ್ಟಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆಗುತ್ತಿರುವ ಅನ್ಯಾಯದ ಕುರಿತು.**

- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**1234 + 1292 – ಬೆಂಗಳೂರು ನಗರದ ಸ್ವಚ್ಛತೆ/ಕಸ ವಿಲೇವಾರಿ ಕುರಿತು.**

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1239 – ಸರ್ಕಾರದ ವಿವಿಧ ಯೋಜನೆಗಳ ಜಾಹೀರಾತುಗಳ ಬಗ್ಗೆ.**

- ಶ್ರೀ ಡಿ.ಎಸ್.ಅರುಣ್
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**1176 – ಹುಬ್ಬಳ್ಳಿ ಮತ್ತು ಬೆಳಗಾವಿಗಳಲ್ಲಿರುವ ಕ್ರಿಕೆಟ್ ಸ್ಟೇಡಿಯಂಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಕುರಿತು.**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**522 – ಫೈನಾನ್ಸ್ ಕಂಪನಿಗಳ ಮುಂದುವರೆದ ಕಿರುಕುಳದ ಬಗ್ಗೆ.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**1139 – ಕೆರೆಗಳ ಅಭಿವೃದ್ಧಿ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎನ್.ಎಸ್. ಬೋಸರಾಜು (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**1180 – ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಇಲ್ಲಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಕುರಿತು.**

- ಶ್ರೀ ಎಸ್.ವ್ಹಿ. ಸಂಕನೂರ
- ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**1117 – ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಗೆ ತಂದಿರುವ ಕುರಿತು.**

- ಶ್ರೀ ಟಿ.ಎನ್.ಜವರಾಯಿ ಗೌಡ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1236 – ಹಾಸನ ಜಿಲ್ಲೆಯ ಹೇಮಾವತಿ ಮತ್ತು ಯಗಚಿ ನದಿಹರಿವುಗಳಲ್ಲಿನ ಗ್ರಾಮಗಳ ಕುರಿತು.**

- ಶ್ರೀ ಸೂರಜ್ ರೇವಣ್ಣ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1192 – ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ.**

- ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು) (ಶ್ರೀ ಪಿ.ಹೆಚ್.ಪೂಜಾರ್‌ರವರ ಪರವಾಗಿ)
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

1403 – ವೀಲಿಂಗ್ ಹಾವಳಿ ತಡೆಗಟ್ಟುವ ಬಗ್ಗೆ.

- ಡಾ: ಕೆ.ಗೋವಿಂದರಾಜ್
- ಡಾ: ಜಿ.ಪರಮೇಶ್ವರ್ (ಗೃಹ ಸಚಿವರು)

1150 – ಸೈಬರ್ ಕ್ರೈಂ ಗಳನ್ನು ಹತೋಟಿಯಲ್ಲಿಡಲು ಕೈಗೊಂಡಿರುವ ಕ್ರಮಗಳ ಬಗ್ಗೆ.

- ಶ್ರೀ ಎಸ್.ರವಿ
- ಡಾ: ಜಿ.ಪರಮೇಶ್ವರ್ (ಗೃಹ ಸಚಿವರು)

1125 – ಮಾದಕ ವಸ್ತುಗಳ ಕುರಿತು.

- ಶ್ರೀ ಎನ್.ರವಿಕುಮಾರ್
- ಡಾ: ಜಿ.ಪರಮೇಶ್ವರ್ (ಗೃಹ ಸಚಿವರು)

ಆ) ತಡೆ ಹಿಡಿಯಲಾದ ಪ್ರಶ್ನೆಗಳು

493 – ಪೊಲೀಸ್ ಇಲಾಖೆ ಅಧಿಕಾರಿಗಳ ಗೃಹ ಸೇವಕ ಭತ್ಯೆ ಕುರಿತು.

- ಶ್ರೀ ಅಡಗೂರು ಹೆಚ್.ವಿಶ್ವನಾಥ್
- ಡಾ: ಜಿ.ಪರಮೇಶ್ವರ್ (ಗೃಹ ಸಚಿವರು)

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

12. ಪ್ರಕಟಣೆ

**"ವಿಧಾನಸಭೆಯು ಅಂಗೀಕರಿಸಿರುವ ಕರ್ನಾಟಕ ಧನ ವಿನಿಯೋಗ (ಸಂಖ್ಯೆ: 3) ವಿಧೇಯಕ, 2025ಕ್ಕೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಕುರಿತು.**

13. ಕಾರ್ಯದರ್ಶಿಯವರ ವರದಿ

14. ಅಧಿಕೃತ ನಿರ್ಣಯ

ಅ) "ಸುಸ್ಥಿರ ಶಾಂತಿಯು ಅಂತರರಾಷ್ಟ್ರೀಯ ಸಮುದಾಯದ ಜವಾಬ್ದಾರಿ ಮಾತ್ರವಲ್ಲದೆ ಸ್ಥಳೀಯ ಸಮುದಾಯಗಳು ಮತ್ತು ಪಾಲುದಾರರು ಸಾಮೂಹಿಕವಾಗಿ ನಿರ್ಮಿಸಬೇಕಾದ ಹಂಚಿಕೆಯ ಬಾಧ್ಯತೆಯ ಬಗ್ಗೆ.

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**(ನಿರ್ಣಯ ಅಂಗೀಕರಿಸಲ್ಪಟ್ಟಿತು)**

**ಆ) ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಕುರಿತು.**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**(ನಿರ್ಣಯ ಅಂಗೀಕರಿಸಲ್ಪಟ್ಟಿತು)**

## 15. ಶಾಸನ ರಚನೆ

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಎ) ಕರ್ನಾಟಕ ಧನವಿನಿಯೋಗ (ಸಂಖ್ಯೆ: 3) ವಿಧೇಯಕ, 2025**

- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)
- ಶ್ರೀ ಕೆ.ಎಸ್.ನವೀನ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಟಿ.ಎ.ಶರವಣ
- ಶ್ರೀ ನಸೀರ್ ಅಹಮದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

- - - - - - -

(886) 21.08.2025 10.20 ಹೆಚ್‌ವಿ.ಎಕೆ (ಸಭಾಪತಿಯವರ ಉಪಸ್ಥಿತಿ)

# ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ, ದಿನಾಂಕ 21ನೇ ಆಗಸ್ಟ್ 2025**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 29 ನಿಮಿಷಗಳಿಗೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಾದರು.**

**01 ಸಭೆಯ ಮುಂದಿಡಲಾದ ಕಾಗದ ಪತ್ರ**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿ (2025ರ ವರದಿ ಸಂಖ್ಯೆ-6)ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

(887) 21.8.2025 10.30 ಪಿಕೆ:ಎಕೆ (ಸಭಾಪತಿಗಳ ಉಪಸ್ಥಿತಿ)

**02. ವಿತ್ತೀಯ ಕಾರ್ಯಕಲಾಪ**

**2025-26ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಒಪ್ಪಿಸುವುದು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, 2005-26ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಒಪ್ಪಿಸಲಾಯಿತು.

**ಸಭಾಪತಿಯವರು:-** ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ವರದಿಯನ್ನು ಒಪ್ಪಿಸಲು ಸಮಿತಿಯ ಸದಸ್ಯರಾದ ಡಾ: ಡಿ. ತಿಮ್ಮಯ್ಯ ಅಥವಾ ಸದರಿ ಸಮಿತಿಯ ಇತರ ಸದಸ್ಯರು ಸದನದಲ್ಲಿ ಇಲ್ಲ.

**03. ಚುನಾವಣಾ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸರಾಜು (ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, 2025-26ನೇ ಸಾಲಿನ ವಿಧಾನಮಂಡಲದ ಜಂಟಿ ಹಾಗೂ ವಿಧಾನಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ವಿಧಾನಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಕುರಿತು 13.8.2025ರಂದು ಚುನಾವಣಾ ಪ್ರಸ್ತಾವವನ್ನು ಮಂಡಿಸಲಾಗಿರುತ್ತದೆ.

ನಡೆದು ಬಂದ ಸಂಪ್ರದಾಯದಂತೆ 2025-26ನೇ ಸಾಲಿನ ವಿಧಾನ ಮಂಡಲದ ಜಂಟಿ ಸದನ ಸಮಿತಿಗಳಿಗೆ, ವಿಧಾನಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಚುನಾವಣಾ ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರೆಯಿತು**

**೦4. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ (ತಿದ್ದುಪಡಿ) ವಿಧೇಯಕ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, ಇದು ಕೇಂದ್ರದ ಜಲಶಕ್ತಿ ಅಭಿಯಾನದ ಅಡಿ ಬರುತ್ತದೆ. ಅಂತರ್ಜಲ ತೆಗೆಯುವುದನ್ನು ನಿಯಂತ್ರಣ ಮಾಡುವುದಕ್ಕಾಗಿ ತಂದಿರುವ ತಿದ್ದುಪಡಿ ಇದಾಗಿದೆ. ಈ ಯೋಜನೆಯನ್ನು ಈಗಾಗಲೇ 15 ರಾಜ್ಯಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಕೇಂದ್ರ ಸರ್ಕಾರ ಸೂಚಿಸಿದ ತಿದ್ದುಪಡಿಯನ್ವಯ ಎಲ್ಲಾ ರಾಜ್ಯಗಳು ಅಳವಡಿಸಿಕೊಳ್ಳಬೇಕು. Groundwater exploitation ಅಗುವುದರಿಂದ, ಅದನ್ನು ನಿಯಂತ್ರಣ ಮಾಡುವುದಕ್ಕೆ ಸದರಿ ವಿಧೇಯಕವನ್ನು ತರಲಾಗಿದೆ. 2025-26ರ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ಇದನ್ನು ಜಾರಿಗೊಳಿಸಬೇಕು ಎನ್ನುವ ನಿರ್ಧಾರ ತೆಗೆದುಕೊಂಡಿದೆ. ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳ ಅಂಶ ಕೂಡ ಇದರಲ್ಲಿ ಬಂದಿದೆ. ಕೇಂದ್ರ ಅಂತರ್ಜಲ ಪ್ರಾಧಿಕಾರ, ಹೊಸದೆಹಲಿ ಇವರು ಹೊರಡಿಸಿದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಜನವಿಶ್ವಾಸ್ (ಉಪಬಂಧಗಳ ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ 18)ರ ಅನುಸಾರ ಉಪಬಂಧಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ಕೂಡ ಮಾಡಿದ್ದೇವೆ. ಇದರಲ್ಲಿ ಎನ್‌ಓಸಿ ಕೊಡುವಂತಹ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವೈಯಕ್ತಿಕ ಗೃಹೋಪಯೋಗಿ ಗ್ರಾಹಕರುಗಳಿಗೆ ಇದರಿಂದ ಯಾವುದೇ ಆತಂಕ ಇಲ್ಲ. ಗ್ರಾಮೀಣ ಕುಡಿಯುವ ನೀರು ಸರಬರಾಜು ಸ್ಕೀಮುಗಳಿಗೆ ತೊಂದರೆ ಇಲ್ಲ. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿನ ಸಶಸ್ತ್ರ ಪಡೆಯ ಕಾರ್ಯಸಂಸ್ಥೆಗಳು ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ದಳಗಳ ಕಾರ್ಯ ಸಂಸ್ಥೆಗಳಿಗೆ ಎನ್‌ಓಸಿಯ ಅವಶ್ಯಕತೆ

ಇರುವುದಿಲ್ಲ. ಕೃಷಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಗಕೆಗಳು ಅಥವಾ ಗಣಿಗಾರಿಕೆ ಪ್ರಾಜೆಕ್ಟ್‌ಗಳು ಅಥವಾ ಮೂಲಸೌಕರ್ಯ ಪ್ರಾಜೆಕ್ಟ್‌ಗಳ ಎಲ್ಲಾ ನಿರ್ಧರಿಸಿದ ಘಟಕಗಳಿಗೆ ಕೇವಲ ಕುಡಿಯುವ ಅಥವಾ ಗೃಹ ಬಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿನಕ್ಕೆ 5 ಘನ ಮೀಟರ್‌ವರೆಗೆ ಮತ್ತು ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳಿಗೆ ಇದು ಅನ್ವಯಿಸುವುದಿಲ್ಲ. ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯಬಹುದು. ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳ ಸಂಬಂಧ ಎನ್‌ಓಸಿ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಯಾವ ಪ್ರದೇಶದಲ್ಲಿ bulk water ಉಪಯೋಗ ಮಾಡುತ್ತಾರೋ, ಅದು ಗಣಿಗಾರಿಕೆಗೆ ಸಂಬಂಧಪಟ್ಟಿದ್ದಿರಬಹುದು, ಕೈಗಾರಿಕೆಗಳಿರಬಹುದು ಮತ್ತು mineral water factories ಮತ್ತು tankers ಮುಖಾಂತರ ನೀರು ಸರಬರಾಜು ಮಾಡುವಂಥದ್ದಕ್ಕೆ ಮಾತ್ರ ನಿರಾಕ್ಷೇಪಣ ಪತ್ರವನ್ನು ತೆಗೆದುಕೊಳ್ಳಬೇಕಾದರೆ ಅವರಿಗೆ ಕೆಲವು ಕಂಡೀಷನ್‌ಗಳನ್ನು ಹಾಕಲಾಗುತ್ತದೆ. ಅಂದರೆ ದಿನಕ್ಕೆ ಇಂತಿಷ್ಟೇ ನೀರನ್ನು ತೆಗೆಯಬೇಕು ಎಂದು ನಿಗದಿಪಡಿಸಲಾಗುತ್ತದೆ. ಈ ನಿಯಮವನ್ನು ಅನುಸರಿಸದೇ ಇದ್ದರೆ ಅಂಥವರಿಗೆ ದಂಡ ವಿಧಿಸಲಾಗುತ್ತದೆ. ಹಿಂದೆ, ಈ ನಿಯಮಗಳನ್ನು ಉಲ್ಲಂಘಿಸಿದವರನ್ನು 6 ತಿಂಗಳು ಕಾರಾಗೃಹ ವಾಸ ಎಂಬುದಿತ್ತು. ಈಗ ಅದನ್ನು ತೆಗೆದು ಹಾಕಲಾಗಿದೆ. ಹಿಂದೆ ಏನು ರೂ. 5,000 ಪೆನಾಲ್ಟಿ ಎಂದಿತ್ತೋ ಆ ಜಾಗದಲ್ಲಿ ರೂ. 10,000 ಎಂದು ಮಾಡಿದ್ದೇವೆ. ರೂ. 10,000 ಪೆನಾಲ್ಟಿ ಎಂದು ಇದ್ದುದನ್ನು ತಿದ್ದುಪಡಿ ಮಾಡಿ ರೂ. 25,000 ಪೆನಾಲ್ಟಿ ಹಾಕಲಾಗುತ್ತದೆ. ಅವರು ಮಾಡಿದ ತಪ್ಪನ್ನು ಪದೇ ಪದೇ ಮಾಡುತ್ತಿದ್ದರೆ ಪ್ರತಿದಿವಸ ಕೂಡ ಪೆನಾಲ್ಟಿ ಹಾಕುವ ಅವಕಾಶ ಇದರಲ್ಲಿ ಕಲ್ಪಿಸಲಾಗಿದೆ. ನಮ್ಮ ರಾಜ್ಯದಲ್ಲಿ ಅಂತರ್ಜಲವನ್ನು overexploit ಮಾಡುತ್ತಿದ್ದಾರೆ. ಇದರಲ್ಲಿ ಇಡೀ ದೇಶದಲ್ಲಿ ನಮ್ಮ ರಾಜ್ಯ 9ನೇ ಪ್ಲೇಸ್‌ನಲ್ಲಿದೆ. ಹಾಗಾಗಿ ಇದನ್ನು ಅನಿವಾರ್ಯವಾಗಿ ನಿಯಂತ್ರಣ ಮಾಡಬೇಕಿದೆ. Groundwater overexploitation ನ ಕಾರಣ ರಾಜ್ಯದ ಅನೇಕ ಭಾಗಗಳಲ್ಲಿ ಅದು deplete ಆಗಿ 1200-1300 ಅಡಿ ಆಳದಿಂದ ನೀರು ತೆಗೆಯಬೇಕಾದ ಪರಿಸ್ಥಿತಿ ಇದೆ. ಇಂಥದ್ದನ್ನು ನಿಯಂತ್ರಣ ಮಾಡುವುದಕ್ಕೆ ಮತ್ತು ಅಂತರ್ಜಲವನ್ನು improve ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಬಲ್ಕ್ ವಾಟರ್ ಅನ್ನು ಅತಿ ಹೆಚ್ಚು ಉಪಯೋಗ ಮಾಡುವಂಥದ್ದನ್ನು ನಿಯಂತ್ರಣ ಮಾಡಿ, ಪ್ರತಿ ದಿವಸ ಇಂತಿಷ್ಟು ನೀರನ್ನು ಮಾತ್ರ ತೆಗೆಯಬೇಕು ಎಂದು ಕಂಡೀಷನ್ ಹಾಕಿದ್ದೇವೆ. ಅಂಥವರಿಗೆ ಚಾರ್ಜಸ್ ಕೂಡ ಫಿಕ್ಸ್ ಮಾಡಿದ್ದೇವೆ. ಪ್ಯಾಕೇಜ್ಡ್ ಕುಡಿಯುವ ನೀರು ಮಾರಾಟ ಮಾಡುವವರು ಎಷ್ಟು ಚಾರ್ಜ್ ಕೊಡಬೇಕು, ಕೈಗಾರಿಕೆಗಳಿಗೆ ಎಷ್ಟು ಚಾರ್ಜ್ ಮಾಡಬೇಕು, ಅಪಾರ್ಟ್‌ಮೆಂಟ್ ಮತ್ತು ಗ್ರೂಪ್ ಹೌಸಿಂಗ್ ಸೊಸೈಟಿಯವರಿಗೆ ಎಷ್ಟು ಚಾರ್ಜ್ ಮಾಡಬೇಕು ಎಂಬುದನ್ನು ನಿಗದಿ ಮಾಡಿದ್ದೇವೆ. 0 ರಿಂದ 25 ಸಾವಿರ ಲೀಟರ್‌ವರೆಗೆ ಯಾವುದೇ ಚಾರ್ಜ್ ಇಲ್ಲ. 25 ಸಾವಿರದಿಂದ 2 ಲಕ್ಷ ಲೀಟರ್ ನೀರಿಗೆ ಪ್ರತೀ ಲೀಟರ್‌ಗೆ ಒಂದು

ರೂಪಾಯಿ ಮತ್ತು 2 ಲಕ್ಷ ಲೀಟರ್ ಮೇಲ್ಪಟ್ಟು ಬಳಸುವವರಿಗೆ ಪ್ರತಿ ಲೀಟರ್‌ಗೆ ಎರಡು ರೂಪಾಯಿ ಚಾರ್ಜ್ ಆಗುತ್ತದೆ. Groundwater over exploitation ಮಾಡಿ ನೀರನ್ನು ತೆಗೆದು ಅದರ ಆಧಾರದ ಮೇಲೆ ಕೈಗಾರಿಕೆಗಳನ್ನು, mines ನಡೆಸುವುದು, mineral water factories ನಡೆಸುವುದು ಮತ್ತು ಟ್ಯಾಂಕರ್ಸ್‌ನಲ್ಲಿ ನೀರು ಸರಬರಾಜು ಮಾಡುವವರಿಗೆ ಮಾತ್ರ ಇದು ಅನ್ವಯಿಸುತ್ತದೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲರೂ ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ಈ ಸದನ ಕೂಡ ಸದರಿ ವಿಧೇಯಕಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸದರಿ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಕೊಳವೆ ಬಾವಿ ಕೊರೆಯುವುದನ್ನು ನಿಯಂತ್ರಣ ಮಾಡುವುದಕ್ಕೆ ಈ ವಿಧೇಯಕವನ್ನು ತಂದಿದ್ದಾರೆ. ಅವರ ಪ್ರಕಾರ, ಗ್ರಾಮೀಣ ಭಾಗದಲ್ಲಿ ಏನು ಬೇಕಾದರೂ ಮಾಡಬಹುದು ಎಂದು ಹೇಳಿದ್ದಾರೆ. "ಹೊಸ ಕೊಳವೆ ಬಾವಿಯನ್ನು ಕೊರೆಯಲು ಅನುಮತಿ ಪಡೆಯುವುದು ಮತ್ತು ಅಂತರ್ಜಲ ತೆಗೆಯಲು ನಿರಾಪೇಕ್ಷಣಾ ಪತ್ರ ಕೋರುವುದರಿಂದ ವಿನಾಯಿಸತಕ್ಕದ್ದು" ಎಂದಿದೆ. ಅಂದರೆ, "ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವೈಯಕ್ತಿಕ ಗೃಹೋಪಯೋಗಿ ಗ್ರಾಹಕರು ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಸ್ಕೀಮುಗಳಿಗೆ ತೊಂದರೆ ಇಲ್ಲ" ಎಂದು ಹೇಳಿದ್ದಾರೆ. I draw the attention of the Minister to Section 11 (1-A) (vi) which reads thus, "ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳು" ಅನುಮತಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಅಲ್ಲದೇ, "ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು" ಎಂದಿದ್ದೀರಿ. ಈಗ ಸಮಸ್ಯೆ ಎಲ್ಲಿದೆ? ಸಾಧಾರಣವಾಗಿ ಗ್ರಾಮಾಂತರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಇರುವುದಿಲ್ಲ. ಏಕೆಂದರೆ, ಅಲ್ಲಿ ಕೆರೆಗಳು, ತೋಡುಗಳು ಅಥವಾ ನಾಲೆಗಳಿರುತ್ತವೆ ಅಥವಾ ಪಶ್ಚಿಮವಾಹಿನಿ ಯೋಜನೆಯ ಅಣೆಕಟ್ಟುಗಳು ಇರುತ್ತವೆ. ಹೀಗೆ ಬೇರೆ ಬೇರೆ ರೀತಿಯಲ್ಲಿ ನೀರಿನ ಮಟ್ಟವನ್ನು ಮೇಲೆ ಬರಿಸುವುದು ಆಗುತ್ತದೆ. ಈಗ ಇಂತಹ ಸಮಸ್ಯೆಗಳು ನಗರ ಪ್ರದೇಶದಲ್ಲಿರುತ್ತದೆ. ನೀರನ್ನು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡುವ ಸಂಬಂಧ ದೊಡ್ಡ ದಂಧೆ ನಡೆಯುತ್ತಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ. ಅಪಾರ್ಟ್‌ಮೆಂಟ್ ಮತ್ತು ಸೊಸೈಟಿಗಳವರು ಇಂತಿಷ್ಟೇ ಅಂತರ್ಜಲವನ್ನು ತೆಗೆಯಬೇಕು, ಅದಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ. (ಮುಂದು)

(888) 21-8-2025 10.40 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಸುತ್ತಮುತ್ತ ಮನೆಗಳಿರುತ್ತವೆ. ನಮ್ಮಲ್ಲಿ ತೆರೆದ ಬಾವಿ ಇದೆ, ನೀವು ಇಲ್ಲಿ ಕೊಳವೆ ಬಾವಿಯನ್ನು ಮಾಡಿದರೆ ನಮ್ಮ ತೆರೆದ ಬಾವಿಯ ನೀರು ಕೆಳಗೆ ಹೋಗುತ್ತದೆ. ಹಾಗಾಗಿ ಕೊಳವೆ ಬಾವಿಗಳನ್ನು ಮಾಡುವುದಕ್ಕಾಗುವುದಿಲ್ಲ ಎನ್ನುವಂತಹ ಮಾತುಗಳನ್ನು ಹೇಳುತ್ತಾರೆ. ಈ ಸಮಸ್ಯೆ ನಗರದಲ್ಲಿ ಇರುವುದರಿಂದ you are again putting a condition. ನಗರಕ್ಕೆ condition ಹಾಕುವುದರಿಂದ ನೀವು ಬಾಟಲಿ ನೀರನ್ನೇ ಕುಡಿಯಬೇಕು ಎನ್ನುವ ಮಟ್ಟಕ್ಕೆ ಹೋಗುತ್ತದೆ. ಬಾಟಲ್ ನೀರು ಎಂದರೆ 25 ರೂಪಾಯಿಗಳನ್ನು ಕೊಟ್ಟು ಕುಡಿಯುವಂಥದ್ದು. ನಾನು ಅಮೆರಿಕಕ್ಕೆ ಹೋಗಿದ್ದೆ, ಅರ್ಧ ಲೀಟರ್ ನೀರಿಗೆ 5 ಡಾಲರ್, ಅಂದರೆ, 400 ರೂಪಾಯಿಗಳಾಯಿತು, ಆ ನೀರನ್ನು ಕುಡಿದರೆ ನಾವು ವಾಶ್‌ರೂಮ್‌ಗೆ ಹೋಗುವ ಅಗತ್ಯ ಇರುವುದಿಲ್ಲ. ಅಷ್ಟೊಂದು ದುಬಾರಿ ಬೆಲೆಯ ನೀರು. ಅಂದರೆ, ಇವತ್ತು ನಗರದಲ್ಲಿರುವಷ್ಟು ತೊಂದರೆಗಳು ಬೇರೆ ಎಲ್ಲಿಯೂ ಇಲ್ಲ.

**ಶ್ರೀ ಮಂಜುನಾಥ ಭಂಡಾರಿ:-** ಅಮೆರಿಕದಲ್ಲಿ ಒಂದು ಡಾಲರ್‌ಗೆ 90 ರೂಪಾಯಿ ಇದೆ, ನೀವು ಅಲ್ಲಿಗೆ ಹೋಲಿಕೆ ಮಾಡಿದರೆ ಹೇಗೆ?

**ಸಭಾಪತಿಯವರು:-** ನನಗೂ ಅನುಭವವಾಗಿದೆ. ಅಲ್ಲಿಗೆ ಹೋದ ನಂತರ ನಮ್ಮವರು ಮೊಬೈಲ್‌ನಲ್ಲಿ ಲೆಕ್ಕ ಮಾಡುತ್ತಾರೆ. ಐದು ಡಾಲರ್‌ಗೆ ಲೆಕ್ಕ ಹಾಕಿ ಬೇಡ ಬಿಡಿ ಎಂದು ಹೇಳುತ್ತಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಒಂದು ಕ್ಷಣಕ್ಕೆ ನಾನು ಲೆಕ್ಕ ಮಾಡಿದೆ. 5 ಡಾಲರ್ for half liter water is equal to four hundred and change rupees. ಅರ್ಧ ಲೀಟರ್‌ಗೆ ನಾವು ಕೊಡಬೇಕು ಎನ್ನುವುದಾದರೆ, ಈ ನಗರದಲ್ಲಿ ಸಮಸ್ಯೆಗಳು ಇದ್ದಾಗ liberalization policy, free policy ಎಲ್ಲವೂ ಸರಿಯಿದೆ. ಎಲ್ಲಿ ಬೇಕಾಗಿದೆಯೋ ಅಲ್ಲಿಯೇ ಬತ್ತಿ ಇಟ್ಟಿದ್ದಾರಲ್ಲಾ ಎಂದು ನಾನು ಹೇಳುತ್ತಿದ್ದೇನೆ. ಅದನ್ನು ಏನಾದರೂ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಮಾನ್ಯ ಸಚಿವರು ನೋಡಬೇಕು. ನೀರಿಗೆ ಪೆನಾಲ್ಟಿಗಳನ್ನು ಹಾಕುವುದು ಈ ರೀತಿ ಮಾಡಬಾರದು. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಮಳೆಯ ನೀರನ್ನು ಸಂಗ್ರಹ ಮಾಡಬೇಕು ಎಂದು ಹೇಳುವುದು it is a universal policy. ನಾವು ಮನೆಗೆ ಸೋಲಾರ್ ಹಾಕಿ ಹೇಗೆ ವಿದ್ಯುಚ್ಛಕ್ತಿ ಬಳಕೆ ಮಾಡುತ್ತೇವೆಯೋ ಅದೇ ರೀತಿ ಮಳೆಯ ನೀರನ್ನು ಸಂಗ್ರಹ ಮಾಡುವುದಕ್ಕೆ ಇಂಗು ಗುಂಡಿಯನ್ನು ಮಾಡಬೇಕು. ಮನೆ ನಿರ್ಮಾಣ ಮಾಡುವಾಗ ಕಡ್ಡಾಯವಾಗಿ ಇಂಗು ಗುಂಡಿಯನ್ನು ಮಾಡಬೇಕು, ಇಲ್ಲದಿದ್ದರೆ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಅನುಮತಿ ಕೊಡುವುದಿಲ್ಲವೆಂದು ಮಾನ್ಯ ಸಚಿವರು ನಗರಪಾಲಿಕೆಗಳಿಗೆ ನಿರ್ದೇಶನವನ್ನು ಕೊಡಬೇಕು.

**ಸಭಾಪತಿಯವರು:-** ಹಿಂದೆ ಈ ವಿಚಾರ ಸದನದಲ್ಲಿ ಪ್ರಸ್ತಾಪವಾಗಿತ್ತು. ಪ್ರತಿಯೊಬ್ಬರು ಮನೆ ನಿರ್ಮಾಣ ಮಾಡಬೇಕಾದರೆ Rain Water Harvest ಮಾಡುವುದಕ್ಕೆ ಎಲ್ಲಾ ತಯಾರು ಮಾಡಿದಾಗ ಅನುಮತಿ ಕೊಡಬೇಕೆಂದು ಆಗಿತ್ತು. ಅದನ್ನು ಫಾಲೋಅಪ್ ಮಾಡುತ್ತಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜುನಾಥ ಭಂಡಾರಿಯವರಿಗೆ ಗೊತ್ತಿದೆ. ನಮ್ಮ ಕರಾವಳಿ ಭಾಗದಲ್ಲಿ ಎಲ್ಲಾ ನೀರು ಸಮುದ್ರಕ್ಕೆ ಹೋಗಿ ಸೇರುತ್ತದೆ. ಸಮುದ್ರದಲ್ಲಿ ನೀರು ಜಾಸ್ತಿಯಾದಾಗ high tide ನೀರು ಹಿಂದೆ ಬಂದು ನೆರೆ ಬರುತ್ತದೆ. ನಮ್ಮ ಕರಾವಳಿ ಭಾಗದಲ್ಲಿ ನೆರೆ ಹೇಗೆ ಬರುತ್ತದೆ ಎಂದರೆ, high tide ಇದ್ದಾಗ ನೀರು ಸಮುದ್ರಕ್ಕೆ ಹೋಗಿ ಸೇರುವುದಿಲ್ಲ. ಅದು ನೀರು ಹಿಂದಕ್ಕೆ ಕಳುಹಿಸುತ್ತದೆ, ಹಾಗಾಗಿ ನಮ್ಮಲ್ಲೆಲ್ಲಾ ನೆರೆಗಳು ಆಗುತ್ತವೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಇದನ್ನು ಮಾಡುತ್ತಿರುವುದು ಸರಿಯಿಲ್ಲ. ಏಕೆಂದರೆ, ಅಪಾರ್ಟ್‌ಮೆಂಟ್‌ಗಳಲ್ಲಿ ಒಂದೆರಡು ಮನೆಗಳು ಇರುವುದಿಲ್ಲ. 50-100, 150-250 ಮನೆಗಳಿರುತ್ತವೆ. ಅಲ್ಲಿ ಚುನಾವಣೆಯ ಬೂತ್ ಅನ್ನು ಮಾಡಬಹುದು. ಅಷ್ಟೊಂದು ವೋಟರ್ಸ್ ಇರುವಂತಹ ಅಪಾರ್ಟ್‌ಮೆಂಟ್‌ಗಳಿರುತ್ತವೆ. ಅಲ್ಲಿ ಷರತ್ತನ್ನು ವಿಧಿಸಿದರೆ ಅಟೋಮ್ಯಾಟಿಕ್ ಆಗಿ ಖಾಸಗಿ ಟ್ಯಾಂಕರ್‌ಗಳಿಗೆ indirect ಆಗಿ ನಾವು ಪ್ರೋತ್ಸಾಹ ಮಾಡಿದ ಹಾಗೆ ಆಗುತ್ತದೆ. ನಾನು ಅಮೆರಿಕಾ ದೇಶದ ಉದಾಹರಣೆಯನ್ನು ಕೊಟ್ಟಿದ್ದೇನೆ. ಅಲ್ಲಿ ಅರ್ಧ ಲೀಟರ್ ಬಾಟಲ್ ಕುಡಿಯುವ ನೀರಿಗೆ 5 ಡಾಲರ್ ಕೊಡಬೇಕಾಗುತ್ತದೆ. ಅಂತಹ ಕಂಪನಿಗಳಿಗೆ ನಾವು ಪ್ರೋತ್ಸಾಹ ಮಾಡಿದಂತಾಗುತ್ತದೆ ಎನ್ನುವುದು ನನ್ನ ಉದ್ದೇಶವಾಗಿದೆ. ಈ ವಿಧೇಯಕದ (ಎ) ನಲ್ಲಿ, "ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು; ಮತ್ತು (ಬಿ) ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳು ಮಾಡುವಂತಹದ್ದು. ಹಾಗಾಗಿ ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು. ಅಂತರ್ಜಲ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಪಶ್ಚಿಮವಾಹಿನಿ ಯೋಜನೆಯನ್ನು ತಂದು ಕರಾವಳಿ ಭಾಗದಲ್ಲಿ ನೀರಿನ ಮಟ್ಟವನ್ನು ಏರಿಕೆ ಮಾಡಿದ್ದಾರೆ. ಬೇರೆ ಬೇರೆ ಕಡೆಗಳಲ್ಲಿ ಕಿಂಡಿ ಅಣೆಕಟ್ಟುಗಳನ್ನು ಕಟ್ಟುವ ಮೂಲಕ ಅಂತರ್ಜಲವನ್ನು ವೃದ್ಧಿಸುವ ಕೆಲಸವನ್ನು ಮಾಡಿದ್ದಾರೆ. ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಪ್ರತಿಯೊಬ್ಬರು ಮನೆಯನ್ನು ನಿರ್ಮಾಣ ಮಾಡುವಾಗ, ಅಪಾರ್ಟ್‌ಮೆಂಟ್ ನಿರ್ಮಾಣ ಮಾಡುವಾಗ Rain Water Harvest ಅನ್ನು ಕಡ್ಡಾಯವಾಗಿ ಮಾಡಬೇಕು. ಮನೆಗಳಿಗೆ ಸೋಲಾರ್ panel ಅನ್ನು ಅಳವಡಿಸಿ ಅವರಿಗೆ ಬೇಕಾಗಿರುವ ವಿದ್ಯುಚ್ಛಕ್ತಿಯನ್ನು ಅವರೇ ಉತ್ಪಾದಿಸಬೇಕು. ಕೇಂದ್ರ ಸರ್ಕಾರದವರು 'ಸೂರ್ಯಘರ್" ಯೋಜನೆಯನ್ನು ತಂದಿದ್ದಾರೆ. ಇದರಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿವೆ. ಇದನ್ನು ಮಾಡುವುದಕ್ಕೆ ದಯವಿಟ್ಟು ಕ್ರಮ

ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ಹೇಳಬಯಸುತ್ತಿದ್ದೇನೆ. ಮಾನ್ಯ ಸಚಿವರು ತಂದಿರುವ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಈಗಾಗಲೇ ಮಾನ್ಯ ಸಚಿವರು ಮಂಡಿಸಿರುವಂತಹ ವಿಧೇಯಕ ಸ್ವಾಗತಾರ್ಹವಾದದ್ದು. ಅದರಲ್ಲಿ ಎರಡು ಮಾತಿಲ್ಲ. ದೇಶದಲ್ಲಿ ನಮ್ಮ ರಾಜ್ಯದಲ್ಲೂ ಕೂಡ ಅಂತರ್ಜಲ ಎಷ್ಟಿದೆ ಎಂದರೆ ಆಂತಕಕಾರಿ ಸ್ಥಿತಿಯಲ್ಲಿದೆ. ನಾವು ಅಂತರ್ಜಲ ಮಟ್ಟದಲ್ಲಿ ದೇಶದಲ್ಲೇ ನಾವು 5ನೇ ಸ್ಥಾನಕ್ಕೆ ಬಂದು ತಲುಪಿದ್ದೇವೆ. ಅದಕ್ಕೆ ಯಾವುದೇ ನಿರ್ಬಂಧ ಇಲ್ಲದಿರುವಂತಹ ವ್ಯವಸ್ಥಿತ ನಡೆ ಎನ್ನಬಹುದು ಅಥವಾ ಅದರ ಬಗ್ಗೆ ಕಾಳಜಿ ಇಲ್ಲದಂತಹ ನಡೆ ಎಂದು ಹೇಳಬಹುದು. ಸರ್ಕಾರ ಇಲ್ಲಿಯವರೆಗೆ ಮಾಡಿರುವಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಬೇಕೆಂಬ ನಿರ್ಬಂಧ ವಿಧಿಸುವಂತಹದ್ದು ಆಗಲಿಲ್ಲ. ಉದಾಹರಣೆಗೆ, ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮ ಇದೆ. ಗ್ರಾಮಗಳಲ್ಲಿ ‘ಗುಂಪು ನೀರಿನ ಯೋಜನೆ’ ಎಂದು ಇದೆ. ನಾವು ಒಂದೊಂದು ಊರಿನಲ್ಲಿ ನೋಡುತ್ತಿದ್ದೇವೆ, ನೀರು 24x7 ಹಾಗೆಯೇ ಹರಿದು ಹೋಗುತ್ತಿರುತ್ತದೆ. ಅದರ ಬಗ್ಗೆ ಯಾರು ಕಾಳಜಿ ವಹಿಸುವುದಿಲ್ಲ. ಪಂಚಾಯಿತಿಯವರು ಕಾಳಜಿ ವಹಿಸುವುದಿಲ್ಲ. ಅವರವರೊಳಗೆ factions ಇರುತ್ತದೆ. ಅವರಿಗೆ ಹೇಳುವುದಕ್ಕೆ ಹೋದರೆ ಅವರಿಗೆ ಹೇಳಿ, ಇವರಿಗೆ ಹೇಳಿ ಎಂದು ಹೇಳುತ್ತಾರೆ. ಗ್ರಾಮೀಣ ಭಾಗದಲ್ಲಿ ನೀರಿನ ವ್ಯವಸ್ಥೆ ಏನಿದೆ ಅದನ್ನು ಸರಿಯಾಗಿ ಉಪಯೋಗ ಮಾಡುವಂಥದ್ದಾಗಬೇಕು. ಅದಕ್ಕೆ ನಿಯಂತ್ರಣಗೊಳಿಸುವಂಥದ್ದಾಗಬೇಕು. ಯಾವ್ಯಾವ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆ ಇರಬಹುದು, ರಾಜ್ಯ ಸರ್ಕಾರದ ಯೋಜನೆ ಇರಬಹುದು. ಆ ಎಲ್ಲಾ ಯೋಜನೆಗಳು ಸಮರ್ಪಕವಾಗಿ ನಡೆಯುತ್ತಿದೆಯೋ ಇಲ್ಲವೋ ಎಂದು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಆಗಬೇಕು. ಅಲ್ಲಿ ನೀರು ಬಂದ್ ಮಾಡುವಂತಹ ಕೆಲಸ ಸಮೇತವಾಗಿ ಮಾಡಿದರೂ ತೊಂದರೆ ಏನು ಇಲ್ಲ. ಏಕೆಂದರೆ, ಬರುವಂತಹ ದಿವಸಗಳಲ್ಲಿ ನೀರೇ ನಮ್ಮ ಜೀವನಾಧಾರ. ಅದರ ಬಗ್ಗೆ ಕಾಳಜಿ ಇಲ್ಲದಂತಹ ಪಂಚಾಯಿತಿಗಳಿಗೆ ದಂಡವನ್ನು ವಿಧಿಸಿ ಅಥವಾ ನಿಮಗೆ ಅನುದಾನವನ್ನು ಕೊಡುವುದಿಲ್ಲವೆಂದು ಹೇಳಿ. ಈ ರೀತಿ ಮಾಡಿ Inspection Body ಒಂದನ್ನು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಮಾಡಿ ಅಥವಾ ಇನ್ನು ಯಾವ ಸಮಿತಿ ಮಾಡುತ್ತೀರೋ, ಯಾರಾದರೂ ಹೋಗಿ ನೋಡುವಂಥದ್ದಾಗಬೇಕೆಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ. Monitor ಮಾಡುವಂಥದ್ದು, ನೀರು ತೆಗೆಯುವಂಥದಕ್ಕೆ, ಕೊಳವೆ ಬಾವಿ ತೆಗೆಯುವಂಥವರಿಗೆ ನಿರ್ಬಂಧ ವಿಧಿಸುವುದು, ಇದನ್ನು strict ಆಗಿ ಮಾಡಬೇಕು. ನಾನು 20 ವರ್ಷಗಳಿಂದ ನೋಡುತ್ತಿದ್ದೇನೆ, 15 ವರ್ಷಗಳಿಂದಲಂತೂ ಕೊಳವೆ ಬಾವಿ ಕೊರೆಯುವಂಥವರ ಗಾಡಿಯನ್ನು seize ಮಾಡಿ ಜಿಲ್ಲಾಧಿಕಾರಿಯವರ ಕಾಪೌಂಡ್‌ನಲ್ಲಿ ತಂದು ನಿಲ್ಲಿಸಿದ್ದರು. ನಾನು ಒಂದು ಸಲ ನೋಡಿದ್ದೆ, ಇದು ಇತಿಹಾಸವಾಗಿದೆ. ಆದರೂ ಕೂಡ ಕೊಳವೆ ಬಾವಿ ಕೊರೆಯುವ ಕೆಲಸ ಬಂದ್ ಆಗಲಿಲ್ಲ. ಎಲ್ಲೆಲ್ಲಿ ನೀರಿನ ಕೊರತೆ ಇದೆ, ಅಲ್ಲಿ ಒಬ್ಬರು 400 ಅಡಿ ಕೊರೆದಿದ್ದರೆ,

ಮತ್ತೊಬ್ಬರು 500 ಅಡಿ, ಮತ್ತೊಬ್ಬರು 600 ಅಡಿ ಕೊರೆಯುತ್ತಾರೆ. ಇದೇ ರೀತಿ ಹೋಗುತ್ತಿರುತ್ತಾರೆ. ನೀರು conservation ಮಾಡಬೇಕೆನ್ನುವ ಯೋಜನೆಗಳು ನಮ್ಮಲ್ಲಿ ಸಮರ್ಪಕವಾಗಿ ಆಗಿಲ್ಲ. ಈಗ ಅನೇಕ ಕೆರೆ ತುಂಬುವ ಯೋಜನೆಗಳು ಅಂದುಕೊಂಡ ಹಾಗೆ ಆಗಿವೆ. ಅದನ್ನು ಸಮರ್ಪಕವಾಗಿ ನೋಡುವಂತಹ ಕೆಲಸ ಆಗಬೇಕು. ಮಹಾಪೂರದಲ್ಲಿ ಬಹಳಷ್ಟು ನೀರು ಹರಿದು ಹೋಗುತ್ತಿದೆ ಎಂದರೆ ಅದು ಹೇಳುವುದಕ್ಕೆ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಕೆರೆ ತುಂಬುವ ಯೋಜನೆಗಳು ಅಂತರ್ಜಲ ವೃದ್ಧಿ ಆಗುವ ದೃಷ್ಟಿಯಿಂದ ಬಹಳ ಉಪಯೋಗವಾಗಿರುವಂಥದ್ದು. ಇದರ ಬಗ್ಗೆ ಕಾಳಜಿ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಗರದಲ್ಲಿ ಮಳೆ ನೀರು ಕೊಯ್ಲು ಎಂದೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಆ ಯೋಜನೆ ವ್ಯವಸ್ಥಿತವಾಗಿ ಜಾರಿಯಾಗಬೇಕು. ಅಪಾರ್ಟ್‌ಮೆಂಟ್ ಬಗ್ಗೆ ನಮ್ಮ ಸ್ನೇಹಿತರು ಹೇಳಿದರು. ಅಪಾರ್ಟ್‌ಮೆಂಟ್ ಅಷ್ಟೇ ಅಲ್ಲ, ಎಲ್ಲೆಲ್ಲಿ ಮಳೆ ನೀರು ಕೊಯ್ಲು ಬಗ್ಗೆ ಸಾಧ್ಯವಿದೆಯೋ ಅಲ್ಲಿ ವಿಶೇಷವಾಗಿ ಜಾಗೃತಿ ವಹಿಸಬೇಕು. Water Table ನೀರು ಹೆಚ್ಚಾಗುವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುತ್ತಾ ಹೇಳಿದರು, ಈಗ ಅಂತರ್ಜಲ ಬಳಕೆ ಬಗ್ಗೆ ಇವತ್ತು ವಿಧೇಯಕವನ್ನು ತಂದು ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದಾರೆ. ಈಗಾಗಲೇ ಇವೆಲ್ಲಾ ಸರ್ಕಸ್ ಅನ್ನು ಕೇಂದ್ರ ಸರ್ಕಾರದವರು ಮಾಡಿ 'ಅಟಲ್ ಭೂಜಲ್ ಯೋಜನೆ' ಎಂದು ತಂದರು. ಅದಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವತ್ತಿನ ದಿವಸ ಅಂತರ್ಜಲ ಬಳಕೆ ಬಗ್ಗೆ ಮಸೂದೆಯನ್ನು ತಂದಿದ್ದಾರೆ, ಇದರ ಬದಲು ಅಂತರ್ಜಲ ಹೆಚ್ಚು ಮಾಡುವುದರ ಬಗ್ಗೆ ಪ್ರಯತ್ನ ಮಾಡಿದ್ದರೆ ಸೂಕ್ತವಾಗುತ್ತಿತ್ತು. ಏಕೆಂದರೆ, ಸಾಕಷ್ಟು ನೀರು ಇವತ್ತಿನ ದಿವಸ ವ್ಯರ್ಥವಾಗಿ ಸಮುದ್ರಕ್ಕೆ ಹೋಗುತ್ತಿದೆ. ಇವತ್ತು ನಮ್ಮ ಬೆಂಗಳೂರು ನಗರದಲ್ಲೇ ನೋಡಬಹುದು, UGD line, Storm water drain ಪ್ರತ್ಯೇಕವಾಗಿ ಇಲ್ಲದೆ ಮಳೆ ನೀರು ಎಲ್ಲಾ ಯು.ಜಿ.ಡಿ. ಲೈನ್‌ಗೆ ಹೋಗಿ ಆ ನೀರು ಎಲ್ಲಾ ಪೋಲಾಗುತ್ತಿರುವುದು ಕೂಡ ನಾವು ನೋಡುತ್ತಿದ್ದೇವೆ. ಎಲ್ಲಾ ಕಡೆಗಳಲ್ಲಿ, ನಮ್ಮ ಊರಿನಲ್ಲೂ ಬಿದ್ದಂತಹ ಮಳೆ ನೀರನ್ನು ಸರಿಯಾದ ರೀತಿಯಲ್ಲಿ ತಡೆಹಿಡಿಯುವಂತಹ ಕೆಲಸವಾದರೆ ಅಂತರ್ಜಲ ಅಟೋಮ್ಯಾಟಿಕ್ ಆಗಿ ವೃದ್ಧಿಯಾಗುತ್ತದೆ. ಅಂತರ್ಜಲ ವೃದ್ಧಿಯಾದಾಗ ಕೃಷಿಗೆ ಕೊಡುವುದನ್ನು exemption ಮಾಡಿದ್ದಾರೆ. ಅದು ಬಹಳ ಅವಶ್ಯಕತೆ ಇದೆ. ನಮ್ಮ ಕೋಲಾರ ಭಾಗದಲ್ಲಿ ಅಂತರ್ಜಲ ಇಲ್ಲದಿದ್ದರೆ ಬದುಕೇ ಇಲ್ಲ, ಜೀವನವೇ ಇಲ್ಲ. ಅಂಥವರಿಗೆಲ್ಲಾ exemption ಮಾಡಿದ್ದಾರೆ. ಅಂತರ್ಜಲ ಕೃಷಿಗೆ ಅತಿ ಹೆಚ್ಚು ಬಳಕೆಯಾಗುತ್ತಿರುವಂಥದ್ದು. ಕೃಷಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಸಂತೋಷ. ವಿಧೇಯಕದಲ್ಲಿ ನಿರ್ಬಂಧ ಹಾಕಿರುವುದು ಯಾರಿಗೆ? ನೀರನ್ನು bulk ಆಗಿ ಯಾರು ಉಪಯೋಗ ಮಾಡುತ್ತಾರೆ, ಯಾರೇ ನೀರನ್ನು bulk ಆಗಿ ಉಪಯೋಗ ಮಾಡಿದರು ಕೂಡ ಅವಶ್ಯಕತೆ ಇಲ್ಲದಿದ್ದರೆ ಯಾರು ಬೋರ್‌ವೆಲ್ ಹಾಕಿ, ಮೋಟಾರ್ ಹಾಕಿ, ನೀರನ್ನು

ಎತ್ತಿ ಯಾರು ಬಳಕೆ ಮಾಡುವುದಿಲ್ಲ. ಈ ಮಸೂದೆ ಯಾವ ರೀತಿ ಇದೆ ಎಂದರೆ, ನಮಗೆ ಕಾಯಿಲೆ ಬಂದರೆ ಔಷಧಿ ತೆಗೆದುಕೊಳ್ಳಬಾರದು, ಹಾಗೆಯೇ ವಾಸಿ ಮಾಡಿಕೊಳ್ಳ ಬೇಕು ಎನ್ನುವ ಹಾಗೆ ಇದೆ. ಈ ನೀರು ಉಪಯೋಗಕ್ಕೆ ಬಹಳ ಅತ್ಯಾವಶ್ಯಕತೆ ಇದೆ. (ಮುಂದು)

(889) 21/08/2025 10:50 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ರಾಜು (ಮುಂದು):-**

ಇದರ ಬಗ್ಗೆ ನೀವು ಹೇಳಿದ್ದೀರಿ; ಆದರೆ, ಪ್ರಸ್ತುತ ವಿಧೇಯಕದ ಅವಶ್ಯಕತೆಯೇ ಇಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಸರ್ಕಾರವು ಜನರಿಗೆ ಸರಿಯಾದ ರೀತಿಯಲ್ಲಿ ನೀರಿನ ಅನುಕೂಲತೆಯನ್ನು ಮಾಡಿಕೊಡಬೇಕು. ಇರುವಂತ ಮೂಲ ಸೌಕರ್ಯ ಹಾಗೂ ವ್ಯವಸ್ಥೆಗಳನ್ನು ಬಳಸಕೊಂಡು, ಸರ್ಕಾರವು ಎಲ್ಲಾ ರೀತಿಯಿಂದಲೂ ನೀರನ್ನು ಒದಗಿಸಿದರೆ, ಯಾರೂ ಸಹ ಬೋರ್ ಅನ್ನು ಕೊರೆಯುವುದಕ್ಕೆ ಹೋಗುವುದಿಲ್ಲ ಹಾಗೂ ಅಂತರ್ಜಲವನ್ನು ಮುಟ್ಟುವುದಕ್ಕೂ ಸಹ ಹೋಗುವುದಿಲ್ಲ. ಈ ಹಿಂದೆ ಅಮೇರಿಕಾಕ್ಕೆ ಹೋದಾಗ ಅಲ್ಲಿ ಐದು ಡಾಲರ್‌ಗಳನ್ನು ಪಾವತಿಸಿ ನೀರನ್ನು ಕುಡಿದಿದ್ದಾಗಿ ಶ್ರೀ ಐವನ್ ಡಿ'ಸೋಜಾ ರವರು ಮಾತನಾಡುವಾಗ ಹೇಳಿದರು. ನಾನೂ ಅಮೇರಿಕಾಗೆ ಮೂರು ಬಾರಿ ಹೋಗಿದ್ದೇನೆ. ಅಲ್ಲಿ ಯಾರಿಗೂ ಸಹ ಮಿನರಲ್ ನೀರನ್ನು ಖರೀದಿಸಿ ಕುಡಿಯುವ ಅವಶ್ಯಕತೆ ಇಲ್ಲ. ಅಲ್ಲಿನವರೆಲ್ಲೂ ನಲ್ಲಿ ನೀರನ್ನೇ ಕುಡಿಯಬಹುದು; ಏಕೆಂದರೆ ಇಷ್ಟೊಂದು ಪರಿಶುದ್ಧತೆಯನ್ನು ಅವರು ನಿರ್ವಹಿಸಿರುತ್ತಾರೆ. ನಾನೂ ಸಹ ಅಲ್ಲಿಗೆ ಹೋದಾಗ ಅಲ್ಲಿನ ನಲ್ಲಿ ನೀರನ್ನೇ ಕುಡಿದಿದ್ದೇನೆ. ಈ ಹಿಂದೆ ನಾನು ಒಮ್ಮೆ ಸಿಂಗಾಪೂರಕ್ಕೂ ಸಹ ಭೇಟಿ ನೀಡಿದ್ದೆನು. ಅಲ್ಲಿನ ನಲ್ಲಿಯ ಬಳಿ you can use this water for drinking purpose ಎಂಬ ಬೋರ್ಡ್‌ವೊಂದನ್ನು ಹಾಕಿದ್ದರು. ತಮಗೂ ಸಹ ತಿಳಿದಂತೆ, ಸಿಂಗಾಪೂರದಲ್ಲಿ ಶೇಕಡಾ 75 ರಷ್ಟು ನೀರನ್ನು ಸಮುದ್ರದಲ್ಲಿಯೇ ಉಪ್ಪು ಪ್ರತ್ಯೇಕಗೊಳಿಸುವಿಕೆ ಕ್ರಮದಿಂದ ಪಡೆದುಕೊಂಡು (desalination) ಅದೇ ನೀರನ್ನು ಬಳಕೆ ಮಾಡುತ್ತಾರೆ. ಕೇವಲ 25 ಪ್ರತಿಶತದಷ್ಟು ನೀರನ್ನು ಮಾತ್ರವೇ ಮಲೇಷಿಯಾದಿಂದ ಬರುತ್ತದೆ. ಅಲ್ಲಿ ನಲ್ಲಿಯ ಬಳಿ ಈ ನೀರನ್ನು ಕುಡಿಯಲು ಬಳಸಬಹುದು ಎಂಬುದಾಗಿ ಬೋರ್ಡ್‌ನ್ನು ಹಾಕಿರುತ್ತಾರೆ. ಅಲ್ಲಿ ನಾವುಗಳು ಯಾರೂ ಸಹ ಮಿನರಲ್ ನೀರನ್ನೇ ತೆಗೆದುಕೊಂಡಿರುವುದಿಲ್ಲ. ಅಲ್ಲಿನ ನಲ್ಲಿಯ ನೀರನ್ನೇ ಕುಡಿದೆವು. ಆದರೆ, ನಮ್ಮ ಕೋಲಾರ ಭಾಗದಲ್ಲಿ ದೊರೆಯುವ ನೀರಿನಲ್ಲಿ ಫ್ಲೋರೋಸಿಸ್ ಅಂಶ ಜಾಸ್ತಿ ಇರುವುದಿರಂದ ಆ ನೀರನ್ನು ಯಾರೂ ಸಹ ಕುಡಿಯುವುದಕ್ಕೆ ಸಾಧ್ಯವಿರುವುದಿಲ್ಲ. ಸರ್ಕಾರವು ಈ ನಿಟ್ಟಿನಲ್ಲಿ ಯೋಚನೆಯನ್ನು ಮಾಡಬೇಕು. ಜನರಿಗೆ ಶುದ್ಧ ನೀರನ್ನು ಯಾವ ರೀತಿಯಾಗಿ ನೀಡಬೇಕು ಎನ್ನುವುದರ ಬಗ್ಗೆಯೂ ಸಹ ಸರ್ಕಾರವು ಯೋಚನೆಯನ್ನು ಮಾಡಬೇಕು. ಅಂತರ್ಜಲವನ್ನು ವೃದ್ಧಿಗೊಳಿಸಲು ಸರ್ಕಾರವು ಏನು ಮಾಡಬೇಕು ಎಂಬುದರ ಬಗ್ಗೆ ನಾನು ಹೇಳಿದ ಮನವಿಗೆ ಸರ್ಕಾರವು ಸ್ಪಂದಿಸಿ, ಮೂರು ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದೆ. ಅಲ್ಲಿ ಬಹಳಷ್ಟು ಪ್ರಮಾಣದ ನೀರು ವ್ಯರ್ಥವಾಗಿ ಹೋಗುತ್ತಿತ್ತು; ಅಲ್ಲಿನ ರಾಜಕಾಲುವೆಯನ್ನು ಮುಚ್ಚಿ ಹಾಕಿದರು. ಇಂತಹ ರಾಜಕಾಲುವೆಗಳನ್ನು ಮುಖ್ಯವಾಹಿನಿಗೆ ತೆಗೆದುಕೊಂಡು ಬಂದು, ಅದಕ್ಕೆ ಕೆರೆಯ ನೀರನ್ನು ತುಂಬುವುದಕ್ಕೆ

ಸರ್ಕಾರವು ಹಣ ನೀಡಿದೆ. ಇಂತಹ ಕ್ರಮಗಳಿಂದಾಗಿಯೇ ನಮ್ಮ ಕೋಲಾರ ಭಾಗದಲ್ಲಿ ಅಂತರ್ಜಲ ವೃದ್ಧಿಯಾಗುತ್ತದೆ. ನಮ್ಮ ಭಾಗದಲ್ಲಿ ಯಾವುದೇ ನದಿ ಮೂಲಗಳಿಲ್ಲದೇ, ಮಳೆ ಇಲ್ಲ. ಅಲ್ಲಾಗುವ ಮಳೆಯನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ಕೆರೆಗಳಿಗೆ ನೀರು ಹೋಗುವ ರೀತಿಯಲ್ಲಿ ಮಾಡಿದರೆ, ಅಂತರ್ಜಲ ತಾನೇಗಿಯೇ ಸುಧಾರಣೆಯಾಗುತ್ತದೆ. ಇದನ್ನು ಬಿಟ್ಟು ಸರ್ಕಾರವು ಇಂತಹ ಕಾಯ್ದೆ ಕಾನೂನುಗಳನ್ನು ಜಾರಿಗೆ ತರುವುದರಿಂದ ಕೇವಲ ಅಧಿಕಾರಿಗಳ ಮೇಲೆ ಹೊರೆಯಾಗುತ್ತದೆಯೇ ಹೊರತು ಯಾವುದೇ ಪ್ರಯೋಜನವಾಗುವುದಿಲ್ಲ. ಟ್ಯಾಂಕರ್‌ನವರು ಸರ್ಕಾರದ ಅನುಮತಿಯನ್ನು ಪಡೆಯಬೇಕೆಂದು ವಿಧೇಯಕದಲ್ಲಿ ತಿಳಿಸಲಾಗಿದೆ. ಯಾರು ಹಣ ನೀಡಿ, ಟ್ಯಾಂಕರ್‌ಗಳ ಮೂಲಕ ನೀರನ್ನು ತೆಗೆದುಕೊಳ್ಳಬೇಕಾದರೆ, ಅವರಿಗೆ ಅನಿವಾರ್ಯತೆ ಇರುತ್ತದೆ. ತಾವು ನೋಡಿದಂತೆ, ದೇವನಹಳ್ಳಿ ಭಾಗದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಬೇಸಾಯ ಮಾಡುತ್ತಾರೆ. ಇಲ್ಲಿ ತರಕಾರಿ ಮತ್ತು ದ್ರಾಕ್ಷಿಗಳನ್ನು ಬೆಳೆಯುತ್ತಾರೆ. ಇಲ್ಲಿನ ಬೋರ್‌ವೆಲ್‌ಗಳಲ್ಲಿ ನೀರು ಬರುವುದಿಲ್ಲ. ಟ್ಯಾಂಕರ್‌ಗಳ ಮೂಲಕವೇ ನೀರನ್ನು ಪಡೆದು ಅವರು ಬೇಸಾಯವನ್ನು ಮಾಡುತ್ತಿರುವುದು ಸತ್ಯವಾಗಿದೆ; ಬೇಕೆಂದರೆ ದೇವನಹಳ್ಳಿ ಭಾಗದವರು ಯಾರಾದರನ್ನೂ ಕೇಳಬಹುದು. ನಮ್ಮಲ್ಲಿಯೂ ಸಹ ಅನಿವಾರ್ಯತೆ ಇದ್ದಾಗ, ಇದ್ದಕ್ಕಿದ್ದ ಹಾಗೆ ಬೋರ್‌ವೆಲ್‌ಗಳು ಒಣಗಿ ಹೋದಾಗ ಟ್ಯಾಂಕರ್‌ಗಳ ಮುಖಾಂತರ ನೀರನ್ನು ತರಿಸಿ, ಬೇಸಾಯ ಮಾಡಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಟ್ಯಾಂಕರ್‌ವೊಂದಕ್ಕೆ ಐನೂರು ರೂಪಾಯಿಗಳನ್ನು ಸಂಪಾದನೆ ಮಾಡುತ್ತಾರೆ. ಅವಶ್ಯಕತೆ ತಕ್ಕಂತೆ ನೀರನ್ನು ಸರಬರಾಜು ಮಾಡುವವರಿಗೆ ನಿರಪೇಕ್ಷಣಾ ಪಡೆದುಕೊಳ್ಳಬೇಕೆಂದು ಈ ಕಾಯ್ದೆಯ ಮೂಲಕ ಜಾರಿಗೊಳಿಸಿದರೆ, ಅನುಮತಿ ಇಲ್ಲದೇ ನೀರನ್ನು ಸರಬರಾಜು ಮಾಡಿದರೆ, ಕನಿಷ್ಠ 5,000/- ರೂಪಾಯಿಗಳ ದಂಡ ಹಾಕುತ್ತೇವೆ ಎಂದು ಸರ್ಕಾರವು ಹೇಳಿದರೆ, ಇದು ಯಾವ ನ್ಯಾಯ ಎಂದು ನಾನು ಕೇಳುತ್ತೇನೆ. ಇದೇ ರೀತಿಯಾಗಿ ಮಿನರಲ್ ನೀರನ್ನು ಸರಬರಾಜು ಮಾಡುವವರು bulk user ಎಂದು ಸರ್ಕಾರವು ಹೇಳುತ್ತದೆ. ನಮ್ಮಲ್ಲಿ ನೀರಿನ ಗುಣಮಟ್ಟವಿಲ್ಲ. ನಾನು ಇವತ್ತಿನ ಬೆಳಗ್ಗೆ ಇಲ್ಲಿಗೆ ಬರುವಾಗ ನೋಡಿದ್ದೇನೆಂದರೆ, ಸಭಾಪತಿಯವರ ಕಛೇರಿಗೆ ಬಿಸ್ಲರಿ ನೀರಿನ ಕ್ಯಾನ್ ಅನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಗ ನಾನು ನೀರು ಎಲ್ಲಿಗೆ ಎಂದು ಕೇಳಿದಾಗ ಅವರು ಸಭಾಪತಿಯವರ ಕೊಠಡಿಗೆ ಎಂಬುದಾಗಿ ತಿಳಿಸಿದರು. ಅಮೇರಿಕಾ ದೇಶದಲ್ಲಿ ಮಿನರಲ್ ನೀರಿನ ಅವಶ್ಯಕತೆ ಇಲ್ಲ. ಅಲ್ಲಿನ ಎಲ್ಲಾ ನೀರು ಶುದ್ಧವಾಗಿವೆ. ಪಾಶ್ಚಿಮಾತ್ಯದ ಯಾವುದೇ ದೇಶಗಳಿಗೆ ಹೋದರೂ ಸಹ ಅಲ್ಲಿನ ಯಾವುದೇ ಜನರು ಮಿನರಲ್ ನೀರನ್ನು ಬಳಕೆ ಮಾಡುವುದೇ ಇಲ್ಲ. ನಾನು ಅಮೇರಿಕಾಕ್ಕೆ ಹೋದಾಗ ಅಲ್ಲಿ ಒಂದೇ ಒಂದು ಬೋರ್‌ವೆಲ್ ಅನ್ನು ನೋಡಿಲ್ಲ. ಸಾಧಾರಣವಾಗಿ ಅಲ್ಲೆಲಾ ಮಳೆ ಕಡಿಮೆ ಪ್ರಮಾಣದಲ್ಲಿದೆ. ಅಲ್ಲಿನ ಬೆಟ್ಟ ಪ್ರದೇಶಗಳಲ್ಲಿ ಹಿಮ ಬೀಳುತ್ತದೆ ಅಲ್ಲಿಂದ ವರ್ಷವಿಡಿ ಶುದ್ಧ ನೀರಿನ ಸರಬರಾಜು ಮಾಡುತ್ತಾರೆ. ಸರ್ಕಾರ ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ಈ ಬಾರಿ ಅವಧಿ ಪೂರ್ವ ಮುಂಗಾರು ಮಳೆ ಬಂದಿತು. ಎಲ್ಲಾ ನೀರು ಹರಿದು ಸಮುದ್ರಕ್ಕೆ ಹೋಗುತ್ತಿದೆ. ಅಂತಹ ನೀರನ್ನು ನಮ್ಮ ಭಾಗಕ್ಕೆ ನೀಡಿದರೆ ನಾವುಗಳೆಲ್ಲಾ ಶುದ್ಧ ನೀರನ್ನು ಕುಡಿಯುವಂತಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರವು ಯೋಚನೆಯನ್ನು

ಮಾಡಬೇಕು. ಇವತ್ತಿನ ದಿವಸ ಇಲಾಖಾ ಅಧಿಕಾರಿಗಳ ಮೇಲೆ ಕೆಲಸದ ಒತ್ತಡವೂ ಸಹ ಇದೆ. ಹೀಗಾಗಿ ಹೊಸ ಕಾಯ್ದೆಯನ್ನೂ ಸಹ ಅವರಿ ಕುತ್ತಿಗೆಗೆ ಕಟ್ಟಿ ಕಾಯ್ದೆಯನ್ನು ಜಾರಿಗೊಳಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಪ್ರಸ್ತುತ ಸರ್ಕಾರವು ಮಂಡಿಸಿರುವ ವಿಧೇಯಕಕ್ಕೆ ಅನುಮೋದನೆಯನ್ನು ಪಡೆದುಕೊಳ್ಳಲಿ; ಆದರೆ, ಇದರಲ್ಲಿ ತಿಳಿಸಿದಂತೆ, ಅವಶ್ಯಕತೆಗನುಗುಣವಾಗಿ ನೀರನ್ನು ಸರಬರಾಜು ಮಾಡುವವರ ವಿರುದ್ಧ ಪ್ರಹಾರ ಮಾಡುವುದು ಸರಿಯಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಒಂದು ರೀತಿಯಲ್ಲಿ ಸ್ವಾಗತಿಸುತ್ತೇನೆ. ಶ್ರೀ ಗೋವಿಂದರಾಜು ರವರು ತಿಳಿಸಿದಂತೆ, ದೇವನಹಳ್ಳಿ, ಕೋಲಾರ, ಚಿಕ್ಕಬಳ್ಳಾಪುರ ಭಾಗಗಳಲ್ಲಿ ಕೃಷಿ ಆಧಾರಿತ ಜೀವನವನ್ನು ಮಾಡುತ್ತಿರುವವರಿಗೆ ಬಹಳ ಕಷ್ಟವಾಗಿದೆ. ನಾವುಗಳೆಲ್ಲಾ ಸಭಾಪತಿಯವರೊಂದಿಗೆ ವಿದೇಶಕ್ಕೆ ಹೋದಾಗಿನ ಪ್ರಸಂಗಗಳ ಬಗ್ಗೆ ಸದಸ್ಯರು ಹೇಳಿದರು. ನಾವು ಒಂದು ಕುಡಿಯುವ ನೀರಿನ ಬಾಟಲಿಯನ್ನು ತೆಗೆದುಕೊಂಡು ನೋಡಿದಾಗ, ಅದರ ಮೇಲೆ ಬಿಸ್ಲರಿ ಎಂಬ ಸ್ಟಿಕ್ಕರ್ ಇರುತ್ತದೆ. ಇದನ್ನು ನೋಡಿದ ತಕ್ಷಣ ನಮಗೆ ಸುರಕ್ಷತಾ ಭಾವನೆ ಬಂದು, ಈ ನೀರನ್ನು ಕುಡಿದರೆ ನಮ್ಮ ಆರೋಗ್ಯಕ್ಕೆ ಏನೂ ತೊಂದರೆಯಾಗುವುದಿಲ್ಲ ಎನ್ನುವ ಭಾವನೆಯು ನಮ್ಮಲ್ಲಿ ಮೂಡುತ್ತದೆ. ಇಂತಹ ಸುರಕ್ಷತಾ ಭಾವವನ್ನು ಜನರು ಎಲ್ಲಿ ಹೋದರು ಇದು ಒಳ್ಳೆಯ ನೀರು; ಕುಡಿಯಬಹುದು ಎನ್ನುವ ವಿಶ್ವಾಸವನ್ನು ಮೂಡಿಸುವ ಕೆಲಸವನ್ನು ಸರ್ಕಾರವು ಮಾಡಬೇಕು. ಇವತ್ತಿನ ದಿವಸ ನಾವು ಎಲ್ಲಿಗೆ ಹೋಗಲಿ, ಹೊರಗಿನ ನೀರನ್ನು ಕುಡಿದರೆ ನಮ್ಮ ಆರೋಗ್ಯ ಕೆಟ್ಟು, ಕಾಯಿಲೆ ಮತ್ತು ಜ್ವರಗಳು ಬರುತ್ತವೆ ಎಂದು ನಾವು ಭಾವಿಸುತ್ತೇವೆ. ಈ ಮಾತನ್ನು ಶ್ರೀಮತಿ ಭಾರತಿ ಶೆಟ್ಟಿಯವರೂ ಸಹ ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇವತ್ತಿನ ದಿವಸ ನಾವು ನಮ್ಮ ಮನೆಗಳಲ್ಲಿ ಅಡುಗೆ ಹಾಗೂ ಕುಡಿಯಲು ಶುದ್ಧ ನೀರನ್ನು ಪಡೆಯುವ ಸಂಬಂಧ ಬಹಳಷ್ಟು ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಿರುತ್ತೇವೆ; ಇಲ್ಲವೆಂತಲ್ಲ. ಇವತ್ತಿನ ದಿವಸ ಎಲ್ಲಾ ಕಡೆಗಳಲ್ಲಿ ಅಂತರ್ಜಲ ಪ್ರಮಾಣ ಕಡಿಮೆಯಾಗುತ್ತಿರುವುದನ್ನು ನಾವುಗಳು ಗಮನಿಸಿದ್ದೇವೆ. ಕೇಂದ್ರ ಅಂತರ್ಜಲ ಪ್ರಾಧಿಕಾರ ಏನು ಇದೆ ಅದನ್ನು ಜನರ ವಿಶ್ವಾಸದ ಅಧ್ಯಯನದ ಮೇಲೆ ಜಾರಿಗೆ ತಂದಿರುವುದನ್ನು ನಾವು ನೋಡಿದ್ದೇವೆ. ಇದನ್ನು ಜಾರಿಗೊಳಿಸಬೇಕೆಂದು ಸರ್ಕಾರವು ಹೊರಟಿದೆ. ಅಂತರ್ಜಲದ ಮಟ್ಟವನ್ನು ಹೆಚ್ಚಳ ಮಾಡಬೇಕು. ಇದಕ್ಕಾಗಿ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ; ಈ ಸಂಬಂಧದ ಯೋಜನೆಗಳೇನು; ಇದನ್ನು ಯಾವ ರೀತಿಯಲ್ಲಿ ಜಾರಿಗೊಳಿಸಲಾಗುತ್ತದೆ ಎನ್ನುವುದರ ಬಗ್ಗೆ ತಿಳಿಸಬೇಕು. ಈ ವಿಚಾರದಲ್ಲಿ ಸರ್ಕಾರವು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಈ ಹಣ ಖರ್ಚಾಗುತ್ತಿರುವುದು ಮಾತ್ರವೇ ಗೊತ್ತಾಗುತ್ತಿದೆ. ಆದರೆ ಇದರ ಅಂತಿಮ ಫಲಿತಾಂಶವೇನು ಎಂಬುದರ ಬಗ್ಗೆ ಸರ್ಕಾರವು ವರದಿಯನ್ನೇನಾದರೂ ತರಿಸಿಕೊಳ್ಳುತ್ತಿದೆಯೇ ಎಂದು ನಾನು ಕೇಳಬಯಸುತ್ತೇನೆ. ಯೋಜನೆಗಳು

ಎಷ್ಟರ ಮಟ್ಟಿಗೆ ಅನುಷ್ಠಾನಗೊಳ್ಳುತ್ತಿವೆ ಎಂಬ ಕಡೆಗೆ ಸರ್ಕಾರವು ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಯೋಜನೆಗಳು ಎಷ್ಟರ ಮಟ್ಟಿಗೆ ಫಲಪ್ರದಾಯಕವಾಗಿವೆ ಎಂಬುದರ ಬಗ್ಗೆ ಅಧ್ಯಯನ, ಸಮೀಕ್ಷೆ ಅಥವಾ ಇನ್ನೇನು ಮಾಡುತ್ತದೆ ಎಂಬುದರ ಬಗ್ಗೆ ಸಚಿವರು ತಿಳಿಸಬೇಕು. ಇವತ್ತಿನ ದಿವಸ ಅಂತರ್ಜಲ ವೃದ್ಧಿಯ ಹೆಸರಿನಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆ. ಆದರೆ ಇವು ನಿರೀಕ್ಷೆಗೆ ತಕ್ಕ ಫಲಿತಾಂಶ ನೀಡುತ್ತಿಲ್ಲ ಎನ್ನುವುದು ನನಗೆ ಇರುವ ಮಾಹಿತಿಯಾಗಿದೆ. ಈ ಪ್ರಾಧಿಕಾರದಿಂದ ನಿರಾಪೇಕ್ಷಣಾ ಪತ್ರವನ್ನು ಪಡೆಯುವುದು ಕಡ್ಡಾಯಗೊಳಿಸಿದರೆ ಅದು ಎಷ್ಟರ ಮಟ್ಟಿಗೆ ಕಾರ್ಯರೂಪದಲ್ಲಿ ಬರುತ್ತದೆ ಎನ್ನುವುದರ ಬಗ್ಗೆ ನಮಗೆ ಬಹಳ ಕಳಕಳಿಯಿದೆ. ಇದರ ಅನುಷ್ಠಾನದ ಪ್ರಮಾಣವೂ ಸಹ ಬಹಳ ಕಡಿಮೆ ಇದೆ. ಇದಕ್ಕೆ ಸಂಬಂಧಿತ ವರದಿಯನ್ನೂ ಸಹ ಸರ್ಕಾರವು ತರಿಸಿಕೊಳ್ಳಬೇಕು. ಗ್ರಾಮೀಣ ಭಾಗಗಳಲ್ಲಿ ಮತ್ತು ಕೆಲವು ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಇದು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳದಿರುವ ಬಗ್ಗೆಯೂ ಸಹ ಸರ್ಕಾರ ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರವು ಎಷ್ಟೇ ನಿಯಮಗಳನ್ನು ಜಾರಿಗೊಳಿಸಿದರೂ ಸಹ ಅವುಗಳು ಕಾರ್ಯರೂಪಕ್ಕೆ ಬರುತ್ತಿಲ್ಲ. ಈ ಪ್ರಾಧಿಕಾರದ ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಕೊನೆಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಅವುಗಳ ವಿವರಗಳನ್ನು ಅಧಿಕಾರಿಗಳಿಂದ ಪಡೆದುಕೊಳ್ಳಬೇಕು. ಪ್ರತಿವರ್ಷವೂ ಸಹ ಪರಿಶೀಲನಾ ಸಭೆಗಳನ್ನು ಮಾಡಿದಾಗ ಇದರ ಬಗ್ಗೆ ಕೇಳಿ ಪಡೆದುಕೊಳ್ಳಬೇಕು. ಏಕೆಂದರೆ ಸರ್ಕಾರವು ಪ್ರಾಧಿಕಾರವನ್ನು ರಚನೆ ಮಾಡಿದ ತಕ್ಷಣವೇ ಎಲ್ಲವೂ ಆಗುತ್ತದೆ ಎಂದು ನಾನು ಹೇಳುವುದಿಲ್ಲ. ಇದು ಕೇವಲ ಕಾಗದದ ರೂಪದಲ್ಲಿ ಇರಬಾರದು. ಅದು ಅನುಷ್ಠಾನಕ್ಕೆ ಬಂದ ಮೇಲೆ, ಇದರ ಫಲಿತಾಂಶವೇನು; ಇದರಿಂದ ಜನರಿಗೆ ಯಾವ ರೀತಿಯಾಗಿ ಸಹಾಯವಾಗುತ್ತಿದೆ ಎನ್ನುವುದನ್ನು ನೋಡಬೇಕು. ಯೋಜನೆಯ ನಿಜವಾದ ಅರ್ಥ ಬರುವ ರೀತಿಯಲ್ಲಿ ಸರ್ಕಾರ ಕೆಲಸವನ್ನು ಮಾಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಸರ್ಕಾರವು ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಿದೆ. ನಾವು ಮಲೆನಾಡು ಭಾಗದಲ್ಲಿ ಇರುವವರು. ಆ ಭಾಗದಲ್ಲಿ ನಾವು ಯಥೇಚ್ಛವಾಗಿ ನೀರನ್ನು ಬಳಕೆ ಮಾಡುತ್ತೇವೆ. ನಾವು ಯಾವಾಗ ನೀರಿನ ಬಳಕೆಗೆ ನಿರ್ಬಂಧಗಳನ್ನು ವಿಧಿಸುತ್ತೇವೆಯೋ, ನೀರನ್ನು ಕಡಿಮೆ ಬಳಕೆ ಮಾಡಬೇಕು ಅಥವಾ ನೀರನ್ನು ಸರಯಾಗಿ ಬಳಕೆ ಮಾಡಿ ಎಂಬಿತ್ಯಾದಿಯಾಗಿ ಹೇಳಿದಾಗ, ಜನರಿಗೆ ಸರ್ಕಾರ, ಜನಪ್ರತಿನಿಧಿಗಳ ಮೇಲೆ ಸಾಕಷ್ಟು ಸಿಟ್ಟು ಬರುತ್ತದೆ. ಜಲ್ ಜೀವನ್ ಮಿಷನ್ ಎಂಬ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಮನೆ ಮನೆಗೆ ಗಂಗೆ ಎಂಬ ಅದ್ಭುತವಾದ ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಮನೆಗಳಿಗೆ ನೀರನ್ನು ಒದಗಿಸಿದ ಮೇಲೆ ಅದಕ್ಕೆ ಶುಲ್ಕವನ್ನು ವಸೂಲಿ ಮಾಡಬೇಕೆಂದು ಹೊರಟರೆ, ಖಂಡಿತವಾಗಿಯೂ ಸಹ ನಮ್ಮಂತಹ ಊರುಗಳಲ್ಲಿ ಯಾರೂ...., ನಗರ ಪ್ರದೇಶದವರು ಇವತ್ತಿನ ದಿವಸ ನೀರಿಗೆ ದುಡ್ಡು ಕೊಡುತ್ತಾರೆ; ನಾಳೆಯ ದಿವಸ ಗಾಳಿಗೂ ಸಹ ದುಡ್ಡನ್ನು

ಕೊಡುತ್ತಾರೆ. ನೀರನ್ನು ದುಡ್ಡು ಕೊಟ್ಟು ಕುಡಿಯಿರಿ, ಮನೆಗೆ ಬರುವ ನೀರಿಗೆ ದುಡ್ಡು ಕೊಡಬೇಕೆಂದು ಹೇಳಿದರೆ ನಮ್ಮಂತಹ ಊರುಗಳಲ್ಲಿ ಬಹಳ ಕಷ್ಟ. ಒಟ್ಟಾರೆಯಾಗಿ ಇಷ್ಟು ವರ್ಷಗಳ ಕಾಲ ನಾವು ನೀರನ್ನು ಯಥೇಚ್ಛವಾಗಿ ಬಳಸಿ, ಅದರ ಒಂದಿಷ್ಟು ಮಹತ್ವವನ್ನು ಕಳೆದುಕೊಂಡಿದ್ದೇವೆ.

(ಮುಂದು)

(೮೨೦)21-08-2025/11-00 bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್(ಮುಂದು..)**

ಆದರೆ, ಇವತ್ತು ಬಹಳ ಅವಶ್ಯಕತೆ ಇರುವುದು ಎಂದರೆ ನಾವು ನಮ್ಮ ಪರಿಸರದ ಬಗ್ಗೆ, ನಮ್ಮ ನೀರಿನ ಬಗ್ಗೆ, ನಮ್ಮ ಸಾಯಿಲ್ ಬಗ್ಗೆ , ಮಣ್ಣಿನ ಬಗ್ಗೆಯೂ ಕೂಡ ಮಾತನಾಡುವಂತಹದ್ದು ಇದೆ. ಆದರೆ, ಮಾನ್ಯ ಸಚಿವರೆ, ಇದಕ್ಕೋಸ್ಕರ ಹಲವಾರು ಸಂಘ-ಸಂಸ್ಥೆಗಳು, ಅದರಲ್ಲೂ ವಿಶೇಷವಾಗಿ, ಶ್ರೀಮಾನ್ ರವಿಶಂಕರ್ ಗುರೂಜಿ 'Art of Living', ಸಂಸ್ಥೆಯ ಸಂಸ್ಥಾಪಕರು ಸಹ ಕಾಳಜಿ ವಹಿಸಿದ್ದಾರೆ. ನಮ್ಮ ಗ್ರೌಂಡ್ ವಾಟರ್ ಅನ್ನು improve ಮಾಡಬೇಕೆಂದು, ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಲಕ್ಷಾಂತರ ಇಂಗು ಗುಂಡಿಗಳನ್ನು ಮಾಡಿ, ಗ್ರೌಂಡ್ ವಾಟರ್ ಲೆವಲ್ ಅನ್ನು ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಲಾಯಿತು. ಅದೇ ರೀತಿಯಲ್ಲಿ ಸದ್ಗುರೂಜಿ ಯವರು ಕೂಡ ಈ ಸಾಯಿಲ್ ಅನ್ನು ಯಾವ ರೀತಿಯಲ್ಲಿ ನಾವು ಅದನ್ನು ಪ್ರೀತಿ ಮಾಡಬೇಕೋ, ಗೌರವ ಕೊಡಬೇಕೋ, ಪೂಜೆ ಮಾಡಬೇಕೋ ಎನ್ನುವಂತಹದ್ದನ್ನು ಸದ್ಗುರೂಜಿಯವರು ಸಹ ಚಿಂತನೆ ಮಾಡಿದರು. ಧರ್ಮಸ್ಥಳದ ನಮ್ಮ ಧರ್ಮಾಧಿಕಾರಿಯವರಾದ ಶ್ರೀಮಾನ್ ವೀರೇಂದ್ರ ಹೆಗಡೆಯವರು ಕೆರೆಗಳನ್ನು ನಿರ್ಮಾಣ ಮಾಡುವಂತಹದ್ದನ್ನು ಮಾಡಿದರು. ಇವತ್ತು ನಾವು ನಿರ್ಮಾಣ ಮಾಡಲಿಕ್ಕೆ ಹೋದರೆ ಸರ್ಕಾರದ ವತಿಯಿಂದ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಕೇವಲ ಸ್ವಲ್ಪ ಮೊತ್ತದಲ್ಲಿ ಕೆಲವು ಉತ್ತಮವಾದ ಕೆರೆಗಳ ನಿರ್ಮಾಣ ಕೂಡ ಇವತ್ತು ಧರ್ಮಸ್ಥಳದ ಮಾನ್ಯ ಧರ್ಮಾಧಿಕಾರಿಗಳಿಂದ ಆಗುತ್ತಿದೆ. ಈ ರೀತಿಯಾದವರನ್ನು ನಾವು ಒಗ್ಗೂಡಿಸಬೇಕಾಗಿದೆ. ನಮಗೆ ಬೇಕಾಗಿರುವುದು, ಜನರುಗಳಿಗೆ ಜನ-ಜಾಗೃತಿಯನ್ನುಂಟು ಮಾಡಬೇಕಾಗಿದೆ. ನಾವು ಜನ-ಜಾಗೃತಿಯನ್ನು create ಮಾಡಲಿಲ್ಲವೆಂದರೆ, ನೀವು ಎಷ್ಟೇ ಮಾಡಿದರೂ ಕೂಡ ನೀರಿನ ಬಗ್ಗೆ ನಮ್ಮ ಜನಕ್ಕೆ ಅದರ ಉಪಯೋಗ ಮತ್ತು ಮುಂದೆ ಆಗುವಂತಹದ್ದು ಗೊತ್ತಾಗುವುದಿಲ್ಲ. ಇದೊಂದು ಸಿ.ಎಸ್.ಆರ್. ಅಡಿಯಲ್ಲಿ ಸಾಕಷ್ಟು ಜನರು ಸಿದ್ಧರಿದ್ದಾರೆ. ಈ ರೀತಿಯಲ್ಲಿ ಗ್ರೌಂಡ್ ವಾಟರ್ ಅನ್ನು ಇಂಪ್ರೂವ್ ಮಾಡಲಿಕ್ಕೆ, ವಾಟರ್ ಬಗ್ಗೆ ನಾವು ಜನ-ಜಾಗೃತಿಯನ್ನು create ಮಾಡಲಿಕ್ಕೆ ಪ್ರಯತ್ನ ಪಡಬೇಕಾಗಿದೆ.

ಇನ್ನೊಂದು ವಿಷಯ ಎಂದರೆ desilting of river. ಮುಂದಿನ ದಿನಗಳಲ್ಲಿ ಇದನ್ನು ನಾವು ಏನಾದರೂ ತೆಗೆದುಕೊಳ್ಳಲಿಲ್ಲವೆಂದರೆ, desilting ಗೆ ನಮ್ಮದೇ ಆದಂತಹ ತೊಂದರೆಗಳು ಇವತ್ತು desilting ನಲ್ಲಿದೆ. River desilting ಇರಲಿ, lake desilting ಇರಲಿ. Lake Development Authority ಏನಿದೆ, ಅವರದ್ದೇ ಆದಂತಹ ನಿರ್ಬಂಧಗಳಿರುವುದರಿಂದ ನಮಗೆ desilting ಆಗುತ್ತಿಲ್ಲ. 184 ಅಡಿ ನಮ್ಮ ಭದ್ರಾ ಜಲಾಶಯ ಎಂದು ನಾವು ಸುಮ್ಮನೆ ಹೇಳುತ್ತೇವೆ. ಅದರಲ್ಲಿ ಎಷ್ಟು ಶಿಲ್ಟ್ ಇದೆ? ಅದರ ಕೆಳಗಡೆ ನಮ್ಮ ತುಂಗಾ. ಗಾಜನೂರು ಡ್ಯಾಮ್‌ಗೆ ನಾಲ್ಕು ಬಾರಿ ಮಳೆ ಬರಲಿಕ್ಕೆ ಪುರಸೊತ್ತು ಇರುವುದಿಲ್ಲ. ಅಷ್ಟೊತ್ತಿಗಾಗಲೇ ಅದು ಫುಲ್ ಆಗಿ ನಾವು ನೀರು ಬಿಡಬೇಕಾಗುತ್ತದೆ. Desilting ಗೆ ಯಾವಾಗ ಮಾಡಬೇಕಾಗುತ್ತದೆ? ನೀವು desilting ಗಾಗಿ ವಿಶೇಷವಾದಂತಹ ಪ್ರಯತ್ನವನ್ನು ಮಾಡಬೇಕು. ಆಗ storage of water ಅನ್ನು ನಾವು ಉತ್ತಮ ಲೆವಲ್‌ನಲ್ಲಿ ಇಟ್ಟುಕೊಳ್ಳಬಹುದು.

ಮಾನ್ಯ ಸಚಿವರೆ, ಹಾಗಾಗಿ, ನೀವು ತರುತ್ತಿರುವಂತಹ ಬಿಲ್‌ನಲ್ಲಿ ನಾವು ಯಾವ ಯಾವಾಗ ನಿರ್ಬಂಧಗಳನ್ನು ಹಾಕುತ್ತೇವೆ, ಇದರೊಳಗೆ ಆಗುವಂತಹ ಅನಾಹುತಗಳು ಏನೆಂದರೆ, ಯಾರು ಈ ವಾಟರ್ ಅನ್ನು ತೆಗೆದುಕೊಂಡು ಜನರಿಗೆ ಕೊಡುವಂತಹದ್ದು, ಕುಡಿಯುವ ನೀರು ಇಲ್ಲದಂತಹ ಜಾಗಗಳಿಗೆ ಕಳುಹಿಸುವಂತಹದ್ದು, ವಿಶೇಷವಾಗಿ ಇದು ಮಳೆಗಾಲದಲ್ಲಿ ಆಗುವುದಿಲ್ಲ. ಇದು ಆಗುವಂತಹದ್ದು ಬೇಸಿಗೆ ಕಾಲದಲ್ಲಿ ಆಗುತ್ತದೆ. ಬೇಸಿಗೆಯಲ್ಲಿ ಈ ನೀರಿನ ಕೊರತೆ ಶುರುವಾಗುತ್ತದೆ. ಆ ನೀರಿನ ಕೊರತೆ ಶುರುವಾದಾಗ ಯಾರಿಗೆ ನೀರಿನ ಅವಶ್ಯಕತೆ ಇದೆ, ಅವರುಗಳಿಗೆ ತೆಗೆದುಕೊಂಡು ಹೋಗಬೇಕಾದರೆ, ನಾವು ಅವರ ಮೇಲೆ ನಿರ್ಭಂಧಗಳನ್ನು, ಫೆನಾಲ್ಟಿಗಳನ್ನು ಹಾಕಿದಾಗ, ಇದರೊಳಗಡೆ ದೊಡ್ಡದಾಗಿ ನಡೆಯುವಂತಹದ್ದು ಭ್ರಷ್ಟಾಚಾರ. ಹಾಗಾಗಿ, ನಾವು ನೀರಿಗೆ ಹೆಚ್ಚು ಈ ರೀತಿಯ ನಿರ್ಬಂಧಗಳು ಸಿಗುವುದೇ ಕಷ್ಟ. ಆ ರೀತಿಯದ್ದು ಆ ರೀತಿಯದ್ದು ಆಗಿಬಿಟ್ಟರೆ ನಾಳೆ ಇದರಿಂದ ದೊಡ್ಡ ತೊಂದರೆಗಳಾಗುತ್ತವೆ. ಇದನ್ನು ಇನ್ನಷ್ಟು ಸರಳೀಕರಣ ಮಾಡಬೇಕು ಮತ್ತು ಜನರಿಗೆ ಆರಾಮ ಆಗಿ ನೀರು ಸಿಗುವಂತಹದ್ದಕ್ಕೆ ನಮ್ಮ ಪ್ರಯತ್ನಗಳು ಸರ್ಕಾರದ ವತಿಯಿಂದ ಆಗಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ. ಸಿ.ಎನ್.ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ)(ತಿದ್ದುಪಡಿ) ವಿಧೇಯಕದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಇವತ್ತು 90% ಕಾಯಿಲೆಗಳು ಕುಡಿಯುವ ನೀರಿನಿಂದ ಬರುತ್ತಿದೆ. ಹಾಗೆಯೇ ಬಿಸಿ ನೀರನ್ನು ಕುಡಿಯಬೇಕೆಂದು ಎಲ್ಲಾ ಕಡೆ ಹೇಳುತ್ತಿದ್ದಾರೆ. ಇವತ್ತು ಮಾನ್ಯ ಸಚಿವರು ಈ ಒಂದು ಬಿಲ್ ಅನ್ನು ಮಂಡಿಸಿದ್ದಾರೆ. ಈ ಬಿಲ್ ಬಗ್ಗೆ ನಮ್ಮ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುವಂತಹ ಸಂದರ್ಭದಲ್ಲಿ ಮಳೆ ಬಿದ್ದು, ನೀರು ಹರಿದು

ಹೋಗಿ ನೀರು ವ್ಯರ್ಥವಾಗುತ್ತಿದೆ. ಆ ನೀರನ್ನು ಸ್ಟೋರೇಜ್ ಮಾಡಿದರೆ ಈ ಬೋರ್‌ವೆಲ್‌ಗಳ ಸಮಸ್ಯೆ ಬಗೆಹರಿದು, ಕುಡಿಯುವ ನೀರಿಗೆ ಅನುಕೂಲವಾಗುತ್ತದೆ ಎನ್ನುವ ವಿಚಾರವನ್ನು ತಂದಿದ್ದಾರೆ. ನಾನು ತಮ್ಮಲ್ಲಿ ಕೇಳುವುದೇನೆಂದರೆ ಇವತ್ತು ಯಾವುದೇ ಒಂದು ಮಸೂದೆಯನ್ನು ತಂದರೂ ಕೂಡ ಅದರಲ್ಲಿ ಒಳ್ಳೆಯದ್ದು, ಕೆಟ್ಟದ್ದು ಎರಡು ಇರುತ್ತದೆ. ನಗರ ಪ್ರದೇಶದಲ್ಲಿ ಇವತ್ತು ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ನೀರನ್ನು ಬಿಡುತ್ತಾರೆ. 15 ದಿನಗಳಿಗೊಮ್ಮೆ ಸಂಪನ್ನು ಕ್ಲೀನ್ ಮಾಡಬೇಕಾಗುತ್ತದೆ. ಕೊನೆಯ ಪಕ್ಷ 4 ಇಂಚು ನೀರು ಕಟ್ಟಿಕೊಳ್ಳುತ್ತದೆ. ಅದರಿಂದ ಮೇಲುಗಡೆ ನೀರು ಹೋಗಬೇಕು, ಅಲ್ಲಿ ಒಂದು ಫಿಲ್ಟರ್ ಹಾಕಬೇಕು. ಅಲ್ಲಿ ನೀರು ಕಟ್ಟಿಕೊಳ್ಳುತ್ತದೆ. ಇಂತಹ ಒಳ್ಳೆಯ ನೀರನ್ನು ಕೊಟ್ಟರೆ ಅನುಕೂಲವಾಗುತ್ತದೆ. ನೀರು ಕೊಡುವಂತಹದ್ದು ಸರ್ಕಾರ. ಆ ಶುದ್ಧ ನೀರನ್ನು ಕೊಟ್ಟರೆ ಈ ನಿಮ್ಮ ಬೋರ್‌ವೆಲ್ ಸಮಸ್ಯೆ ಆಟೋಮ್ಯಾಟಿಕ್ ಆಗಿ ಹೋಗುತ್ತದೆ. ಈಗ ತಾವು ಬೋರ್‌ವೆಲ್ ಅನ್ನು ಕೊರೆಯಬಾರದು ಎಂದು ಹೇಳುತ್ತೀರಿ. ಇವತ್ತು 1,500 ಅಡಿ, 2,000 ಅಡಿ ಕೆಳಗಡೆ ಹೋದರೂ ಸಹ ಇವತ್ತು ನೀರು ಸಿಗುತ್ತಿಲ್ಲ. ಒಂದು ಕಾಲದಲ್ಲಿ ಜ್ಞಾನಿಗಳು ಹೇಳಿದಂತೆ "ಪ್ರಪಂಚದಲ್ಲಿ ನೀರಿಗೋಸ್ಕರ ಯುದ್ಧಗಳಾಗುತ್ತಿವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಅದೇ ಒಂದು ಪರಿಸ್ಥಿತಿ ಬರುತ್ತಿದೆ. ರಾಜ್ಯ -ರಾಜ್ಯಗಳ ನಡುವೆ ಬರುತ್ತಿದೆ. ಇವತ್ತು ನಾನು ಹೇಳುವುದೇನೆಂದರೆ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಗಂಗಾ-ಕಾವೇರಿಯನ್ನು ಜೋಡಣೆ ಮಾಡಬೇಕೆನ್ನುವ ಒಂದು ಸ್ಕೀಂ ಅನ್ನು ಜಾರಿಗೆ ತಂದರು. ಇವತ್ತು ಇಂತಹ ಬಿಲ್‌ಗಳನ್ನೆಲ್ಲಾ ತಂದು ಪಾಸ್ ಮಾಡಿಕೊಳ್ಳುತ್ತೇವೆ. ಇದರಿಂದ ಕೆಲವು ಅನುಕೂಲವೂ ಆಗುತ್ತದೆ, ಮತ್ತೆ ಕೆಲವು ಅನಾನುಕೂಲಗಳಾಗುತ್ತವೆ. ಸರ್ಕಾರದಿಂದ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳಿಗೆ ಗಂಗಾ-ಕಾವೇರಿ ಜೋಡಣೆಗೆ ಒತ್ತಾಯ ಮಾಡಿದರೆ ಇದೆಲ್ಲದಕ್ಕೂ ಕೂಡ ಒಂದು ಕಾಯಂ ಪರಿಹಾರ ಸಿಗುತ್ತದೆ. ಮಾನ್ಯ ಸಚಿವರು ಬಿಲ್ ಮಂಡಿಸುವಾಗ ಬೋರ್‌ವೆಲ್ ಅನ್ನು ಕೊರೆಯಬಾರದು ಎಂದು ಹೇಳಿದ್ದಾರೆ. ಕೊರೆಯಬಾರದು, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ರೈತರಿಗೆ ಪರ್ಯಾಯವಾಗಿ ಏನು ವ್ಯವಸ್ಥೆಯನ್ನು ಮಾಡುತ್ತೀರಿ?

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇದರಲ್ಲಿ ಯಾರು ಯಾರಿಗೆ ವಿನಾಯಿತಿ ಇದೆ ಎಂದು ಹಾಕಿದ್ದೇವೆ. ಅದರಲ್ಲಿ ಕುಡಿಯುವ ನೀರಿಗಾಗಲಿ, ವೈಯಕ್ತಿಕ ಬೋರ್‌ವೆಲ್‌ಗಳಿಗಾಗಲಿ, ರೈತರಿಗಾಗಲಿ ಅದರಲ್ಲಿ ಯಾವುದೇ ತೊಂದರೆ ಇರುವುದಿಲ್ಲ.

**ಶ್ರೀ. ಸಿ.ಎನ್.ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದಿಂದ JJM (Jal Jeevan Mission) ಸ್ಕೀಂ ತೆಗೆದುಕೊಂಡು ಬಂದರು. ಕೆ.ಆರ್.ನಗರ ತಾಲ್ಲೋಕಿನಲ್ಲಿ ಆ JJM ಪೈಪ್‌ಗೆ ಕೊಳಚೆ ನೀರು ಮಿಶ್ರಿತವಾಗಿ ಇಬ್ಬರು ಸತ್ತು ಹೋಗುತ್ತಾರೆ. ನೀವು ಎಲ್ಲಾ ಯೋಜನೆಗಳನ್ನು ತರುತ್ತೀರಿ ಸಂತೋಷ. ಆದರೆ, ಇದಕ್ಕೆಲ್ಲಾ ಒಂದು ಪರಿಹಾರ ಎಂದರೆ

ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನೀವು ಹಾಕಿದ್ದೀರಿ. ಈಗ ಅವುಗಳು ಎಲ್ಲಾ ಕಡೆಯೂ ಮುಚ್ಚಿ ಹೋಗಿವೆ. ಎಲ್ಲವೂ ನಿಂತು ಹೋಗಿದೆ. ಅವುಗಳ ನಿರ್ವಹಣೆ ಇರುವುದಿಲ್ಲ. ಹೀಗಾಗಿ, ನಾನು ಹೇಳುವುದು ಏನೆಂದರೆ, ಏನು ನೀವು ಈ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಭಿವೃದ್ಧಿ ಮಾಡಿದರೆ ಸಿಟಿಗಳಲ್ಲೂ ಕೂಡ ನಗರ ಪಾಲಿಕೆಗಳದ್ದು ಇದ್ದು, ಅದು ಸಹ ಮುಚ್ಚಿ ಹೋಗಿರುತ್ತದೆ. ನಿರ್ವಹಣೆಗೆಂದು 5 ರೂಪಾಯಿಗಳ ಚಾರ್ಜ್ ಮಾಡುತ್ತಾರೆ. ಅದನ್ನು ಜನರು ಕೊಡಲಿಕ್ಕೆ ಸಿದ್ಧವಿದ್ದಾರೆ. ಹೀಗಾಗಿ ನೀವು ಅದನ್ನು ಅಭಿವೃದ್ಧಿ ಮಾಡಿದರೆ ಈ ಕುಡಿಯುವ ನೀರಿನ ಸಮಸ್ಯೆ ಇವತ್ತು ಸರಿ ಹೋಗುತ್ತದೆ. ನಾನು ಸದಸ್ಯನಾಗಿದ್ದು, ನನಗೆ ಗೌರವಧನವನ್ನು ಕೊಡುತ್ತೀರಿ, ಅದರಿಂದ ನಾನು ವಾಟರ್ ಬಾಟಲ್ ಅನ್ನು ತೆಗೆದುಕೊಂಡು ಕುಡಿಯುತ್ತೇನೆ. ಆದರೆ, ಇದು ನಗರಗಳಲ್ಲಿ ಆಗಬಹುದು, ಗ್ರಾಮೀಣ ಪ್ರದೇಶದಲ್ಲಿ ಆಗಬಹುದು. ಅವರುಗಳಿಗೆ ಶುದ್ದ ಕುಡಿಯುವ ನೀರಿನ ಘಟಕಗಳನ್ನು ಅಭಿವೃದ್ಧಿ ಮಾಡಿದರೆ, ಅವರ ಆರೋಗ್ಯ ಸುಧಾರಣೆಯಾಗುತ್ತದೆ. ಮತ್ತೆ, ಅವರ ಆರ್ಥಿಕ ಪರಿಸ್ಥಿತಿ ಕೂಡ ಅಭಿವೃದ್ಧಿಯಾಗುತ್ತದೆ. ಈಗ ತಂದಿರತಕ್ಕಂತಹ ಬಿಲ್ ಒಳ್ಳೆಯದಕ್ಕಾದರೂ ಕೂಡ ಇದರಲ್ಲಿ ಹಲವಾರು ನ್ಯೂನ್ಯತೆಗಳಿವೆ. ಅದನ್ನು ಸರಿಪಡಿಸಿಕೊಂಡು ಇದನ್ನು ಜಾರಿಗೆ ತರಬೇಕೆನ್ನುವ ಮಾತನ್ನು ಹೇಳುತ್ತಾ, ಈ ಬಿಲ್‌ಗೆ ನಾನು ಸಪೋರ್ಟ್ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಾನು ಹೇಳುವಂತಹ ವಿಚಾರಗಳನ್ನು ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ಹೇಳಿದರು. ಅದರೂ ಕೂಡ ಅಂತರ್ಜಲವನ್ನು ತೆಗೆಯಬೇಕಾದರೆ ಅಂತರ್ಜಲ ಇರಬೇಕು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಹೇಳಿದರು. ಕರಾವಳಿ ಪ್ರದೇಶದಲ್ಲಿ ಮಳೆ ಬಂದರೆ ನೀರೆಲ್ಲಾ, ವೇಸ್ಟ್ ನೀರೆಲ್ಲಾ ಸಮುದ್ರಕ್ಕೆ ಹೋಗುತ್ತದೆ ಎಂದು ಹೇಳಿದರು. ಆದರೆ, ಮಳೆ ಬಂದರೆ ನೆರೆ ಏತಕ್ಕೆ ಬರುತ್ತದೆ ಎಂದರೆ ಸಮುದ್ರ ಇದನ್ನು ತೆಗೆದುಕೊಳ್ಳುವುದಿಲ್ಲ. ಭೂಮಿ ಸಹಿತ ತೆಗೆದುಕೊಳ್ಳುವುದಿಲ್ಲ. ಅಲ್ಲಿ ಅದಕ್ಕೆ ಒಂದು ಸರಿಯಾದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ, ನೆರೆ ಬರುವಂತಹದ್ದಾಗುತ್ತದೆ. ನಮ್ಮ ನಗರ ಪ್ರದೇಶದಲ್ಲಿ ಈಗಾಗಲೇ ಸುಮಾರು 15 ವರ್ಷಗಳ ಹಿಂದೆಯೇ ಆ ಒಂದು ಕಾನೂನು ಇದೆ. ಪ್ರತಿಯೊಂದು ಮನೆ ಕಟ್ಟಬೇಕಾದರೆ ಮಳೆ ನೀರು ಸಂಗ್ರಹ ಮಾಡಬೇಕೆಂದು ಕಾನೂನು ಇದೆ. ಆದರೆ, ಎಲ್ಲಿಯೂ ಕೂಡ ಈ ಒಂದು ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ, ಅದನ್ನೂ ಕೂಡ ಕಡ್ಡಾಯವಾಗಿ ಪ್ರತಿಯೊಂದು ಮನೆಗೆ ಲೈಸೆನ್ಸ್ ಆಗಬೇಕಾದರೆ ವೀಕ್ಷಣೆ ಮಾಡಬೇಕು, ಏಕೆಂದರೆ, ಅವರು ಯಾರಿಗೂ ಭೂಮಿ ಬೇಡವಾಗಿರುತ್ತದೆ, ಅವರುಗಳು ಎಲ್ಲಾ ಕಡೆ ಕಾಂಕ್ರೀಟ್ ಹಾಕಿರುತ್ತಾರೆ. ನಮ್ಮಗಳ ಮನೆ ಕೂಡ pack ಆಗಿ ಅದೇ ರೀತಿಯಲ್ಲಿರುತ್ತವೆ. ಅಲ್ಲಿ ಮಳೆ ನೀರು ಇಂಗುವುದೇ ಇಲ್ಲ. ಡ್ರೈನೇಜ್‌ನಲ್ಲಿಯೂ ಕೂಡ ನೀರು ಭೂಮಿಯ ಒಳಗಡೆ ಹೋಗುವುದಿಲ್ಲ. ಅದ್ದರಿಂದ, ಅದರ ಬಗ್ಗೆ ಕ್ರಮ ವಹಿಸಬೇಕೆಂದು ಹೇಳುತ್ತೇನೆ.

**ಶ್ರೀ ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆ ವಿನಮಯನ ಹಾಗೂ ನಿಯಂತ್ರಣ (ತಿದ್ದುಪಡಿ) ವಿಧೇಯಕ, 2025. (ಮುಂದು)

(891) 21.08.2025 11.10 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಮುಂದು):-**

ಖಂಡಿತ ಈ ವಿಧೇಯಕವನ್ನು ನಾವೆಲ್ಲರೂ ಸ್ವಾಗತ ಮಾಡಲೇಬೇಕಾಗುತ್ತದೆ. ಏಕೆಂದರೆ ಈಗಿನಿಂದಲೇ ನಾವು ಎಚ್ಚೆತ್ತುಕೊಂಡಿಲ್ಲ ಎಂದರೆ ಮುಂದಿನ ಪೀಳಿಗೆಗೆ ನಮ್ಮ ಕೊಡುಗೆಯೇನು ಎಂಬುದು ನಮಗೆ ನಾವು ಪ್ರಶ್ನೆ ಮಾಡಿಕೊಳ್ಳಬೇಕಾದಂಥದ್ದು. ಇವತ್ತು ನಗರ ಪ್ರದೇಶಗಳಲ್ಲಿ urbanization ಆದ ಮೇಲೆ ಪೂರ್ಣ ಪ್ರಮಾಣದಲ್ಲಿ concrete jungle ಆಗಿವೆ. ಹಿಂದೆ ಇದ್ದಂಥ ಹೊಲ, ಕಾಲುವೆ, ಕುಂಟೆ ಇರಬಹುದು, ಇವೆಲ್ಲವುಗಳನ್ನು ನಾವು ಕಳೆದುಕೊಂಡಿದ್ದೇವೆ. ಅಂಥ ಸಂದರ್ಭದಲ್ಲಿ ಮಳೆನೀರು ಎಲ್ಲಿಗೆ ಹೋಗುತ್ತದೆ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಹಿಂದೆ ದಕ್ಷಿಣ ಕನ್ನಡ ಭಾಗದಲ್ಲಿ concrete drains ಮಾಡುವ ಸಂದರ್ಭದಲ್ಲಿ concrete drains ಅನ್ನು ನಿಷೇಧ ಮಾಡಿರುವುದನ್ನು ಅಲ್ಲಿ ಕೆಲಸ ಮಾಡುತ್ತಿದ್ದ ನನ್ನ batchmates ಗಳಿಂದ ನಾನು ಕೇಳ್ಪಟ್ಟಿದ್ದೇನೆ. Concrete drains ಅನ್ನು ನಾವು ಆದಷ್ಟು ಕಡಿಮೆ ಮಾಡಬೇಕು. Concrete drains ಮಾಡಿದರೂ ಸಹ 100 ಅಡಿಗೊಂದು hole ಮಾಡಿ ಆ ನೀರು ಭೂಮಿಯೊಳಗೆ ಹೋಗುವಂಥ ಒಂದು ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಅದೇ ನಿಟ್ಟಿನಲ್ಲಿ ನೀರಿನ ಮೂಲಗಳು ಇರುವಂಥ ಪ್ರದೇಶಗಳು, ಇಲ್ಲದಿರುವ ಪ್ರದೇಶಗಳು, ಬಯಲು ಪ್ರದೇಶಗಳನ್ನು ತೆಗೆದುಕೊಂಡರೆ ನಮ್ಮ ಬಯಲು ಸೀಮೆಯಾದ ಕೋಲಾರ, ಚಿಕ್ಕಬಳ್ಳಾಪುರ ಭಾಗಗಳಲ್ಲಿ ಯಾವುದೇ ನದಿಮೂಲವಾಗಲೀ ಅಥವಾ ನೀರಿನ sources ಇರುವುದಿಲ್ಲ. ನಾವು ನಂಬಿರುವುದೇ ಕೆರೆಯನ್ನು, ಅದನ್ನು ಬಿಟ್ಟರೆ ಮಳೆಯನ್ನು. ಹಾಗಾಗಿ ಈ ಮಳೆನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಅದು compulsory ಮಾಡುತ್ತೇವೆ. ಎಲ್ಲಿ ಆಗುತ್ತದೆಯೆಂದರೆ ಕೇವಲ ಆದೇಶದಲ್ಲಿ ಆಗುತ್ತದೆ. ಆದರೆ ಅದು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆಯೆಂದರೆ ಅದನ್ನು ಒಂದು ಟಾಸ್ಕ್‌ಫೋರ್ಸ್ ಮಾಡಿ monitor ಮಾಡಬೇಕಾಗಿರುತ್ತದೆ. Urbanization ಎಲ್ಲೆಲ್ಲಿ ಆಗಿದೆಯೋ ಆ ನಗರ ಭಾಗಗಳಲ್ಲಿ ಒಂದು ಬೋರ್‌ವೆಲ್‌ಗೆ ಅನುಮತಿಯನ್ನು ಕೇಳಿದಂಥ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯವರು ಅನುಮತಿ ಕೊಟ್ಟಂಥ ಸಂದರ್ಭದಲ್ಲಿ ಅದನ್ನು ಯಾರು ಮಳೆನೀರು ಕೊಯ್ಲು ಪದ್ಧತಿಯನ್ನು ಆ ಬೋರ್‌ವೆಲ್‌ಗೆ ಅಳವಡಿಸಿರುವುದಿಲ್ಲವೋ ಅದನ್ನು ಸರ್ಕಾರ ತೆಗೆದುಕೊಳ್ಳುತ್ತೇವೆ ಎನ್ನುವ ಒಂದು ಗಟ್ಟಿನಿಲುವನ್ನು ತೆಗೆದುಕೊಂಡು ಅವರಿಗೊಂದು ಸಂದೇಶವನ್ನು ರವಾನೆ ಮಾಡಬೇಕಾಗುತ್ತದೆ.

ಅದೇ ನಿಟ್ಟಿನಲ್ಲಿ ಇವತ್ತು ಮಳೆ, ನೀರು, ಗಾಳಿ, ಭೂಮಿ ಯಾವುದೇ ಇರಬಹುದು, ಇವುಗಳನ್ನು ರಕ್ಷಿಸಿಲ್ಲ ಎಂದರೆ ಮುಂದಿನ ದಿನಗಳಲ್ಲಿ ಭೀಕರ ಬರಗಾಲ ಎದುರಾಗುತ್ತದೆ. ಅದೆಲ್ಲವನ್ನೂ ತಡೆಯಬೇಕು, ಮುಂದಿನ ಪೀಳಿಗೆಗೆ ನಮ್ಮ ಕೊಡುಗೆಯಿರಬೇಕು ಎನ್ನುವುದಾದರೆ ಈ ಒಂದು ಆದೇಶದ ಜೊತೆಯಲ್ಲಿ ಕಠಿಣವಾದ ನಿಲುವುಗಳನ್ನು ನಾವು ತಳೆಯಬೇಕಾಗುತ್ತದೆ ಹಾಗೂ ಕಾನೂನನ್ನು ಮಾಡಬೇಕಾಗುತ್ತದೆ. ಕೆಲವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬಹಿರ್ದೆಸೆ ಮುಕ್ತ ಜಿಲ್ಲಾ ಪಂಚಾಯಿತಿ ಆಗಿದೆ ಎಂದು ಒಂದಷ್ಟು ಅಧಿಕಾರಿಗಳು ಎಲ್ಲಿಯೋ ಬಹುಮಾನ ತರುವುದು ಅಥವಾ ಪೇಪರ್‌ಗಳಲ್ಲಿ prize ಬರುವಂಥದ್ದಾಗಬಾರದು. ಏಕೆಂದರೆ ನಾನು ಹಿಂದೆಯೂ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಹೇಳಿದ್ದೇನೆ. ಸಂಪೂರ್ಣವಾಗಿ toilets ಅನ್ನು ಕಟ್ಟಿದ್ದೇವೆ, ಬಹಿರ್ದೆಸೆ ಮುಕ್ತ ಮಾಡಿದ್ದೇವೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ನಾವು ಗ್ರಾಮಾಂತರ ಭಾಗಗಳಿಗೆ ಹೋದಾಗ ಯಾವುದೇ ಹಳ್ಳಿಯು ಶೇ.100 ರಷ್ಟು ಶೌಚಾಲಯಗಳ ನಿರ್ಮಾಣವಾಗಿವೆ ಎಂದು ನಮ್ಮ ಮುಂದೆ ಇಲ್ಲ. ಆ ನಿಟ್ಟಿನಲ್ಲಿ ನಾವು ಈಗಿನಿಂದಲೇ ಎಚ್ಚೆತ್ತು ಕೊಳ್ಳಬೇಕು. ನಗರ ಭಾಗಕ್ಕೆ ಪ್ರತ್ಯೇಕವಾಗಿ ಒಂದು ಕಾನೂನನ್ನು ತರಬೇಕಾಗುತ್ತದೆ. ಮಳೆನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯವಾಗಿ plan sanction ಜೊತೆಯಲ್ಲಿಯೇ ಮಾಡಬೇಕೆನ್ನುವ ನಿಯಮ ಏನಿದೆ ಆ ನಿಯಮವನ್ನು ಸಡಿಲಗೊಳಿಸಲಿಕ್ಕೆ ಬಿಡಲೇಬಾರದು. ಜೊತೆ ಜೊತೆಯಲ್ಲಿ ನಾವು ಜನಪ್ರತಿನಿಧಿಗಳಾಗಿರುವವರು ಮಾಡುವಂಥ ತಪ್ಪುಗಳೇನೆಂದರೆ ಯಾರಾದರೂ ಬೋರ್ ಹಾಕುವಾಗ ಅಧಿಕಾರಿಗಳು ಬಂದಿದ್ದಾರೆ ಎಂದು ಫೋನ್ ಬಂದರೆ, ನಾವು ಅಧಿಕಾರಿಗಳಿಗೆ ತಾಕೀತು ಮಾಡಿ ನಮ್ಮ ಕಡೆಯವರು ಹೋಗು, ಬೋರ್‌ವೆಲ್ ಹಾಕಿಕೊಳ್ಳಲಿ ಎಂದು ಹೇಳುತ್ತೇವೆ. ನಾವು ಅವುಗಳಿಂದ ದೂರ ಇರಬೇಕಾಗುತ್ತದೆ. ಏಕೆಂದರೆ ನಾವು ಮಾಡುವಂಥ ಸಣ್ಣ ಸಣ್ಣ ತಪ್ಪುಗಳು ಸಹ ನೀರಿನ ಅಭಾವ ಹೆಚ್ಚಾಗುವುದಕ್ಕೆ, ಅದರಿಂದ ಮುಂದಿನ ಪೀಳಿಗೆಗೆ ನೀರೇ ಇಲ್ಲದಂಥಾಗುವುದು ಆಗುತ್ತದೆ.

ಮಾನ್ಯ ಶರವಣ ಅವರು ಹೇಳಿದಂತೆ ಎಷ್ಟರ ಮಟ್ಟಿಗೆ ಬಾಟಲ್ ನೀರನ್ನು ಕುಡಿಯುವುದು ಸೂಕ್ತ? ಈಗ bottling units ಗಳಿಗೆ ಅವಕಾಶವನ್ನು ಕೊಡಲಾಗುತ್ತದೆ. ಎಲ್ಲೆಂದರಲ್ಲಿ RO units ಗಳಿಗೆ ಅವಕಾಶ ಕೊಡುತ್ತಾರೆ. ಈ ರೀತಿಯಾಗಿ ಎಲ್ಲದರಲ್ಲಿಯೂ restriction ತಂದು ಈ ನೀರನ್ನು, ಅದರ ಜೊತೆಗೆ ಗಾಳಿಯನ್ನು, ಭೂಮಿಯನ್ನು ರಕ್ಷಿಸಲಿಕ್ಕೆ ಕಠಿಣವಾದ ನಿಲುವು, ನಿಯಮಗಳನ್ನು ತಂದಾಗ ಮಾತ್ರ ಮುಂದಿನ ಪೀಳಿಗೆಗೆ ನಮ್ಮ ಕೊಡುಗೆಯಾಗುತ್ತದೆ. ಇಲ್ಲವಾದರೆ ಇದು ಕೇವಲ ಕಾಗದದಲ್ಲಿ ಕಾನೂನಾಗಿ ಉಳಿದು ಹೋಗುತ್ತದೆ, ಹಾಗಾಗುವುದು ಬೇಡ, ಕಠಿಣವಾದ ನಿಲುವುಗಳೊಂದಿಗೆ ಇದನ್ನು ಅಳವಡಿಸುವುದು ಸೂಕ್ತ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಚಿದಾನಂದ ಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಂತರ್ಜಲ ದುರ್ಬಳಕೆಯನ್ನು ತಡೆಯುವುದಕ್ಕಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಸಚಿವರು ತಂದಿದ್ದಾರೆ, ಇದರ ಉದ್ದೇಶ ಒಳ್ಳೆಯದಾಗಿದೆ. ಆದರೆ ಎಲ್ಲಿಯೋ

ಒಂದು ಕಡೆ ನಾವು ಕೈಗಾರಿಕೆಗಳಿಗೆ, ಗಣಿಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂದು ಹೇಳುತ್ತೇವೆ. ಅಲ್ಲಿಯೂ ಕೂಡ ನೀರಿನ ಅವಶ್ಯಕತೆ ಅಗತ್ಯವಾಗಿರುತ್ತವೆ. ಅದಕ್ಕೆ ಪೂರಕವಾಗಿ ನಾವು ನೀರನ್ನು ಒದಗಿಸಿಕೊಡುವುದಾದರೆ ಅಷ್ಟೊಂದು ಹಣ ಖರ್ಚು ಮಾಡಿ ಅವರು ಬೋರ್‌ವೆಲ್ ಕೊರೆಯುವ ಅವಶ್ಯಕತೆ ಇರುವುದಿಲ್ಲ. ಅದರ ಜೊತೆಗೆ ಕುಡಿಯುವ ನೀರಿಗೆ, ವ್ಯವಸಾಯಕ್ಕೆ ಅನುಮತಿ ತೆಗೆದುಕೊಳ್ಳುವ ವಿಚಾರಕ್ಕೆ ನಾವು ಇಲ್ಲಿ ವಿನಾಯ್ತಿಯನ್ನು ಕೊಟ್ಟಿದ್ದೇವೆ.

ನಾವೆಲ್ಲಾ ಇಂದು ಬಹಳ ಗಂಭೀರವಾಗಿ ವಿಚಾರಣೆ ಮಾಡಬೇಕಾಗಿರುವ ವಿಚಾರವೇನೆಂದರೆ ದಿನೇ ದಿನೇ ಅಂತರ್ಜಲ ಮಟ್ಟ ಕುಸಿದು ಹೋಗುತ್ತಿದೆ. ಮಾನ್ಯ ಗೋವಿಂದರಾಜು ಅವರು ಮಾತನಾಡುತ್ತಾ ಹೇಳಿದರು. ಅದು ಕೋಲಾರ ಭಾಗ ಇರಬಹುದು, ತುಮಕೂರು ಭಾಗ ಇರಬಹುದು; ಈ ಭಾಗಗಳಲ್ಲಿ ಕೂಡ ಅಂತರ್ಜಲ ಮಟ್ಟ ಬಹಳಷ್ಟು ಪಾತಾಳಕ್ಕೆ ಹೋಗುತ್ತಿದೆ. 1,000, 1,500, 2000 ಅಡಿಗಳಿಗೆ ಹೋದರೂ ಕೂಡ ನೀರಿನ ಮಟ್ಟ ದುರ್ಬಲವಾಗುತ್ತಿದೆ. ನಾವು ಅಂತರ್ಜಲ ಹೆಚ್ಚಿಸಲು ಈ ರೀತಿಯ ಕಾನೂನುಗಳನ್ನು ತರುವುದರ ಜೊತೆಗೆ ಇದು ಕೆಲವೇ ವರ್ಗಕ್ಕೆ ಮಾತ್ರ ಅನ್ವಯವಾಗುತ್ತದೆ. ಇದರ ಜೊತೆಗೆ ಆದಷ್ಟು ಅಂತರ್ಜಲ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಜವಾಬ್ದಾರಿ ವಹಿಸಬೇಕು. ಏಕೆಂದರೆ ಇವತ್ತು ನೀರು ಅತ್ಯವಶ್ಯಕ. ಒಂದು ಹೊತ್ತಿನ ಊಟವಿಲ್ಲವೆಂದರೂ ಕೂಡ ನೀರು ಬಹಳ ಮುಖ್ಯವಾಗಿ ಬೇಕಾಗಿರುತ್ತದೆ. ಹಾಗಾಗಿ ಸರ್ಕಾರದ ವತಿಯಿಂದ ನಾವೇನು ಕ್ರಮ ಕೈಗೊಂಡಿದ್ದೀರಿ?

ಇವತ್ತು ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಕೂಡ ವೈಟ್ ಟಾಪಿಂಗ್. ಯಾವ ರಸ್ತೆಗಳಲ್ಲಿ ನೋಡಿದರೂ ಕೂಡ ಒಂದು ಹನಿ ನೀರು ಇಂಗದಂಥ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಟಾರ್ ರೋಡ್ ಇದ್ದಾಗ ಸೈಡ್‌ನಲ್ಲಿ ನೀರು ಹರಿಯುತ್ತಿತ್ತು. ಈಗ ಸೆಂಟರ್‌ರೋಡ್‌ನಲ್ಲಿ ವೈಟ್ ಟಾಪಿಂಗ್ ಬರುತ್ತದೆ. ಕಾಂಕ್ರೀಟ್ ರಸ್ತೆಯ ಇಕ್ಕೆಲಗಳಲ್ಲಿ ಹಾಗೂ ಫುಟ್‌ಪಾತಿನಲ್ಲಿ concrete blocks ಹಾಕಲಾಗುತ್ತದೆ. ಇದರಿಂದಾಗಿ ನೀರಿನ ಲಭ್ಯತೆ ಕಡಿಮೆಯಾಗುತ್ತಿದೆ. ಗ್ರಾಮೀಣಭಾಗಗಳಲ್ಲಿ ಹಾಗೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ನೀರು ದುರ್ಲಭವಾಗುತ್ತಿದೆ.

ಇಂದು ಬೆಂಗಳೂರಿನ ಪಾರ್ಕ್‌ಗಳನ್ನು ನೋಡಿದಾಗ ಏತಕ್ಕಾಗಿ ಪಾರ್ಕ್ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಇಲ್ಲಿಯೇ ಇದ್ದಾರೆ. ಅದನ್ನು ಯಾರು ಏತಕ್ಕಾಗಿ ಮಾಡುತ್ತಿದ್ದಾರೆಂದು ತಿಳಿಯುತ್ತಿಲ್ಲ. ಪ್ರತಿಯೊಂದು ಪಾರ್ಕ್‌ನಲ್ಲಿಯೂ ಕೂಡ ಮರಗಳನ್ನು ಕತ್ತರಿಸಿ, ಆ ಜಾಗಗಳಲ್ಲಿ ಜಿಮ್‌ಗಾಗಿ, ಷಟಲ್ ಕಾಕ್ ಆಡುವ ಸಲುವಾಗಿ concrete structure ಬರುತ್ತಿದೆ. ಅದರ ಬದಲಾಗಿ ದೊಡ್ಡ ದೊಡ್ಡ ಇಂಗುಗುಂಡಿಗಳನ್ನು ಮಾಡಿ ಅಲ್ಲಿ ನೀರು ಇಂಗುವ ರೀತಿಯಲ್ಲಿ ಮಾಡಿದರೆ ಖಂಡಿತವಾಗಿ ಅನುಕೂಲವಾಗುತ್ತದೆ. ಆ ವಿಚಾರದ ಬಗ್ಗೆಯೂ ಮಾನ್ಯ ಸಣ್ಣ ನೀರಾವರಿ ಸಚಿವರು ಗಮನ ಕೊಡಬೇಕು.

ನಾವು ದೊಡ್ಡ ದೊಡ್ಡ ಯೋಜನೆಗಳಾದ ಎತ್ತಿನಹೊಳೆ ಯೋಜನೆ, ಹೇಮಾವತಿ ಯೋಜನೆಗಳನ್ನು ತರುತ್ತೇವೆ. ನೀರನ್ನು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತರುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಸ್ಥಳೀಯವಾಗಿ

ಮಳೆಗಾಲದಲ್ಲಿ ಲಭ್ಯವಾಗುವ ನೀರಿನ ಪ್ರಮಾಣವೇನಿದೆ, ಅದನ್ನು ಸಾಧ್ಯವಾದಷ್ಟು ತಡೆದು ಭೂಮಿಯೊಳಗೆ ಇಂಗುವ ರೀತಿಯಲ್ಲಿ ಮಾಡಿದರೆ ಯಾವ ಗಣಿಗಾರಿಕೆಯವರಾಗಲೀ ಅಥವಾ ಇನ್ಯಾರೂ ಅಂಥ ದುಸ್ಸಾಹಸಕ್ಕೆ ಕೈ ಹಾಕುವುದಿಲ್ಲ.

ಮುಂದಿನ ದಿನಗಳಲ್ಲಿ ರೈತರು ಕೂಡ ವ್ಯವಸಾಯಕ್ಕೆ ನೀರಿನ ಬಳಕೆ ಮಾಡಬಾರದೆನ್ನುವ ಒಂದು ಪರಿಸ್ಥಿತಿ ಬರುತ್ತದೆ. ಮಾನ್ಯ ಸಚಿವರೆ, ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೋರುವುದೇನೆಂದರೆ ನಿಮಗೆ ಆ ಮನಸ್ಸಿದೆ, ಸರ್ಕಾರಕ್ಕೆ ಆ ಇಚ್ಛಾಶಕ್ತಿಯಿದೆ. ಆ ಕಾರಣಕ್ಕಾಗಿ ತಾವು ಕುಡಿಯುವ ನೀರಷ್ಟೇ ಅಲ್ಲದೆ, ಅಂತರ್ಜಲ ಮಟ್ಟ ಏರುವುದಕ್ಕೆ ಏನು ಬೇಕೋ ಅದನ್ನು ಮಾಡಬೇಕು. ನೀವು ಎತ್ತಿನಹೊಳೆಯಿಂದ ನೀರು ತರುತ್ತೀರಿ. ಈ ಬಾರಿ ಯಥೇಚ್ಛವಾಗಿ ಮಳೆಯಾಯಿತು. ನೀರೆಲ್ಲಾ ಹರಿದು ಹೋಯಿತು. ಆದರೆ ಅದಕ್ಕೆ ನಮ್ಮ ಸರ್ಕಾರ ಏನು ಯೋಜನೆಗಳನ್ನು ರೂಪಿಸಿದೆ? ದಯಮಾಡಿ ಮುಂದಿನ ಒಂದು ಅಧಿವೇಶನದಲ್ಲಿಯಾದರೂ ಕೂಡ ಅಂತರ್ಜಲ ಸಂರಕ್ಷಣೆಗೆ ಮತ್ತು ಮಳೆ ಬಂದಾಗ ನೀರನ್ನು ಸಂರಕ್ಷಣೆ ಮಾಡುವುದಕ್ಕೆ ವಿಶೇಷವಾದ ಯೋಜನೆಗಳನ್ನು ತರಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ, ಈ ಬಿಲ್ ಅನ್ನು ಸ್ವಾಗತಿಸುತ್ತಿದ್ದೇನೆ. ನಮಸ್ಕಾರ

**ಶ್ರೀ ಹೆಚ್.ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಯವರೆ, ಈ ಅಂತರ್ಜಲ ವಿಧೇಯಕವನ್ನು ತಂದಿದ್ದು, ಇದು ಎಷ್ಟು practical ಎಂದು ಉದಾಹರಣೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಬೆಂಗಳೂರಿನ ಸುತ್ತಮುತ್ತ ದೊಡ್ಡ ದೊಡ್ಡ apartments and complexes ಬರುತ್ತಿವೆ. ಕಳೆದ ಎರಡು ವರ್ಷಗಳಿಂದ ಮಳೆ ಬರುತ್ತಿರುವುದರಿಂದ ಇವತ್ತು ಪರಿಸ್ಥಿತಿ ಅಷ್ಟು severe ಇಲ್ಲ. ಎರಡು ವರ್ಷದ ಹಿಂದೆ ನೋಡಿದ್ದೆವು. ನಾನು ಮಾನ್ಯ ಸಚಿವರಿಗೆ ಕೂಡ ವಿನಂತಿ ಮಾಡಿದ್ದೆನು. Electronic City ಹತ್ತಿರ ನಾಲ್ಕೈದು ಕೆರೆಗಳಿಗೆ CSR funds ನಲ್ಲಿ rejuvenate ಮಾಡಿದ್ದೆವು. ನೀವು ಕೆ.ಸಿ.ವ್ಯಾಲಿಯಿಂದ water pump ಮಾಡಿ ಎಂದು ಹೇಳಿದ್ದಿರಿ. ಒಂದೊಂದು residential complex ಗಳಲ್ಲಿ 500-600 ಅಥವಾ 1000 ಮನೆಗಳಿವೆ. ಅಲ್ಲಿ ಬೋರ್‌ವೆಲ್ ಹಾಕಿದರೆ ನೀರು ಬರುವುದಿಲ್ಲ. ನೀವು ಕೆರೆಗಳನ್ನು ತುಂಬಿಸಿರುವ ಕಡೆಗಳಿಗೆ ನಾವು ಬೋರ್‌ವೆಲ್ ಹಾಕಿ ಸಪ್ಲೈ ಮಾಡುತ್ತಿದ್ದೇವೆ. ಇದು ನಮಗೆ ಅನಿವಾರ್ಯ. ಆದ್ದರಿಂದ ಅಲ್ಲಿ restrict ಮಾಡುವುದಕ್ಕೆ ಸಾಧ್ಯವೇ ಇಲ್ಲ. Bulk suppliers ಎಂದರೇನು. ಎಲ್ಲಿ ನೀರು ಲಭ್ಯತೆಯಿಲ್ಲವೋ ಅವರಿಗೆ ಸಪ್ಲೈ ಮಾಡುವುದು. ಆದ್ದರಿಂದ ಬೆಂಗಳೂರಿನಲ್ಲಿ ಅವರಿಗೆ restriction ಸಾಧ್ಯವೇ ಇಲ್ಲ. ನೀವು ಸರ್ಜಾಪುರ ಕಡೆಗೆ ಹೋಗಿ ನೋಡಿ. ಅಲ್ಲಿ ಸುಮಾರು 1 ಲಕ್ಷ ಅಪಾರ್ಟ್‌ಮೆಂಟ್ ಬರುತ್ತಿದೆ. ಕೆ.ಸಿ.ವ್ಯಾಲಿಯಿಂದ ನೀರನ್ನು ಕೆರೆಗಳಿಗೆ ತುಂಬಿಸಿ, ಆ ಕೆರೆಗಳ ಪಕ್ಕದಲ್ಲಿ ನಾವು ಬೋರ್‌ವೆಲ್‌ಗಳನ್ನು ಹಾಕಿಕೊಂಡು ಅಲ್ಲಿಂದ ಸಪ್ಲೈ ಮಾಡುವಂಥ ಅನಿವಾರ್ಯ ಪರಿಸ್ಥಿತಿಯಲ್ಲಿ ನಾವಿದ್ದೇವೆ.

(ಮುಂದು)

(892) 21-08-2025 (11.20) ಕೆಜಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಎಸ್.ಗೋಪಿನಾಥ್ (ಮುಂದು):-**

ಇವತ್ತು 2nd phase ಆಗಿದೆ. ಅದು ಸ್ವಲ್ಪ extra water ಬಂದಿದೆ ಎಂದು BBMP areas ಗೆ ಮಾತ್ರ ಕೊಡುತ್ತಿದ್ದಾರೆ. ಇನ್ನೂ outside ಗೆ ಇವತ್ತಿಗೂ ಕೊಡುತ್ತಿಲ್ಲ. ಆದ್ದರಿಂದ, bulk users ಗೆ restriction ಹಾಕಿದರೆ ಹೇಗೆ? ಅವರಿಗೆ apartment ಗಳನ್ನು ಕಟ್ಟುವುದಕ್ಕೆ ಬಿಡುತ್ತೇವೆ. ಅದರಂತೆ, ಅವರಿಗೆ ಕುಡಿಯುವುದಕ್ಕೆ ನೀರು ಕೊಡಬೇಕಲ್ಲವೇ? ನೀರನ್ನು ಕೊಡುವುದಕ್ಕಾಗಿ ಕೆರೆಗಳನ್ನು ತುಂಬಿಸುವಂತಹ ವ್ಯವಸ್ಥೆಯನ್ನು ಹೆಚ್ಚು ಮಾಡಬೇಕು. ಇವತ್ತು ಅಲ್ಲಿ borewell ಹಾಕಿ ಅಲ್ಲಿಂದಲೇ ನೀರು ಸರಬರಾಜು ಮಾಡುತ್ತಿದ್ದಾರೆ. ಹಾಗಾಗಿ, ಮಾನ್ಯ ಸಚಿವರು ಈ restriction ಹಾಕುವುದಕ್ಕಿಂತ ಮುಂಚೆ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

**ಡಾ॥ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, "ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025" ಅನ್ನು ಸ್ವಾಗತ ಮಾಡುತ್ತೇನೆ. "ಕಲಂ 11 ರ ಉಪಕಲಂ 1 (ಎ) ರಲ್ಲಿ ಅನುಮತಿ ಅಥವಾ ನಿರಾಕ್ಷೇಪಣಾ ಪತ್ರ ಪಡೆಯುವುದರಿಂದ ವಿನಾಯಿತಿ ಪಡೆಯಲಾದ ಗ್ರಾಹಕ ಪ್ರವರ್ಗಗಳು ಎಂದು ಇರುವಾಗ, ಅದರಲ್ಲಿ ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳು ಎರಡರಲ್ಲೂ ವೈಯಕ್ತಿಕ ಗೃಹ ಉಪಯೋಗಿ ಗ್ರಾಹಕರು" ಎನ್ನುವಂತಹದ್ದು ಇದರಲ್ಲಿ ಬಂದಿದೆ. Apartment ಗಳು ನಗರ ಪ್ರದೇಶಗಳಲ್ಲಿ ಇರಬಹುದು. ತಾಲ್ಲೂಕುಗಳಲ್ಲಿ, ನಗರಸಭೆ ಮತ್ತು ಪುರಸಭೆ ಇಂತಹ ಭಾಗಗಳಲ್ಲಿ individual houses ನವರು ಒಂದೊಂದು ಪ್ರತ್ಯೇಕವಾದ borewell ಗಳನ್ನು ಇಟ್ಟುಕೊಂಡಿರುತ್ತಾರೆ.

ಮಾನ್ಯ ಸಭಾಪತಿಯವರೇ, ಈಗ ಇದರಲ್ಲಿ "ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಕೆಗಳು, ಗಣಿಗಾರಿಕೆಗಳು, project ಎಂದು ಹೇಳಿ ಮುಂದೆ ಗೃಹ ಒಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿವಸ 5 ಘನ ಮೀಟರ್‌ವರೆಗೆ" ಎಂದು ಹೇಳಲಾಗಿದೆ. 5 ಘನ ಮೀಟರ್‌ವರೆಗೂ ಸಹ ಗೃಹ ಬಳಕೆಯ ಉದ್ದೇಶ ಇದೆ. ಅದು ಕುಡಿಯುವ ನೀರು ಇರಬಹುದು, whatever it may be, ಬಳಸುತ್ತಾರೆ. ಇದು 5,000 ಕ್ಕಿಂತಲೂ ಹೆಚ್ಚಾದರೆ 25,000 ಮೀಟರ್‌ವರೆಗೂ ಸಹ ಅನುಮತಿಯನ್ನು 5,000 ದವರೆಗೂ ತೆಗೆದುಕೊಳ್ಳುವಂತಿಲ್ಲ. 5,000 ಅನ್ನು ಮೀರಿದರೆ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ, ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದು ಈ ಬಿಲ್ sound ಮಾಡುತ್ತದೆ. 25,000 ಲೀಟರ್ ಆದ ಮೇಲೆ ಪ್ರತಿ ಲೀಟರ್‌ಗೆ ಇಂತಿಷ್ಟು ಹಣ ಎಂದು ಗ್ರಾಹಕರು ಕಟ್ಟಬೇಕಾಗುತ್ತದೆ. ಆದರೆ, ಕೆಲವು ಸಂದರ್ಭಗಳು ಹಾಗೂ ವಿಶೇಷ ಸಂದರ್ಭಗಳು ಬರುವಂತಹದ್ದು ನಮ್ಮ ಅನುಭವದಲ್ಲಿ ನೋಡಿದ್ದೇವೆ. 2013-14 ನೇ ಸಾಲಿನಲ್ಲಿ ಇರಬಹುದು ಎಂದು ಅನಿಸುತ್ತದೆ. ಅದು ಯಾವ ವರ್ಷವೆಂದು ಮರೆತಿದ್ದೇನೆ. ಆಗ ಬಹಳ ಕೆಟ್ಟ ಬರದ ಸಂದರ್ಭ ಬಂದಿತ್ತು. ಅಂತಹ ಸಂದರ್ಭದಲ್ಲಿ ನಮ್ಮ ಅನುಭವ ಏನೆಂದರೆ, ನೀರನ್ನು ನೀರಿನ ಟ್ಯಾಂಕರ್‌ಗಳ ಮೂಲಕ ಸರಬರಾಜು

ಮಾಡುವುದಲ್ಲದೇ, ward-wise ವೈಯಕ್ತಿಕ borewell ಗಳನ್ನು ಸಹ ಅವರನ್ನು ನಗರಸಭೆಗಳ ಹಾಗೂ ಪುರಸಭೆಗಳ ಮೂಲಕ ವಿನಂತಿ ಮಾಡಿ ಆ ಊರಿನಲ್ಲಿ ಇರುವಂತಹ borewell ಗಳ ನೀರನ್ನು ward-wise ಬಳಸಿಕೊಂಡಿದ್ದೇವೆ. ನಾವು ಅಂತಹವರಿಗೆ ಸನ್ಮಾನವನ್ನು ಮಾಡಿದ್ದೇವೆ. ಅದರ ವಿದ್ಯುಚ್ಛಕ್ತಿ ಬಿಲ್‌ಗಳನ್ನು ಸಹ ನಗರಸಭೆಗಳು ಕಟ್ಟುವಂತೆ ಮಾಡಿದ್ದೆವು. ಅದು ಆಗ ಅನಿವಾರ್ಯವಾಗಿತ್ತು. ಆಗ ಸಾರ್ವಜನಿಕರಲ್ಲಿ ಯಾರು borewell ಅನ್ನು ಹೊಂದಿದ್ದರೋ ಅವರು ಸಹ ಸಹಕಾರವನ್ನು ಕೊಟ್ಟಿದ್ದರು. ಇದರಲ್ಲಿ 25,000 ಲೀಟರ್ ಗಳನ್ನು ಮೀರಿ ತಿಂಗಳಾನುಗಟ್ಟಲೇ ವಾರ್ಡ್‌ಗಳಲ್ಲಿ ಪ್ರತಿಯೊಂದು ಮನೆಗೂ ನೀರನ್ನು ತೆಗೆದುಕೊಂಡು ಹೋಗುವಂತಹ ಸಂದರ್ಭಗಳು ಬಂದವು. ನಾವು ಬನಹಟ್ಟಿ ಗ್ರಾಮ ಒಂದರಲ್ಲಿಯೇ 120 borewell ಗಳಿಂದ ಎಲ್ಲಾ ವಾರ್ಡ್‌ಗಳಿಗೂ ಸಹ ward-wise ಹಂಚಿದ್ದೇವೆ. ಅಂತಹ ಸಂದರ್ಭದಲ್ಲಿ 25,000 ಕ್ಕಿಂತಲೂ ಹೆಚ್ಚಿಗೆ ನೀರನ್ನು ಬಳಸಬೇಕಾಗುತ್ತದೆ. ಆಗ ಅಂತಹ ಸಂದರ್ಭದಲ್ಲಿ ಅವರು ಅನುಮತಿಯನ್ನು ಪಡೆದುಕೊಳ್ಳಬೇಕೇ ಅಥವಾ ಅಂತಹ ಅನುಮತಿಯಿಂದ ನಗರಸಭೆ ವಿನಾಯಿತಿಯನ್ನು ನೀಡಬೇಕಾಗುತ್ತದೆಯೇ? ಏಕೆಂದರೆ, ನೀರು ಸರಬರಾಜು ಮಾಡುವುದು ನಗರಸಭೆ ಮತ್ತು ಪುರಸಭೆಗಳ ಕರ್ತವ್ಯ ಆಗಿರುತ್ತದೆ. ಒಂದು ವೇಳೆ, ವಿಶೇಷ ಸಂದರ್ಭಗಳಲ್ಲಿ ಈ 25,000 ಲೀಟರ್‌ಗಿಂತಲೂ ಹೆಚ್ಚಿಗೆ ನೀರನ್ನು ಬಳಸಿದ ಸಂದರ್ಭ ಬಂದೇಬಿಡುತ್ತದೆ ಎಂದಾಗ, ಆಗ ಅವರು ಹಣವನ್ನು ಗ್ರಾಹಕರು ಏಕೆ ಕಟ್ಟಬೇಕು? ಅವರಿಂದ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಕಟ್ಟುವುದು ಸಮಂಜಸವೂ ಅಲ್ಲ. ಆ ಹಣವನ್ನು ನಗರಸಭೆ ಮತ್ತು ಪುರಸಭೆಯವರು ತಮ್ಮ ಕೈಯಿಂದಲೆ ಸರ್ಕಾರಕ್ಕೆ ಕಟ್ಟಬೇಕಾದಂತಹ ಸಂದರ್ಭಗಳು ಸಹ ಬರುತ್ತವೆ. ಹಾಗಾಗಿ, ಇದಕ್ಕೆ ಏನು ಪರಿಹಾರವನ್ನು ಕಂಡುಹಿಡಿಯುತ್ತಾರೆ? ಒಂದು ವೇಳೆ, ಅವರು ಇಲ್ಲ ನಾವು ಹಣ ಕಟ್ಟಬೇಕಾಗುತ್ತದೆ ಎನ್ನುವ ಕಾರಣ ಬಂದಾಗ, ಅವರು ನೀರು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅವರು ನೀರು ಕೊಡುವುದಕ್ಕೆ ಮುಂದೆ ಬರುವುದಿಲ್ಲ ಎಂದಾಗ ನಗರಸಭೆಯವರೆ ಜುಲುಮೆಯಿಂದ ಮಾಡಿ ಆ ಒಂದು borewell ಗಳಿಂದ ತೆಗೆದುಕೊಂಡು ಜನರಿಗೆ ನೀರನ್ನು ಹಂಚಬೇಕಾಗುತ್ತದೆ. ಇಂತಹ ಸಂದರ್ಭಗಳು ಸಹ ಬರುತ್ತವೆ. ಆದ್ದರಿಂದ, ತಾವುಗಳು ಈ ಒಂದು ಸಂದರ್ಭಗಳ ನಿರ್ವಹಣೆಗೋಸ್ಕರ, ಅಂತಹ ಸಂದರ್ಭಗಳಲ್ಲಿ ವಿನಾಯಿತಿಯನ್ನು ನೀಡುವಂತಹದ್ದು ಮತ್ತು ಅಂತಹ ಸಂದರ್ಭದಲ್ಲಿ ಹಣವನ್ನು ನಗರಸಭೆ ಮತ್ತು ಪುರಸಭೆಯವರು ಪಾವತಿ ಮಾಡುವಂತಹದ್ದು ಸೂಕ್ತ. ಇತ್ಯಾದಿ ಯೋಜನೆಗಳನ್ನು ಮಾಡುವುದು ಸೂಕ್ತ ಮತ್ತು ಅದನ್ನು ಅಳವಡಿಸುವುದು ಸೂಕ್ತವೆಂದು ನನ್ನ ಅನುಭವದ ಮೇಲೆ ಈ ಒಂದು ಮನವಿಯನ್ನು ಮಾನ್ಯ ಸಚಿವರಲ್ಲಿ ಮಾಡುತ್ತಿದ್ದೇನೆ. ಅಂತಹ ಸಂದರ್ಭದಲ್ಲಿ ವಿನಾಯಿತಿಗಳನ್ನು ಈ ವಿಧೇಯಕದಲ್ಲಿ ತೋರಿಸುವುದು ಸೂಕ್ತವೆಂದು ನನ್ನ ಭಾವನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿಯವರು ಸದನದಲ್ಲಿ ಹಾಜರು ಇಲ್ಲ. ಶ್ರೀಮತಿ ಬಲ್ಕೀಸ್ ಬಾನುರವರೇ, ತಾವು ಮಾತನಾಡಿ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. "ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025" ಅನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ನೀರು ಮತ್ತು ಗಾಳಿ ದೇವರ ವರದಾನಗಳಾಗಿವೆ. ನಾವು ಎಲ್ಲಿಯವರೆಗೆ ನೀರನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡುತ್ತೇವೆಯೋ, ಅಲ್ಲಿಯವರೆಗೂ ನೀರಿನ ಸದುಪಯೋಗವಾಗುತ್ತದೆ ಎಂದು ನನ್ನ ಭಾವನೆ. ಇತ್ತೀಚಿನ ದಿನಗಳಲ್ಲಿ consumption of water ಗಿಂತ wastage of water ಹೆಚ್ಚು ಆಗುತ್ತಿದೆ. ಜನರು ನೀರು ಇದೆ ಎಂದ ತಕ್ಷಣ, ಆ ನೀರು ಎಷ್ಟು ಉಪಯೋಗವಾಗಬೇಕೋ ಅದಕ್ಕಿಂತ ಎರಡು ಪಟ್ಟು waste ಮಾಡುತ್ತಾರೆ. ಮಾನ್ಯ ಸಚಿವರು ಇವತ್ತು ತಂದಿರುವಂತಹ ಬಿಲ್‌ನ್ನು ಸಂಪೂರ್ಣವಾಗಿ ಓದುವುದಕ್ಕೆ ಆಗದಿದ್ದರೂ ಸಹ, ಇದರಲ್ಲಿ ಮಾನ್ಯ ಸಚಿವರು ಮೊಟ್ಟಮೊದಲನೆಯದಾಗಿ 'ಅಂತರ್ಜಲ ಪ್ರಾಧಿಕಾರ' ರಚನೆ ಮಾಡುವುದಾಗಿ ಮೊದಲ ಹೆಜ್ಜೆಯಾಗಿ ತೆಗೆದುಕೊಂಡಿದ್ದಾರೆ. ಇದು ಬಹಳ ಅತಿ ಅವಶ್ಯಕವಾಗಿ ಆಗಬೇಕಾಗಿತ್ತು. ಈಗ ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಿಗೆ ಆಗುತ್ತಿದೆ. ಅದೇರೀತಿಯಲ್ಲಿ ದೇವರು ಮಳೆಯ ಮೂಲಕವೋ ಅಥವಾ ಡ್ಯಾಂನಲ್ಲಿ ಇರುವಂತಹ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದೆ. ಹಾಗಾಗಿ, ಕೊಟ್ಟಿರುವಂತಹ ನೀರನ್ನು ನಾವು ಹೇಗೆ ಬೇಕೋ ಹಾಗೆ ಬಳಸಿಕೊಳ್ಳಬೇಕು, ಅದನ್ನು ಹಾಗೆಯೇ ಹರಿಯುವುದಕ್ಕೆ ಬಿಡಬೇಕು ಎನ್ನುವಂತಹ ಮನುಷ್ಯನಲ್ಲಿರುವಂತಹ ಭಾವನೆಯನ್ನು ತಡೆಗಟ್ಟಲು ಈ ಒಂದು ಪ್ರಾಧಿಕಾರ ಒಂದು ಕಡಿವಾಣ ಹಾಕುತ್ತದೆ ಎನ್ನುವುದು ನನ್ನ ಒಂದು ಭಾವನೆ. ಈ ಪ್ರಾಧಿಕಾರವನ್ನು ಮಾಡುವ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಕೊಟ್ಟಿರುವಂತಹ ಅಧಿಕಾರವನ್ನು ನೋಡಿದೆ. ಇವತ್ತಿನ ದಿವಸ ಬಹಳ ಜನ ಸಾರ್ವಜನಿಕರು ಮನೆ ಕಟ್ಟುವುದಕ್ಕೆ, borewell ಅನ್ನು ತೆಗೆಯಬೇಕಾದರೆ ಬಹಳಷ್ಟು ಅಲೆದಾಡುತ್ತಾರೆ. ಅವರಿಗೆ ಮನೆ ಕಟ್ಟುವುದಕ್ಕೆ ನೀರು sudden ಆಗಿ ಬೇಕಾದಾಗ ಹಾಗೂ ಕುಡಿಯುವುದಕ್ಕೆ ನೀರು ಬೇಕು ಎಂದಾಗ ಅವರಿಗೆ N.O.C. ಸಿಗುವುದು ಬಹಳ ಕಷ್ಟವಾಗುತ್ತಿತ್ತು. ಆದರೆ, ಈ ವಿಧೇಯಕದಿಂದ ಗೃಹ ಬಳಕೆಗೆ ಬಹಳಷ್ಟು ಸಾರ್ವಜನಿಕರಿಗೆ ಉಪಯೋಗವಾಗಿದೆ.

ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯಲ್ಲಿ ಕೈಗಾರಿಕಾ ಘಟಕಗಳಲ್ಲೂ ಸಹ ಕುಡಿಯುವ ನೀರಿಗೆ ಸಡಿಲಿಕೆಯನ್ನು ಕೊಟ್ಟಿದ್ದಾರೆ. ಬಹಳಷ್ಟು ಕೈಗಾರಿಕಾ ಘಟಕಗಳವರು ಕುಡಿಯುವ ನೀರಿಗೆ ಎಂದು ಅನುಮತಿಯನ್ನು ತೆಗೆದುಕೊಂಡು ಆ ನೀರನ್ನು ಕೈಗಾರಿಕೆಗಳಿಗೂ ಉಪಯೋಗಿಸಿಕೊಳ್ಳುತ್ತಿರುವುದನ್ನು ನೋಡಿದ್ದೇವೆ. ಇದಕ್ಕೆ ಒಂದು ಕಡಿವಾಣವನ್ನು ಹಾಕಬೇಕಾಗುತ್ತದೆ. ಈ ತಿದ್ದುಪಡಿಯಲ್ಲಿ ದಂಡವನ್ನು ವಿಧಿಸಲಾಗುತ್ತದೆ ಎಂದು ಕೊಟ್ಟಿದ್ದಾರೆ. ಅವರು ಕುಡಿಯುವ ನೀರಿಗೆ ಎಂದು N.O.C. ತೆಗೆದುಕೊಂಡು, ನಂತರ ಅವರು ಕೈಗಾರಿಕೆಗೆ ಉಪಯೋಗ ಮಾಡುತ್ತಾರೆ. ಅದಕ್ಕೆ ಬಹಳ ದಂಡವನ್ನು ಇಂತಹದ್ದಕ್ಕೆ ವಿಧಿಸಬೇಕಾಗುತ್ತದೆ. ಇಂತಹದ್ದನ್ನು ತಡೆಗಟ್ಟಬೇಕು. ಮಾನ್ಯ ಸಚಿವರು ಈ ತಿದ್ದುಪಡಿಯಲ್ಲಿ ಖಾಸಗಿಯವರು ಸಹ ಒಂದು ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಹಾಗಾಗಿ, ಈ ಬಿಲ್ ಸಂಪೂರ್ಣವಾಗಿ ಸಾರ್ವಜನಿಕರ ಪರವಾಗಿ ಇದ್ದು, ನೀರನ್ನು ಸಂರಕ್ಷಣೆ

ಮಾಡುವುದಕ್ಕೂ ಸಹ ಒಂದು ದಾರಿಯಾಗಿದೆ. Irrigation department ನಿಂದ 'ನೀರು ಬಳಕೆದಾರರ ಸಹಕಾರ ಸಂಘಗಳು' ಇವೆ. ಅವರಿಗೂ ಸಹ ಈ ಪ್ರಾಧಿಕಾರದಲ್ಲಿ ಜವಾಬ್ದಾರಿಯನ್ನು ಕೊಟ್ಟು ಪ್ರಾಧಿಕಾರದಲ್ಲಿ ಇಬ್ಬರು ಪ್ರತಿನಿಧಿಗಳನ್ನು ಸಹ ಹಾಕುತ್ತೇವೆಂದು ಹೇಳಿದ್ದಾರೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳು ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ನಮ್ಮ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯವರಿಗೆ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಯೂ ಸಹ ಸಿಕ್ಕಿದೆ. ಇಂತಹವರಿಗೂ ಸಹ ಸ್ವಲ್ಪ ಜವಾಬ್ದಾರಿಯನ್ನು ಕೊಟ್ಟರೆ ಅವರಿಗೆ ನೀರು ಬಳಕೆ ಮತ್ತು ನೀರನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದರ ಅರಿವು ಬರುತ್ತದೆ. ಏಕೆಂದರೆ, ಸುಮಾರು ಸಹಕಾರ ಸಂಘಗಳು ಕೆಲಸ ಇಲ್ಲದೆ ಇದ್ದು, ಅವರು ಯಾವಾಗ ಡ್ಯಾಂನಲ್ಲಿ ನೀರನ್ನು ಬಿಡಬೇಕು ಮತ್ತು ಯಾವಾಗ ನೀರನ್ನು ನಿಲ್ಲಿಸಬೇಕು ಎನ್ನುವುದು ಒಂದೇ ಕೆಲಸ ಆಗುತ್ತಿದೆ. ಕೆರೆಗಳನ್ನು ಯಾವ ತರಹ ಸಂರಕ್ಷಣೆ ಮಾಡಿಕೊಳ್ಳುವುದು ಮತ್ತು ನೀರನ್ನು ಯಾವ ತರಹ ಉಪಯೋಗ ಮಾಡಿಕೊಳ್ಳುವುದು ಈ ತರಹ ವಿಚಾರ ಸಂಕಿರಣಗಳನ್ನು ಮಾಡುವ ಮೂಲಕ ಅವರನ್ನು ಸಹ ಈ ಕಾರ್ಯದಲ್ಲಿ ತೊಡಗಿಸಿಕೊಂಡರೆ ಉಪಯುಕ್ತವಾಗುತ್ತದೆ ಎಂದು ಹೇಳುತ್ತಾ, ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

(ಮುಂದು)

(893) 21-08-2025/11.30/ಎಂವಿ-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನನ್ನದು ಏನು ದೊಡ್ಡ ಪ್ರಶ್ನೆ ಇಲ್ಲ. ಆದರೆ, ನಾನು ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ. ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮ ಮತ್ತು ನಿಯಂತ್ರಣ (ತಿದ್ದುಪಡಿ) ವಿಧೇಯಕ, 2025 ನಿಜವಾಗಿಯೂ ಒಂದು ಉತ್ತಮವಾದಂತಹ ವಿಧೇಯಕವಾಗಿದೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಈಗ ಪ್ರತಿಯೊಂದಕ್ಕೂ ನಮ್ಮ ಭಾಗದಲ್ಲಿ ಕೂಗಳತೆಯಲ್ಲಿ ಇರತಕ್ಕಂತಹ ಡ್ಯಾಂ ಇದ್ದರೂ ಸಹ ನಮಗೆ ನೀರಿನ ಹಾಹಾಕರ ಇತ್ತು. ಆದರೆ, ಇತ್ತೀಚೆಗೆ ನೀರಿನ ಹಾಹಾಕರ ಕಡಿಮೆಯಾಗಿದೆ. ಅದಲ್ಲದೇ ಪ್ರತಿಯೊಂದು ವಾರ್ಡ್‌ಗಳಲ್ಲಿ ದೊಡ್ಡ ದೊಡ್ಡ ವಾಟರ್ ಫಿಲ್ಟರ್‌ಗಳನ್ನು ಹಾಕಿಕೊಂಡಿದ್ದಾರೆ. ಅವರು ನೀರನ್ನು ಫಿಲ್ಟರ್ ಮಾಡುತ್ತಾರೆ. ಈಗ ಒಂದು ಕೊಡ ಪ್ಯೂರ್ ವಾಟರ್ ಬೇಕಾಗುತ್ತದೆಂದರೆ, ಮೂರು ಕೊಡದಷ್ಟು ನೀರು ಪೋಲಾಗಿ ಹೋಗುತ್ತದೆ. ಆ ರೀತಿ ಪೋಲಾದ ನೀರನ್ನು ಅವರು ಬಳಕೆ ಮಾಡಿಕೊಳ್ಳುತ್ತಿಲ್ಲ. ಅದೇ ರೀತಿ ಗಡಾರಕ್ಕೆ ಮತ್ತು ದಬಾಸೆಗೆ ಹೋಗುವಂಥದ್ದನ್ನು ನೋಡಿದ್ದೇನೆ. ಅವರು ಕೊಳಾಯಿ ನೀರನ್ನು ಉಪಯೋಗಿಸುತ್ತಾರೆ. ಅವರಿಗೆ ಯಾವ ರೀತಿಯಲ್ಲಿ ತೆರಿಗೆ ಕಟ್ಟುವಂತೆ ಮಾಡುತ್ತಾರೆ. ಏಕೆಂದರೆ, ಮನೆಮನೆಗಳಿಗೆ ವಿಶೇಷವಾದಂತಹ ಪೈಪ್‌ಲೈನ್‌ಗಳನ್ನು ಹಾಕಿ, ಅದಕ್ಕೆ ಮೀಟರ್ ಹಾಕಿಸುತ್ತೇವೆ ಎನ್ನುವಂಥದ್ದು ನಗರಸಭೆಗಳಲ್ಲಿ ಇತ್ತೀಚೆಗೆ ಶುರುವಾಗಿದೆ. ಆದರೆ, ಅದು

ಇನ್ನು ಬಂದಿಲ್ಲ. ಅವರುಗಳು ಇಷ್ಟೊಂದು ನೀರನ್ನು ಉಪಯೋಗಿಸಿಕೊಳ್ಳುತ್ತಾರೆ. ಅವರು ಉಪಯೋಗ ಮಾಡಿಕೊಳ್ಳುವುದಕ್ಕೆ ಯಾವ ರೀತಿಯ ಸಲಹೆಗಳನ್ನು ಕೊಡುತ್ತಾರೆ. ಮತ್ತೆ ಅವರು ಹೇಗೆ ತೆರಿಗೆಯನ್ನು ಕಟ್ಟುತ್ತಾರೆ. ಸುಮಾರು 1,000 ಅಥವಾ 2,000 ಲೀಟರ್ ಇರತಕ್ಕಂತಹ ಸಿಂಟೆಕ್ಸ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಮತ್ತೆ 5 ಮತ್ತು 10 ರೂಪಾಯಿಗಳನ್ನು ಕೊಟ್ಟು tap ನಿಂದ ನೀರನ್ನು ತರತಕ್ಕಂಥದ್ದು. ಅವರು ಒಂದು ಬಾಟಲ್‌ಗೆ ಇಷ್ಟು ನೀರು ತೆಗೆದುಕೊಳ್ಳುತ್ತಾರೆ. ಅವರು ನಗರಸಭೆಗೆ ಎಷ್ಟು ತೆರಿಗೆಯನ್ನು ಕಟ್ಟುತ್ತಾರೆ ಎನ್ನತಕ್ಕಂತಹ clarification ಅನ್ನು ಕೇಳುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮ ಮತ್ತು ನಿಯಂತ್ರಣ (ತಿದ್ದುಪಡಿ) ವಿಧೇಯಕ, 2025 ಅನ್ನು ಸ್ವಾಗತ ಮಾಡುತ್ತಾ, ಕೇಂದ್ರ ಸರ್ಕಾರ ಒಂದು ಐತಿಹಾಸಿಕವಾದಂತಹ ಕುಡಿಯುವ ನೀರಿನ ಯೋಜನೆಯನ್ನು ಹಾಕಿಕೊಂಡು ಆ ವಿಷಯದಲ್ಲಿ ಬಹಳ ದೊಡ್ಡ ಪ್ರಯತ್ನವನ್ನು ಮಾಡುತ್ತಿದೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಅದೇ ರೀತಿ ರಾಜ್ಯ ಸರ್ಕಾರವನ್ನು ಕೂಡ ಅಭಿನಂದಿಸುತ್ತೇನೆ. ಅದಕ್ಕೆ ಕಾರಣವೇನೆಂದು ಒಂದು ಮಾತಿನಲ್ಲಿ ಹೇಳಬೇಕೆಂದರೆ, ‘ನೀರೇ ಜೀವನ, ನೀರು ಇದ್ದರೆ ವಿಕಾಸ, ಇಲ್ಲದಿದ್ದರೆ ಸರ್ವನಾಶ, ನೀರು ಇದ್ದರೆ ಎಲ್ಲಾ, ನೀರು ಇಲ್ಲದಿದ್ದರೆ ಇಲ್ಲ.’ ಹಾಗಾಗಿ, ನೀರು ಇಲ್ಲದೇ ಇದ್ದರೆ ಮನುಷ್ಯನೇ ಇರುತ್ತಿರಲಿಲ್ಲ, ಊರುಗಳು ಇರುತ್ತಿರಲಿಲ್ಲ, ನಗರಗಳು ಇರುತ್ತಿರಲಿಲ್ಲ ಮತ್ತೆ ನಾವು ಯಾರೂ ಸಹ ಇರುತ್ತಿರಲಿಲ್ಲ. ನೀರೇ ಜೀವನ. ಆದುದರಿಂದ ಈ ಅಮೂಲ್ಯವಾಗಿರತಕ್ಕಂತಹ ನೀರನ್ನು ಉಳಿಸಬೇಕು. ಅದನ್ನು ಕುಡಿಯುವ ನೀರನ್ನಾಗಿ ಬಳಕೆ ಮಾಡಬೇಕು ಎನ್ನುವಂತಹ ವಿಷಯ ಏನಿದೆ, ಈ ಎಲ್ಲಾ ವಿಷಯಗಳಿಗಿಂತ ಅತ್ಯಂತ ಮಹತ್ವದ್ದು ಮತ್ತು ಅಮೂಲ್ಯವಾದುದು ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಮಾನ್ಯ ಸಚಿವರಿಗೆ ಅಭಿನಂದಿಸುತ್ತೇನೆ. ನಾನು ಎರಡು ಜಿಲ್ಲೆಗಳಾದ ಮಂಡ್ಯ ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳನ್ನು ಉದಾಹರಣೆಗೆ ತೆಗೆದುಕೊಳ್ಳುತ್ತೇನೆ. ನಮ್ಮ ಇಡೀ ರಾಜ್ಯದ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆ Number One ಜಿಲ್ಲೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಬಡತನ ಹೆಚ್ಚಿಗೆ ಇದೆ. ಆದರೆ, ಶಿಕ್ಷಣದ ಜಾಗೃತಿ ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚಿಗೆ ಇರತಕ್ಕಂತಹ ಜಿಲ್ಲೆ ಯಾವುದು ಎಂದು ಹೇಳಿದರೆ, ಅದು ಕೋಲಾರ ಜಿಲ್ಲೆ. ಏಕೆಂದರೆ, ಬಹಳಷ್ಟು ಜನರು ಒಂದು ರೂಪಾಯಿಗೆ ಶೇಕಡಾ 75ರಷ್ಟು ಫ್ಲೋರೈಡ್ ನೀರನ್ನು ಕುಡಿಯುತ್ತಾರೆ. ಈಗ ಕೋಲಾರ ಮತ್ತು ಚಿಕ್ಕಬಳ್ಳಾಪುರದ ಜನರು ಫ್ಲೋರೈಡ್ ನೀರನ್ನು ಕುಡಿಯುತ್ತಾರೆ. ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಒಂದು ಲೇಖನ ಬಂದಿತ್ತು ನಾನು ಅದನ್ನು ಓದಿದ್ದೇನೆ. ಕೋಲಾರ ಜಿಲ್ಲೆಯ 6ನೇ ತರಗತಿಯ ವಿದ್ಯಾರ್ಥಿನಿ ಮೆಡಿಕಲ್ ಶಾಪ್‌ಗೆ ಹೋಗಿ, ನಾನು ಹಲ್ಲು ಉಜ್ಜುವಾಗ ನನ್ನ ಹಲ್ಲಿನಿಂದ ಪೌಡರ್ ಬರುತ್ತಿದೆ ಎಂದು ಹೇಳುತ್ತಾಳೆ. ಈಗ ಮೆಡಿಕಲ್ ಶಾಪ್‌ನಲ್ಲಿ ಡಾಕ್ಟರ್ ಇರುವುದಿಲ್ಲ. ಆದರೆ, ಮೆಡಿಕಲ್ ಶಾಪ್‌ನಲ್ಲಿ ಇರತಕ್ಕಂತಹವರಿಗೆ ಯಾವ ಸಮಸ್ಯೆಗೆ ಯಾವ ಮೆಡಿಸಿನ್ ಎಂದು ಪ್ರಾಥಮಿಕ ಜ್ಞಾನ ಇರುವುದರಿಂದ, ಅವರು ಏನು ಮಾಡುತ್ತಾನೆಂದರೆ ಈ ಹಲ್ಲು

ಪುಡಿಯಾಗುವುದಕ್ಕೆ ಫ್ಲೋರೈಡ್ ನೀರು ಕಾರಣವೆಂದು ಗೊತ್ತಾಗಿಬಿಟ್ಟು, ಅದಕ್ಕೋಸ್ಕರ ನೀವು ಬಾಟಲ್ ನೀರನ್ನು ಕುಡಿಯಿರಿ ಎಂದು ಹೇಳುತ್ತಾರೆ. ಅದಕ್ಕೆ ಅವಳು ನನ್ನ ಬಳಿ ಹಣವಿಲ್ಲವೆಂದು ಹೇಳುತ್ತಾಳೆ. ಅದಕ್ಕೆ ಅವರು ನಿಮ್ಮ ಮನೆಯಲ್ಲಿ ಏನು ಮಾಡುತ್ತಾರೆ ಎಂದು ಕೇಳುತ್ತಾನೆ. ಅದಕ್ಕೆ ಅವಳು ನಮ್ಮ ಅಪ್ಪ ಮತ್ತು ಅಮ್ಮನಿಗೆ ಕೈಕಾಲುಗಳು ಮತ್ತು ಮೂಳೆಗಳು ಬೆಂಡಾಗಿವೆ ಎಂದು ಹೇಳುತ್ತಾಳೆ. ಇದು ಡಾಕ್ಟರ್‌ಗೆ ಗೊತ್ತಾಗಿ, ಅವರು ಇದೆಲ್ಲಾ ಫ್ಲೋರೈಡ್ ಸಮಸ್ಯೆಯಿಂದ ಬರುತ್ತಿರುವಂತಹ ಕಾಯಿಲೆ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಬಹಳಷ್ಟು ಜನರಿಗೆ 60 ಮತ್ತು 70 ವರ್ಷಕ್ಕೆ ಕೈಕಾಲುಗಳ ಮೂಳೆಗಳು ಬೆಂಡಾಗುತ್ತಿವೆ. ಅವರು ನೇರವಾಗಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದಕ್ಕೆಲ್ಲಾ ಕಾರಣ ಈ ಫ್ಲೋರೈಡ್ ನೀರು ಎಂದು ಗೊತ್ತಾಗುತ್ತದೆ. ಆದುದರಿಂದ, ಕರ್ನಾಟಕ ರಾಜ್ಯಕ್ಕೆ ಒಂದು ಸವಾಲಿನ ವಿಷಯವೇನೆಂದರೆ, ನಾವು ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂತಹ ಸಾಹಸದ ಕೆಲಸವನ್ನು ಮಾಡಬಹುದಾ? ಅವರ ಆರೋಗ್ಯವನ್ನು ಕಾಪಾಡಬಹುದಾ? ಅದಕ್ಕೆ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಸಹ ಇದ್ದಾರೆ. ಶುದ್ಧ ಕುಡಿಯುವ ನೀರನ್ನು ಕೊಡುವಂತಹ ಕೆಲಸವನ್ನು ಮಾಡುವುದಕ್ಕೆ ಇಡೀ ಮಾನವ ಕುಲವೇ ಜಾಗೃತಗೊಳ್ಳಬೇಕಿದೆ. ಮಾನ್ಯ ಶ್ರೀನಿವಾಸ್‌ರವರು ಸಹ ಮಾತನಾಡಿದ್ದಾರೆ. ಇಲ್ಲದೇ ಇದ್ದರೆ ಕಾಯಿಲೆಗಳು ಯಥೇಚ್ಛವಾಗಿ ಬರುತ್ತವೆ. ಆದುದರಿಂದ, ದಯವಿಟ್ಟು ಫ್ಲೋರೈಡ್ ಮುಕ್ತ ನೀರನ್ನು ಕುಡಿಯುವುದಕ್ಕೆ ನೀಡಬೇಕು. ಉದಾಹರಣೆಗೆ; ನದಿ ನೀರನ್ನೇ ಕುಡಿಯಬೇಕು. ಶ್ರೀ ಸಿರಿಗೆರೆ ಸ್ವಾಮೀಜಿಗಳು 'ಗಂಗಾಸ್ನಾನ, ತುಂಗಾ ಪಾನ' ಎಂಬ ಲೇಖನವನ್ನು ಬರೆದಿದ್ದರು. ಈಗ ತುಂಗಭದ್ರಾ ನೀರನ್ನು ಕುಡಿಯಬೇಕು ಏಕೆಂದರೆ, ಅದು ಎಲ್ಲಿ ಹುಟ್ಟುತ್ತದೆ ಮತ್ತು ಎಲ್ಲಿ ಹರಿಯುತ್ತದೆಂದು ಗೊತ್ತಿದೆ. ಅದು ಫ್ಲೋರೈಡ್ ನೀರಲ್ಲ. ಈಗ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್ ರವರು ತ್ರಿವೇಣಿ ಸಂಗಮದಲ್ಲಿ ಗಂಗಾಸ್ನಾನ ಮಾಡಿಕೊಂಡು ಬಂದಿದ್ದಾರೆ. ಅಂದರೆ, ಅಲ್ಲಿ ಸುಮಾರು 60 ಕೋಟಿ ಜನರು ಸ್ನಾನ ಮಾಡಿಕೊಂಡು ಬಂದಿದ್ದಾರೆ. ಅದು ಅಷ್ಟು ಪವಿತ್ರವಾಗಿರತಕ್ಕಂತಹ ನದಿ. ಆದುದರಿಂದ, ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನೀರೇ ಜೀವನ, ನೀರು ಇಲ್ಲದೇ ಇದ್ದರೆ ಯಾರೂ ಇಲ್ಲ. ಮನೆಗಳಲ್ಲಿ ಮತ್ತು ಹೊಲಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕುತ್ತಿದ್ದಾರೆ. ಈಗ ಸುಮಾರು 60 ರಿಂದ 70 ಲಕ್ಷ ಬೋರ್‌ವೆಲ್‌ಗಳು ಇರಬಹುದು. ನಾವು ಇಡೀ ಕರ್ನಾಟಕವನ್ನು ಒಂದು ರಂಧ್ರವನ್ನಾಗಿ ಮಾಡಿಬಿಟ್ಟಿದ್ದೇವೆ. ಈಗ ಅಂತರ್ಜಲದಲ್ಲಿ ನೀರು ಇಲ್ಲ. ಅಷ್ಟು ಬೋರ್‌ವೆಲ್‌ಗಳಿವೆ. ಮೊದಲು ಬಾವಿಗಳನ್ನು ತೋಡುತ್ತಿದ್ದರು. ಆದರೆ, ಈಗ ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದೇವೆ. ಕೋಲಾರ ಜಿಲ್ಲೆಯಲ್ಲಿ 1,500, 1,600 ಮತ್ತು 1,800 ಅಡಿಗಳ ಕೆಳಗಡೆಗೆ ಹೋಗಿದೆ. ಈಗ ನೀರು ಇಲ್ಲದೇ ಇದ್ದರೆ, ಜೀವನವಿಲ್ಲ. ಕೋಲಾರ ಜಿಲ್ಲೆಯ ಜನರು ಸೀದಾ ಟೊಮೊಟೊ ಗಿಡದ ಬೇರುಗಳಿಗೆ ನೀರು ಬಿಡುತ್ತಾರೆ. ಇದರಿಂದ ಪೂರ್ತಿ ಹೊಲ ಮತ್ತು ಗದ್ದೆಗಳು ತುಂಬುವುದಿಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೋಲಾರ ಜಿಲ್ಲೆಯ ಬಗ್ಗೆ ಹೇಳುತ್ತಿದ್ದಾರೆ. ಈಗ ಕೆ.ಸಿ.ವ್ಯಾಲಿ ಬಂದ ಮೇಲೆ ಆ ಕಾಲ ಹೋಗಿದೆ. ಈಗ 300 ಮತ್ತು 400 ಅಡಿಗಳಿಗೆ ನೀರು ಬರುತ್ತಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆ ನೀರು ಏನು ಎಂಬುದನ್ನು ಸಹ ಅರ್ಥ ಮಾಡಿಕೊಳ್ಳಬೇಕು. ನಾವು ಆ ತರಕಾರಿಗಳನ್ನು ತಿನ್ನಬಹುದೆ? ಈಗ ವಿಜಯಪುರ ಮತ್ತು ಬಾಗಲಕೋಟೆಯ ತರಕಾರಿಗೂ ಮತ್ತೆ ಬೆಂಗಳೂರಿನ ತರಕಾರಿಗೂ ಅಗಾಧವಾದ ವ್ಯತ್ಯಾಸವಿದೆ. ಈಗ ಅಲ್ಲಿನ ಕ್ಯಾರೆಟ್ ತಿಂದು ನೋಡಲಿ. ಅದೇ ರೀತಿ ಇಲ್ಲಿನ ಕ್ಯಾರೆಟ್ ತಿಂದು ನೋಡಲಿ. ಅದು ಹೇಗಿದೆ ಎಂದು ಗೊತ್ತಾಗುತ್ತದೆ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂತಹ Number One ಪುಣ್ಯದ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಈಗ ಸಮುದ್ರಕ್ಕೆ ಹೋಗುವಂತಹ ನೀರನ್ನು ತಡೆಗಟ್ಟಬೇಕಾಗಿದೆ. ಅದೇ ರೀತಿ catchment area ವನ್ನು ಉಳಿಸಬೇಕಾಗಿದೆ. Mud path ಅನ್ನು ಉಳಿಸಬೇಕಾಗಿದೆ. ಪಾರ್ಕ್‌ಗಳನ್ನು ಉಳಿಸಬೇಕಾಗಿದೆ. ಈಗ ವಿಧೇಯಕದಲ್ಲಿ ಸೂಕ್ತ ದಂಡವನ್ನು ವಿಧಿಸಿದ್ದಾರೆ. ಇವೆಲ್ಲವನ್ನೂ ಕೂಡ ಮಾಡಬಹುದು. ಆದರೆ, ನಾವು ಯಾರೂ ಜಾಗೃತರಾಗದೇ ಇದ್ದರೆ, ಈಗ ಇಲ್ಲಿ ಮಕ್ಕಳು ಇದ್ದಾರೆ. ನಾವು ಹಲ್ಲು ಉಜ್ಜುತ್ತಾ ಇರುತ್ತೇವೆ. ಅಲ್ಲಿ tap on ಮಾಡಿ, ಎರಡು ಬಕೆಟ್‌ನಷ್ಟು ನೀರು ಹೋಗುತ್ತಿರುತ್ತದೆ. ಈಗ ಸ್ನಾನ ಮಾಡುತ್ತಿರುತ್ತೇವೆ. ಆಗ overhead tank ನಿಂದ ನೀರು ಹರಿಯುತ್ತಿರುತ್ತದೆ. ಅಂದರೆ, ನೀರನ್ನು ಬಳಸುವುದು ಎಷ್ಟು? ನೀರನ್ನು ವ್ಯರ್ಥ ಮಾಡುವುದು ಎಷ್ಟು? ನಮಗೆ ಒಂದು ಹನಿ ನೀರನ್ನು ತರುವಂತಹ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದರೆ, ಶೇಕಡಾ 70 ರಿಂದ 80 ರಷ್ಟು ಜನರು ವ್ಯರ್ಥ ಮಾಡುವಂತಹ ಕೆಲಸವನ್ನು ಮಾಡುತ್ತಾರೆ. ಆದುದರಿಂದ, ನೀರನ್ನು ಉಳಿಸಬೇಕು ಮತ್ತೆ ಜೀವನವನ್ನು ಉಳಿಸಬೇಕು. ಜನರಿಗೆ ಶುದ್ಧ ಕುಡಿಯುವ ನೀರನ್ನು ಕೊಟ್ಟು, ಪುಣ್ಯವನ್ನು ಕಟ್ಟಿಕೊಳ್ಳಬೇಕು. ಆದುದರಿಂದ, ಈ ವಿಧೇಯಕವನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಈ ವಿಧೇಯಕದ ಬಗ್ಗೆ 15 ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರಿಂದ ಪ್ರಾರಂಭ ಮಾಡಿ, ಶ್ರೀ ಎನ್.ರವಿಕುಮಾರ್ ರವರೆಗೆ ಸುಮಾರು 15 ಜನ ಮಾನ್ಯ ಸದಸ್ಯರು ಬಹಳ ಅತ್ಯಂತ ಉತ್ತಮವಾದಂತಹ ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದಾರೆ. ನಿಜವಾಗಿಯೂ ಎಲ್ಲರೂ ಸಹಿತ ಪರಿಸ್ಥಿತಿಗಳನ್ನು ಬಹಳ ಅರ್ಥೈಸಿಕೊಂಡಿದ್ದಾರೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದನ್ನು ವಿಭಾಗವಾರು ಹಾಕಿಕೊಳ್ಳಲಿ ಎಂದಷ್ಟೆ.

**ಸಭಾಪತಿಯವರು:-** ಮಾನ್ಯ ಡಿ.ಟಿ.ಶ್ರೀನಿವಾಸ್ ರವರೆ, ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಮಧ್ಯದಲ್ಲಿ ಮಾತನಾಡಬಾರದು.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇರುವಂತಹ ಪರಿಸ್ಥಿತಿ ground water ಅನ್ನು improve ಮಾಡುವಂತಹ ಪರಿಸ್ಥಿತಿ ಮತ್ತೆ pure water ಅನ್ನು supply ಮಾಡುವಂತಹ ಪರಿಸ್ಥಿತಿ ಮತ್ತೆ wastage of water ಯಾವ ರೀತಿ ಆಗುತ್ತಿದೆ ಎಂಬ ಮಾತಿಗೆ ಎಲ್ಲರೂ ಸಹಿತ ಅವರವರ ಅನುಭವದ ಆಧಾರದ ಮೇಲೆ ಸಾಕಷ್ಟು ಮಾತನಾಡಿದ್ದಾರೆ. (ಮುಂದು)

(894) 21.08.2025 11.40 ಎಲ್‌ಎಲ್ (ವೈಎಲ್)-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು (ಮುಂದು):-**

ನಾನು 1991ನೇ ಇಸವಿಯಿಂದಲೂ ನೀರಿನ ಬಗ್ಗೆ ಹೆಚ್ಚು ಆಸಕ್ತಿವಹಿಸಿ, ಎರಡು ಬಾರಿ ಎಂ.ಎಲ್.ಎ. ಆಗಿ ಮತ್ತು ಎರಡು ಬಾರಿ ಎಂ.ಎಲ್.ಸಿ. ಆಗಿ ಆಯ್ಕೆಯಾಗಲು ನೀರಿನ ಮೇಲೆ ನನ್ನ ಸಂಘಟನೆ ಪ್ರಯತ್ನ ಪ್ರಾರಂಭವಾಗಿತ್ತು. ಈಗಾಗಲೇ ಮಾನ್ಯ ಡಿ.ಎಸ್.ಅರುಣ್‌ರವರು ಹೇಳಿದ ಹಾಗೆ reservoir ನಲ್ಲಿರತಕ್ಕಂಥ ತುಂಗಾಭದ್ರ ನದಿಯಲ್ಲಿ 32 ಟಿ.ಎಂ.ಸಿ. silt ಆಗಿ, ನೀರೆಲ್ಲವೂ ಸಮುದ್ರಕ್ಕೆ ಹರಿದು ಹೋಗುತ್ತಿದೆ. ನಿನ್ನೆ ದಿವಸ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ವಿಧಾನಸಭೆಯಲ್ಲಿ ಗಮನ ಸೆಳೆಯುವ ಸೂಚನೆ ಅಡಿ ಉತ್ತರ ನೀಡಿದ್ದಾರೆ. ಇದು tribunal ನಲ್ಲಿ ಇರುವುದರಿಂದ ಬೇರೆ ಬೇರೆ ರಾಜ್ಯಗಳ ಸಹಕಾರ ಪಡೆದು ಸರಿಪಡಿಸಬೇಕೆಂಬ ಪ್ರಯತ್ನ ಮಾಡಲಾಗುತ್ತಿದೆ. ಈ ರೀತಿಯಾಗಿ ಎಲ್ಲರೂ ಹೇಳಿದಂತೆ ಎಲ್ಲೆಲ್ಲಿ ನೀರು ಪೋಲಾಗುತ್ತಿದೆ, ಅಲ್ಲೆಲ್ಲಾ ಅಳವಡಿಸುತ್ತಿದ್ದೇವೆ. ಇಷ್ಟೆಲ್ಲಾ ಮಳೆ ಬಂದು ಸಾವಿರಾರು ಟಿ.ಎಂ.ಸಿ. ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ. ಆದರೂ ಸಹಿತ ಮಾನ್ಯ ಸದಸ್ಯರು ಹೇಳಿದಂತೆ 1,500 feet ಹೋದರೂ ನೀರು ಸಿಗುತ್ತಿಲ್ಲ. ನಾವು ತಂದಿರುವಂಥ ವಿಧೇಯಕ ಏನಿದೆ, ಅದೆಲ್ಲವೂ ಭಾರತ ಸರ್ಕಾರದ ವಿವಿಧ ಇಲಾಖೆಯಿಂದ ಬಂದಿರುವಂಥ ಮಾರ್ಗಸೂಚಿಗಳ ಮೇಲೆ ತಂದಿದ್ದೇವೆ. ಭಾರತ ಸರ್ಕಾರವೇ 'State-wise Ground Water Resources of India' ಎಂದು ಒಂದು tabular format ನಲ್ಲಿ ಮಾಹಿತಿಯನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ಹರಿಯಾಣ, ಪಂಜಾಬ್,

ರಾಜಸ್ಥಾನದಲ್ಲೆಲ್ಲಾ ಶೇಕಡ 100 ರಷ್ಟು ನೀರು ಹೆಚ್ಚಾಗಿ deplete ಆಗಿದ್ದು, ಏನು ಮಾಡಲು ಸಾಧ್ಯವಾಗದಂಥ ಪರಿಸ್ಥಿತಿ ಇದೆ. The groundwater extraction rate in Karnataka is 68.44%, and the State is in ninth place in terms of water depletion in the Country. ಉಳಿದ 8 ಸ್ಥಾನಗಳಲ್ಲಿ ಹರಿಯಾಣ, ಪಂಜಾಬ್, ರಾಜಸ್ಥಾನ ಹಾಗೂ ಇತರೆ ರಾಜ್ಯಗಳು ಇದೆ. ಈ ರೀತಿಯಾದಂಥ ಪರಿಸ್ಥಿತಿಯಿಂದಾಗಿ ಕೇಂದ್ರ ಸರ್ಕಾರವು ಪ್ರತಿ ವರ್ಷ ಸರ್ವೆ ಮಾಡಿರುವಂಥ ವರದಿಯನ್ನು ರಾಜ್ಯಗಳಿಗೆ ಕೊಡುತ್ತಿದೆ. ಮೊನ್ನೆ ದಿವಸ ಸಹ ಕೇಂದ್ರ ಸರ್ಕಾರವು 5 ವರ್ಷ ಸರ್ವೆ ಮಾಡಿರುವಂಥ ವಿವರವಾದ ವರದಿಯನ್ನು ಕೊಟ್ಟಿದ್ದಾರೆ. Latest report ನಲ್ಲಿ 7ನೇ ಸ್ಥಾನದಲ್ಲಿದ್ದೇವೆ. ಆ ರಾಜ್ಯಗಳು ಸಹ groundwater improve ಮಾಡಲಿಕ್ಕೆ ಕ್ರಮಕೈಗೊಳ್ಳಬೇಕೆಂದು ಸೂಚನೆ ಕೊಟ್ಟಿದ್ದಾರೆ. ಮಾನ್ಯ ಎಸ್.ಎಲ್.ಭೋಜೇಗೌಡರವರು ಅಟಲ್ ಭೂಜಲ್ ಯೋಜನೆ ಅಡಿ ಕೇಂದ್ರ ಸರ್ಕಾರವು 5 ವರ್ಷಗಳಿಗೆ ರೂ. 1,000 ಕೋಟಿ ನಿಗದಿಪಡಿಸಿದ್ದಾರೆ. ಈಗಾಗಲೇ ರೂ. 860 ಕೋಟಿ 7 ಇಲಾಖೆಗಳ ಮೂಲಕ ಬಿಡುಗಡೆ ಮಾಡಿದ್ದೆ. ಅದಕ್ಕೆ ಅವರು groundwater level ಅನ್ನು find out ಮಾಡಿ ಎಂದಿದ್ದಾರೆ. Telemetry devices ಮುಖಾಂತರ ನಮಗೆ groundwater level ನ ರೆಗ್ಯೂಲರ್ ವಾಟರ್ ವರದಿ ಬರುತ್ತಿದೆ. ಸುಮಾರು 2,700 observatory wells ಇವೆ ಹಾಗೂ ಸುಮಾರು 300 open wells ಇದೆ. ಪ್ರತಿದಿನ ನಮ್ಮ State Ground Water Directorate ಇಲಾಖೆಯಲ್ಲಿರುವಂಥವರು ನೀರಿನ ವರದಿಯನ್ನು ತೆಗೆದುಕೊಂಡು, ಪಂಚಾಯತ್ ಕಛೇರಿಯಲ್ಲಿ ನಮೂದಿಸಬೇಕೆಂದು ಇದೆ. ಸುಮಾರು 16 ಜಿಲ್ಲೆಗಳಲ್ಲಿ 44 ತಾಲ್ಲೂಕಿಗೆ ಒಳಪಟ್ಟಿರುವಂಥ 1,199 ಪಂಚಾಯತ್‌ಗಳಿಗೆ 5 ವರ್ಷಗಳಿಂದ ಅಟಲ್ ಭೂಜಲ್ ಯೋಜನೆ ಅಡಿ 100% finance ಇದ್ದು, ಕೆಲಸ ಮಾಡಿದ್ದಾರೆ. ಈಗಾಗಲೇ ರೂ.860 ಕೋಟಿ ನೀಡಿದ್ದು, ಇನ್ನು ಸುಮಾರು ರೂ. 240 ಕೋಟಿ ಕೊಡಲು ಆಗುವುದಿಲ್ಲ ಎಂದು ಬರೆದಿದ್ದಾರೆ. ಈ ಸಂಬಂಧ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರೊಂದಿಗೆ ಕೇಂದ್ರ ಸಚಿವರನ್ನು ಭೇಟಿಯಾಗಿ ರೂ. 240 ಕೋಟಿಯನ್ನು ಕೊಡಬೇಕೆಂದು ಮನವಿ ಮಾಡಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರವು ಇದರ ಬಗ್ಗೆ ಇಡೀ ರಾಷ್ಟ್ರದಲ್ಲಿ groundwater improve ಮಾಡುವುದರ ಮೂಲಕ ಬ್ಯಾಲೆನ್ಸ್ ಮಾಡುವುದು ಎಲ್ಲರ ಜವಾಬ್ದಾರಿ ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ.

ಮಾನ್ಯ ಸದಸ್ಯರೆಲ್ಲರೂ ಸಹಿತ ಅದೇ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇವತ್ತು ರಾಜ್ಯದಲ್ಲಿನ ಪರಿಸ್ಥಿತಿಯನ್ನು ಸರಿಪಡಿಸಲಿಲ್ಲವೆಂದರೆ, groundwater ನ ಪರಿಸ್ಥಿತಿ ಯಾವ್ಯಾವ ತಾಲ್ಲೂಕುಗಳಲ್ಲಿ over exploited, critical, semi-critical and safe category ನಲ್ಲಿದೆ... According to the Dynamic Ground Water Resources of India 2024's report of Karnataka, 45 taluks are categorised as over exploited (the groundwater depletion is more than 100% of annual recharge), about 15 taluks are categorised as critical (between 90-100%), about 32 taluks are categorised as semi critical (70-90%) and about 144 taluks fall in the safe (less than 70%) category. ಈ ರೀತಿಯಾಗಿ ಗ್ರೌಂಡ್ ವಾಟರ್ ಪರಿಸ್ಥಿತಿ ಯಾವ ರೀತಿಯಲ್ಲಿ ಏರುಪೇರಾಗುತ್ತಿದೆ ಎಂಬುದನ್ನು ನೋಡಿ, ಆ ಪ್ರದೇಶಗಳಲ್ಲಿ ನೀರನ್ನು ಸುಧಾರಣೆಗೊಳಿಸುವುದಕ್ಕೆ ಯೋಜನೆಗಳನ್ನು ತಯಾರು ಮಾಡುತ್ತಿದ್ದೇವೆ. ಆ ದಿಸೆಯಲ್ಲಿ check dams and water silt removal ಮಾಡುವಂಥ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಅತೀ ಹೆಚ್ಚಾಗಿ ಎಲ್ಲೆಲ್ಲಿ ಟ್ಯಾಂಕ್ಸ್‌ಗಳಿವೆ, ಅದನ್ನು ಸ್ವಚ್ಛಮಾಡಿ, ಭದ್ರಗೊಳಿಸಲಾಗುವುದು. ಕೃಷ್ಣ ನದಿ, ಕಾವೇರಿ ನದಿ, ವೇದಾವತಿ ನದಿ ಇರಬಹುದು. ಎಲ್ಲೆಲ್ಲಿ ಸಾಧ್ಯವಾಗುತ್ತದೆ lift irrigation ಮುಖಾಂತರ continuous ಆಗಿ ಟ್ಯಾಂಕ್ ಅನ್ನು ತುಂಬುವಂಥ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಮಾನ್ಯ ಎನ್.ರವಿಕುಮಾರ್ ಮತ್ತು ಮಾನ್ಯ ನಸೀರ್ ಅಹ್ಮದ್‌ರವರು ಹೇಳಿದ್ದಾರೆ. ಬೆಂಗಳೂರು ಸಿಟಿಯಲ್ಲಿ ಅವರ assessment ಪ್ರಕಾರ ಸುಮಾರು 19.5 ಟಿ.ಎಂ.ಸಿ. sewage water ಉತ್ಪತ್ತಿಯಾಗುತ್ತಿದೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರದಲ್ಲಿದ್ದಾಗ ಕೆ.ಸಿ.ವ್ಯಾಲಿಯನ್ನು ಪ್ರಾರಂಭ ಮಾಡಿ, ಸುಮಾರು 146 ಕೆರೆಗಳಿಗೆ secondary treatment ಮಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮೂಲಕ ನಮಗೆ ಕೊಡುತ್ತಿದ್ದು, ಅದಕ್ಕೆ ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡುತ್ತಿದ್ದಾರೆ. H.N. (Hebbal-Nagawara) Valley ನಲ್ಲಿಯೂ ಈ ವರ್ಷ ಪ್ರಾರಂಭ ಮಾಡಲಾಗಿದೆ. ಹಾಗೆಯೇ, Vishabhavathi Valley ನಿಂದಲೂ ಸಹ ಸುಮಾರು ರೂ.1,081 ಕೋಟಿ ವೆಚ್ಚದಿಂದ ಸುಮಾರು 19 ಕೆರೆಗಳಿಗೆ ನೀರು ತುಂಬಿಸುವಂಥ ಕೆಲಸವನ್ನು ಪ್ರಾರಂಭ ಮಾಡಲಾಗಿದೆ.

ಬೆಂಗಳೂರು ಸುತ್ತಮುತ್ತ ಇರತಕ್ಕಂಥ sewage water ಅನ್ನು secondary treatment ಮಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ನವರ ಮೂಲಕ ಟ್ಯಾಂಕ್ ತುಂಬುವಂಥ ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ

water-levels improve ಮಾಡಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಲ್ಲಿಯೂ ಸಹಿತ PMKSY (Pradhan Mantri Krishi Sinchayee Yojana) ಮತ್ತು RRR (Repair, Renovation & Restoration) Scheme ನಿಂದ ನಮಗೆ ಕೊಡಬೇಕೆಂದು ಸಾಕಷ್ಟು ವರ್ಷಗಳಿಂದ ಒತ್ತಡ ಮಾಡುತ್ತಿದ್ದೇವೆ. ಸುಮಾರು ನಾಲ್ಕೈದು ವರ್ಷಗಳ ಹಿಂದೆ ಸುಮಾರು ರೂ. 453 ಕೋಟಿ ಬಂದಿದ್ದು, ಇತ್ತೀಚೆಗೆ ಯಾವುದೇ ಮೊತ್ತ ಬಂದಿಲ್ಲ. ಶ್ರೀ ಸೋಮಣ್ಣನವರಿಗೂ ನಮಗೂ ಬಹಳ ಸಂಬಂಧ ಇದ್ದು, ಅವರು ಸಚಿವರಾಗಿದ್ದ ಸಂದರ್ಭದಲ್ಲಿ ಕೂಡಲೇ ಮನವಿ ಮಾಡಿದ ದಿಸೆಯಲ್ಲಿ ‘ತಕ್ಷಣವೇ ಪ್ರಸ್ತಾವನೆಯನ್ನು ಕಳುಹಿಸಿಕೊಡಿ, ನಾನು ಏನಾದರೂ ಮಾಡಿಕೊಡುತ್ತೇನೆ’ ಎಂದು ಹೇಳಿದರು. ಆಗ PMKSY ಮತ್ತು RRR schemes ನ ಅಡಿಯಲ್ಲಿ ಎಲ್ಲಾ ರಾಜ್ಯಗಳನ್ನು ಒಳಗೊಂಡಂತೆ ಸುಮಾರು ರೂ. 3,077 ಕೋಟಿಗಳಷ್ಟು ಕಾರ್ಯಕ್ರಮಗಳನ್ನು ಪಟ್ಟಿ ಮಾಡಿ... ತುಮಕೂರು ಜಿಲ್ಲೆಗೆ ಜಾಸ್ತಿ ಮಾಡಿ ಎಂದಾಗ ಅದನ್ನು ರೂ. 1,000 ಕೋಟಿ ಮಾಡಿ... ಹಾಗೆಯೇ ಮಾನ್ಯ ಪ್ರಹ್ಲಾದ್ ಜೋಶಿ, ಮಾನ್ಯ ಬಸವರಾಜ ಬೊಮ್ಮಾಯಿ, ಮಾನ್ಯ ಜಗದೀಶ್ ಶೆಟ್ಟರ್ ರವರೊಂದಿಗೆ ಈ ಸಂಬಂಧ ಮೂರ್ನಾಲ್ಕು ಸಲ ಮಾತನಾಡಿದ್ದೆವು. ನಮ್ಮ ಎಲ್ಲಾ ಅಧಿಕಾರಿಗಳನ್ನು ಮತ್ತು 9 ಮಂದಿ ಇಂಜಿನಿಯರ್ಸ್‌ರವರನ್ನು ಕರೆಸಿ ಸುಮಾರು ಮೂರುವರೆ ತಿಂಗಳು ಸಮಯ ತೆಗೆದುಕೊಂಡು ತಯಾರು ಮಾಡಿ ಕಳುಹಿಸಿದ್ದೇವೆ. ಈಗಾಗಲೇ ಸುಮಾರು ರೂ.99 ಕೋಟಿ ತುಮಕೂರಿಗೆ ಖರ್ಚು ಮಾಡಲಾಗಿದ್ದು, ಸುಮಾರು ರೂ. 72 ಕೋಟಿ ಮಾತ್ರ 4 ವರ್ಷಗಳಿಂದ ಬಾಕಿಯಲ್ಲಿರಿಸಲಾಗಿದೆ. ಧಾರವಾಡದಲ್ಲಿ ಮಾತ್ರ ಆಗಿದ್ದು, ಉಳಿದಂತೆ ಯಾವುದು ಆಗಿಲ್ಲ. ಕೇಂದ್ರದ ಜಲಶಕ್ತಿ ಸಚಿವರಾದ ಮಾನ್ಯ ಸಿ.ಆರ್.ಪಾಟೀಲ್‌ರವರು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರೊಂದಿಗೆ ಸಭೆ ನಡೆಸಿದಾಗ ನಾನು ಅವರೊಂದಿಗೆ ಹೋಗಿ ಮನವಿ ಮಾಡಿದಾಗ ‘ನೋಡುತ್ತೇನೆ ಬಹಳ ತೊಂದರೆ ಇದೆ’ ಎಂದು ಹೇಳಿದರು. ಈ ರೀತಿಯಾದ ಪರಿಸ್ಥಿತಿ ಎಲ್ಲಾ ರಾಜ್ಯಗಳಲ್ಲಿ ಒತ್ತಡ, ಬೇಡಿಕೆ ಇದೆ ಎಂದು ನೇರವಾಗಿ ಹೇಳಿದರು. ಆದರೆ, 'Because of funds constraints in the budgetary provisions, we are unable to entertain your applications' ಎಂದು ಮೊನ್ನೆ ಪತ್ರ ಸಹ ಬರೆದಿದ್ದಾರೆ. ಈ ರೀತಿಯಾದ ಪರಿಸ್ಥಿತಿ ಇದ್ದು, ಎಲ್ಲಾ ರಾಜ್ಯಗಳಲ್ಲಿ ಒತ್ತಡ, ಬೇಡಿಕೆ ಇದೆ ಎಂದು ನಾವು ಮಾನ್ಯ ಸಿ.ಆರ್.ಪಾಟೀಲ್ ರವರನ್ನು ಭೇಟಿ ಮಾಡಿದಾಗ ನೇರವಾಗಿ ಹೇಳಿದರು. ಈ ವರ್ಷ ರೂ. 3,000 ಕೋಟಿ ಕೊಡಬೇಕೆಂದು,... ಈ ವರ್ಷದ ಬಜೆಟ್‌ನಲ್ಲಿ ಸಾಮಾನ್ಯವಾಗಿ ಇರುವುದು ಕೇವಲ ಸುಮಾರು ರೂ. 2,000 ಕೋಟಿ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ

ಡಿ.ಕೆ.ಶಿವಕುಮಾರ್‌ರವರು ಮನವಿ ಮಾಡಿದ ನಂತರ ರೂ. 1,100 ಕೋಟಿಯಲ್ಲಿ ಶೇಕಡ 40 ರಷ್ಟು ರಾಜ್ಯ ಸರ್ಕಾರ, ಶೇಕಡ 60 ರಷ್ಟು ಕೇಂದ್ರ ಸರ್ಕಾರವು ಬಿಡುಗಡೆ ಮಾಡುತ್ತದೆ. ಹೀಗಾಗಿ ರೂ. 3,000 ಕೋಟಿ ಬರಬಹುದೆಂದು ಅಂದಾಜಿಸಲಾಗಿತ್ತು. ಏಕೆಂದರೆ, ನಮ್ಮ ಬಜೆಟ್ ಜಲಸಂಪನ್ಮೂಲ ಇಲಾಖೆಗೆ ಬರುವುದು.

ಈ ರೀತಿಯಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು groundwater improve ಮಾಡಬೇಕೆಂಬ ದೊಡ್ಡ ಯೋಜನೆ ಇದೆ. ಇದೆಲ್ಲವನ್ನೂ ಜನರು ತಿಳಿದುಕೊಳ್ಳಬೇಕಾಗಿದ್ದು, ನೀರು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು. ಈ ಸಂಬಂಧ ನಾನು ಒಂದು ಜಾಗೃತಿ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿದ್ದು, ಈಗಾಗಲೇ ಬೆಂಗಳೂರಿನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಇವತ್ತು ಇಡೀ ರಾಜ್ಯಾದ್ಯಂತ ಆ ಕಾರ್ಯಕ್ರಮದ ಮೂಲಕ 'Water is Future' ಎಂದು, ಎಲ್ಲೆಲ್ಲಿ ನೀರು ಪೋಲಾಗುತ್ತಿದೆ; ಯಾವ ರೀತಿ ವ್ಯರ್ಥವಾಗುತ್ತಿದೆ; ಯಾವ ರೀತಿ ಅದನ್ನು ಸರಿಪಡಿಸಬೇಕು; ಯಾವ ರೀತಿ groundwater improve ಮಾಡಬೇಕು; ಯಾವ ರೀತಿಯಾಗಿ ಇರುವಂಥ ನೀರನ್ನು ಉಪಯೋಗ ಮಾಡಬೇಕು; ಶುದ್ಧ ನೀರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ಕ್ರೋಢೀಕರಣ ಮಾಡಿ ಅರಿವು ಮೂಡಿಸಲಾಗುತ್ತಿದೆ. ಮಾನ್ಯ ರವಿಯವರು ಗುರೂಜಿ ಬಗ್ಗೆ ಹೇಳಿದರು. ನಾವು ಅವರ ತಂಡವನ್ನು 3 ಸಲ ನನ್ನ ಕಚೇರಿಗೆ ಕರೆಸಿದ್ದೆ. ಅವರಿಂದ feedback ತೆಗೆದುಕೊಂಡಿದ್ದೇನೆ. ಹಾಗೆಯೇ ನಮ್ಮ ರಾಯಚೂರು ಜಿಲ್ಲೆಗೂ ಸಹ ಆ 6 ಮಂದಿಯನ್ನು ಕಳುಹಿಸಿದ್ದೇನೆ. ಅವರೆಲ್ಲರೂ ಬಹಳ ತರಬೇತಿ ಹೊಂದಿರುವಂಥವರು ಹಾಗೂ ಈ ಹಿಂದೆ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದಂತಹವರು. ರಾಯಚೂರು ಜಿಲ್ಲೆಯಲ್ಲಿ soil testing ಹಾಗೂ groundwater level ಗಳ ವರದಿಯನ್ನು ಸಹ ಕೊಟ್ಟಿದ್ದಾರೆ. ಈ ರೀತಿ ರಾಜ್ಯದಲ್ಲಿ ಎಲ್ಲೆಲ್ಲಿ ಸಮಸ್ಯೆ ಇದೆ, ಅಲ್ಲಿಗೆ ಆ ತಜ್ಞರನ್ನು ಕಳುಹಿಸಿ, feedback ಅನ್ನು ತೆಗೆದುಕೊಂಡು, ಅವೆಲ್ಲವನ್ನೂ ಒಳಪಡಿಸಿ `Water is Future' ಎಂದು ಇಡೀ ರಾಜ್ಯದಲ್ಲಿ ಅರಿವು ಮೂಡಿಸಲಾಗುತ್ತಿದೆ. ಅದಕ್ಕೆಲ್ಲಾ ಸುಮಾರು ರೂ. 5 ಕೋಟಿ, ರೂ. 6 ಕೋಟಿ, ರೂ.7 ಕೋಟಿಗಳಷ್ಟು ಖರ್ಚಾದರೂ ಪರವಾಗಿಲ್ಲ. ಅದು ವ್ಯವಸ್ಥಿತವಾಗಿ ಬಳಕೆಯಾಗಬೇಕಾಗಿದ್ದು, ಜಿಲ್ಲಾ ಪಂಚಾಯತ್ ಸದಸ್ಯರು, ಪುರಸಭೆ ಸದಸ್ಯರು, ಶಾಸಕರೆಲ್ಲರನ್ನೂ ಒಳಪಡಿಸಿ ಈ ಯೋಜನೆಯನ್ನು ಒಂದು ವರ್ಷಗಳ ಕಾಲ ಮಾಡಬೇಕೆಂದು ಮಾಡಿದ್ದೆವು. ಹಾಗೆಯೇ ಇದರಲ್ಲಿ ಆಸಕ್ತಿ ಇರುವಂಥವರನ್ನು ಹಾಗೂ ಹಣವನ್ನು ಅಪೇಕ್ಷೆ ಮಾಡದೇ ಇರುವವರು 'Brand Ambassador' ಆಗಿ service ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅವರನ್ನು ಸಹ ಇದರೊಳಗೆ ಸೇರಿಸಿಕೊಂಡು groundwater improve ಮಾಡಲಿಕ್ಕೆ ಮತ್ತು ಜನರಿಗೆ ನೀರಿನ

ಪರಿಸ್ಥಿತಿ ಏನಿದೆ ಎಂಬುದನ್ನು ಅಧ್ಯಯಿಸಲು ಜಾಗೃತಿ ಕಾರ್ಯಕ್ರಮ ಮಾಡಬೇಕೆಂಬ ಪ್ರಯತ್ನ ಮಾಡುತ್ತಿದ್ದೇವೆ. ಹಾಗೆಯೇ ಕೆಲವರು ಹಿನ್ನೀರು ಯಾವ ರೀತಿ ಮಾಡಲಾಗುತ್ತದೆ ಎಂಬುದನ್ನು ಕೇಳಿದ್ದರು. ಯಾರಿಗೂ ತೊಂದರೆಯಾಗದಂತೆ ವೈಯಕ್ತಿಕ ಗೃಹ ಉಪಯೋಗಕ್ಕಾಗಿ ಮತ್ತು ಗ್ರಾಮೀಣ ಪ್ರದೇಶಗಳಿಗೂ, Armed Forces Establishments, ಕೃಷಿ, ಸಣ್ಣ ಮತ್ತು ಅತೀ ಸಣ್ಣ ಉದ್ಯಮಿಗಳಿಗೆ ಹಾಗೂ ಅಪಾರ್ಟ್‌ಮೆಂಟ್ಸ್‌ಗೆ NOC (No Objection Certificate) ಕೊಡಲು ಯಾವುದೇ ತೊಂದರೆಯಿಲ್ಲ. ಹಾಗಾಗಿ, ಯಾರಿಗೂ ತೊಂದರೆಯಾಗದಂತೆ ಭಾರತ ಸರ್ಕಾರದ ಜಲಶಕ್ತಿ ಇಲಾಖೆಯಿಂದ ಬಂದಿರುವಂಥ ವರದಿ ಆಧಾರದ ಮೇಲೆ ಈ ಮಾರ್ಗಸೂಚಿಯನ್ನು 15 ರಾಜ್ಯಗಳಲ್ಲಿ ಈಗಾಗಲೇ ಕಾರ್ಯಗತಗೊಳಿಸಲಾಗಿದೆ. ಈ ರಾಷ್ಟ್ರದಲ್ಲಿಯೇ ಕಾರ್ಯಗತಗೊಳಿಸಬೇಕೆಂದು repeatedly ಬರುವುದರಿಂದ ಈ ತಿದ್ದುಪಡಿ ವಿಧೇಯಕವನ್ನು ತರಲು ಪ್ರಯತ್ನ ಮಾಡಿದ್ದು, ಈ ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. (ಮುಂದು)

(895) 21.08.2025 11.50 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 6 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಆಗುವುದಿಲ್ಲ.

**ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ಯುವತಿಯ ಕೊಲೆಯಾಗಿದೆ.

**ಶ್ರೀ ಡಿ.ಎಸ್. ಅರುಣ್:-** ಇಡೀ ರಾಜ್ಯಕ್ಕೆ ಅವಮಾನವಾಗಿದೆ.

**ಸಭಾಪತಿಯವರು:-** ತಾವೆಲ್ಲರೂ ಈ ರೀತಿ ಎದ್ದರೆ ಹೇಗೆ? ಸದನ ನಡೆಸಬೇಕೇ, ಬೇಡವೇ?

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಿನ್ನೆ ಬೆಳಗ್ಗೆ ಸಹ ನಾನು ತಮ್ಮ ಹತ್ತಿರ ಬಂದು ವಿನಂತಿ ಮಾಡಿದ್ದೆನು. ನಿನ್ನೆ ಸಹ ಶೂನ್ಯ ವೇಳೆಯ ಸಮಯದಲ್ಲಿ ತಾವು ಸದನದಲ್ಲಿರಲಿಲ್ಲ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ದಲಿತ ವಿದ್ಯಾರ್ಥಿಯ ಕೊಲೆಯಾಗಿದೆ.

**ಸಭಾಪತಿಯವರು:-** ಆ ವಿಚಾರವಾಗಿ ಮಾತನಾಡಲು ಅವಕಾಶ ಕೊಡಲು ಆಗುವುದಿಲ್ಲ. ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಸದನದಲ್ಲಿಯೇ ಇದ್ದಾರೆ. ಮೊನ್ನೆ ದಿವಸ ಚಿತ್ರದುರ್ಗದಲ್ಲಿ ಬಹಳ ದೊಡ್ಡ ಗಲಾಟೆಯಾಗಿದ್ದು, ಜನರು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆ ಮಾಡಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವಾಗ ಮುಂದಿನ ವಿಧೇಯಕವನ್ನು ಕೈಗೆತ್ತಿಕೊಳ್ಳಿ. ಮಾನ್ಯ ಕೆ.ಎಸ್.ನವೀನ್‌ರವರು ಹೇಳಿದ ವಿಚಾರವಾಗಿ ಆಮೇಲೆ ಚರ್ಚೆ ಮಾಡೋಣ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು 19 ವರ್ಷದ ವಿದ್ಯಾರ್ಥಿಯನ್ನು ಕೊಲೆ ಮಾಡಲಾಗಿದೆ.

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಆಗುವುದಿಲ್ಲ. ಎಲ್ಲರೂ ಕುಳಿತುಕೊಳ್ಳಿ. ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ, 2025.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಬ್ಬ ದಲಿತ ಯುವತಿಯ ಮೇಲೆ ಅತ್ಯಾಚಾರವಾಗಿದೆ.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಈ ವಿಚಾರವಾಗಿ ಮಾತನಾಡಲು ಅವಕಾಶ ಮಾಡಿಕೊಡಬೇಕು. ಈ ಸದನದಲ್ಲಿ ಕೇವಲ ವಿಧೇಯಕದ ಮೇಲೆ ಅಷ್ಟೇ ಮಾತನಾಡುವುದಲ್ಲ. **(ಗೊಂದಲ)** ಸಾರ್ವಜನಿಕ ವಿಚಾರದ ಮೇಲೆಯೂ ಮಾತನಾಡಲು ಅವಕಾಶ ಮಾಡಿಕೊಡಬೇಕು. **(ಗೊಂದಲ)** ಎರಡು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ದಲಿತ ಯುವತಿ ಮೇಲೆ ಅತ್ಯಾಚಾರವಾಗಿ ಕೊಲೆಯಾಗಿದೆ. ದಯವಿಟ್ಟು ಆ ವಿಚಾರವಾಗಿ ಮಾತನಾಡಲು ಅವಕಾಶ ಮಾಡಿಕೊಡಿ. ಅದಕ್ಕಿಂತ ಮುಖ್ಯವಾದದು ಯಾವುದು ಇಲ್ಲ.

**ಸಭಾಪತಿಯವರು:-** ಈ ಸದನಕ್ಕೆ ತನ್ನದೇ ಆದ ನಿಯಮ ಇದೆ. ಅದರಂತೆ ನಾನು ವಿಧೇಯಕದ ಮೇಲೆ ಮಾತನಾಡಲು ಮಾನ್ಯ ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ.ಶಿವಕುಮಾರ್‌ರವರನ್ನು ಕರೆದಿದ್ದೇನೆ. ಅವರು ವಿಧೇಯಕದ ಮೇಲೆ explain ಮಾಡಿ ಮಾತನಾಡುತ್ತಾರೆ. ತಾವು ಹೇಳಿದಂಥ ವಿಚಾರದ ಕುರಿತು ಆಮೇಲೆ ವಿಚಾರ ಮಾಡಿ ಹೇಳುತ್ತೇನೆ.

**ಆ) ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಸಹ ಈ ವಿಧೇಯಕವು ವಿಧಾನಸಭೆಯಲ್ಲಿ ಅನುಮೋದನೆಗೊಂಡಿತ್ತು. ಒಂದು ಸಣ್ಣ ಸ್ಪಷ್ಟೀಕರಣಕ್ಕಾಗಿ ಯಾವುದೇ ಕಾರಣಕ್ಕೂ 74ನೇ ತಿದ್ದುಪಡಿಯನ್ನು disturb ಮಾಡುವುದಿಲ್ಲ ಎನ್ನುವಂಥ clarity ಅನ್ನು ನೀಡುವುದಕ್ಕೆ ಈ ತಿದ್ದುಪಡಿ ವಿಧೇಯಕದಲ್ಲಿ ಸಣ್ಣದಾದ ತಿದ್ದುಪಡಿಯನ್ನು ತರಲಾಗಿದೆ. *The relevant portion in* ***'The Greater Bengaluru Governance Act,2024'*** *(Karnataka Act 36 of 2025) in* ***'Section 8(2)'*** *reads as follows;*

> ***"The Greater Bengaluru Authority shall exercise such authority and discharge such functions as per the provisions of this Act…"***

ಎಂದು ಇರುವುದನ್ನು ಆಡಳಿತದ ದೃಷ್ಟಿಯಿಂದ, ***"The Greater Bengaluru Authority shall discharge such functions as per the provisions of this Act"*** ಎಂದು substitute ಮಾಡಿ ಅವಕಾಶವನ್ನು ಕಲ್ಪಿಸಲಾಗಿದೆ. ಇನ್ನೊಂದು, *the relevant portion in* ***'The Greater Bengaluru Governance Act,2024'*** *(Karnataka Act 36 of 2025) in* ***'Section 14(1)'*** *with respect to* ***'Functions of the Greater Bengaluru Authority'*** *reads as follows;*

> *"The Greater Bengaluru Authority shall perform the following functions, namely: –*
>
> *(1) Administrative Functions: The Greater Bengaluru Authority shall exercise* ***Administrative functions and powers on the Administration of the City Corporations*** *as decided by the Government including;"*

ಎಂದಿದೆ. ಇದರಲ್ಲಿ, *"Administrative functions and powers on the administration of the City Corporations"* ಎನ್ನುವ ಕಡೆ *"such functions"* ಎಂದು substitute ಮಾಡಲಾಗಿದೆ. ಇದನ್ನು administration ಗೋಸ್ಕರ ತಿದ್ದುಪಡಿ ಮಾಡಲಾಗಿದೆ. ಮುಂದೆ ಇದು ಮತ್ತೆ clarification ಗೆ ಬರಬಾರದೆಂದು ಮಾಡಲಾಗಿದೆ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೇಮಕಾತಿಗೋಸ್ಕರ rules frame ಮಾಡಲು ತಂದಿರುವಂಥ ವಿಧೇಯಕ ಎಂದು ಭಾವಿಸುತ್ತೇನೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರಲ್ಲಿ ಒಂದು ಮನವಿಯೇನೆಂದರೆ, ಏನು ನೇಮಕಾತಿ ನಿಯಮವನ್ನು ತರಲಾಗಿದೆ, ಇದು C & D (Conduct and Discipline) Regulations ನ ಪ್ರಕಾರ ನೇಮಕಾತಿ ಮಾಡಿಕೊಳ್ಳುವಂಥ ಮುಂದಿನ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ಇಲ್ಲಿಯವರೆಗೂ ಏನಾಗಿದೆ ಎಂದರೆ, ಬಿ.ಬಿ.ಎಂ.ಪಿ. ಯಿಂದ ಆಯಕಟ್ಟಿನ ಜಾಗಗಳಿಗೆ major irrigation, minor irrigation ಇರಬಹುದು, ಪಿ.ಡಬ್ಲ್ಯೂ.ಡಿ. ಇರಬಹುದು. ಇವೆಲ್ಲವೂ ಇಲ್ಲದೇ ಇಂಜಿನಿಯರ್‌ಗಳು ಅವರದೇ ಆದ ಪ್ರಭಾವವನ್ನು ಬೀರಿ ನಗರಾಭಿವೃದ್ಧಿ ಇಲಾಖೆಗೆ ಬರುತ್ತಿದ್ದರು. ಬೇರೆ ಇಲಾಖೆಯಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಬಂದಾಗ ಅವರಿಗೆ ಆ ಒಂದು ಜವಾಬ್ದಾರಿ ಇರುವುದಿಲ್ಲ. ಪ್ರತಿ ವರ್ಷ ಉಳಿದುಕೊಳ್ಳಲು ಸಮಸ್ಯೆಯಾಗುತ್ತದೆ. ಏಕೆಂದರೆ, ಬಿ.ಬಿ.ಎಂ.ಪಿ. ಇಲಾಖೆ ಎಂದರೆ, ಸಮೃದ್ಧಿಯಾದಂಥ ಸಂಸ್ಥೆ ಎನ್ನುವ ಭಾವನೆ ಇದ್ದು, ಅದೇ ರೀತಿ ನಡೆಯುತ್ತಿದೆ. ಈ ಸಂಬಂಧ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ ಒಂದು ಸಲಹೆಯೇನೆಂದರೆ, ಗ್ರೇಟರ್ ಬೆಂಗಳೂರಿಗೆ ನೇಮಕಾತಿ ನಿಯಮ ತರಲಾಗಿದೆ, ಆ ಒಂದು ನೇಮಕಾತಿಯನ್ನು ಅಲ್ಲಿಗೆ ಎಷ್ಟು ಬೇಕು ಅಷ್ಟು ಮಾಡಿಕೊಂಡು, ಬೇರೆ ಇಲಾಖೆಯಿಂದ ವರ್ಗಾವಣೆಗೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಬಾರದೇ ಇರುವಂತೆ ಅದನ್ನು ಸಹ ಈ ವಿಧೇಯಕದಲ್ಲಿ ಅಳವಡಿಸಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕವು ನಿಜವಾಗಿಯೂ fair ಆಗಿದೆ ಎಂದು ಭಾವಿಸುತ್ತೇನೆ. 74ನೇ ತಿದ್ದುಪಡಿ ಪರಿಚಯ ಏನಿದೆ, ಸ್ಥಳೀಯ ಸಂಸ್ಥೆಯ ಪಾಲಿಕೆಗೆ ಸರ್ಕಾರದ ಹಸ್ತಕ್ಷೇಪ ಇರುವುದಿಲ್ಲ ಎನ್ನುವುದಕ್ಕಾಗಿ ಈ ಒಂದು ವಿಶೇಷ ತಿದ್ದುಪಡಿ ವಿಧೇಯಕ ತರಲಾಗಿದೆ ಎಂದು ಭಾವಿಸಿದ್ದೇನೆ. ಇದೊಂದು ಒಳ್ಳೆಯ ವಿಧೇಯಕವೆಂದು ತಿದ್ದುಪಡಿ ತರಲಾಗಿದೆ. ಸುಮಾರು 30 ವರ್ಷಗಳ ಹಿಂದೆ ಅಂದರೆ 1993-94ನೇ ಸಾಲಿನಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರು ತಿದ್ದುಪಡಿಯನ್ನು ತಂದು ಅಂದಿನ ದಿವಸವೇ ಒಂದು ಇತಿಹಾಸವನ್ನು ಸೃಷ್ಟಿ ಮಾಡಿದ್ದರು ಎಂಬುದು ಸಹ ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿದೆ ಎಂದು ಭಾವಿಸಿದ್ದೇನೆ. 1993-94ನೇ ಸಾಲಿನಲ್ಲಿ ತಿದ್ದುಪಡಿ ಮಾಡುವಾಗ 3 ಹಂತದಲ್ಲಿ ಕೇಂದ್ರ ಮತ್ತು ರಾಜ್ಯ ಸ್ಥಳೀಯ ಲೋಕಲ್ ಬಾಡಿ ಇರಬಹುದು

ಮತ್ತು ನಗರ ಭಾಗದಲ್ಲಿರುವಂಥ ಪಾಲಿಕೆಗಳಿರಬಹುದು. ಅವೆಲ್ಲದರ ನಿರ್ಣಯವೇ ಅಂತಿಮ ಎಂದು ಉಲ್ಲೇಖ ಮಾಡಿರುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಕೇವಲ 'ಎ', 'ಬಿ' ಮತ್ತು 'ಸಿ' ವೃಂದದ ಸಿಬ್ಬಂದಿಗಳ ನೇಮಕಾತಿಗೆ ಮಾತ್ರ ಅನ್ವಯಿಸಬಾರದು. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಇರುವ ಅಧಿಕಾರ ಎಷ್ಟು ಮಾತ್ರ ಇದೆ ಎಂಬುದರ ಬಗ್ಗೆ ಸಹ ಜನರಲ್ಲಿ ಗೊಂದಲ ಇದ್ದು, ಅದಕ್ಕೊಂದು ಸ್ಪಷ್ಟೀಕರಣವನ್ನು ಕೊಡಬೇಕು. ಜೊತೆಗೆ ಬೆಂಗಳೂರನ್ನು 5 ಭಾಗಗಳಾಗಿ ವಿಂಗಡಿಸಿದ್ದು, ಯಾವ ರೀತಿಯಲ್ಲಿ ವಿಧಾನಸಭಾ ಕ್ಷೇತ್ರಗಳನ್ನು ಮುಂದುವರೆಯುತ್ತದೆ, ಅದರಲ್ಲಿ ಯಾವ್ಯಾವ ಕ್ಷೇತ್ರಗಳು ಒಳಪಟ್ಟಿವೆ, ಯಾವ ರೀತಿ ಬರುತ್ತದೆ ಎನ್ನುವಂಥ boundary ಸಹ ನಮಗೆ ಗೊತ್ತಿಲ್ಲದೇ ಇರುವುದರಿಂದ ಅದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡಬೇಕು. ಚುನಾವಣೆ ನಡೆಸುವ ದೃಷ್ಟಿಯಿಂದ ಈ ತಿದ್ದುಪಡಿ ವಿಧೇಯಕವನ್ನು ಮಾಡಲಾಗಿದೆ ಎಂದು ಹೇಳಿದ್ದು, ಅದನ್ನು ಕೂಡ ಸ್ವಾಗತ ಮಾಡುತ್ತೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಮಹಾನಗರ ಪಾಲಿಕೆಗೆ ಕೋ-ಆರ್ಡಿನೇಷನ್ ಕಮಿಟಿ ಆಗಬಾರದು ಮತ್ತು 74ನೇ ತಿದ್ದುಪಡಿಗೆ ವಿರುದ್ಧವಾಗಬಾರದೆಂದು ಈ ತಿದ್ದುಪಡಿ ವಿಧೇಯಕವನ್ನು ಜಾರಿಗೆ ತರಲಾಗಿದ್ದು, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, ನಮ್ಮ ಕಮಿಟಿಯಲ್ಲಿ ಇದ್ದಾಗ ಸಹ ನಮ್ಮ perception ಇದ್ದಿದೆ ಅಷ್ಟು. Auditor General ರವರು ಸಹ ಇದೇ ಮಾತನ್ನು ಹೇಳಿದರು. ಯಾವುದೇ ರೀತಿಯಲ್ಲೂ ಸಹ the Greater Bengaluru Authority should not have control over any Palike. ಯಾವುದೇ ಪಾಲಿಕೆಯ ಮೇಲೆ ಇದರ ನಿಯಂತ್ರಣ ಇರಬಾರದು. ಒಂದು ವೇಳೆ ಇದ್ದರೆ ಅದು 74ನೇ ತಿದ್ದುಪಡಿಗೆ ವಿರುದ್ಧವಾಗುತ್ತದೆ. ಪ್ರತಿಯೊಂದು ಪಾಲಿಕೆಯೂ ಪ್ರತ್ಯೇಕವಾಗಿರಬೇಕು ಎನ್ನುವಂಥ ಉದ್ದೇಶವಾಗಿದ್ದು, ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಮೊನ್ನೆ ದಿವಸ 5 ಪಾಲಿಕೆಗಳನ್ನು announce ಮಾಡಿದ್ದು. ನಾವು ಈಗಾಗಲೇ ಒಂದು ವಿಧಾನಸಭಾ ಕ್ಷೇತ್ರದೊಳಗೆ ವಾರ್ಡ್ ಇರಬೇಕೆಂದು ಗ್ರೇಟರ್ ಬೆಂಗಳೂರು ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಮಹಾದೇವಪುರ ಮತ್ತು ಯಶವಂತಪುರದ ಕೆಲವು ಭಾಗಗಳನ್ನು ತೆರವುಗೊಳಿಸಿದ್ದು, violation ಆಗಿದೆ. 4 ವಿಧಾನಸಭಾ ಕ್ಷೇತ್ರಗಳನ್ನು ಬೇರೆ ಬೇರೆ ಸೇರಿಸಿರುವುದು ಒಂದು ಭಾಗವಾದರೆ,... ನಾವು ಹೇಳಿದ ವಿಚಾರವೇನೆಂದರೆ, ಒಂದು ವಿಧಾನಸಭಾ ಕ್ಷೇತ್ರದಲ್ಲಿಯೇ ಎಲ್ಲಾ ವಾರ್ಡ್ ಬರಬೇಕು. ಅದರ ಭಾಗವು ಇನ್ನೊಂದಕ್ಕೆ ಹೋಗಬಾರದು. ಅದನ್ನು ಸರಿಪಡಿಸಬೇಕಾಗಿದೆ. ಎರಡನೆಯದಾಗಿ, ಬಿ.ಜೆ.ಪಿ. ಸರ್ಕಾರ ಅಸ್ತಿತ್ವದಲ್ಲಿದ್ದಾಗ 245 ವಾರ್ಡ್‌ಗಳನ್ನು ಮಾಡಿದ್ದು, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗ 225 ವಾರ್ಡ್‌ಗಳಾಗಿ ಘೋಷಣೆ ಮಾಡಲಾಗಿದೆ.

(ಮುಂದು)

**ಶ್ರೀ ಹೆಚ್.ಎಸ್. ಗೋಪಿನಾಥ್ (ಮುಂದು)**

ನಮ್ಮ ಉದ್ದೇಶವೇನೆಂದರೆ, ಒಂದು ಕಾರ್ಪೋರೇಷನ್ ವಾರ್ಡ್ ಗರಿಷ್ಠ 30 ರಿಂದ 35 ಸಾವಿರ ಜನಸಂಖ್ಯೆ ಇರಬೇಕೆಂಬುದು ನಮ್ಮ ಅಪೇಕ್ಷೆ. ಇವತ್ತು ಐದು ಪಾಲಿಕೆಗಳನ್ನು ಮಾಡಿದ್ದೀರಿ. ಐದು ಪಾಲಿಕೆ ಎಂದರೆ, minimum ಐದುನೂರು ಜನರು ಆಗುತ್ತಾರೆ. ಒಂದು ಕಾರ್ಪೋರೇಷನ್ ವಾರ್ಡ್‌ನ ಸದಸ್ಯರಿಗೆ ಎಷ್ಟು ಜನ ಮತದಾರರು ಇರುತ್ತಾರೆ. ಇಲ್ಲವೆಂದರೆ, ಅವರಿಗೂ CMC (City Municipal Council) member ಗೆ ಏನು ವ್ಯತ್ಯಾಸ ಇರುವುದಿಲ್ಲ. ಬೆಂಗಳೂರು ಕಾರ್ಪೋರೇಷನ್ ವಾರ್ಡ್ ಎಂದರೆ, minimum 25 ರಿಂದ 30 ಬೂತ್‌ಗಳಾದರೂ ಇರಬೇಕು. ಇಲ್ಲವೆಂದರೆ, CMC member, ನಗರಸಭೆ ಸದಸ್ಯರುಗಳು ಮತ್ತು ಪುರಸಭೆ ಸದಸ್ಯರುಗಳು ಹಾಗೂ ಬೆಂಗಳೂರು ವಾರ್ಡ್ ಸದಸ್ಯರುಗಳಿಗೂ ವ್ಯತ್ಯಾಸ ಇರುವುದಿಲ್ಲ. ಕಾರಣವೆಂದರೆ, ಇವತ್ತು ಐದು ಕಾರ್ಪೋರೇಷನ್‌ಗಳನ್ನು ಮಾಡಿರುವುದರಿಂದ, ಇವತ್ತು ಬೆಂಗಳೂರಿನ ಹೊರ ವಲಯದ ಪಂಚಾಯಿತಿಗಳಲ್ಲಿ ಆರು ತಿಂಗಳಿಗೊಮ್ಮೆ ಒಬ್ಬೊಬ್ಬರನ್ನು ಬದಲಾವಣೆ ಮಾಡುತ್ತೇವೆ ಎಂದು ನಾವು ನೋಡುತ್ತಿದ್ದೇವೆ. ನಮ್ಮ ರಾಜಕೀಯದ ಸಲುವಾಗಿ ಆರು ತಿಂಗಳಿಗೊಮ್ಮೆ ಬದಲಾವಣೆ ಮಾಡುತ್ತೇವೆ. ಎರಡೂವರೆ ವರ್ಷ Mayor ಅನ್ನು ನಿಗದಿ ಮಾಡಿದ್ದೇವೆ. ಅದಕ್ಕೋಸ್ಕರ ಆರು ತಿಂಗಳಿಗೊಮ್ಮೆ Mayor ಗಳನ್ನು ಬದಲಾವಣೆ ಮಾಡುವಂತಹ ಸ್ಥಿತಿಯಾಗುತ್ತದೆ. ಅದನ್ನು ಕೂಡ ತಲೆಯಲ್ಲಿಟ್ಟುಕೊಂಡು, ಮುಂದಕ್ಕೆ ಅದನ್ನು ಹೇಗೆ ಸರಿ ಮಾಡಬೇಕೆಂಬುದರ ಬಗ್ಗೆ ನಮ್ಮ ಅಪೇಕ್ಷೆಯಾಗಿದೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಇದು ಸ್ವಲ್ಪ administrative ದೃಷ್ಟಿಯಿಂದ ಅದಕ್ಕೆ clarity ಇರಲಿ ಎಂದು ಹೇಳಿ 74$^{th}$ amendment of the Constitution ಗೆ ಯಾರು touch ಮಾಡಬಾರದು ಎನ್ನುವ ದೃಷ್ಟಿಯಿಂದ ಯಾವುದೇ ಸರ್ಕಾರವಿರಲಿ ಬೆಂಗಳೂರಿನಲ್ಲಿ ಬಹಳ ಸಾರಿ ನೋಡಿದ್ದೇನೆ. ಸರ್ಕಾರ ಒಂದು ಇರುತ್ತದೆ. ಕಾರ್ಪೋರೇಷನ್ ಇರುತ್ತದೆ ಸರ್ಕಾರ ಅವರ ಮೇಲೆ ಹಿಡಿತ ಇರಬಾರದು ಎನ್ನುವ ದೃಷ್ಟಿಯಿಂದ ಅವರಿಗೆ ಫ್ರೀ ಆಗಿ ಬಿಡಬೇಕು ಎನ್ನುವ ದೃಷ್ಟಿಯಿಂದ ಪಂಚಾಯಿತಿ ಕಾಯಿದೆಯಲ್ಲಿ ಯಾವ ರೀತಿ ಇದೆ ಎನ್ನುವ ದೃಷ್ಟಿಯಿಂದ ಇದನ್ನು ಸ್ವಲ್ಪ clarity ಇರಲಿ ಎಂದು ಈ ವಿಧೇಯಕವನ್ನು ತಂದಿದ್ದೇವೆ. ಇದು ಸರ್ಕಾರದ ಕೈಕೆಳಗಡೆ ಹೋಗಬಾರದು. ಉಳಿದಿದ್ದು, funds ಎಲ್ಲವೂ ಕೊಡಬೇಕಾಗುತ್ತದೆ. ಜನಸಂಖ್ಯೆ, ವಾರ್ಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಏನು ಕಾಣುತ್ತದೆ ಎಂದರೆ, ಹಳೆಯ 2011 census ಬಗ್ಗೆ ಮಾನ್ಯ ಸದಸ್ಯರು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ನಾನು ಅದಕ್ಕೆ ಉತ್ತರ ಕೊಡುತ್ತೇನೆ. ಹದಿನೈದು ಸಾವಿರ ಜನಸಂಖ್ಯೆ ಇರುವ ಒಂದು ವಾರ್ಡ್ actually ಇವತ್ತಿನ ಕಾಲಕ್ಕೆ ಮೂವತ್ತೈದು ಸಾವಿರ ಜನಸಂಖ್ಯೆ ಇರುತ್ತದೆ. ಆ ತರಹ double ಇರುತ್ತದೆ. ಜನಸಂಖ್ಯೆ ಅಷ್ಟೊಂದು ಜಾಸ್ತಿಯಾಗಿಬಿಟ್ಟಿದೆ. ಅದನ್ನು ಬೇರೆ ಯಾವುದಾದರೂ ರೂಪದಲ್ಲಿ ತನ್ನಿ administration ದೃಷ್ಟಿಯಿಂದ ಅದಕ್ಕೆ ನಾನು clarity ಕೊಡುವುದಕ್ಕೆ ತಯಾರಿದ್ದೇನೆ. ಬೇರೆ ಕ್ಷೇತ್ರಗಳಿಗಿಂತ ಮಾನ್ಯ ಸದಸ್ಯರ

ಕ್ಷೇತ್ರವೇ ಬಹಳ effect ಆಗುವಂತಹದ್ದು ಮತ್ತು addition ಆಗುವಂತಹದ್ದು. ಮಾನ್ಯ ಸದಸ್ಯರ ಕ್ಷೇತ್ರದ ಎಂ.ಎಲ್.ಎ., ಕೆಲವರೆಲ್ಲರೂ ಹೇಳಿದ್ದಾರೆ. ಅದರ ಜೊತೆಗೆ ಶ್ರೀ ಸತೀಶ್ ರೆಡ್ಡಿ, ಶ್ರೀ ಶ್ರೀನಿವಾಸ ಹಾಗೂ ಬೆಂಗಳೂರು ದಕ್ಷಿಣ ಭಾಗದ ಎಂ.ಎಲ್.ಎ., ಆದ ಶ್ರೀ ಕೃಷ್ಣಪ್ಪರವರು ಕೂಡ ಹೇಳಿದ್ದಾರೆ. ಅವರ ಸಲಹೆಗಳನ್ನೆಲ್ಲಾ ತೆಗೆದುಕೊಳ್ಳುತ್ತೇವೆ. ಯಾವ ರೀತಿ add ಮಾಡಬೇಕೆಂದು ಮಾನ್ಯ ಸದಸ್ಯರ ಸಲಹೆಯನ್ನು ಕೂಡ ನಾನು ತೆಗೆದುಕೊಳ್ಳುತ್ತೇವೆ. ಇದು administration ಗೋಸ್ಕರ ಮಾಡಿದ್ದೇವೆ. ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಡಬೇಕೆಂದು ನಾನು ತಮಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ಕಾರ್ಪೋರೇಷನ್‌ಗೆ ಮಾಡಿದ್ದೀರಿ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸದಸ್ಯರೇ, ತಾವು ಅದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. We will discuss on that.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:- "ಖಂಡ 2 ಮತ್ತು 3 ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

## ಪ್ರಸ್ತಾವದ ಅಂಗೀಕಾರ

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಗ್ರೇಟರ್ ಬೆಂಗಳೂರು ಆಡಳಿತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:–** ಮಾನ್ಯ ಮೀನುಗಾರಿಕಾ ಸಚಿವರೇ, ತಾವು ಮಾತನಾಡಿ.

**ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷವಿರಿ ಇನ್ನೊಂದು ವಿಷಯವಿದೆ.

**ಶ್ರೀ ಮಂಕಾಳ ಎಸ್. ವೈದ್ಯ:–** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರು:–** ಮಾನ್ಯ ನವೀನ್‌ರವರೇ, ತಾವು ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಯಾವ ವಿಷಯ?

**ಸಭಾಪತಿಯವರು:–** ಮಾನ್ಯ ಸರ್ಕಾರದ ಮುಖ್ಯ ಸಚೇತಕರೇ, ಮಾನ್ಯ ಸದಸ್ಯರು ವಿಷಯವನ್ನು ಹೇಳುತ್ತಾರೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ. ನಂತರ ಇದನ್ನು ತೆಗೆದುಕೊಳ್ಳಿ. ಈಗ ತುರ್ತು ಏನಿದೆ?

**ಸಭಾಪತಿಯವರು:–** ಒಂದು ನಿಮಿಷವಿರಿ. ಅವರಿಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ತಾವು ಏತಕ್ಕೆ ಮಾತನಾಡುತ್ತೀರಾ?

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ,

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು, ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷವಿರಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಇದು ಆಗುವುದಿಲ್ಲ.

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ.

**ಶ್ರೀ ಸಲೀಂ ಅಹ್ಮದ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸದನ ಪ್ರಾರಂಭವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ನಾನು ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ದಯವಿಟ್ಟು, ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಮಾತನಾಡುವುದಕ್ಕೆ ಈಗಾಗಲೇ ಹೇಳಿದ್ದೀರಿ.

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ನವೀನ್‌ರವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ನವೀನ್‌ರವರೇ ಎರಡು ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಿ.

**೦೫ "ಚಿತ್ರದುರ್ಗದ ಅಂಬೇಡ್ಕರ್ ಹಾಸ್ಟೆಲ್‌ನಲ್ಲಿದ್ದುಕೊಂಡು ಸರ್ಕಾರಿ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯನ್ನು ಬರ್ಬರವಾಗಿ ಹತ್ಯೆಗೈದು ನಂತರ ಸುಟ್ಟು ಹಾಕಿರುವ ಕುರಿತು."**

-----

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಮೊನ್ನೆ ಸಂಜೆ ಚಿತ್ರದುರ್ಗದಲ್ಲಿ ಬಿ.ಎ. ವ್ಯಾಸಂಗ ಮಾಡುತ್ತಿದ್ದ ವರ್ಷಿತಾ ಎಂಬ 19 ವರ್ಷದ ವಿದ್ಯಾರ್ಥಿನಿ ಈಕೆ ದಲಿತ ಮಾದಿಗ ಸಮುದಾಯಕ್ಕೆ ಸೇರಿದಂತಹ ವಿದ್ಯಾರ್ಥಿನಿಯಾಗಿದ್ದು, ಆಕೆಯನ್ನು ಅಂಬೇಡ್ಕರ್ ಹಾಸ್ಟೆಲ್‌ನಿಂದ ಕರೆದುಕೊಂಡು ಹೋಗಿ ಬರ್ಬರವಾಗಿ ಹತ್ಯೆ ಮಾಡಿ, ಸುಟ್ಟು ಹಾಕಿರುವ ಘಟನೆ ಚಿತ್ರದುರ್ಗದ ಹೊರ ವಲಯದಲ್ಲಿ ನಡೆದಿದೆ. ನಿನ್ನೆ ಇಡೀ ದಿವಸ ಚಿತ್ರದುರ್ಗದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ವ್ಯಾಪಕವಾಗಿ ಪ್ರತಿಭಟನೆ ನಡೆದಿರುವಂತಹದ್ದು. ಅತ್ಯಂತ ಕಡು ಬಡತನದಿಂದ ಕೂಲಿ ಮಾಡಿಕೊಂಡು ಬಂದಂತಹ ಕುಟುಂಬ ಒಬ್ಬ ಭವ್ಯ ಭವಿಷ್ಯದ ಕನಸನ್ನು ಕಟ್ಟಿಕೊಂಡಿದ್ದಂತಹ ಆ ವಿದ್ಯಾರ್ಥಿನಿ ಸರ್ಕಾರಿ ಹಾಸ್ಟೆಲ್‌ನಲ್ಲಿದ್ದುಕೊಂಡು ಸರ್ಕಾರಿ ಕಾಲೇಜಿನಲ್ಲಿ ಓದುತ್ತಿದ್ದಳು. ಆಕೆಯನ್ನು ಮೊನ್ನೆ ಸಂಜೆ ಕರೆದುಕೊಂಡು ಹೋಗಿ ಈ ಕೃತ್ಯವೆಸಗಿದ್ದು, ಚಿತ್ರದುರ್ಗದ ಹೈವೆ ಪಕ್ಕದಲ್ಲಿರುವ ಜಾಗದಲ್ಲಿ ಅವಳ ಸಂಪೂರ್ಣವಾಗಿ ಸುಟ್ಟು ಹೋಗಿರುವ ಮೃತ ದೇಹ ಪತ್ತೆಯಾಗಿದೆ. ನಮ್ಮ ರಾಜ್ಯದಲ್ಲಿ ಈ ರೀತಿಯ ಘಟನೆಗಳು ನಡೆದಂತಹ ಸಂದರ್ಭದಲ್ಲಿ ನಿನ್ನೆ ಇಡೀ ದಿವಸ ಸಾಮಾಜಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ದಲಿತ ಸಂಘಟನೆಗಳು ಬೀದಿಗಿಳಿದು ಹೋರಾಟವನ್ನು ಮಾಡುತ್ತಿವೆ. ತಂದೆ ತಿಪ್ಪೇಸ್ವಾಮಿ, ತಾಯಿ ಜ್ಯೋತಿಯವರು ಸಂಪೂರ್ಣವಾಗಿ ಕಣ್ಣೀರು ಹಾಕುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಈ ರೀತಿಯಾಗಿ ಬರ್ಬರವಾಗಿ ಹತ್ಯೆಯಾಗಿರುವಂತಹ ವಿದ್ಯಾರ್ಥಿನಿಯ ಸಾವಿಗೆ ಯಾರು ಕಾರಣರಾಗಿದ್ದಾರೆ? ಅವರ ಮೇಲೆ ಸರ್ಕಾರ ಸಂಪೂರ್ಣವಾಗಿರುವಂತಹ ಕಠಿಣ ಕ್ರಮವನ್ನು ಜರುಗಿಸಬೇಕು. ವಿಶೇಷವಾಗಿ, ನಿನ್ನೆ ಮಹಿಳೆಯರ ಬಗ್ಗೆ ಚರ್ಚೆಯಾಗಿದ್ದು, ಮಹಿಳೆಯರಿಗೆ ಸಂಬಂಧಪಟ್ಟಂತೆ ಎರಡು ವಿಧೇಯಕಗಳನ್ನು ಚರ್ಚೆ ಮಾಡಿಕೊಟ್ಟಿದ್ದೇವೆ. ಈ ತರಹ ಘಟನೆಯಾಗಿದ್ದು, ಇಡೀ ರಾಜ್ಯ ಒಂದು ಭಯದ ವಾತಾವರಣವಾಗಿದ್ದು, ಮಕ್ಕಳನ್ನು ಓದಿಸಲು ಹಾಸ್ಟೆಲ್‌ಗೆ ಕಳುಹಿಸುವುದಕ್ಕೆ ಪೋಷಕರು ಭಯ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ವಿಶೇಷವಾಗಿ, ಎ.ಬಿ.ವಿ.ಪಿ., ನಿನ್ನೆ ದಿವಸ ಈ ಘಟನೆಗೆ ಸಂಬಂಧಿಸಿದಂತೆ, ಒಂದು ದೊಡ್ಡ ಹೋರಾಟವನ್ನು ಮಾಡಿದ್ದು, ಎಲ್ಲಾ ದಲಿತ ಸಂಘಟನೆಗಳು ಸಹ ಇದಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಹಾಗಾಗಿ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದ್ದಾರೆ. ಮಾನ್ಯ ಗೃಹ ಸಚಿವರು ಕೂಡ ಇದ್ದಾರೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಅಲ್ಲಿ ಆಗಿರುವಂತಹ ಘಟನೆಗೆ ಸಂಬಂಧಪಟ್ಟಂತೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಸಾವಿಗೆ ನ್ಯಾಯ ಕೊಡಿಸುವಂತಹದ್ದಕ್ಕೆ ಸರ್ಕಾರ ಪರಿಹಾರವನ್ನು ಘೋಷಣೆ ಮಾಡಬೇಕು. ಇನ್ನು ಮುಂದೆ ಈ ರೀತಿ

ಘಟನೆಯಾಗದಂತೆ, ಏನು ಕ್ರಮಗಳನ್ನು ಕೈಗೊಂಡಿದೆ ಎನ್ನುವುದನ್ನು ಸರ್ಕಾರ ತಿಳಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಡಾ॥ ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಯಾರು ಕೂಡ ಇಂತಹ ಘಟನೆಗಳನ್ನು ಸಹಿಸಿಕೊಳ್ಳುವುದಿಲ್ಲ ಮತ್ತು ಈ ರೀತಿ ಆಗುವುದಕ್ಕೆ ಕೂಡ ಬಿಡುವುದಿಲ್ಲ. ತಪ್ಪಿತಸ್ಥರು ಯಾರಿದ್ದಾರೆ, ಅವರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಯಾವುದೇ ಮುಲಾಜು ಇಲ್ಲದೇ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಿಗೆ ನಿರ್ದಿಷ್ಟವಾದ ಉತ್ತರದೊಂದಿಗೆ ಮಾಹಿತಿಯನ್ನು ನಾಳೆ ಕೊಡುತ್ತೇನೆ. ಆದರೆ ಒಂದು ಮಾತ್ರ ಸತ್ಯವೇನೆಂದರೆ, ಯಾರು ಈ ಘಟನೆಯಲ್ಲಿ ಭಾಗಿಯಾಗಿದ್ದಾರೆ, ಅವರನ್ನು ಮುಲಾಜು ಇಲ್ಲದೇ ಕಾನೂನು ಚೌಕಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಮತ್ತು ಸದನಕ್ಕೆ ತಿಳಿಸಬಯಸುತ್ತೇನೆ.

**ಶ್ರೀ ಎನ್ ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟವರು accept ಮಾಡಿದ್ದಾರಾ.......

**(ಗೊಂದಲ)**

**ಸಭಾಪತಿಯವರು:-** ಇದಕ್ಕೆ ಹೆಚ್ಚಿನವರು ಮಾತನಡುವಂತಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗ ಏನಾಗಿದೆ ಹೇಳಲಿ.

**(ಗೊಂದಲ)**

**ಸಭಾಪತಿಯವರು:-** ಇಲ್ಲಿ ಎಲ್ಲರೂ ಕೇಳಿ. ಮಾನ್ಯ ಗೃಹ ಸಚಿವರು ಉತ್ತರವನ್ನು ನಾಳೆ ಹೇಳುತ್ತಾರೆ. **(ಗೊಂದಲ)** ಅವರ ಮಾಹಿತಿಯನ್ನು ತೆಗೆದುಕೊಂಡು, ಸದನಕ್ಕೆ ಹೇಳುತ್ತಾರೆ. ನೀವು ಹೇಳಿದಂತೆ ಕೇಳಬೇಕಾ? ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಮತ್ತು ಒಳನಾಡು ಸಚಿವರೇ, ತಾವು ಮಾತನಾಡಿ. ಮಾನ್ಯ ಸಚಿವರೇ ಒಂದು ನಿಮಿಷವಿರಿ. ಮಾನ್ಯ ಗೃಹ ಸಚಿವರು ಮಾತನಾಡುತ್ತಾರೆ

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಇ) ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಡಾ.ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

(ಮುಂದು)

(897) 21.08.2025 12.10 TCH-MD (ಸಭಾಪತಿಯವರ ಉಪಸ್ಥಿತಿ)

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಬಿಲ್ ತರುವ ಮೂಲ ಕಾರಣವೇನೆಂದರೆ, Indian Audit and Accounts Department, Office of the Accountant General ಇವರು ನವೆಂಬರ್ 25ರಂದು ಒಂದು audit observation ಮಾಡುತ್ತಾರೆ. ಇದರಲ್ಲಿ ಅಗ್ನಿ ಉಪಕರ tax ವಿಧಿಸುವುದಕ್ಕೆ ಸರ್ಕಾರದಿಂದ ಅಧಿಸೂಚನೆ ಆಗದೇ ಇರುವ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ನೀವು tax ಹಾಕಿಲ್ಲವೆಂದು ಹೇಳುತ್ತಾರೆ. ಅದರಲ್ಲಿ ದಿನಾಂಕ 09.03.2022 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ, ನಗರಸಭೆ ಮತ್ತು ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯವರಿಗೆ ಆಸ್ತಿ ತೆರಿಗೆ ಇತ್ಯಾದಿ ತೆರಿಗೆಯೊಂದಿಗೆ ಅಗ್ನಿಶಾಮಕ ದಳದ ಕಾಯ್ದೆಯ ಪ್ರಕಾರ One percent tax ಅನ್ನು ಅಗ್ನಿ ತೆರಿಗೆಯನ್ನು ಹಾಕಬೇಕು ಮತ್ತು ಅದನ್ನು ಸರ್ಕಾರಕ್ಕೆ ಜಮಾ ಮಾಡಬೇಕೆಂದು ಪತ್ರ ಬರೆಯುತ್ತಾರೆ. ಆ ಕಾರಣಕ್ಕಾಗಿ ಈಗಾಗಲೇ ದಿನಾಂಕ 06.09.2022 ರಂದಿನ ಸಭೆಯಲ್ಲಿ ಇವರು ತೆರಿಗೆಯನ್ನು ಹಾಕಿ, ಅದನ್ನು ಸರ್ಕಾರಕ್ಕೆ ಜಮಾ ಮಾಡಬೇಕೆಂದು ದಿನಾಂಕ 25.10.2022 ರಂದು ತೀರ್ಮಾನ ಮಾಡಿ ಪತ್ರ ಬರೆಯುತ್ತಾರೆ. ಹಾಗಾಗಿ ಈ ಒಂದು ವಿಷಯವನ್ನು 2024-25ನೇ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿ ಅದನ್ನು ಘೋಷಣೆ ಕೂಡ ಮಾಡುತ್ತಾರೆ. ಆ ಕಾರಣಕ್ಕಾಗಿ 2024-25ನೇ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾವು ಇವತ್ತು ಶೇಕಡಾ ಒಂದರಷ್ಟು fire cess ಹಾಕುವುದಕ್ಕೆ ಈ ಒಂದು ಬಿಲ್ ಅನ್ನು ತೆಗೆದುಕೊಂಡು ಬಂದಿದ್ದೇವೆ. ಇದರಲ್ಲಿ ಏನೂ ಹೆಚ್ಚು ಬದಲಾವಣೆಗಳೇನೂ ಇಲ್ಲ. ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42)ರ 15ನೇ ಪ್ರಕರಣಕ್ಕೆ ಒಂದು ಸಣ್ಣ ತಿದ್ದುಪಡಿಯನ್ನು ಸೇರಿಸಿಕೊಳ್ಳುವುದಕ್ಕೆ ಪ್ರಸ್ತಾಪ ಮಾಡಿದ್ದೇನೆ. ಪರಂತು ಸದರಿ ಅಧಿನಿಯಮದ 13ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಹೊಸದಾಗಿ ನಿರ್ಮಾಣಗೊಂಡಿರುವ ಎತ್ತರವಾದ ಬಹುಮಹಡಿ ಕಟ್ಟಡಗಳ ಮೇಲೆ ಸ್ವತ್ತು ತೆರಿಗೆಯ ಶೇಕಡಾ ಒಂದರಷ್ಟು

ದರದಲ್ಲಿನ ಅಧಿಭಾರದ ಅಂದರೆ surcharge ರೂಪದಲ್ಲಿ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ ಬೆಂಕಿ ಉಪಕರವನ್ನು ವಿಧಿಸತಕ್ಕಂಥದ್ದು ಎಂದು ಒಂದು small amendment ಅನ್ನು ತಂದಿದ್ದೇವೆ. ಮಾನ್ಯ ಸದಸ್ಯರುಗಳು ಅದನ್ನು approve ಮಾಡಿಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಕರ್ನಾಟಕದ ಮಾನ್ಯ ಗೃಹ ಸಚಿವರು, ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕ 2025 ಅನ್ನು ತಂದಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನನ್ನ ಪ್ರಶ್ನೆ ಏನೆಂದರೆ high-rise buildings ಮತ್ತು ಬಹುಮಹಡಿ ಕಟ್ಟಡಗಳ ಮೇಲೆ ಸ್ವತ್ತು ತೆರಿಗೆಯ ಶೇ.1ರಷ್ಟು ದರದಲ್ಲಿನ ಅಧಿಭಾರದ surcharge ರೂಪದಲ್ಲಿ ವಿಧಿಸುವುದಕ್ಕೆ ಹೊರಟಿದ್ದಾರೆ. ಶೇ.1 tax collect ಸರ್ಕಾರಕ್ಕೆ ನಾವೇ pay ಮಾಡುವುದು. ನನ್ನ ಮೂಲಭೂತವಾದ ಪ್ರಶ್ನೆ ಇರುವುದು ಏನೆಂದರೆ, ಈ ಅಗ್ನಿಶಾಮಕ ದಳದ ಕಾರ್ಯವ್ಯಾಪ್ತಿ ಆ ಭಾಗದ ಬಹುಮಹಡಿ ಕಟ್ಟಡಗಳು ಮತ್ತು high-rise buildings ನವರಿಗೆ ರಕ್ಷಣೆ ಕೊಡುವಂಥದ್ದು ಮತ್ತು ಅಲ್ಲಿ ಏನಾದರೂ ಅವಘಡಗಳು ಸಂಭವಿಸಿದರೆ ಅವರಿಗೆ ಸಹಾಯ ಮಾಡತಕ್ಕಂಥದ್ದು. ನಾನು ನೋಡಿದಂತೆ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ನಮ್ಮ ಮಂಗಳೂರು ನಗರದಲ್ಲಿ ಒಟ್ಟು 6 ಅಗ್ನಿಶಾಮಕ ವಾಹನಗಳಿವೆ. ಆ 5 ವಾಹನಗಳು outdated ಆಗಿವೆ. ಅಂದರೆ ಅವಧಿ ಮೀರಿದ ವಾಹನಗಳನ್ನು use ಮಾಡುವಂತಿಲ್ಲ. ಇತ್ತೀಚೆಗೆ ನಮ್ಮಲ್ಲಿ ಜೋರಾಗಿ ನೆರೆ ಬಂದಿತ್ತು. ಬಹಳ ಎತ್ತರದ ಕಟ್ಟಗಳೆಲ್ಲಾ ನೆರೆ ಹಾವಳಿಗೆ ತುತ್ತಾದವು. ಅಲ್ಲಿ ಗುಡ್ಡ ಕುಸಿತಗಳಾಯಿತು, ಅದರೊಳಗಡೆ ಜನ ಸಿಕ್ಕಿಕೊಂಡರು. ಮನೆಗಳ ಕುಸಿತದಲ್ಲಿ ಜನ ಸಿಕ್ಕಿಕೊಂಡರು. ಬಹುಮಹಡಿ ಕಟ್ಟಡಗಳ ಒಳಗಡೆ ಮೊದಲನೆ ಮಹಡಿಯವರೆಗೆ ನೀರು ತುಂಬಿತ್ತು. ನಾವು ಏನು ಹೇಳಿದರೂ ಕೂಡ ಅಗ್ನಿಶಾಮಕ ಇಲಾಖೆಯವರ ಹತ್ತಿರ ಏನೂ ಉತ್ತರ ಇರಲಿಲ್ಲ. ತಾವು cess collect ಮಾಡಿ ಅವರಿಗೆ ಕೊಡುತ್ತೀರಿ. But what is the result? ಮತ್ತೆ ಅಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳು ಕೂಡ they are not with good health. ಅವರಿಗೆ ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ physical fitness ಇಲ್ಲ. ಅಲ್ಲಿಗೆ ಬೇಕಾಗಿರುವಂತಹ ಸರಿಯಾದ equipment ಇಲ್ಲ. ಅಲ್ಲಿ ಅವಘಡಗಳು ಯಾವಾಗ ಸಂಭವಿಸುತ್ತವೆ ಎಂದು ಯಾರಿಗೂ ಗೊತ್ತಿರುವುದಿಲ್ಲ. Nobody knows. ಆದರೆ ಆಗಾಗ ಅವರು ಕೆಲಸ ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಮ್ಮ ಗಮನಕ್ಕೆ ತರುವ ಅವಶ್ಯಕತೆ ಇದೆ. ಕೆ.ಡಿ.ಪಿ ಸಭೆಯಲ್ಲಿ ಚರ್ಚೆಯಾಯಿತು. ಸರ್ಕಾರ outdated vehicles ಗಳನ್ನು ಬಳಕೆ ಮಾಡಲು ಅನುಮತಿ ಕೊಡುತ್ತೀರಾ ಎಂದು ಕೇಳುತ್ತಾರೆ. ಸರ್ಕಾರದ ಪ್ರಕಾರ ಅದಕ್ಕೆ tax ಕಟ್ಟುವುದಿಲ್ಲ ಒಂದು ಮೂಲೆಯಲ್ಲಿ ನಿಲ್ಲಿಸುತ್ತಾರೆ. ನಾವು ಹೇಳುವುದು for the specific purpose ಕೊನೆಪಕ್ಷ ಅದನ್ನಾದರೂ ಉಪಯೋಗ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಹಾಗಾಗಿ, ಮಾನ್ಯ ಸಭಾಪತಿಯರೇ, ಇವರು ಶೇ.1 tax ಹಾಕಿ ಹಣ collect ಮಾಡುವುದು ಸರಿಯಿದೆ. ಆದರೆ ಅಗ್ನಿಶಾಮಕ

ದಳದಲ್ಲಿ ಇವರು ಅಮೂಲಾಗ್ರ ಬದಲಾವಣೆಯನ್ನು ತರಬೇಕಾಗುತ್ತದೆ. ನಾವು 1924 ರ ಕಾಲದಲ್ಲಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಏನು machineries and trained staff ಏನು ಇತ್ತೋ ಅದೇ ರೀತಿ ಇದೆ. ‘ಎಲ್ಲಿಯೂ ಸಲ್ಲದವನು ಅಗ್ನಿಶಾಮಕ ದಳದಲ್ಲಿ ಸಲ್ಲುವನಯ್ಯ’ ಎನ್ನುವ ರೀತಿಯಾಗಿದೆ. That is not correct. ನನ್ನ ಪ್ರಕಾರ ಅಗ್ನಿಶಾಮಕ ದಳಕ್ಕೆ you need to deploy efficient staff and officers. ಅದನ್ನು ಮಾಡುವುದು ಬಹಳ ಅವಶ್ಯಕತೆ ಇದೆ. ಯಾರೋ ಒಬ್ಬರು ಎತ್ತರದ ಕಟ್ಟದಿಂದ ಬಿದ್ದು ಸಾಯುತ್ತಾನೆ, ಬೇರೆ ಏನೇನೋ ಅವಘಡಗಳಾಗುತ್ತವೆ. ಇತ್ತೀಚೆಗೆ ನಗರಗಳಲ್ಲಿ ಕಾಲಕ್ಕೆ ಬದಲಾವಣೆಗಳಾತಕ್ಕಂಥ ವಿಚಾರಗಳು ಬೇರೆಬೇರೆ ಇರುತ್ತದೆ. ಅವರ ಹತ್ತಿರ ಎತರದ ಕಟ್ಟಡಗಳಿಗೆ ಹೋಗುವುದಕ್ಕೆ machines ಇರುವುದಿಲ್ಲ. They are asking the City Corporation. 3ನೇ ಮಹಡಿ ಅಥವಾ 5ನೇ ಮಹಡಿಗಳಿಗೆ elevated type ಇರುತ್ತದೆಯಲ್ಲಾ ಅದರಲ್ಲಿ ಕುಳಿತುಕೊಂಡು ಹೋಗಲಿಕ್ಕೆ ಆ equipment ಕೂಡ ಅವರ ಬಳಿ ಇರುವುದಿಲ್ಲ. ಹಾಗಾಗಿ, ನಾನು ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಶೀಘ್ರವಾಗಿ ಆಧುನೀಕರಣಗೊಳಿಸಬೇಕು. ನನ್ನ ಪ್ರಕಾರ tax ಹಾಕುವುದರಿಂದ ತುಂಬಾ ದುಡ್ಡು ಬರುತ್ತದೆ. ಶೇಕಡಾ 1 ರಷ್ಟು tax collect ಮಾಡುವುದರಿಂದ, with all the purchase, sale ಇದೆಲ್ಲಾ ಸೇರಿ you will get huge amount. ಆದರೆ ಅದನ್ನು ಸರಿಯಾಗಿ ಬಳಕೆ ಮಾಡಿಕೊಂಡು model equipment ಅನ್ನು ತೆಗೆದುಕೊಂಡು ಬನ್ನಿ. ನಾವು ಅಮೇರಿಕಾ ಮತ್ತು ಬೇರೆ ಬೇರೆ ದೇಶಗಳಿಗೆ ಹೋದಾಗ ಒಂದು ಬಟನ್ ಒತ್ತಿದರೆ ಸಾಕು within one-minute ನಲ್ಲಿ along with the firefighting machineries ನೊಂದಿಗೆ 105 floor ಗೆ ಹೋಗುವುದಕ್ಕೆ ಅವರಿಗೆ ಅವಕಾಶವಿದೆ. ಆದರೆ ನಮ್ಮಲ್ಲಿ ಆ ರೀತಿಯದ್ದು ಏನೂ ಇಲ್ಲವೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಡಾ: ಜಿ.ಪರಮೇಶ್ವರ:-** ಮಾನ್ಯ ಸಭಾಪತಿಯವರೇ, ನಾವು ಹೊಸದಾಗಿ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳ ಸ್ವತ್ತು ತೆರಿಗೆಯ ಮೇಲೆ ಶೇಕಡಾ ಒಂದರಷ್ಟು tax ಹಾಕಬೇಕೋ, ಬೇಡವೋ ಎಂದು ಬಿಲ್ ತಂದಿರುವುದು. Department ನ efficiency ಬಗ್ಗೆ, ಮತ್ತೆ ಅಲ್ಲಿನ staff ಕಡಿಮೆ ಇರುವುದರ ಬಗ್ಗೆ ಮುಂತಾದವುಗಳ ಬಗ್ಗೆ ಬೇರೆ ರೀತಿಯಲ್ಲಿ ಚರ್ಚೆ ಮಾಡೋಣ. ದಯಮಾಡಿ ಇದನ್ನು, let us restrict only for the tax.

**Mr. CHAIRMAN:-** Correct.

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಗೃಹ ಸಚಿವರು ಹೇಳಿದಂತೆ ಈ ಬಿಲ್‌ಗೆ ಸೀಮಿತವಾಗಿ ಕೆಲವು clarification ಮಾತ್ರ ಕೇಳುವುದಕ್ಕೆ ಬಯಸುತ್ತೇನೆ. ಬಹುಮಹಡಿಗಳ ಕಟ್ಟಡಗಳು ಎಂದರೆ ಎಷ್ಟು ಅಂತಸ್ತಿನ ಕಟ್ಟಡವೆಂದು ಹೇಳಬೇಕು ಮತ್ತು ಎಲ್ಲಿಂದ ಪ್ರಾರಂಭವಾಗುತ್ತದೆ? ವಸತಿ ಹಾಗೂ commercial buildings ಕೂಡ include ಆಗುತ್ತದೆಯೇ?

ಯಾವ್ಯಾವುದಕ್ಕೆ ಒಳಪಡುತ್ತದೆ. ಮತ್ತೆ ನಾನು ಕೇಳುವುದೇನೆಂದರೆ, ಇಡೀ ನಮ್ಮ ರಾಜ್ಯದಲ್ಲಿಯೇ ಬೆಂಗಳೂರು ನಗರದಲ್ಲಿ ಅತಿ ಹೆಚ್ಚಿನ ಬೃಹತ್ ಕಟ್ಟಡಗಳು ಇರತಕ್ಕಂಥದ್ದು. ಬೆಂಗಳೂರಿನ ನಾಗರಿಕರು ಸ್ವತ್ತುಗಳಿಗೆ ಅತಿ ಹೆಚ್ಚಿನ tax ಕಟ್ಟುತ್ತಾರೆ. Bruhat Bengaluru Mahanagara Palike ಗೆ ಮನೆಗಳ tax ಮತ್ತು ಬೇರೆ ಬೇರೆಯ tax ಕಟ್ಟುತ್ತೇವೆ. ನನ್ನ ಪ್ರಕಾರ ಇಡೀ ರಾಜ್ಯದಲ್ಲೇ ಶೇ.60 ರಷ್ಟು tax revenue generate ಆಗುವುದು ಬೆಂಗಳೂರು ನಗರದಿಂದ. ಇದರಿಂದ ಬೆಂಗಳೂರು ನಗರದವರಿಗೆ ಜಾಸ್ತಿ ಹೊರೆಯಾಗುತ್ತದೆ ಎಂಬ ಭಾವನೆ ಇದೆ. ಇದು ಮಾನ್ಯ ಸಚಿವರಿಗೆ ಬಿಟ್ಟಿದ್ದು. ಆಮೇಲೆ ಜನ ಖಾಲಿ ನಿವೇಶನಗಳಿಗೂ tax ಕಟ್ಟುತ್ತಾರೆ. User fees ಎಂದು ಕೊಡುತ್ತೇವೆ. ಅದರಿಂದಲೂ ಕೂಡ ಬೆಂಗಳೂರು ನಗರದಿಂದಲೇ ಜಾಸ್ತಿ tax ಹೋಗುತ್ತಿರತಕ್ಕಂಥದ್ದು. ಅದು ಸಾಲದು ಎಂದು ಈಗ ಸೆಸ್ ಅನ್ನು ತಂದಿದ್ದಾರೆ. ಮಾನ್ಯ ಸಚಿವರು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು fire tax ತಂದಿದ್ದಾರೆ. ಬೆಂಗಳೂರಿನಲ್ಲಿರುವಂಥ ಬಹುಮಹಡಿ ಕಟ್ಟಡಗಳ ಮಾಲೀಕರಿಗೆ tax ಎನ್ನುವುದು ಒಂದು ಬೆಂಕಿಯಾಗಿದೆ. ಇವತ್ತಿನ ದಿವಸ ಬೇರೆ ಬೇರೆ tax ಅನ್ನು ಆ ಕಟ್ಟಡಗಳ ಮೇಲೆ ಹಾಕುತ್ತಿದ್ದಾರೆ. ಇದರಿಂದ ಇವತ್ತಿನ ದಿವಸ ಜನರಿಗೆ ನಾವೇಕೆ ಕಟ್ಟಡ ಕಟ್ಟಬೇಕು ಎನ್ನತಕ್ಕಂಥ ಪರಿಸ್ಥಿತಿಯಾಗಿದೆ. ಬಹುಮಹಡಿ ಕಟ್ಟಡಗಳಿಗೆ ಕಾಲಕ್ಕೆ ತಕ್ಕಂತೆ ಅಗ್ನಿಶಾಮಕ ಇಲಾಖೆಯಲ್ಲಿ ಏನು fire protection system ಇರುತ್ತದೋ ಅವುಗಳನ್ನೆಲ್ಲಾ update ಮಾಡಿ, ಅದನ್ನು renewal ಮಾಡಿಸಬೇಕು. (ಮುಂದು)

(898)21.8.2025/12.20/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದರಾಜು (ಮುಂದು):-**

ಈಗಾಗಲೇ renewal ಅಂದರೆ ಬಹುಮಹಡಿ ಕಟ್ಟಡಗಳಿಗೆ ಕಾಲಕಾಲಕ್ಕೆ ತಕ್ಕ ಹಾಗೆ ಅದರಲ್ಲಿರುವಂತಹ fire protection system ಇರುತ್ತದೆ. ಅದನ್ನೆಲ್ಲಾ ಅಗ್ನಿಶಾಮಕ ಇಲಾಖೆಯಿಂದ update ಮಾಡಿ renewal ಮಾಡಿಸಬೇಕು. ಅದರಲ್ಲಿಯೇ ಸಾಕಷ್ಟು ಶುಲ್ಕಗಳನ್ನು ಅವರು ಸಂಗ್ರಹ ಮಾಡುತ್ತಿದ್ದಾರೆ. ಹಾಗೂ ಮಾನ್ಯ ಸದಸ್ಯರಾದ ಶರವಣರವರು ಹೇಳಿದ ಹಾಗೆ ಅದು commercial building ಇರಬಹುದು, ಬಹುಮಹಡಿ ಮತ್ತು ವಸತಿ ಸಮುಚ್ಛಯಗಳಿರಬಹುದು. ಅದರಲ್ಲಿ ಅವರದ್ದೇ ಆದಂತಹ fire protection system ಅಳವಡಿಸಿಕೊಂಡಿರುತ್ತಾರೆ. ಏಕೆಂದರೆ ಇವರು ಬರುವಂತಹ ಕಾಲಕ್ಕೆ ಅಲ್ಲಿಂದ ಅಷ್ಟು ಮೇಲಕ್ಕೆ ಹತ್ತಿ ಹೋಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆಲ್ಲಾ ನಮ್ಮಲ್ಲಿ ಈಗಾಗಲೇ ವಿಧಿವಿಧಾನಗಳನ್ನು ರೂಪಿಸಿದ್ದಾರೆ. ಅದಕ್ಕೆ ತಕ್ಕ ಹಾಗೆ ಕೊನೆಯ ಹಂತದವರೆಗೂ ಸಹ ಅಗ್ನಿಯನ್ನು ತಡೆಯುವುದಕ್ಕೆ, ಅಗ್ನಿ ಅವಘಡ ಆದಾಗ ಯಾವ ರೀತಿ ಬೆಂಕಿಯನ್ನು ಆರಿಸಬೇಕೆನ್ನುವುದಕ್ಕೆ fire protection system ಒಳಗಡೆಯೇ ಮಾಡಿರುತ್ತಾರೆ. ಈಗಾಗಲೇ ಬಹಳ surcharge ಗಳಿವೆ. ಈಗಿರುವಂತಹ surcharge ಗಳಲ್ಲಿ Library Surcharge ಎಂದು ಸಂಗ್ರಹ

ಮಾಡುತ್ತಿದ್ದಾರೆ. ಆ ಹಣವನ್ನು ಎಲ್ಲಿ ಖರ್ಚು ಮಾಡುತ್ತಿದ್ದಾರೆಂಬುದು ಗೊತ್ತಿಲ್ಲ. ಅದೇ ರೀತಿ Beggar Cess. ಅದರ ಬಗ್ಗೆ ಸಮಿತಿಯಲ್ಲಿಯೂ ವಿಚಾರಣೆ ಮಾಡಿದ್ದೇವೆ Beggar Cess ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಈಗಾಗಲೇ ಬೆಂಗಳೂರಿನಲ್ಲಿ ಕಟ್ಟಡ ಮಾಲೀಕರಿಗೆ tax liability ಅತಿ ಹೆಚ್ಚು ಇರುವುದರಿಂದ ದಯವಿಟ್ಟು ಮತ್ತೆ ಮತ್ತೆ ತೆರಿಗೆ ಹಾಕಿ ಅವರಿಗೆ ಹೊರೆ ಮಾಡಬೇಡಿ ಎಂದು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, Property Tax ಮೇಲೆ 1% surcharge ಹಾಕುತ್ತೇವೆಂದು The Karnataka Fire Force (Amendment) Bill, 2025 ತಂದಿದ್ದಾರೆ. ಇದರ ಉದ್ದೇಶ ಓ.ಕೆ.  ಆದರೆ ಸರ್ಕಾರ ಯಾವ ಯಾವ ಸೆಕ್ಟರ್ ಮೇಲೆ ಇಷ್ಟೊಂದು ತೆರಿಗೆಗಳನ್ನು ಹಾಕುತ್ತಿದೆ? ಈ ತರಹದ ಅವಘಡಗಳು ಅಪರೂಪಕ್ಕೆ ಆಗುತ್ತವೆ. ಇದನ್ನು ಸರ್ಕಾರ ಈಗ ಹೇಗೆ ನಿಭಾಯಿಸುತ್ತಿದೆ ಅದೇ ರೀತಿ ನಿಭಾಯಿಸಬೇಕು. ಈಗ ಕಟ್ಟಡ ಕಾರ್ಮಿಕರಿಗೆ ಉಪಯೋಗವಾಗುತ್ತಿದೆ, ಅಲ್ಲಿ 1 ಪರ್ಸೆಂಟ್, 2 ಪರ್ಸೆಂಟ್ ತೆರಿಗೆ ಹಾಕಿ ಸಂಗ್ರಹ ಮಾಡುತ್ತಿದ್ದಾರೆ. ಈಗ newly constructed high-rise building ಮೇಲೆ 1 ಪರ್ಸೆಂಟ್ ತೆರಿಗೆ ಏನು ಹಾಕುತ್ತಿದ್ದಾರೆ; ಈಗ ಕಸದ ಮೇಲೆ ತೆರಿಗೆ ಹಾಕಿದರು. ನೀರಿನ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಿದರು, ವಿದ್ಯುತ್ ದರ ಹೆಚ್ಚು ಮಾಡಿದರು. ಒಂದು ರೀತಿಯಲ್ಲಿ ಸರ್ಕಾರದಲ್ಲಿ ಏನಾಗಿಬಿಟ್ಟಿದೆಯೆಂದರೆ, ಬೆಲೆ ಹೆಚ್ಚಳ ಮಾಡು ತೆರಿಗೆ ಹಾಕು. ಕಂದಾಯ ಇಲಾಖೆಯಲ್ಲಿ ಯಾವುದನ್ನೂ ಬಿಟ್ಟಿಲ್ಲ ಬಿಡಿ. ಎಲ್ಲದರ ಮೇಲೂ ತೆರಿಗೆ, ಬೆಲೆ ಏರಿಕೆ; ಒಂದು ರೀತಿ ಬೆಲೆ ಏರಿಕೆ, ತೆರಿಗೆ ಹೆಚ್ಚಳದಿಂದ ಕರ್ನಾಟಕ ರಾಜ್ಯದ ಜನರ ಬೆನ್ನು ಬಾಗಿಹೋಗಿದೆ. ಈಗ ಅಗ್ನಿಶಾಮಕ ದಳವನ್ನು ನಿರ್ವಹಣೆ ಮಾಡುವುದಕ್ಕೆ ಈ ರೀತಿಯ ಅವಘಡಗಳನ್ನು ತಡೆಯುವುದಕ್ಕೆ ಮತ್ತೆ ತೆರಿಗೆ; ಕರ್ನಾಟಕದಲ್ಲಿ ಒಂದು ರೀತಿ ಟ್ಯಾಕ್ಸ್ ದಾಳಿ ನಡೆಯುತ್ತಿದೆ.  ಆದ್ದರಿಂದ ಇದು ಖಂಡಿತ ಸರಿಯಲ್ಲ. ನಾವು ನೋಡುತ್ತಿದ್ದೇವೆ, ಈ ಸರ್ಕಾರ ಯಾವುದೇ ಅವಕಾಶವನ್ನೂ ಬಿಡುತ್ತಿಲ್ಲ. ಇಲ್ಲ ಬೆಲೆ ಹೆಚ್ಚಳ ಮಾಡು, ಇಲ್ಲ ತೆರಿಗೆ ಹಾಕು. ಸರ್ಕಾರ ಯಾವುದನ್ನು ಬಿಟ್ಟಿದೆ? ಹಾಗಾಗಿ ಬೆಂಗಳೂರಿನ taxpayers ರೋಸಿ ಹೋಗಿದ್ದಾರೆ. ಆದ್ದರಿಂದ ಇದನ್ನು ಕೈಬಿಡುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಪ್ರಾಯಶಃ ನಾವು ಹಿಂದೆ fire extinguishers ಬಗ್ಗೆ ಕೂಡ ಮಾತನಾಡಿದ್ದೆವು. ರಾಜ್ಯದಲ್ಲಿ ಎಷ್ಟು fire extinguishers ಇದೆ, 15 ವರ್ಷ ದಾಟಿರುವಂತಹ fire extinguishers ಎಷ್ಟಿದೆ ಎಂದಾಗ ಮಾನ್ಯ ಗೃಹ ಮಂತ್ರಿಗಳು ನಮಗೆ ಉತ್ತರ ಕೊಟ್ಟಿದ್ದರು. ಎಲ್ಲಾ ಊರಿನಲ್ಲಿಯೂ ಶೃಂಗಾರಕ್ಕೆ fire extinguisher vehicle ಗಳು ಕಾಣುತ್ತವೆ. ಆ fire extinguisher ಗಳು 15 ವರ್ಷ ದಾಟಿದ ಕಾರಣಕ್ಕೆ ರಸ್ತೆಗೆ ಬರುವಂತಿಲ್ಲ. ಯಾವುದೇ ಅನಾಹುತವಾದರೂ ಆ ವಾಹನದಿಂದ ಅದಕ್ಕೆ ಪರಿಹಾರ ಸಿಗುವುದಿಲ್ಲ. ಆ ಕಾರಣಕ್ಕಾಗಿ ಈ ಸೆಸ್ ತರುತ್ತಿದ್ದಾರೆ ಎಂದು ನನಗೆ ಅನಿಸುತ್ತಿದೆ. ಅಂದರೆ fire extinguisher ಗಳು ಇಲ್ಲದಿರುವುದು, ಇದ್ದಂತಹ fire

extinguisher ಗಳಿಗೆ 15 ವರ್ಷ ದಾಟಿರುವ ಕಾರಣಕ್ಕೆ ಅವು ಯಾವುವೂ ಕೆಲಸ ಮಾಡುತ್ತಿಲ್ಲ. ಅಲ್ಲಿರುವ equipment ಏನೂ ಇಲ್ಲ. ನಮ್ಮ ಪ್ರಶ್ನೆಯೇನೆಂದರೆ, ರಾಜ್ಯದಲ್ಲಿ 4,10,000 ಕೋಟಿ ರೂಪಾಯಿಗಳ ಬಜೆಟ್ ಆಗುತ್ತದೆ. ಆ ಬಜೆಟ್‌ನ ಹಣ ಎಲ್ಲಿಗೆ ಹೋಗುತ್ತದೆ? ಈ ರೀತಿಯಾದಂತಹ ಅಭಿವೃದ್ಧಿ ಕಾರ್ಯಕ್ಕೆ ಹೋಗುತ್ತದೆಯೇ, ಈ ರೀತಿಯಾದ ಪರಿಹಾರಕ್ಕೆ ಹೋಗುತ್ತದೆಯೇ? ಹಿಂದೆ ನೀರಿಗೆ ತೆರಿಗೆ ಕೇಳ ಆಯಿತು, ಮಾನ್ಯ ಸಭಾನಾಯಕರು ಕೊಟ್ಟಿದ್ದರು. ನೀರಿಗೆ ಆಯಿತು, ಈಗ ಬೆಂಕಿ ಟ್ಯಾಕ್ಸ್. ಮೊದಲು ಬೆಂಕಿಗೆ ಬಂದು ಆಮೇಲೆ ನೀರಿನ ತೆರಿಗೆ ಬಂದಿದ್ದರೆ; ಕಡೆ ಪಕ್ಷ ಬೆಂಕಿ ಆರಿಸುವುದಕ್ಕಾದರೂ ನೀರು ಬೇಕು ಎಂದು ಒಪ್ಪಿಕೊಳ್ಳುತ್ತಿದ್ದೆ. ಆದರೆ ಇವತ್ತಿನ ಸ್ಥಿತಿ ಏನಾಗಿದೆಯೆಂದರೆ, ಎಲ್ಲದಕ್ಕೂ ತೆರಿಗೆ, ಸೆಸ್ ಸಂಗ್ರಹ ಮಾಡುವುದಾಗಿ ಹೇಳುವುದನ್ನು ಬಿಟ್ಟರೆ; ಇವತ್ತು ಕಟ್ಟಡಗಳನ್ನು ಕಟ್ಟುವುದು ಎಷ್ಟು ಕಷ್ಟವಾಗಿದೆ, ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಗೆ ಸೆಸ್ ಕೊಡುತ್ತೇವೆ. ಇದು Property Tax ಮೇಲೆ ಎಲ್ಲವನ್ನೂ ಕಟ್ಟುವಂಥದ್ದು. ಆದರೆ ಒಬ್ಬ entrepreneur ಹೊಸ ಕಟ್ಟಡ ಕಟ್ಟಬೇಕು, ಏನಾದರೂ ಹೊಸ ವ್ಯವಹಾರ ಮಾಡಬೇಕೆನ್ನುವುದಕ್ಕೆ ಈ ರೀತಿಯಾದ ತೆರಿಗೆ, ಸೆಸ್ ಹೆಚ್ಚಾಗುತ್ತಾ ಹೋದರೆ ಪಕ್ಕದ ರಾಜ್ಯದಲ್ಲಿ ಏನೇನಾಗುತ್ತಿದೆ ಎನ್ನುವುದನ್ನು ನಾವು ಒಂದು ಸಲ ಯೋಚನೆ ಮಾಡಬೇಕಾಗುತ್ತದೆ. ಅಲ್ಲಿ Ease of Doing Business, entrepreneurs ಗೆ ಸಿಗುತ್ತಿರುವಂತಹ ಸಹಕಾರ, ಅಲ್ಲಿನ ರಾಜ್ಯದ ಮುಖ್ಯಮಂತ್ರಿಗಳು ಯಾವ ರೀತಿ ಅಭಿವೃದ್ಧಿಗೆ ಮತ್ತು ಅಲ್ಲಿನ ಹೂಡಿಕೆಗೆ ಕರೆಯುತ್ತಿರುವಂತಹ ಹಲವಾರು manufacturers, industries. ಈ ತರಹ ಆದರೆ ತುಂಬಾ costly ಆಗುತ್ತದೆ. ನಮ್ಮ investment ಗೆ ಶೇ.50ರಷ್ಟು ತೆರಿಗೆ, ಸೆಸ್, ಇದನ್ನೆಲ್ಲಾ ಹಾಕುತ್ತಾ ಹೋದರೆ, ಶೇ.50ರಷ್ಟು ಹೂಡಿಕೆ ಇನ್ನು ಶೇ.50 ರಷ್ಟು ತೆರಿಗೆ ಹಾಕುತ್ತಾ ಹೋದರೆ ಯಾವ businessmen ಇಂತಹ ಮಹಾನಗರಪಾಲಿಕೆಗೆ ಬರುತ್ತಾರೆ? ಹಾಗಾಗಿ ಈಗ ತರುತ್ತಿರುವಂತಹ ಸೆಸ್ ಅನ್ನು ದಯಮಾಡಿ ಕಡಿಮೆ ಮಾಡಿ. ಏಕೆಂದರೆ, Property Tax ಇವತ್ತು ನಮ್ಮ ಕೈನಲ್ಲಿಲ್ಲ. ಎಲ್ಲವೂ ಆನ್‌ಲೈನ್‌ನಲ್ಲಿ ಆಗುತ್ತದೆ. ಆನ್‌ಲೈನ್‌ನಲ್ಲಿ ಆಗುವ ಕಾರಣಕ್ಕೆ building depreciation ಆಗುತ್ತಾ ತೆರಿಗೆಗಳು ಕಡಿಮೆಯಾಗಬೇಕೆಂದು ಅಂದುಕೊಳ್ಳುತ್ತೇವೆ. ಆದರೆ ಈಗ ಹಾಗಾಗುತ್ತಿಲ್ಲ. ಕಟ್ಟಡಗಳ Property Tax ಎಷ್ಟು ಕಟ್ಟುತ್ತಿದ್ದೇವೆ, ಪ್ರತಿ ವರ್ಷ ಜಾಸ್ತಿಯಾಗುತ್ತಿದೆ. ನಮ್ಮ ಆದಾಯವೇನೂ ಜಾಸ್ತಿಯಾಗುತ್ತಿಲ್ಲ. ಅದೇ ಸಂದರ್ಭದಲ್ಲಿ ಹೊಸ ಸೆಸ್ ಹಾಕಿದರೆ ಹೊಸದಾಗಿ ಕಟ್ಟಡ ಕಟ್ಟುವವರು ಯೋಚನೆ ಮಾಡುತ್ತಾರೆ. ದಯಮಾಡಿ ಸಚಿವರು ಇದನ್ನು ಇನ್ನೊಮ್ಮೆ ಪರಿಶೀಲಿಸಬೇಕು. Fire extinguishers, fire equipment ಗೆ ಬೇಕಾಗಿರುವಂತಹ ಹಣವನ್ನು ಬಜೆಟ್‌ನಲ್ಲಿ provide ಮಾಡಿ. ನಮ್ಮ ಜನರಿಗೆ ಬೇಕಾಗಿರುವುದು ಬಹಳ ಅತ್ಯಮೂಲ್ಯ. ನಮ್ಮಂತಹ ಮಲೆನಾಡು ಪ್ರದೇಶದಲ್ಲಿ ನಮ್ಮ ಪಕ್ಕದ ಅರಣ್ಯಗಳಲ್ಲಿ ಬೇಸಿಗೆ ಕಾಲದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ. ಅದನ್ನು ಆರಿಸುವಂತಹ ಯಾವುದೇ ಉಪಕರಣಗಳು, fire extinguishers ನಮ್ಮಂತಹ ಊರಿನಲ್ಲಿ ಇರದಂತಹ ಸ್ಥಿತಿಗೆ ಹೋಗುತ್ತಿದ್ದೇವೆ. ದಯಮಾಡಿ ಅದಕ್ಕೆ ಬೇಕಾದಂತಹ ಸಹಕಾರವನ್ನು ಬಜೆಟ್ ಮುಖಾಂತರ ತೆಗೆದುಕೊಳ್ಳಿ ಎಂದು ಸಚಿವರ ಮುಖಾಂತರ ಮನವಿ ಮಾಡುತ್ತಿದ್ದೇನೆ.

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ಮಾನ್ಯ ಗೃಹ ಸಚಿವರು ಬಿಲ್ ಮಂಡಿಸಿದ್ದಾರೆ. ಆದರೆ ಬಹುಮಹಡಿ ಕಟ್ಟಡ ಎಂದು ಹೇಳಿದಾಗ ಇದರಲ್ಲಿ ಶಾಲಾ ಕಟ್ಟಡಗಳಿಗೆ exemption ಬಗ್ಗೆ ಮಾತನಾಡಿಲ್ಲ. ಏಕೆಂದರೆ, ಇವತ್ತು ಶಾಲಾ ಕಟ್ಟಡಗಳಿಗೆ ಆಗಬಹುದು, industry ಗಳಿಗಾಗಬಹುದು ಇದನ್ನು ಮಾಡುವಂತಹ ಸಂದರ್ಭದಲ್ಲಿ ಬಹಳ ಹೊಡೆತ ಬೀಳುತ್ತಿದೆ. ಮೊದಲು 9 ಮೀಟರ್, 11 ಮೀಟರ್ ತಂದಿರಿ, ಈಗ 21 ಮೀಟರ್ ವರೆಗೆ ತಾವು ತಂದಿದ್ದೀರಿ. ತಂದರೂ ಕೂಡ ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ Karnataka State Fire and Emergency Services Department ನಿಂದ NOC ಪಡೆಯುವುದು ಬಹಳ ತೊಂದರೆಯಾಗುತ್ತಿದೆ. ಒಂದು ವೇಳೆ ಬಿಲ್ ಪಾಸ್ ಆದರೆ ತಾವು ದಯಮಾಡಿ ಶಾಲಾ ಕಟ್ಟಡಗಳ ಬಗ್ಗೆ ಉಲ್ಲೇಖ ಮಾಡಬೇಕು. ಏಕೆಂದರೆ, ಶಾಲಾ ಕಟ್ಟಡಗಳ ಮೇಲೆ ಜಾಸ್ತಿ ಹೊರೆ ಬೀಳುತ್ತದೆ. ಇವತ್ತು ತಮಗೆ ಗೊತ್ತಿದೆ. ವಿದ್ಯಾರ್ಥಿಗಳಿಂದ ನಾವು ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ತೆಗೆದುಕೊಳ್ಳಬೇಕೆಂದರೆ, ಕೊನೆ ಪಕ್ಷ 10 ರಿಂದ 15 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಏಕೆಂದರೆ, ಪೈಪ್, ಅದಕ್ಕೆ connections ಅವನ್ನೆಲ್ಲಾ ಮಾಡಬೇಕಾದರೆ ಖರ್ಚಾಗುತ್ತದೆ. ಇದರ ಜೊತೆಗೆ ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, 21 ಮೀಟರ್ ಕಟ್ಟಡಗಳಿಗೆ, ಶಾಲಾ ಕಟ್ಟಡಗಳಿಗೆ ಎನ್.ಓ.ಸಿ. ಕೊಡುವಂತಹ ಸಂದರ್ಭದಲ್ಲಿ 3-4 ಕಡೆ setback ಬಿಡಬೇಕೆಂದು ತಾವು ಷರತ್ತು ಹಾಕಿದ್ದೀರಿ. ಅದನ್ನು ಸ್ವಲ್ಪ exemption ಮಾಡಿಕೊಟ್ಟರೆ ಒಳ್ಳೆಯದು ಎಂಬ ಮಾತನ್ನು ಹೇಳುತ್ತೇನೆ. ಆದರೆ ಶಾಲೆಗಳಿಗೆ exemption ಕೊಟ್ಟರೆ ಬಹಳ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

(ಮುಂದು)

(899) 21.08.2025 12.30 ಹೆಚ್‌ವಿ.ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ|| ಜಿ.ಪರಮೇಶ್ವರ್(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕಳೆದ 38 ವರ್ಷಗಳಿಂದ ನಾನು ರಾಜಕಾರಣದಲ್ಲಿದ್ದೇನೆ. ಪ್ರತಿ ಬಾರಿ ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ನಾನು ಸಚಿವನಾಗಿದ್ದೇನೆ. ನಾನು ಈ ಸದನಕ್ಕೆ ಬಂದಾಗ, "ವಿರೋಧ ಪಕ್ಷದಲ್ಲಿರುವವರು ಬಹಳ ಬುದ್ಧಿವಂತರು" ಎನ್ನುವ ಒಂದು ಪರಿಕಲ್ಪನೆ ಇತ್ತು. ಈ ಸದನದಲ್ಲಿ ಇರುವವರೆಲ್ಲ ಬುದ್ಧಿವಂತರೇ ಏಕೆಂದರೆ, House of Elders, House of Intelligent People, ಈ ರೀತಿಯಾಗಿರುವ ವ್ಯಾಖ್ಯಾನಗಳನ್ನು ನಾನು ಕೇಳಿದ್ದೇನೆ. ನಮ್ಮ ತಂದೆಯವರು ಸಹ 1952ರಲ್ಲಿ ಈ ಸದನದ ಸದಸ್ಯರಾಗಿದ್ದರು.

ಸನ್ಮಾನ್ಯ ಸಭಾಪತಿಯವರೇ, ಒಂದು ಸಣ್ಣ ತಿದ್ದುಪಡಿಗಾಗಿ ಈ ವಿಧೇಯಕವನ್ನು ತರಲಾಗಿದೆ. ತೆರಿಗೆಯ ಬಗ್ಗೆ ಮಾನ್ಯ ಎನ್.ರವಿಕುಮಾರ್‌ರವರು ಮಾತನಾಡುತ್ತಾ, "ಕರ್ನಾಟಕ ರಾಜ್ಯ ಅತಿ ಹೆಚ್ಚು ತೆರಿಗೆಯನ್ನು ವಿಧಿಸುವ

ರಾಜ್ಯ, ಇದರಿಂದ ಬಹಳ ತೊಂದರೆಯಾಗುತ್ತದೆ" ಎನ್ನುವ ಮಾತನ್ನು ಹೇಳಿದ್ದಾರೆ. India is probably one of the very few countries which has the highest GST. ಜಿ.ಎಸ್.ಟಿ., ಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಏಕರೂಪದ ಜಿ.ಎಸ್.ಟಿ., ಪದ್ಧತಿಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರದಲ್ಲಿ ಚರ್ಚೆ ನಡೆದಿತ್ತು. ಕೇಂದ್ರ ಸರ್ಕಾರದವರು ಯಾವ ಆಧಾರದ ಮೇಲೆ fragmented GST ಯನ್ನು, different layered ಜಿ.ಎಸ್.ಟಿ.,ಯನ್ನು ಮಾಡಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಕನಿಷ್ಠ ಶೇಕಡಾ 5 ರಿಂದ ಗರಿಷ್ಠ ಶೇಕಡಾ 42ರವರೆಗೆ ಸ್ಲ್ಯಾಬ್ ಅನ್ನು ಮಾಡಿ ಜಿ.ಎಸ್.ಟಿ., ಅನ್ನು ನಿಗದಿ ಮಾಡಿದ್ದಾರೆ.

ಮೊನ್ನೆ ತಾನೇ ಮಾನ್ಯ ಪ್ರಧಾನಮಂತ್ರಿಗಳು ಮತ್ತು ಮಾನ್ಯ ಹಣಕಾಸು ಸಚಿವರು ಈ ಸ್ಲ್ಯಾಬ್‌ಅನ್ನು ಬದಲಾಯಿಸಿ ಗರಿಷ್ಠ ಶೇಕಡಾ 42 ಎಂದು ಇರುವುದನ್ನು ಶೇಕಡಾ 28ಕ್ಕೆ ಇಳಿಸಿದ್ದಾರೆ. ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಕೆಲವು ಉತ್ಪನ್ನಗಳ ಮೇಲೆ ಕನಿಷ್ಠ ಶೇಕಡಾ 5 ರಿಂದ 18 ಎಂದು ಮಾಡಿರುವುದು ಮತ್ತು ಗರಿಷ್ಠ ಶೇಕಡಾ 28 ಎಂದು ಮಾಡಿರುವುದು ಬೇರೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ನಾವು ಹೋಲಿಕೆ ಮಾಡಿ, ಅಲ್ಲಿ ಯಾವ ರೀತಿಯಲ್ಲಿ ಜಿ.ಎಸ್.ಟಿ.,ಯನ್ನು ವಿಧಿಸುತ್ತಾರೆ ಎನ್ನುವುದನ್ನು ನೋಡಿದಾಗ, India is probably one of the very few countries which has the highest GST. ನಾವು ಇದನ್ನು ಬ್ಯಾಲೆನ್ಸ್ ಮಾಡದೇ ಹೋದರೆ, ಹಣಕಾಸಿನ ವಿಚಾರದಲ್ಲಿ ನಾವು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ, ನಡೆದುಕೊಳ್ಳಬೇಕಾಗುತ್ತದೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ದಿನ ಈ ಸದನದಲ್ಲಿ ಉಪಸ್ಥಿತರಿದ್ದಾರೆ. He is probably the only Chief Minister or maybe one of the few Chief Ministers, who has presented sixteen budgets. 16 ಆಯವ್ಯಯಗಳನ್ನು ಮಂಡಿಸಿದಂತಹ ಸಂದರ್ಭದಲ್ಲಿ....

**ಶ್ರೀ ಕೇಶವ ಪ್ರಸಾದ್ ಎಸ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು 16 ಆಯವ್ಯಯಗಳನ್ನು ಮಂಡಿಸಿದ್ದಾರೆಂದು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರೇ, ಮಾನ್ಯ ಕೇಶವ ಪ್ರಸಾದ್‌ರವರ ಅಭಿಮಾನದ ಬಗ್ಗೆ ತಮಗೆ ಸ್ವಲ್ಪ ಕಾಳಜಿ ಇರಲಿ.

**ಡಾ॥ ಜಿ.ಪರಮೇಶ್ವರ್:-** ಸನ್ಮಾನ್ಯ ಸಭಾಪತಿಯವರೇ, ಅವರು ಬಹಳ ಒಳ್ಳೆಯವರು. ನಾನು ಅದರ ಬಗ್ಗೆ categorization ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರಾಗಿ, ಈ ರಾಜ್ಯದ ಹಣಕಾಸಿನ ಸ್ಥಿತಿ ಆರೋಗ್ಯಕರವಾಗಿರಬೇಕೇ, ಬೇಡವೇ ಎನ್ನುವುದು ಅವರಿಗೆ ಗೊತ್ತಿದೆ. ಅನೇಕ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿದರೆ, ಕರ್ನಾಟಕ ರಾಜ್ಯದ ಹಣಕಾಸಿನ ಸ್ಥಿತಿಗತಿ ಬಹಳ ಆರೋಗ್ಯಕರವಾಗಿದೆಯೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಮಾನ್ಯ ಸಿ.ಎನ್.ಮಂಜೇಗೌಡರು ಮಾತನಾಡುತ್ತಾ, ಬೆಂಕಿ ಉಪಕರಗಳನ್ನು ಶಾಲೆಗಳಿಗೂ ವಿಧಿಸಲಾಗುತ್ತದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ವಿಧೇಯಕದಲ್ಲಿ ಈಗಾಗಲೇ ತಿಳಿಸಿರುವಂತೆ ಹೊಸದಾಗಿ ನಿರ್ಮಾಣಗೊಂಡಿರುವ ಬಹುಮಹಡಿ ಕಟ್ಟಡಗಳ(ಎತ್ತರವಾದ ಕಟ್ಟಡಗಳ) ಮೇಲೆ ಬೆಂಕಿ ಉಪ ಕರವನ್ನು ವಿಧಿಸಲಾಗುತ್ತದೆ. ಮಾನ್ಯ ಸದಸ್ಯರು ಈ ವಿಧೇಯಕವನ್ನು ಓದಬೇಕೆನ್ನುವುದು ನನ್ನ ಮನವಿಯಾಗಿದೆ. ಮಾನ್ಯ ಟಿ.ಎ.ಶರವಣನವರು ಕಟ್ಟಡದ ಎತ್ತರದ ಬಗ್ಗೆ ಕೇಳಿದ್ದಾರೆ. ಬಹು ಮಹಡಿ ಕಟ್ಟಡ ಎಂದರೆ, 21 ಮೀಟರ್‌ಗೂ ಹೆಚ್ಚಿಗೆ ಎತ್ತರವಿರುವ ಕಟ್ಟಡಗಳಿಗೆ ಈ ಬೆಂಕಿ ಉಪಕರವನ್ನು ವಿಧಿಸಲಾಗುತ್ತದೆ. ಶಾಲೆಗಳಿಗೆ ಬೇರೆ ಇದೆ, ಕೆಲವಕ್ಕೆ ರಿಯಾಯಿತಿ ಇದೆ. 21 ಮೀಟರ್‌ಗೂ ಹೆಚ್ಚಿಗೆ ವಸತಿ ಮನೆಗಳನ್ನು ಕಟ್ಟಿದರೆ ಅದಕ್ಕೂ ಇದು ಅನ್ವಯವಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ಅಪಾರ್ಟ್‌ಮೆಂಟ್‌ಗಳನ್ನು ಸುಮಾರು 50 ಅಂತಸ್ತು ಕಟ್ಟುತ್ತಾರೆ. ಆದ್ದರಿಂದ ಇವರಿಗೆ ತೆರಿಗೆಯನ್ನು ಹಾಕಲೇಬೇಕಾಗುತ್ತದೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಶಾಲೆಗಳಿಗೆ ಏನು ಮಾಡುತ್ತಾರೆ?

**ಡಾ॥ ಜಿ.ಪರಮೇಶ್ವರ್:-** ಸನ್ಮಾನ್ಯ ಸಭಾಪತಿಯವರೇ, ಶಾಲೆಗಳಿಗೆ ಬೇರೆಯೇ ನಿಯಮಗಳಿವೆ. ಶಾಲೆಗಳಿಗೆ ಮತ್ತು ಆಸ್ಪತ್ರೆಗಳಿಗೆ ಯಾವ ರೀತಿಯಲ್ಲಿ ಅಗ್ನಿಶಾಮಕ ಇಲಾಖೆಯಿಂದ ತೆರಿಗೆಯನ್ನು ವಿಧಿಸಬೇಕು ಎನ್ನುವುದರ ಬಗ್ಗೆ ನಿನ್ನೆ ತಾನೇ ನಾನು ಒಂದು ಮೀಟಿಂಗ್ ಮಾಡಿ, ಚರ್ಚೆ ಮಾಡಿದ್ದೇವೆ. ಅದಕ್ಕೆ ಕೊಡಬೇಕಾಗಿರುವ ರಿಯಾಯಿತಿಗಳ ಬಗ್ಗೆಯೂ ಶಾಲಾ ಆಡಳಿತ ಮಂಡಳಿಯವರು ಕೇಳಿಕೊಂಡಿದ್ದಾರೆ. ಈ ತೆರಿಗೆಯನ್ನು ರಾಜ್ಯ ಸರ್ಕಾರ ತಾನಾಗಿಯೇ ವಿಧಿಸಿಲ್ಲ. ನಾನು ಮೊದಲೇ ಹೇಳಿದಂತೆ, ಕೇಂದ್ರ ಸರ್ಕಾರದ ಒಂದು ಅಂಗವಾಗಿರುವ Indian Audit and Accounts Department ಇವರು 2022ರಲ್ಲಿ ಒಂದು ಪತ್ರವನ್ನು ಬರೆದು audit observation ಮಾಡುತ್ತಾರೆ. 2022ನೇ ಇಸವಿಯಲ್ಲಿ ಯಾರ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು ಎನ್ನುವುದು ತಮ್ಮೆಲ್ಲರಿಗೂ ತಿಳಿದಿರುವ ವಿಚಾರ. ಆಗ ಅಧಿಕಾರದಲ್ಲಿದ್ದ ಸರ್ಕಾರ "ಹೌದು ಈ ತೆರಿಗೆಯನ್ನು ವಿಧಿಸಬೇಕು" ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಅವರು ದಿನಾಂಕ:09.03.2022ರಲ್ಲಿ ಒಂದು ಪತ್ರವನ್ನು ಬರೆಯುತ್ತಾರೆ, ಆಗ ರಾಜ್ಯ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ದಿನಾಂಕ:22.02.2005ರಲ್ಲಿ ಒಂದು ಪತ್ರವನ್ನು ಬರೆಯುತ್ತಾರೆ. ಆಗಲೂ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಪುನಃ ದಿನಾಂಕ:25.10.2022ರಲ್ಲಿ ಪತ್ರ ಬರೆಯುತ್ತಾರೆ, ನಂತರ ದಿನಾಂಕ: 22.05.2024ರಲ್ಲಿ ಮತ್ತೊಂದು ಪತ್ರವನ್ನು ಬರೆಯುತ್ತಾರೆ, ದಿನಾಂಕ: 20.06.2024ರಲ್ಲಿ ಇನ್ನೊಂದು ಪತ್ರ ಬರೆಯುತ್ತಾರೆ. ದಿನಾಂಕ:28.06.2024ರಲ್ಲಿ ಮತ್ತೊಂದು ಪತ್ರವನ್ನು ಬರೆಯುತ್ತಾರೆ. ಹೀಗೆ ಸುಮಾರು 5-6 ಬಾರಿ ಪತ್ರಗಳನ್ನು ಬರೆದರೂ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ಅದಕ್ಕಾಗಿ ನಾವು ಈ ವಿಧೇಯಕವನ್ನು ತಂದಿದ್ದೇವೆ. ಇದರಿಂದ ಹೆಚ್ಚು ಹಣ ಬರುತ್ತದೆ ಎನ್ನುವ ವಿಚಾರ ಇಲ್ಲ. ತೆರಿಗೆಯನ್ನು ಏತಕ್ಕೋಸ್ಕರ ನೀವು ಹಾಕಿಲ್ಲ ಎಂದು ಸಿ.ಎ.ಜಿ.,ಯವರು ಮಾಡಿದ observation ಮೇಲೆ ನಾವು ಈ ವಿಧೇಯಕವನ್ನು ತರುತ್ತಿದ್ದೇವೆ.

ಮಾನ್ಯ ಐವನ್ ಡಿ'ಸೋಜಾರವರು ಸ್ವಲ್ಪ ಮಟ್ಟಿಗೆ track ಬಿಟ್ಟು ಮಾತನಾಡಿದರೆ, ಅವರು ಯಾವಾಗಲೂ ಸ್ವಲ್ಪ track ಬಿಡುತ್ತಾರೆಂದು ಮಾನ್ಯ ಎಂ.ಆರ್.ಸೀತರಾಂ ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಗ್ನಿಶಾಮಕ ಇಲಾಖೆ ಬಹಳ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಅವರು ಇದಕ್ಕೆ ವಿರುದ್ಧವಾಗಿ ಹೇಳಿದ್ದಾರೆ. ಅದು ಸರಿಯಾದುದ್ದಲ್ಲ. ಮೊನ್ನೆ ತಾನೆ ಬೆಂಗಳೂರಿನ ತರಗುಪೇಟೆಯಲ್ಲಿ ಒಂದು ಅಂಗಡಿಗೆ ಬೆಂಕಿ ಬಿದ್ದು, 5 ಜನರು ಮೃತ ಹೊಂದಿದರು. ನಾನು ಆ ಸ್ಥಳಕ್ಕೆ ಹೋಗಿದ್ದೆ. ಮಹಾನಗರ ಪಾಲಿಕೆಯವರು ಟ್ರೇಡ್ ಲೈಸನ್ಸ್ ಕೊಡುವಾಗ ಏನೆಲ್ಲ ತಪ್ಪುಗಳನ್ನು ಮಾಡುತ್ತಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ. 30 x 40 ವಿಸ್ತೀರ್ಣದಲ್ಲಿ 8 ಅಂತಸ್ತಿನ ಮಹಡಿಯನ್ನು ಕಟ್ಟಿರುತ್ತಾರೆ. ಅದಕ್ಕೆ ಒಂದೇ ಪ್ರವೇಶದ್ವಾರವಿರುತ್ತದೆ. ಅದಕ್ಕೆ ಬಾಗಿಲು ಬಿಟ್ಟರೆ ಬೇರೇನೂ ಇರುವುದಿಲ್ಲ. ಸೆಟ್‌ಬ್ಯಾಕ್ ಅನ್ನು ಕೇಳುವಂತೆಯೇ ಇಲ್ಲ. ಈ ವಿನ್ಯಾಸದಲ್ಲಿ ಆ ಕಟ್ಟಡವನ್ನು ಕಟ್ಟಿದ್ದಾರೆ. ಬೆಂಕಿ ಬಿದ್ದರೆ ಎಲ್ಲಿ ಹೋಗಬೇಕು? ಕೊನೆ ಅಂತಸ್ತಿನಲ್ಲಿ ಕುಟುಂಬ ವಾಸವಾಗಿತ್ತು. ಆ ಕಟ್ಟಡದ ಮಾಲೀಕ ತನ್ನ ಕುಟುಂಬವನ್ನು ಕೊನೆಯ ಅಂತಸ್ತಿನಲ್ಲಿ ಬಿಟ್ಟು ಅದಕ್ಕೆ ಬೀಗ ಹಾಕಿಕೊಂಡು ಕೆಳಗೆ ಬಂದು ಮಲಗಿಕೊಂಡಿದ್ದಾನೆ. ಆತ ಇರುವ ಜಾಗಕ್ಕೆ ಬೆಂಕಿ ಬಿದ್ದು ಆತನಿಗೆ ಉಸಿರುಗಟ್ಟಿದೆ. ಆತ ಸತ್ತೂ ಹೋದ. ಆದರೆ, ಮೇಲಿನ ಅಂತಸ್ತಿನಲ್ಲಿದ್ದ ಆ ಕುಟುಂಬ ಹೊರಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ, ಅದಕ್ಕೆ ಬೀಗ ಹಾಕಿತ್ತು. ಕಿಟಕಿಗಳು ಇರಲಿಲ್ಲ, ಬೇರೆ ಯಾವುದೇ ಮಾರ್ಗಗಳು ಇರಲಿಲ್ಲ. ಆತನ ಪತ್ನಿ ಮತ್ತು ಮಕ್ಕಳು ಮೃತ ಹೊಂದಿದರು. ಇಂತಹ ಸಂದರ್ಭದಲ್ಲಿ ಸತತ 15 ಗಂಟೆಗಳ ಕಾಲ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸಲು ಕಾರ್ಯನಿರ್ವಹಿಸಿದ್ದರು. ಅಗ್ನಿ ಶಾಮಕದಳದವರು ತಮ್ಮ ಜೀವನವನ್ನೂ ಒತ್ತೆ ಇಟ್ಟು ಕೆಲಸ ಮಾಡುದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ಪ್ರವಾಹ ಬಂದಾಗ ಅಥವಾ ಅಗ್ನಿ ದುರಂತಗಳು ನಡೆದಾಗ ಅಗ್ನಿಶಾಮಕ ದಳದವರು ಬಹಳ ಉತ್ತಮವಾದ ರೀತಿಯಲ್ಲಿ ಕೆಲಸವನ್ನು ಮಾಡುತ್ತಾರೆಂದು ನಾನು ಈ ಸದನದ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.(ಮುಂದು)

(900) 21.8.2025 12.40 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಡಾ: ಜಿ.ಪರಮೇಶ್ವರ್ (ಮುಂದು)**

ಮಾನ್ಯ ಅರುಣ್‌ರವರು ವೆಹಿಕಲ್ ಬಗ್ಗೆ ಹೇಳಿದರು. ನಮ್ಮ ವೆಹಿಕಲ್‌ಗಳು ಬಹಳ ಚೆನ್ನಾಗಿವೆ. ಕೆಲವೆಲ್ಲಾ ಉಪಯೋಗವೇ ಆಗಿಲ್ಲ. Very sparingly used. ಆದರೆ ಕೇಂದ್ರ ಸರ್ಕಾರ, 15 ವರ್ಷದ ನಂತರದ ವಾಹನಗಳನ್ನು discard ಮಾಡಬೇಕು ಎಂದು ಆದೇಶ ಮಾಡಿದೆ. ಸರ್ಕಾರದಲ್ಲಿ ಸಾವಿರಾರು ವೆಹಿಕಲ್‌ಗಳು ಎಫೆಕ್ಟಿವ್ ಆಗಿದ್ದರೂ ಕೂಡ, good condition and fitness certificate ಇದ್ದರೂ ಸಹ ನಾವು ಅದನ್ನು ಓಡಿಸುವ ಹಾಗಿಲ್ಲ. ವಿಶೇಷವಾಗಿ ಪೋಲೀಸ್ ಇಲಾಖೆಗೆ ಆ ಸಮಸ್ಯೆ ಬಂದಿದೆ. ಫೈರ್ ಡಿಪಾರ್ಟ್‌ಮೆಂಟ್ ಇರಬಹುದಾದ ವಾಹನಗಳನ್ನು ವರ್ಷಕ್ಕೆ ಎಷ್ಟು ಸಲ ಬಳಸುತ್ತಾರೆ ಎನ್ನುವುದು ತಮಗೆ ಗೊತ್ತಿದೆ. ಡ್ರಿಲ್ ಮಾಡುವಾಗ ಹೊರಗಡೆ ತೆಗೆದು ಓಡಾಡಿಸಿ ಮತ್ತೆ ಒಳಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತಾರೆ. ನಾವು ಇಂಥದ್ದಕ್ಕೆ

ವಿನಾಯಿತಿ ಕೊಡಿ ಎಂದು ಕೇಂದ್ರಕ್ಕೆ ಪತ್ರ ಬರೆದೆವು. This is a different department. Fire Department sparingly used. ಇಷ್ಟು ಕಿಲೋ ಮೀಟರ್ ಓಡಿರಬೇಕು ಎಂದು ಕಂಡೀಷನ್ ಹಾಕಿ, ಅನ್ವಯಿಸದಿರುವುದಕ್ಕೆ ವಿನಾಯಿತಿ ಕೊಡಿ ಎಂದು ಪತ್ರ ಬರೆದೆವು. ಅದಕ್ಕೆ ನೆಗೆಟಿವ್ ರಿಪ್ಲೆ ಬಂತು. ನೋಡಿದರೆ ಹೊಸ ವೆಹಿಕಲ್ ತರಹ ಇದೆ. ಸುಮಾರು ಒಂದು ಸಾವಿರ ಕಿ.ಮಿ. ಓಡಿರಬಹುದು. ಆ ವೆಹಿಕಲ್‌ಗಳು ಕಂಡೀಷನ್‌ನಲ್ಲೇ ಇವೆ. ಆದರೆ, ಅದಕ್ಕೆ ಅನುಮತಿ ಇಲ್ಲ. ಹಾಗಾಗಿ ನಮಗೆ ತೊಂದರೆಯಾಗಿದೆ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ವೆಹಿಕಲ್ ಪರ್ಚೇಸ್ ಮಾಡುವುದಕ್ಕೆ ಒಂದಷ್ಟು ಹಣವನ್ನು ಕೊಟ್ಟಿದ್ದಾರೆ. ನಾವು ಅಂತಹ ವಾಹನಗಳನ್ನು ಷೋ-ರೂಮ್‌ನಿಂದ ತೆಗೆದುಕೊಂಡು ಬಂದು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ alterations ಮಾಡಿಸಬೇಕು. Water tanks, jets ಹಾಕಬೇಕಾಗುತ್ತದೆ. ಆ ವೆಹಿಕಲ್‌ಗಳ ಬಗ್ಗೆ ಈಗಾಗಲೇ ನಾವು ಗಮನಹರಿಸಿದ್ದೇವೆ. ಸ್ವಲ್ಪ ದಿವಸದಲ್ಲಿ ನಮಗೆ ಎಲ್ಲಾ ಕಡೆ ವೆಹಿಕಲ್‌ಗಳು ಸಿಗುತ್ತವೆ. ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿ ಫೈರ್ ಸ್ಟೇಷನ್‌ಗಳು compulsory ಯಾಗಿ ಆಗಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಂಡಿದ್ದಾರೆ, in principle, I have agreed. ಅದೂ ಕೂಡ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸರ್ಕಾರವೇ ಹೆಚ್ಚು ತೆರಿಗೆ ಸಂಗ್ರಹ ಮಾಡುತ್ತಿದೆ ಎನ್ನುವ ಭಾವನೆ ಬೇಡ. ಕೇಂದ್ರ ಸರ್ಕಾರದ Indian Audit and Account Department ನ ಅನ್ವಯ, ಅವರ observations ಮೇಲೆ ಈ ವಿಧೇಯಕವನ್ನು ತಂದಿದ್ದೇವೆ. ದಯವಿಟ್ಟು ಇದನ್ನ ಪಾಸ್ ಮಾಡಿಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರು high-rise buildings, 21 meters ಮೇಲಿರುವುದಕ್ಕೆ ಸೆಸ್ ಹಾಕುತ್ತಿದ್ದೇವೆ ಎಂದು ಹೇಳಿದರು. ಅದು ಕೂಡ ಕೇಂದ್ರದ Indian Audit and Account Department ನಿಂದ ಬಂದಿದೆ ಎನ್ನುವುದು ತಮಗೆ ಗೊತ್ತಿದೆ. High-rise building ಅನ್ನು ನಿರ್ಮಾಣ ಮಾಡಬೇಕಾದರೆ 100% fire compliance ಆಗಿ ಕಟ್ಟುತ್ತಾರೆ. ಅವರಿಗೆ ಎನ್‌ಓಸಿ ಇಲ್ಲದೇ, Fire Safety Certification ಇಲ್ಲದೇ ಅವರು ಏನನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ನೀವು, ಯಾರು fire compliance ಪಡೆದುಕೊಂಡಿರುತ್ತಾರೋ ಅವನ ಮೇಲೆ 1% ಸೆಸ್ ಹಾಕುತ್ತಿದ್ದೀರಿ. ಯಾರು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ, ಅವರ ಕಟ್ಟಡ ಅಥವಾ ಅವರ ಆಸ್ತಿಗೆ ಸಂಬಂಧಪಟ್ಟಂತೆ ಅಗ್ನಿ ದುರಂತ ತಡೆಯುವ ವ್ಯವಸ್ಥೆಯನ್ನು ಮಾಡಿರುವುದಿಲ್ಲವೋ ಅಂಥವರಿಗೆ ನೀವು ಏನೂ ಮಾಡುತ್ತಿಲ್ಲ. ವಿಧಾನಸೌಧ 21 ಮೀಟರ್‌ಗಿಂತ ಜಾಸ್ತಿ ಇದೆ. ನೀವು ಸರ್ಕಾರಿ ಕಟ್ಟಡಗಳಿಗೆ ವಿನಾಯಿತಿ ಕೊಡುತ್ತಿದ್ದೀರಿ. 2016ರ ಮಾರ್ಚ್ 23ನೇ ದಿನಾಂಕದಂದು ವಿಧಾನಸೌಧದ ರೂಮ್ ನಂಬರ್ 363ರಲ್ಲಿ ಬೆಂಕಿ ಕಾಣಿಸಿಕೊಂಡಿತು. ತಕ್ಷಣಕ್ಕೆ ಶಮನ ಮಾಡಿದರು. ಅಂದರೆ, ವಿಧಾನಸೌಧಕ್ಕೆ Fire NOC ಇಲ್ಲ. Is Vidhana Soudha Fire Compliant? whether Vidhana Soudha has got all fire exemptions.

ನಾವೇನು ಬೇರೆ ಕಟ್ಟಡಗಳಿಗೆ fire compliance ಮಾಡುತ್ತೇವೆ ಆದರೆ ಶಕ್ತಿಕೇಂದ್ರವಾದ ವಿಧಾನಸೌಧಕ್ಕೆಯೇ ಇಲ್ಲ. ನೀವು, ಎಮ್ಮೆಗೆ ಜ್ವರ ಬಂದರೆ ಎತ್ತಿಗೆ ಬರೆ ಹಾಕುವ ಹಾಗೆ ಮಾಡುತ್ತಿದ್ದೀರಿ. ಯಾರು high-rise building ಕಟ್ಟಿ fire compliance ಮಾಡಿ ಕೋಟ್ಯಾಂತರ ಫೀ ಕಟ್ಟಿ ಲೈಸೆನ್ಸ್ ಪಡೆದುಕೊಂಡಿರುತ್ತಾರೋ ಅವರ ಮೇಲೆ 1% ಸೆಸ್ ಹಾಕುತ್ತಿದ್ದೀರಿ. ತೆರಿಗೆ ಕಟ್ಟುವವರಿಗೆ, ಆಫೀಸ್ ನಡೆಸುವವರಿಗೆ ತೆರಿಗೆ ಹಾಕುತ್ತಿದ್ದೀರಿ. They are hundred percent fire compliant. Because your department enforces fire compliant on them. Whereas public buildings… ಲಕ್ಷಾಂತರ ಜನ ಓಡಾಡುವ ಕಡೆಗೆ exempt ಮಾಡಿದ್ದೀರಿ. Electrification ಸರಿ ಇರುವುದಿಲ್ಲವೋ, ಯಾವ monitoring system ಸರಿ ಇರುವುದಿಲ್ಲ, ಎಲ್ಲಿ ಬೇಕಾದರೂ short circuit ಆಗಬಹುದು. ತುಮಕೂರಿಗೆ ಹೋಗುವ ದಾರಿಯಲ್ಲಿ ಶೆಲ್ ಕಂಪನಿಯಂತಹ ದೊಡ್ಡ ಸಂಸ್ಥೆಯ ಸುಮಾರು ರೂ. 27 ಕೋಟಿ ಬೆಲೆ ಬಾಳುವ ಆಸ್ತಿ ಸುಟ್ಟು ಹೋಯಿತು. ಅಂಥದ್ದನ್ನು ಗುರುತಿಸಿ ತೆರಿಗೆ ಹಾಕಬೇಕು. ಬೆಂಗಳೂರಿನಲ್ಲಿ warehouses ಎಷ್ಟಿವೆ ಎನ್ನುವುದು ನಿಮಗೆ ಗೊತ್ತಿದೆ.; ಮಾನ್ಯ ಸಚಿವರ ಉದ್ದೇಶ ಸರಿ ಇರಬಹುದು. ಆದರೆ ನೀವು ಯಾರ ಮೇಲೆ ಸೆಸ್ ಹಾಕುತ್ತಿದ್ದೀರೋ ಅದು ಸರಿಯಿಲ್ಲ. ಮೊದಲು ವಿಧಾನಸೌಧಕ್ಕೆ ಎನ್‌ಓಸಿ ಪಡೆದುಕೊಳ್ಳುವಂತಹ ಕೆಲಸವನ್ನು ತಾವೇ ತಮ್ಮ ಇಲಾಖೆಯಿಂದಿ ಮಾಡಿಸಿಕೊಡಿ ಎಂದು ವಿನಂತಿ ಮಾಡುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, '…surcharge on the property tax at such rate not exceeding ten percent…' ಎನ್ನುತ್ತೀರಿ. ಅಂದರೆ 10% exceed ಆಗುವುದಿಲ್ಲ. ಅಂದರೆ ಎಷ್ಟು ಪರ್ಸೆಂಟ್ ಹಾಕಬೇಕು ಎಂದು ಅಂದುಕೊಂಡಿದ್ದೀರಿ ಎಂದು ನೀವು ಹೇಳುತ್ತಿಲ್ಲ. ಸೆಸ್ 1% ಎಂದು ಹೇಳುತ್ತೀರಿ, it is applicable to the lands and buildings which are situated in any area ಎಂದು ಹೇಳುತ್ತೀರಿ. Which is complied under this Act. ಅದರ ಬಗ್ಗೆ ಕ್ಲ್ಯಾರಿಫಿಕೇಷನ್ ಕೊಟ್ಟಿಲ್ಲ. ಸರ್ಚಾರ್ಜ್‌ನಿಂದ ನೀವು ಎಷ್ಟು ಮೊತ್ತವನ್ನು ಸಂಗ್ರಹ ಮಾಡುವುದಕ್ಕೆ ಹೊರಟಿದ್ದೀರಿ. ಈ ಮೊತ್ತವನ್ನು ನಿರ್ದಿಷ್ಟವಾಗಿ ಯಾವ ಉದ್ದೇಶಕ್ಕೆ ಬಳಕೆ ಮಾಡುತ್ತೀರಿ? ಇದನ್ನೂ ನಿಮ್ಮ ಉತ್ತರದಲ್ಲಿ ಹೇಳಲಿಲ್ಲ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಐವನ್ ಡಿ'ಸೋಜಾರವರು ಟ್ರ್ಯಾಕ್ ತಪ್ಪಿ ಹೋಗಿದ್ದಾರೆ ಎಂದು ಹೇಳಿದರು. ಆದರೆ ಅವರು ಟ್ರ್ಯಾಕ್ ತಪ್ಪಿ ಹೋಗಿಲ್ಲ. ಈ ಸಲ ಕರಾವಳಿಯಲ್ಲಿ ವರುಣನ ಆರ್ಭಟಕ್ಕೆ ಎಲ್ಲರೂ ತತ್ತರಿಸಿ ಹೋಗಿದ್ದಾರೆ. ಒಂದು ಉದಾಹರಣೆ ಕೊಡಬಯಸುತ್ತೇನೆ. ಒಂದು ಮನೆಯಲ್ಲಿ ಗಂಡ, ಹೆಂಡತಿ ಮತ್ತು 3 ಜನ ಮಕ್ಕಳು ವಾಸವಿದ್ದರು. ವರುಣನ ಆರ್ಭಟಕ್ಕೆ ಅವರು ಇದ್ದ ಮನೆ ಕುಸಿಯಿತು. ಇಬ್ಬರು ಮಕ್ಕಳು ತೀರಿಕೊಂಡರು, ಆ ತಾಯಿಯ ಎರಡು ಕಾಲು ಕಟ್ ಆಯಿತು, ಅಜ್ಜನ ಕಾಲು ಕಟ್ ಆಯಿತು ಮತ್ತು ಅಜ್ಜಿಯೂ ತೀರಿಕೊಂಡರು. ಆ ಜೀವಗಳನ್ನು ಉಳಿಸುವುದಕ್ಕೆ ಆಗಲಿಲ್ಲ. ಕರಾವಳಿಯಲ್ಲಿ ಈ ಸಲ ಸಿಕ್ಕಾಪಟ್ಟೆ ಮಳೆ ಬಂದಿದೆ. ಇಂತಹ ಕಡೆ Rapid Action Force

ಹಾಕಬೇಕು. ಮಕ್ಕಳು ಮತ್ತು ತಾಯಿಯ ಪರಿಸ್ಥಿತಿಯನ್ನು ನೋಡಿ ನಮಗೆ ಕಣ್ಣೀರು ಬಂತು. ಆಸ್ಪತ್ರೆಯಲ್ಲಿದ್ದ ತಾಯಿಯನ್ನು ಭೇಟಿ ಮಾಡಿದಾಗ, ಆಕೆಗೆ ತನ್ನ ಕಾಲು ಕಟ್ ಆಗಿರುವುದು ಗೊತ್ತಿರಲಿಲ್ಲ, ಇಬ್ಬರು ಮಕ್ಕಳು ತೀರಿಕೊಂಡಿರುವುದರ ಬಗ್ಗೆಯೂ ಗೊತ್ತಿರಲಿಲ್ಲ. ಈ ರೀತಿಯ ಪ್ರಕರಣಗಳು ಆಗದ ಹಾಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೆ.ವಿವೇಕಾನಂದ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರು ಮಾನ್ಯತೆ ನವೀಕರಣ ಎಂದು ಎಲ್ಲಾ ಶಾಲಾ-ಕಾಲೇಜುಗಳು Fire NOC ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ನಮ್ಮ ಹಳ್ಳಿಗಾಡಿನಿಂದ 30-40 ಜನ ಮಕ್ಕಳು ಬರುತ್ತಾರೆ. ಎನ್‌ಓಸಿ ತೆಗೆದುಕೊಳ್ಳಬೇಕಾದರೆ ರೂ.2-3 ಲಕ್ಷ ಖರ್ಚಾಗುತ್ತಿದೆ. ಅಗ್ನಿಶಾಮಕ ಕಚೇರಿಯ ಕಡೆಯಿಂದ ಅವರು ಒಂದು ರೀತಿಯ ಹಿಂಸೆ ಅನುಭವಿಸುತ್ತಿದ್ದಾರೆ. ಇಂಥದ್ದಕ್ಕೆ ಕಡಿವಾಣ ಹಾಕಬೇಕೆಂದು ನಿಮ್ಮಲ್ಲಿ ಮನವಿ ಮಾಡುತ್ತೇನೆ.

**ಡಾ: ಜಿ.ಪರಮೇಶ್ವರ್:-** ಮಾನ್ಯ ಕೇಶವ್ ಪ್ರಸಾದ್‌ರವರು, ಸಂಗ್ರಹವಾಗುವ ಹಣ ಎಲ್ಲಿ ಹೋಗುತ್ತದೆ ಎಂದು ಕೇಳಿದರು. ಅದು main Treasury ಗೆ ಹೋಗುತ್ತದೆ; ಇಲಾಖೆಗೆ ಬರುವುದಿಲ್ಲ. ಹಣ ನಮಗೆ ಇನ್ನೂ ಬಂದೇ ಇಲ್ಲ. ಹಣ ಬಂದ ಮೇಲೆ ಲೆಕ್ಕ ಹಾಕಿ ಹೇಳುತ್ತೇನೆ. ಹಣ ಸಂಗ್ರಹಣೆಯಾದರೆ ನಿಮಗಂತೂ ಪಾಲು ಕೊಡುವುದಿಲ್ಲ. ಆದರೆ ಅದರ ಲೆಕ್ಕವನ್ನು ನಾನು ಹೇಳುತ್ತೇನೆ. 21 meters, high rise buildings ಎಂದು ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ. ಶಾಲಾ-ಕಾಲೇಜುಗಳಿಗೆ ಹಾಕುವಾಗ ಅದಕ್ಕೆ ಬೇರೆ ಮಾನದಂಡವನ್ನು ಅನುಸರಿಸುತ್ತೇವೆ, ಅದನ್ನು ಬೇರೆ ರೀತಿಯಲ್ಲಿ ಟ್ರೀಟ್ ಮಾಡುತ್ತೇವೆ. Many of them are also exempted. ಶಾಲಾ ಕಾಲೇಜುಗಳಿಗೆ ಫೀ ಯಿಂದ ವಿನಾಯಿತಿ ಕೊಟ್ಟಿದ್ದೇವೆ. ಶಾಲಾ ಕಾಲೇಜುಗಳಿಗೆ ಸಂಬಂಧಪಟ್ಟಂತೆ 1 + 1, 1 + 3 ಎಂದು categorization ಮಾಡಿದ್ದಾರೆ. ಅದಕ್ಕೆ ಫೀಯನ್ನೂ ಕೂಡ ಅದೇರೀತಿ categorize ಮಾಡಿ ಫೀ ಕಲೆಕ್ಟ್ ಮಾಡುತ್ತಾರೆ. (ಮುಂದು)

(901) 21-8-2025 12.50 ಡಿಎಸ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಡಾ|| ಜಿ.ಪರಮೇಶ್ವರ್(ಮುಂದು):-**

ಅದನ್ನು ಕೂಡ ಈಗ ಕಡಿಮೆ ಮಾಡುತ್ತಿದ್ದೇವೆ. ಕೆಲವು ಸರ್ಕಾರಿ ಕಟ್ಟಡಗಳಿಗೆ exemption ಇದೆ. ವಿಧಾನಸೌಧಕ್ಕೆ ಈಗಾಗಲೇ ಏನು ಕ್ರಮ ತೆಗೆದುಕೊಳ್ಳಬೇಕು, safety measures ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಂಡಿದ್ದೇವೆ. ನಾವು ಇನ್ನೂ modernization ಮಾಡುತ್ತೇವೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಯಾವುದೇ ಕಾರಣಕ್ಕೂ ದುರುಪಯೋಗವಾಗುತ್ತದೆ ಎನ್ನುವ ಕಲ್ಪನೆ ಬೇಡ. Regular Treasury ಗೆ ಹೋಗುತ್ತದೆ, ಸರ್ಕಾರಕ್ಕೆ ಹೋಗುತ್ತದೆ. ಅದು ನಮ್ಮ ಇಲಾಖೆಗೆ ಖರ್ಚಾಗುವ ಲೆಕ್ಕದಲ್ಲಿ ಬರಬಹುದೇ ಅಥವಾ ಬೇರೆ ಬೇರೆ ಕಡೆಗಳಿಗೂ ಬರಬಹುದೇ ಎನ್ನುವಂಥದ್ದು. ಸರ್ಕಾರ ತೆರಿಗೆಯಲ್ಲಿ ಸಂಗ್ರಹ

ಮಾಡಿರುವ ಹಣ ಬೇರೆ ಬೇರೆ ರೀತಿಯಲ್ಲಿ ಇಲಾಖೆಗಳಿಗೆಲ್ಲಾ ಖರ್ಚು ಆಗುತ್ತದೆ. ಆದ್ದರಿಂದ ಆ ಅನುಮಾನ ಬೇಡ ಎನ್ನುವಂಥದ್ದು. ಹಾಗಾಗಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಎಲ್ಲಾ ಗೌರವಾನ್ವಿತ ಸದಸ್ಯರುಗಳಲ್ಲಿ ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:-** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಮಂಕಾಳ ಎಸ್. ವೈದ್ಯ (ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, 1961ರ ಸೆಕ್ಷನ್ 10 ಕ್ಕೆ ತಿದ್ದುಪಡಿಯನ್ನು ತರುತ್ತಿದ್ದೇವೆ. ಸಾವಿರ, ಕೋಟಿಗಟ್ಟಲೆ ಬಂದರುಗಳು 343 ಕಿ.ಮೀ.ಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಅಲ್ಲಿ ಯಾವ ರೀತಿಯ ಸರಕುಗಳಿಗೆ ಎಷ್ಟು ಕೊಡಬೇಕೆಂದು ಮಾನದಂಡ ಇಟ್ಟಿದ್ದರು. ಅದು ಯಾವ ಸಂದರ್ಭದಲ್ಲಿ ಮಾಡಬೇಕು, ಯಾವಾಗ ಮಾಡಬೇಕು ಎಂಬುದು ಇರಲಿಲ್ಲ. ಒಂದೊಂದು ಬಂದರಿನಲ್ಲಿ ಒಂದೊಂದು ದರ ಇತ್ತು. ನಮಗೆ ಈಗ ಖರ್ಚು ಜಾಸ್ತಿಯಾಗುತ್ತಿದೆ. ಆದಾಯ ಕಡಿಮೆ ಬರುತ್ತಿದೆ. ನಾವು ಅಭಿವೃದ್ಧಿಪಡಿಸುತ್ತಿರಬೇಕಾಗುತ್ತದೆ. ಬೇರೆ ಬೇರೆ ದೇಶಗಳಿಂದ ಬರುವಂತಹ ಸರಕುಗಳಿಗೆ ಆ ದಿವಸದ ಅವರ ಮಾನದಂಡಗಳ ಪ್ರಕಾರ ನಾವು ಬಂದರುಗಳನ್ನು ತಯಾರು ಮಾಡಿಕೊಡಬೇಕಾಗುತ್ತದೆ. ಯಾವುದೇ ರೀತಿಯ ತೊಂದರೆ ಇರಬಾರದು, ತೊಂದರೆ ಇದ್ದರೆ ಬೇರೆ ಬೇರೆ ರಾಜ್ಯಗಳಿಗೆ ಹೋಗಿಬಿಡುತ್ತಾರೆ. ಕೇರಳ, ಗೋವಾ ರಾಜ್ಯಗಳಿಗೆ ಹೋಗಿಬಿಡುತ್ತಾರೆ. ಹಾಗಾಗಿ ಈಗ ಆದಾಯವನ್ನು ಹೆಚ್ಚಿಸಬೇಕು ಮತ್ತು ಮೂಲ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. 343 ಕಿ.ಮೀ. ಉದ್ದದ ಕರಾವಳಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶವು ಇದೆ. ಹಾಗಾಗಿ ನಾವು ಈ ವಿಧೇಯಕವನ್ನು ತಂದಿದ್ದೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಮಂಕಾಳ ಎಸ್ ವೈದ್ಯ (ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಮಗೆ ಕನ್ನಡದ ವಿಧೇಯಕಗಳು ಯಾವುದು ಬಂದಿಲ್ಲ.

**ಸಭಾಪತಿಯವರು:-** ನಿನ್ನೆ ತಡವಾಗಿ ಸದನ ಮುಗಿದಿರುವುದರಿಂದ ಅಜೆಂಡಾವನ್ನು ಹಾಕಿಸುವುದಕ್ಕೆ ಸಾಧ್ಯವಾಗಿಲ್ಲ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಕನ್ನಡದ ಪ್ರತಿಗಳು ಇವತ್ತು ಬಂದಿಲ್ಲ. ನಿನ್ನೆ ಇದ್ದ ಕನ್ನಡದ ಪ್ರತಿಗಳನ್ನು ತೆಗೆದು ಹಾಕಿ ಇವತ್ತು ಇಂಗ್ಲಿಷ್ ಪ್ರತಿಗಳನ್ನು ಕೊಟ್ಟಿದ್ದಾರೆ. ಹಾಗಾಗಿ ಅವರು ಅದರ ಬಗ್ಗೆ ಕೇಳುತ್ತಿದ್ದಾರೆ.

**ಸಭಾಪತಿಯವರು:-** ಕನ್ನಡದ ಪ್ರತಿಗಳನ್ನು ನಾಳೆಯಿಂದ ಹಾಕಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಏನಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ವಿಧೇಯಕಗಳನ್ನು ಪಾಸ್ ಮಾಡುವುದಕ್ಕೋಸ್ಕರವೇ ಶಾಸಕರು ಇರುವಂಥದ್ದು. ಈಗ ಕನ್ನಡದ ವಿಧೇಯಕಗಳು ಬಂದಿಲ್ಲ. ಈಗ ಎಲ್ಲರೂ ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಬಂದಿರುವುದಿಲ್ಲ. ಅದಕ್ಕೆ ನನ್ನ ವಿನಂತಿ ಏನೆಂದರೆ, ನಿನ್ನೆ ರಾತ್ರಿ 12 ಗಂಟೆಗೆ ಸದನ ಮುಗಿದಿದೆ. ನಾವು ವಿಧೇಯಕಗಳನ್ನು ಇಲ್ಲೇ ಇಟ್ಟು ವಿನಂತಿ ಮಾಡಿದ್ದೇವೆ, ಈ ವಿಧೇಯಕಗಳನ್ನು ತೆಗೆಯಬೇಡಿ, ಹಾಗೆಯೇ ಇರಲಿ ಎಂದು ಹೇಳಿದ್ದೇವೆ. ಅವರೇನು ಮಾಡಿದ್ದಾರೆಂದರೆ, ಎಲ್ಲಾ ವಿಧೇಯಕಗಳನ್ನು ತೆಗೆದು ಸಂಗ್ರಹ ಮಾಡಿ ಎಲ್ಲಿ ಇಟ್ಟಿದ್ದಾರೆಯೋ ಗೊತ್ತಿಲ್ಲ. ಈಗ ಕನ್ನಡದ ವಿಧೇಯಕಗಳನ್ನು ನೋಡಿಕೊಳ್ಳೋಣವೆಂದರೆ ಯಾರ ಹತ್ತಿರವೂ ಇಲ್ಲ. ಈಗ ಚರ್ಚೆಯೇ ಇಲ್ಲದೆ ವಿಧೇಯಕಗಳನ್ನು ಪಾಸ್ ಮಾಡುವುದು ಹೇಗೆ? ಮಾನ್ಯ ಸಚಿವರಾದ ಶ್ರೀ ಮಂಕಾಳ ವೈದ್ಯರು ತಂದಿರುವ ವಿಧೇಯಕ ಏನು ಚರ್ಚೆಯೇ ಇಲ್ಲದೆ ಪಾಸ್ ಆಗಿಬಿಟ್ಟಿದೆ. ಡಾ॥ ಜಿ.ಪರಮೇಶ್ವರ್‌ರವರು ತಂದಿರುವ ವಿಧೇಯಕವನ್ನು ಬಹಳ ಚರ್ಚೆಗೆ ಒಳಪಡಿಸಿದ್ದೇವೆ. ಶ್ರೀ ಮಂಕಾಳ ವೈದ್ಯರು ತಂದಿರುವ ವಿಧೇಯಕದ ಕನ್ನಡದ ಪ್ರತಿ ನಮಗೆ ಸಿಕ್ಕಿದ್ದರೆ ಚರ್ಚೆ ಮಾಡಬಹುದಾಗಿತ್ತು.

**ಸಭಾಪತಿಯವರು:-** ವಿಧೇಯಕದ ಕನ್ನಡದ ಪ್ರತಿಗಳನ್ನು ನಿನ್ನೆ ಸದನದಲ್ಲಿಯೇ ಇತ್ತು, ಸದನ ಮುಗಿದ ಮೇಲೆ ಎಲ್ಲಾ ತೆಗೆದು ಹಾಕಿಬಿಟ್ಟಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡುತ್ತಾರೆಂದೇ ತೆಗೆಯಬೇಡಿ ಎಂದು ನಾನು ನಿನ್ನೆ ರಾತ್ರಿ ಹೇಳಿದ್ದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, it should be rectified in future.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ವಿಧೇಯಕದ ಕನ್ನಡದ ಪ್ರತಿಗಳನ್ನು ಕೊಡಿಸಿ.

**ಉ) ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ನೇ ಸಾಲಿನ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೇ, 187ನೇ ಸೆಕ್ಷನ್‌ನಲ್ಲಿ building plan, license ಮತ್ತು Professional Engineers and Architects ಇದೆಲ್ಲಾ, Government of India guidelines ಪ್ರಕಾರ ಸಾರ್ವಜನಿಕರಿಗಾಗಲಿ ಮತ್ತು ಬಡವರಿಗಾಗಲಿ ಸರಳೀಕರಣ ಮಾಡಿ ಕೊಡಬೇಕೆಂದು Government of India ನಿಂದ guidelines ಬಂದಿದೆ. ಆ ಗೈಡ್‌ಲೈನ್ಸ್ ಪ್ರಕಾರ ನಮ್ಮ ಕಾಯ್ದೆಯಲ್ಲಿ ಸರಳೀಕರಣ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗಬೇಕೆಂದು ತಿದ್ದುಪಡಿಯನ್ನು ತಂದಿದ್ದೇವೆ. ಎರಡನೆಯದಾಗಿ ಏನಾಗಿದೆ ಎಂದರೆ, OC (Occupancy Certificate) and CC (Commencement Certificate) ಸಲುವಾಗಿ ಮೊನ್ನೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದಿದೆ. ಅದು ಕೊಡಲಿಲ್ಲವೆಂದರೆ, ವಿದ್ಯುಚ್ಛಕ್ತಿ ಕನೆಕ್ಷನ್, ನೀರಿನ ಕನೆಕ್ಷನ್ ಮತ್ತು ಯು.ಜಿ.ಡಿ. ಕನೆಕ್ಷನ್ ಕೊಡಬಾರದು ಎಂದು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಸಮಸ್ಯೆ ಆಗಿದೆ. (ಮುಂದು)

(902) 21/08/2025 1:00 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಹೀಂ ಖಾನ್ (ಮುಂದು):-**

ಚಿಕ್ಕ ಗಾತ್ರದ ಕೆಲವು ಕಟ್ಟಡಗಳಿಗೆ, ಬಡವರಿಗೆ ಇದನ್ನು ಸರಿಪಡಿಸಬೇಕೆಂದು ವಿಧೇಯಕದಲ್ಲಿ ನಮೂದಿಸಲಾಗಿದೆ. ಸುಮಾರು ವರ್ಷಗಳ ಹಿಂದೆ ವ್ಯಾಪಾರ ಪರವಾನಗಿಯ ಬಗ್ಗೆ ಕಾಯ್ದೆಯನ್ನು ಮಾಡಲಾಗಿತ್ತು. ವ್ಯಾಪಾರ ಪರವಾನಗಿಯಡಿ ಬಹಳಷ್ಟು ಅಂದರೆ ನೂರಾರು ಹೊಸ ಹೊಸ ಐ.ಟಿ., ಬಿ.ಟಿ. ಕಂಪೆನಿಗಳು ಬಂದಿವೆ. ಯಾವುದೇ ಕಟ್ಟಡದ ನಕ್ಷೆಗಳಿಗೆ ಅನುಮತಿಯನ್ನು ನೀಡಬೇಕಾದರೆ, ಅದು ಮುನಿಸಿಪಲ್ ಕೌನ್ಸಿಲ್‌ಗೆ ಅಧಿಕಾರವಿತ್ತು. ಹೀಗಾಗಿ ಮುನಿಸಿಪಲ್ ಕೌನ್ಸಿಲ್‌ಗೆ ಕಡತ ಹೋಗಿ ಬರಬೇಕಾಗಿತ್ತು. ಆಗ ಕೌನ್ಸಿಲ್‌ನಲ್ಲಿ ಸಭೆಯನ್ನು ನಡೆಸುವ ಸಂಬಂಧ ಎರಡ್ಮೂರು ತಿಂಗಳುಗಳ ಕಾಲ ವಿಳಂಬವಾಗುತ್ತದೆ. ಒಂದು 30 X 40 ಅಡಿ ನಿವೇಶನದ ಯೋಜನೆಯ ಅನುಮತಿಯನ್ನು ಪಡೆಯಲು ಮೂರು ತಿಂಗಳುಗಳ ಕಾಲ ಕಾಯಬೇಕಾಗುತ್ತಿತ್ತು. ಹೀಗಾಗಿ ಹಾಲಿ ಇರುವ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಸಕಾಲ ಮಾದರಿಯಲ್ಲಿ ಶೀಘ್ರದಲ್ಲಿಯೇ ಅಂದರೆ 15 ರಿಂದ 30

ದಿನದೊಳಗಾಗಿ ಅರ್ಜಿದಾರರಿಗೆ ಅನುಮತಿ ದೊರೆಯುವಂತಾಗಬೇಕು. ಕಾರ್ಪೋರೇಷನ್ ವಿಧೇಯಕದಲ್ಲಿ ಈ ಅಂಶವು ಒಳಗೊಂಡಿದ್ದು, ಅದಕ್ಕೆ ಮೊನ್ನೆಯ ದಿನ ಅನುಮೋದನೆ ದೊರೆತಿರುತ್ತದೆ. ಹೀಗಾಗಿ ಇದೇ ಅಂಶಗಳು ನಗರ ಪುರಸಭೆ ಮತ್ತು ಪಟ್ಟಣ ಪುರಸಭೆಗಳಲ್ಲಿ ಆಗಬೇಕೆಂದು ನಾವು ಈ ವಿಧೇಯಕವನ್ನು ಮಂಡಿಸಿದ್ದು, ಎಲ್ಲರೂ ಇದಕ್ಕೆ ಬೆಂಬಲಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಳ್ಳೆಯ ದೃಷ್ಟಿಯಿಂದ ಸಚಿವರು ಈ ವಿಧೇಯಕವನ್ನು ಮಂಡಿಸಿದ್ದಾರೆ. ಈ ವಿಧೇಯಕದಲ್ಲಿ "ಕಟ್ಟಡ ನಕ್ಷೆಗಳ ಅನುಮತಿಗಳನ್ನು ಮಂಜೂರು ಮಾಡುವ ಕಾರ್ಯವಿಧಾನವನ್ನು ಸರಳೀಕರಿಸುವುದು" ಎಂಬುದಾಗಿ ತಿಳಿಸಲಾಗಿದೆ. ಇದಕ್ಕೆ ಕಾಲಮಿತಿಯನ್ನು ನಿರ್ಧರಿಸಲಾಗಿದೆಯೇ? ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿದ 30 ದಿನದೊಳಗೆ ಎಂದು ಹೇಳಿದಾಗ 'deemed permission is granted' ಎನ್ನುವ ರೀತಿಯಲ್ಲಿ ಇರಬೇಕು. ಪುನಃ ಕಛೇರಿಗಳಿಗೆ ಅಲೆಯುವ ಪರಿಸ್ಥಿತಿಗಳಾಗಬಾರದು. "ಸ್ವಯಂ ಪ್ರಮಾಣೀಕರಿಸಿದ ಮುಖಾಂತರ ಸರ್ಕಾರವು ಅಧಿಸೂಚಿತ ಕಟ್ಟಡಗಳಿಗೆ ಅನುಮತಿ ಮಂಜೂರು ಮಾಡುವುದನ್ನು ಒಳಗೊಳ್ಳುವುದು" ಎಂದು ವಿಧೇಯಕದಲ್ಲಿ ತಿಳಿಸಿದ್ದರಿಂದ ನಾನು ನಿರ್ದಿಷ್ಟವಾದ ಕಾಲಮಿತಿಯನ್ನು ಕೇಳುತ್ತಿದ್ದೇನೆ. ನಂತರದಲ್ಲಿ ಕಟ್ಟಡ ನಿರ್ಮಾಣದ ಕಾರ್ಯ ಆರಂಭಿಸಿದ ನಂತರ ಯಾರೂ ಸಹ ತೊಂದರೆಯನ್ನು ಕೊಡಬಾರದು. ಏಕೆಂದರೆ ಅರ್ಜಿ ಸಲ್ಲಿಸಿದ 30 ದಿನಗಳ ಕಾಲಾವಧಿಯಲ್ಲಿ ಅನುಮತಿ ದೊರೆತಿದೆ ಅಥವಾ ದೊರೆತಿರುವುದಿಲ್ಲ; ಅನುಮತಿ ದೊರೆತಿದೆ ಎಂದುಕೊಂಡು ಅವರು ನಿರ್ಮಾಣ ಕಾರ್ಯವನ್ನು ಮುಂದುವರೆಸಿರುತ್ತಾರೆ. ಮುಂದುವರೆದು "ಉಲ್ಲಂಘನೆಯ ಪ್ರಕರಣಗಳಲ್ಲಿ ಪಟ್ಟಿ ಮಾಡಲಾದ ವೃತ್ತಿಪರರಿಗೆ ದಂಡನಾ ಉಪಬಂಧವನ್ನು ಒಳಗೊಳ್ಳುವುದು" ಎಂಬುದಾಗಿ ವಿಧೇಯಕದಲ್ಲಿ ಉಲ್ಲೇಖಿಸಲಾಗಿದ್ದು, ನಾನು ಮನೆಯನ್ನು ನಿರ್ಮಿಸುತ್ತಿದ್ದಾಗ ನನ್ನ ವಾಸ್ತುಶಿಲ್ಪಿಯೋ ಅಥವಾ ಇಂಜಿನಿಯರ್ ನಕ್ಷೆಯನ್ನು ಬದಲಾಯಿಸಿದ್ದಾರೆ ಹಾಗೂ ನಿರ್ದಿಷ್ಟ ಮಿತಿಗಿಂತ ಜಾಸ್ತಿ ಹೋಗಿದ್ದಾರೆ ಎಂದಾಗ ನನ್ನ ಅಥವಾ ವಾಸ್ತುಶಿಲ್ಪಿ, ಇಂಜಿನಿಯರ್ ವಿರುದ್ಧ ಪ್ರಕರಣವನ್ನು ದಾಖಲಿಸಲಾಗುತ್ತದೆ ಎಂಬ ಅಂಶವನ್ನು ಸ್ಪಷ್ಟಪಡಿಸಬೇಕು. "ಮಾಲೀಕರಿಂದ ವೃತ್ತಿಪರರ ಶುಲ್ಕವನ್ನು ಉಪಬಂಧಗಳಲ್ಲಿ ಸೇರಿಸಲಾಗಿದೆ" ಎಂದು ಸಚಿವರು ತಿಳಿಸಿದ್ದು, ಇದರರ್ಥ ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ಭರಿಸಬೇಕಾದ ಶುಲ್ಕವನ್ನು ಮಾಲೀಕನು ಭರಿಸಿದ್ದಲ್ಲಿ, ಸರ್ಕಾರವು ಈ ವಿಧೇಯಕವನ್ನು ಯಾವ ಕಾರಣಕ್ಕಾಗಿ ಜಾರಿಗೊಳಿಸುತ್ತಿದೆ? ಸರ್ಕಾರವು ಒಬ್ಬ ಮಾಲೀಕ, ವಾಸ್ತುಶಿಲ್ಪಿ ಅಥವಾ ಇಂಜಿನಿಯರ್ ಅನ್ನು ನಿರ್ಬಂಧಿಸುತ್ತಿದೆಯೋ, ಅಥವಾ ಸರ್ಕಾರವು ಇದರೊಳಗೆ ಹೇಗೆ ಒಳಗಾಗುತ್ತಿದೆ ಎನ್ನುವುದನ್ನು ಸಚಿವರು ವಿವರಿಸಬೇಕು.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಸಚಿವರಲ್ಲಿ ನನ್ನ ಮನವಿ ಏನೆಂದರೆ, ಮಹಾನಗರ ಪಾಲಿಕೆಗಳಲ್ಲಿ ನಗರಾಭಿವೃದ್ಧಿಯನ್ನು ಮಾಡಬೇಕಾದರೆ, ವ್ಯಾಪಾರ ಪರವಾನಿಗೆಯನ್ನು ಐದು ವರ್ಷಗಳಿಗೊಮ್ಮೆ ಪಡೆಯಬಹುದು ಎಂಬುದಕ್ಕೆ ಅವಕಾಶವಿದೆ. ಈ ಸಂಬಂಧ ಸರ್ಕಾರವೂ ಸಹ ಅಧಿಸೂಚನೆಯನ್ನು ಹೊರಡಿಸಿದೆ. ಇದನ್ನು ಪುರಸಭೆಗೂ

ಅನ್ವಯಿಸಬೇಕು ಎಂದು ನಾನು ಹೇಳುತ್ತೇನೆ. ಈ ವ್ಯವಸ್ಥೆಯು ಇಲ್ಲದೇ ಇರುವುದರಿಂದ ಪ್ರತಿ ವರ್ಷವೂ ವ್ಯಾಪಾರ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂಬುದಾಗಿದೆ. ನಗರಾಭಿವೃದ್ಧಿಗೂ ಸಂಬಂಧಪಟ್ಟಂತೆ ವಿಧೇಯಕವನ್ನು ತಂದಿದ್ದಾರೆ. ಇದರ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಿನ್ನೆಯ ದಿನ ಸಚಿವರು ತಿಳಿಸಿದರು. It should be a Trade License fees and not tax. ಹೀಗಾಗಿ ಅದು nominal fees ಆಗಿರಬೇಕೇ ಹೊರತು ಜಾಸ್ತಿಯಾಗಿರಬಾರದು. ಆಯಾ ಕ್ಷೇತ್ರಕ್ಕನುಗುಣವಾಗಿ ಮಾಡುವುದನ್ನು ಇಲ್ಲಿಯೂ ಸಹ ಜಾರಿಗೊಳಿಸಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಇದನ್ನು ಸರಳೀಕರಣ ಮಾಡುತ್ತೇವೆಂದು ಸಚಿವರು ತಿಳಿಸಿದ್ದು, ಇದರ ನಿಯಮಾವಳಿಗಳೇನು ಎಂದು ನಾನು ಕೇಳಬಯಸುತ್ತೇನೆ. ಏಕೆಂದರೆ, 7 ರಿಂದ 10 ಮೀಟರ್‌ಗಳಿಗೆ; ಮುಂದುಗಡೆ ಒಂದು ಮೀಟರ್; ಬದಿಯಲ್ಲಿ 0.75 ಮೀಟರ್ ಜಾಗವನ್ನು ಬಿಡಬೇಕು ಎಂಬುದಾಗಿ ಈಗಾಗಲೇ ನಿಯಮವು ಜಾರಿಯಲ್ಲಿದೆ. 10 ಮೀಟರ್ ಮೇಲಗಡೆ ಇದ್ದರೆ, ಮುಂದುಗಡೆ ಶೇಕಡಾ 12 ರಷ್ಟು, ಎಲ್ಲಾ ಬದಿಗಳಲ್ಲಿ ಶೇಕಡಾ 8 ರಷ್ಟು ಜಾಗ ಬಿಡಬೇಕು ಎಂಬುದಾಗಿ ಇದೆ. ಮೂರು ಮಹಡಿಗಳಿಗಿಂತ ಮೇಲೆ ಹೋದರೆ, 4.5 ಮೀಟರ್ ಜಾಗವನ್ನು ಬಿಡಬೇಕು ಎಂಬುದಾಗಿದೆ. 50 X 100 ಅಡಿ ಅಳತೆಯ ವಿಸ್ತೀರ್ಣದ ನಿವೇಶನದಲ್ಲಿ ಮೂರು ಮಹಡಿಗಳ ಕಟ್ಟಡವನ್ನು ನಿರ್ಮಿಸುವುದಕ್ಕೆ ಆಗುವುದೇ ಇಲ್ಲ. ಏಕೆಂದರೆ ನಿಯಮಾನುಸಾರ ಅಲ್ಲಿ ಜಾಗವೇ ಉಳಿಯುವುದಿಲ್ಲ. ಹೀಗಾಗಿ ಸರಳೀಕರಣ ಎಂದು ಹೇಳಿದರೆ ಅದು ಏನು ಮತ್ತು ಸರ್ಕಾರವು ಯಾವ ರೀತಿಯಾದ ನಿಯಮಾವಳಿಗಳನ್ನು ಮಾಡಿದೆ ಎಂದು ನಾನು ಸಚಿವರಲ್ಲಿ ಕೇಳಬಯಸುತ್ತೇನೆ. ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿದಾಗ ಅಲ್ಲಿ ಒಂದು ರೀತಿಯ ನಕ್ಷೆ ಇರುತ್ತದೆ ಹಾಗೂ ನಿರ್ಮಾಣದ ಸಂದರ್ಭದಲ್ಲಿ ಮತ್ತೊಂದು ರೀತಿಯ ನಕ್ಷೆ ಇರುತ್ತದೆ. ಹೀಗೆ ನಿರ್ಮಿಸಿದ ನಂತರ ಕಟ್ಟಡದ ಮಾಲೀಕರ ಮೇಲೆ ಜಬರ್‌ದಸ್ತಿ ಮಾಡುತ್ತಾರೆ. ಹೀಗೆ ಮಾಡಿದಾಗ ಇದರ risk ಕಟ್ಟಡದ ಮಾಲೀಕರ ಮೇಲೆ, ಅನುಮತಿಯನ್ನು ನೀಡಿದವರ ಮೇಲೆ ಅಥವಾ ನಗರ ಪಾಲಿಕೆ ಮೇಲೆ ಇರುತ್ತದೆಯೋ ಎಂಬ ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕೆಂದು ನಾನು ಸಚಿವರಲ್ಲಿ ಕೋರುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರವು ಈಗ ಮಂಡಿಸಿರುವ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ ಇದರಲ್ಲಿ ಪಟ್ಟಣ ಪಂಚಾಯಿತಿಗಳು, ಪುರಸಭೆಗಳು, ನಗರ ಸಭೆಗಳಿಗೂ ಹಾಗೂ ಬಿ.ಬಿ.ಎಂ.ಪಿ. ಮತ್ತು ಮಹಾನಗರ ಪಾಲಿಕೆಗಳಿಗೂ ವ್ಯತ್ಯಾಸಗಳಿವೆ. ಎಲ್ಲಿಯೋ ಒಂದು ಕಡೆ ಅಧಿಕಾರಿಗಳಿಗೆ ಅಧಿಕಾರ ನೀಡಿ ಜನಪ್ರತಿನಿಧಿಗಳಿಗೆ ಕಡೆಗಣಿಸುವಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಹೀಗಾಗಿ ಸಚಿವರು ಇದರ ಬಗ್ಗೆ ಗಮನಿಸಬೇಕು. 1964 ರ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ 42 ನೆಯ ಸೆಕ್ಷನ್‌ನಲ್ಲಿ ಪ್ರತಿ ತಿಂಗಳಿಗೊಮ್ಮೆ ಸಭೆಯನ್ನು ಮಾಡಬೇಕು ಎಂಬುದಾಗಿ ಬಹಳ ಸ್ಪಷ್ಟವಾಗಿ ತಿಳಿಸಿದೆ. ಈ ಸಭೆಯಲ್ಲಿ ಸ್ವೀಕೃತಗೊಂಡ ಅರ್ಜಿಗಳ ಬಗ್ಗೆ ತೀರ್ಮಾನವನ್ನು

ತೆಗೆದುಕೊಳ್ಳಬಹುದಲ್ಲವೇ? ಹೀಗಾಗಿ ಸುಮಾರು 45 ದಿನಗಳ ಕಾಲ ಕಾಯುವ ಅವಶ್ಯಕತೆ ಏನಿದೆ ಎಂದು ನಾನು ಕೇಳುತ್ತೇನೆ. ಓ.ಸಿ. ಮತ್ತು ಸಿ.ಸಿ.ಗಳ ವಿಚಾರದಲ್ಲಿ ಈಗಾಗಲೇ ಸರ್ವೋಚ್ಚ ನ್ಯಾಯಾಲಯದ ತೀರ್ಪು ಇದ್ದು, ಇದನ್ನು ನಾವು ಒಪ್ಪಿಕೊಳ್ಳುತ್ತೇವೆ; ಇಲ್ಲವೆಂದು ಹೇಳುವುದಿಲ್ಲ. ಕಾನೂನು ಬಾಹಿರವಾಗಿ ಕಟ್ಟಡಗಳನ್ನು ನಿರ್ಮಿಸುವ ತಪ್ಪಿತಸ್ಥರು ಯಾರು ಇದ್ದಾರೆ ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಸರ್ಕಾರವು ಆದೇಶವನ್ನು ಹೊರಡಿಸಲಿ. ಈಗ ಅರ್ಜಿಗಳಲ್ಲಿ ಸಲ್ಲಿಸಿರುವ ನಾಲ್ಕು ಲಕ್ಷಕ್ಕಿಂತಲೂ ಹೆಚ್ಚಿನ ಬಿಲ್ಡರ್ಸ್‌ಗಳು ಯಾರು ಇದ್ದಾರೆ, ಇದರಲ್ಲಿ ಮನೆ ಕಟ್ಟುವವರು ಅಥವಾ ಇನ್ಯಾರಾದರೂ ಇರಬಹುದು, ಇವರುಗಳಿಗೆ ಯಾವುದೇ ರೀತಿಯಾದ ವಿದ್ಯುತ್, ನೀರಿನ ಸೌಲಭ್ಯಗಳಿಲ್ಲ. ಇವರುಗಳಿಗೆ ಕಟ್ಟಡವನ್ನು ನಿರ್ಮಿಸಲು ಆಗುವುದಿಲ್ಲ. ಇವತ್ತಿನ ದಿವಸ ಆಸ್ತಿಯ ಮೌಲ್ಯ ಕಡಿಮೆ ಇದೆಯೇ? ಆಸ್ತಿಯ ಮೌಲ್ಯಗಳು ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಕಂದಾಯ ಸಚಿವರು ಬೆಂಗಳೂರು ನಗರದ ಎಸ್.ಆರ್. ಮೌಲ್ಯವನ್ನೂ ಸಹ ಹೆಚ್ಚಳ ಮಾಡಿದ್ದಾರೆ. ಇದನ್ನು ನೀವುಗಳೆಲ್ಲರೂ ನೋಡುತ್ತಿದ್ದೀರಿ. ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿಯೇ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಇಂತಹವರುಗಳಿಗೆ ನಿಯಮ ಸಡಿಲಿಸುವ ಸಲುವಾಗಿ ಸರ್ಕಾರವು ಒಂದು ಕಾನೂನನ್ನು ಏಕೆ ಜಾರಿಗೊಳಿಸಬಾರದು ಎನ್ನುವುದು ನನ್ನ ಆಗ್ರಹವಾಗಿದೆ. ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಏನು ಕ್ರಮಗಳನ್ನು ತೆಗೆದುಕೊಳ್ಳಬಹುದೋ, ಅವುಗಳನ್ನು ಸರ್ಕಾರವು ತರಬೇಕು. ಮುಂದಿನ ದಿನಗಳಲ್ಲಿ ಕಟ್ಟಡ ನಿರ್ಮಿಸುವವರು ಇದರ ಪಾಲನೆಯನ್ನು ಮಾಡಬೇಕು ಎಂಬ ಆದೇಶವನ್ನು ಸರ್ಕಾರವು ಹೊರಡಿಸಲಿ; ಇಲ್ಲವೆಂತಲ್ಲ. ಆದರೆ, ಈಗ ಅರ್ಜಿ ಸಲ್ಲಿಸಿರುವವರಿಗೆ ನಿಯಮ ಸಡಿಲಿಸಿ, ಅವರುಗಳು ಮುಂದುವರೆಯುವುದಕ್ಕೆ ಸರ್ಕಾರವು ಅವಕಾಶ ನೀಡಬೇಕು. ಇದರಿಂದ ಸರ್ಕಾರಕ್ಕೂ ಸಹ ಆದಾಯ ಬರುತ್ತದೆ. ಅಭಿವೃದ್ಧಿಗಳಾದಾಗ ಸರ್ಕಾರಕ್ಕೂ ಸಹ ತೆರಿಗೆ ಬರುತ್ತದೆ. ಈ ಅಂಶಗಳೆಡೆಗೆ ಸರ್ಕಾರವು ಗಮನವನ್ನು ಹರಿಸಬೇಕು. ಈ ವಿಧೇಯಕವನ್ನು ನೋಡಿದರೆ, ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಿದಂತಾಗುತ್ತಿದೆ. ಜನಪ್ರತಿನಿಧಿಗಳಿಗೂ ಸಹ ಸರ್ಕಾರವು ಆದ್ಯತೆಯನ್ನು ನೀಡಬೇಕು.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರವು ಮಂಡಿಸಿರುವ ವಿಧೇಯಕದ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಗಳಾಗಿವೆ. ಸಚಿವರಲ್ಲಿ ನನ್ನ ಮನವಿ ಏನೆಂದರೆ, ಸಣ್ಣ ಸಣ್ಣ ಮನೆಗಳನ್ನು ಹೊಂದಿರುವ ಸಾಕಷ್ಟು ಜನರಿಗೂ ಸಹ ಇವತ್ತಿನ ದಿವಸ ಭಾರಿ ತೊಂದರೆಯಾಗಿದೆ. ಆ ಪೈಕಿ 600 – 1000 ಚದರಡಿ ಮನೆಗಳನ್ನು ಹೊಂದಿರುವವರಿಗೆ ಕೂಡಲೇ ಅವಕಾಶವನ್ನು ನೀಡುವ ಬಗ್ಗೆ ಈ ವಿಧೇಯಕದಲ್ಲಿ ಅವಕಾಶ ಮಾಡಿಕೊಡಬೇಕೆಂಬ ಸಲಹೆಯನ್ನು ನಾನು ನೀಡಲಿಚ್ಛಿಸುತ್ತೇನೆ.

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರೊಬ್ಬರು ಹಾಲಿ ಇರುವ ವ್ಯಾಪಾರ ಪರವಾನಗಿಯನ್ನು ಒಂದು ವರ್ಷದಿಂದ ಐದು ವರ್ಷಕ್ಕೆ ಏರಿಸಬೇಕೆಂದು ಕೇಳಿದ್ದಾರೆ. ಖಂಡಿತವಾಗಿಯೂ ಸಹ ಇದನ್ನು ಮಾಡುತ್ತೇವೆ. ಸುಮಾರು ಸದಸ್ಯರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ.

ಆದರೆ ಇನ್ನೂ ನಿಯಮಾವಳಿಗಳು ಮಾಡಿಲ್ಲ. ಹೀಗಾಗಿ ಸದಸ್ಯರುಗಳು ನೀಡಿರುವ ಸಲಹೆಗಳನ್ನೆಲ್ಲಾ ನೂರಕ್ಕೆ ನೂರರಷ್ಟು ಪರಿಗಣಿಸುತ್ತೇವೆ. (ಮುಂದು)

(903)21-08-2025/1-10/bkp-vk (ಸಭಾಪತಿಗಳ ಉಪಸ್ಥಿತಿ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.”

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು

**ಖಂಡ 2 ರಿಂದ 4 ರವೆರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, “ಖಂಡ 2 ರಿಂದ ಮತ್ತು 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು)** ಮಾನ್ಯ ಸಭಾಪತಿಯವರೇ, “ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಒಂದು ನಿಮಿಷ. ನಮ್ಮ ಕರ್ನಾಟಕ ರಾಜ್ಯ ಭದ್ಧತೆಗೆ ಹೆಸರು ಮಾಡಿರುವುದು ನಮ್ಮೆಲ್ಲರ ಹೆಮ್ಮೆ. ಇದರಿಂದಾಗಿಯೇ ನಮ್ಮ ರಾಜ್ಯ ಇಡೀ ದೇಶಕ್ಕೆ ಮಾದರಿಯಾಗಿ ನಿಂತಿರುವುದು ಸಹ ಸಂತೋಷದಾಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ 20-08-2025 ರಂದು ಸದನವು ರಾತ್ರಿ 12-00 ಗಂಟೆಯವರೆಗೆ ನಡೆದು ಮಹತ್ತರವಾದ ಚರ್ಚೆಯನ್ನು ನಡೆಸಿ, ಇಡಿ ರಾಷ್ಟ್ರವೇ ನಮ್ಮ ರಾಜ್ಯವನ್ನು ತಿರುಗಿ ನೋಡುವಂತಾಗಿದೆ. ಇದು ನಮ್ಮೆಲ್ಲರ ಹಿರಿಮೆಗೆ ಮತ್ತೊಂದು ಗರಿಯನ್ನು ಮೂಡಿಸಿದೆ. ಇಡಿ ರಾತ್ರಿಯಾದರೂ ಸಹ ರಾಜ್ಯದ ಹಿತಾಸಕ್ತಿಯನ್ನು ಮನದಲ್ಲಿಟ್ಟುಕೊಂಡು ಗುಣಮಟ್ಟದ ಚರ್ಚೆಯನ್ನು ನಡೆಸಿ, ವಿಧೇಯಕವನ್ನು ಎಲ್ಲಾ ಆಯಾಮಗಳಲ್ಲಿ ಪರಾಮರ್ಶಿಸಿ, ಸದನದ ಹಿರಿಮೆಯನ್ನು ಹೆಚ್ಚಿಸುವಲ್ಲಿ ಸಹಕಾರ ನೀಡಿರುವ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸನ್ಮಾನ್ಯ ಸಚಿವರು, ಸನ್ಮಾನ್ಯ ಶಾಸಕರುಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಅದರಲ್ಲೂ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾನಾಯಕರು ಸೇರಿ ಈ ನಮ್ಮ ಅವಧಿಯಲ್ಲಿ ಈ ರೀತಿಯ ಗುಣಮಟ್ಟದ ಚರ್ಚೆಗಳು ನಡೆಯುತ್ತಿರುವುದು ಸಂತೋಷಕರವಾಗಿದ್ದು, ದೇಶದಲ್ಲಿಯೇ ವಿಧಾನ ಪರಿಷತ್ತನ್ನು ಒಂದು ಮಾದರಿ ಸದನವನ್ನಾಗಿ ರೂಪಿಸುವುದಕ್ಕೆ ತಮ್ಮೆಲ್ಲರ ಸಹಕಾರ ಸದಾಕಾಲ ಇದೇ ರೀತಿಯಲ್ಲಿ ಮುಂದುವರಿಯಲಿ ಅಭಿಲಾಸೆಯನ್ನು ವ್ಯಕ್ತಪಡಿಸಿ ತಮ್ಮೆಲ್ಲರಿಗೂ ನಾನು ಮತ್ತೊಮ್ಮೆ ಅಭಿನಂದನೆಯನ್ನು ವ್ಯಕ್ತ ಮಾಡುತ್ತೇನೆ.

**೦7. ಶಾಸನ ರಚನೆ**

**ವಿಧೇಯಕಗಳನ್ನು ಹಿಂಪಡೆಯುವ ಪ್ರಸ್ತಾವ ಹಾಗೂ ಅಂಗೀಕಾರ**

**ಅ) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2024**

**ಹಿಂಪಡೆಯುವ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವವನ್ನು ಸದನದ ಮುಂದೆ ಮುಡಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯುವುದು."

**ಪ್ರಸ್ತಾವವನ್ನು ಮಂಡಿಸಲಾಯಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಸದನದ ಅನುಮತಿ ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವನ ಏನೆಂದರೆ;

"2024ನೇ ಸಾಲಿನ "ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ಹಿಂಪಡೆಯಲು ಸದನದ ಅನುಮೋದನೆ ದೊರೆಯಿತು.**

**ಆ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2024**

**ಹಿಂಪಡೆಯುವ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯುವುದು"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಸದನದ ಅನುಮತಿ ಕೋರುತ್ತೇನೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

“2024ನೇ ಸಾಲಿನ "ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ಹಿಂಪಡೆಯಲು ಸದನದ ಅನುಮೋದನೆ ದೊರೆಯಿತು.**

**ಇ) ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024**

**ಹಿಂಪಡೆಯುವ ಪ್ರಸ್ತಾವ**

**ಶ್ರೀ ಎನ್.ಎಸ್.ಬೋಸ್‌ರಾಜು(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ)) ವಿಧೇಯಕವನ್ನು ಹಿಂದಕ್ಕೆ ಪಡೆಯುವ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ನೇ ಸಾಲಿನ ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯುವುದು"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2024ನೇ ಸಾಲಿನ ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಸದನದ ಅನುಮತಿ ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ನೇ ಸಾಲಿನ "ಕರ್ನಾಟಕ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ಹಿಂಪಡೆಯಲು ಸದನದ ಅನುಮೋದನೆ ದೊರೆಯಿತು.**

**೦೮ ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಊ) ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್(ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯ ಸಚಿವರು (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ "ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯ ಸಚಿವರು (ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಅದರ ಜೊತೆಗೆ ಇದು ಅತ್ಯಂತ ಸರಳವಾಗಿರುವಂತಹ ಬಿಲ್ ಆಗಿದೆ. ಈಗಾಗಲೇ ಈ ಕಾನೂನನ್ನು ಮಾಡಿ ಕಳುಹಿಸಿದ್ದೀರಿ. ಆದರೆ, ಅದು ರಾಜ್ಯಪಾಲರ ಹತ್ತಿರ ಹೋದಂತಹ ಸಂದರ್ಭದಲ್ಲಿ ನಾವು ನಗರ ಸಭೆಯ ಅಧ್ಯಕ್ಷರು ಹಾಗೂ ವಿರೋಧ ಪಕ್ಷದ ನಾಯಕರು ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಅವರುಗಳನ್ನು ಸೇರಿಸಿಲ್ಲವೆಂದು ಹೇಳಿ, ರಾಜ್ಯಪಾಲರಿಗೆ ಬಂದಿರತಕ್ಕಂತಹ ಏನು ಮನವಿ ಪತ್ರಗಳಿದ್ದವು, ಅವುಗಳ ಬಗ್ಗೆ ನಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಇದನ್ನು ಒಪ್ಪುತ್ತೀರಾ, ಹೇಗೆ ಎಂದವರು ಕೇಳಿದರು. ಆಗ ನಮಗೇನೂ ಇದರ ಬಗ್ಗೆ ತಕರಾರು ಇಲ್ಲ. ಇನ್ನು ನೀವು ಯಾರನ್ನು ಸಜೆಸ್ಟ್ ಮಾಡುತ್ತೀರಾ ಅವರನ್ನು ಮಾಡುತ್ತೇವೆಂದು ಹೇಳಿದೆವು. ಆ ರೀತಿಯಾಗಿ ನಾವು ಅಧ್ಯಕ್ಷರನ್ನು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹಾಗೂ ಎಂ.ಎಲ್.ಸಿ.ಯವರನ್ನು ಹಾಗೂ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳನ್ನು ಈ ಸಮಿತಿಯೊಳಗೆ ಸೇರಿಸುವುದಕ್ಕೆ ಒಪ್ಪಿಕೊಂಡಿದ್ದೇವೆ, ಆ ತಿದ್ದುಪಡಿಯನ್ನು ಈ ಸಂದರ್ಭದಲ್ಲಿ ತಂದಿದ್ದೇವೆ, ದಯಮಾಡಿ, ಈ ಸದನ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಪೌರಾಡಳಿತ ಸಚಿವರಾದ ಶ್ರೀ ರಹೀಂ ಖಾನ್ ರವರ ಹೆಸರಿನಲ್ಲಿರುವ ವಿಧೇಯಕವನ್ನು ಮಾನ್ಯ ಸಚಿವರಾದ ಶ್ರೀಮಾನ್ ಹೆಚ್.ಕೆ. ಪಾಟೀಲ್ ರವರು ಈಗ ಮಂಡಿಸಿದ್ದಾರೆ. ಇದು ಅಭಿವೃದ್ಧಿಗೆ "ಗದಗ-ಬೆಟಗೇರಿ, ಗದಗ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿರುವಂತಹ ಹಿನ್ನೆಲೆಯಲ್ಲಿ ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ, ಈ ಬಿಲ್ಲಿಗೆ ಸಂಬಂಧಿಸಿದಂತೆ ಕೆಲವೊಂದು ಮಹತ್ವದ, ಗಂಭೀರದ ವಿಷಯಗಳನ್ನು ನಾನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಒಂದು ವರ್ಷದ ಹಿಂದೆ ಇದೇ ವಿಧೇಯಕವನ್ನು ಮಾನ್ಯ ಸಚಿವರಾದ ಶ್ರೀಮಾನ್ ಹೆಚ್.ಕೆ.ಪಾಟೀಲ್ ರವರು ಮಂಡಿಸಿದರು. ಮಂಡಿಸಿದಂತಹ ಸಂದರ್ಭದಲ್ಲಿ ನಾನು ಅಕ್ಷೇಪಣೆಯನ್ನು ಸಹ ಮಾಡಿದ್ದೆ. ಸಲಹೆಗಳನ್ನು ಸಹ ಕೊಟ್ಟಿದ್ದೆ. ನಾನು ಕೊಟ್ಟಂತಹ ಸಲಹೆಗಳನ್ನು ಈ ತಿದ್ದುಪಡಿಯೊಳಗೆ ಜಾರಿಗೆ ತಂದಿರುವುದು ಸಂತೋಷದ ವಿಚಾರ. ನಮ್ಮ ಅಕ್ಷೇಪಣೆ ಏನು ಇತ್ತು ಎಂದರೆ "ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರದ ಒಂದು ಕಮಿಟಿಯನ್ನು ಮಾಡಲಾಗಿತ್ತು, ಆ ಕಮಿಟಿಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶವೇ ಇರಲಿಲ್ಲ. ನಗರಸಭಾ ಅಧ್ಯಕ್ಷರು ಇರಲಿಲ್ಲ. ಆ ಭಾಗದ ಎಂ.ಎಲ್.ಸಿ.ಗಳು ಇರಲಿಲ್ಲ. ಆ ಭಾಗದ ಎಂ.ಪಿ. ಇರಲಿಲ್ಲ. ಇದರಿಂದ ಚುನಾಯಿತ ಪ್ರತಿನಿಧಿಗಳಿಗೆ ಅವಮಾನವಾಗುತ್ತದೆ. ಆದ್ದರಿಂದ, ಸೇರಿಸಿ ಎಂದು ಹೇಳಿದ್ದೆವು. ಅದನ್ನು ಈಗ ತಂದಿದ್ದು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ನನ್ನ ಆಕ್ಷೇಪಣೆ ಏನು ಇತ್ತು ಎಂದರೆ, ಆ ವಿಧೇಯಕ ಪಾಸ್ ಆಗುವಾಗ ನಾನು ಆಕ್ಷೇಪಣೆ ಮಾಡಿರುತ್ತೇನೆ. ದಯವಿಟ್ಟು ಇದರ ಬಗ್ಗೆ ಮರುಪರಿಶೀಲನೆ ಮಾಡಿ, ತಿದ್ದುಪಡಿ ಮಾಡಿ ಮರು ಮಂಡನೆ ಮಾಡಿ ಎಂದು ಹೇಳಿದ್ದೆವು. ಏತಕ್ಕೆಂದರೆ, ಏನು 34 ಎಕರೆ ಈ ಒಂದು ಪ್ರಾಧಿಕಾರ ರಚನೆಗೆ ಈ ರೀತಿಯಲ್ಲಿ ಮಾಡುತ್ತಿದ್ದಾರೆ, 34 ಎಕರೆ ವಿಚಾರದಲ್ಲಿ ವಿಧೇಯಕವನ್ನು ಮಂಡನೆ ಮಾಡುವಾಗ ಅದು ಸರ್ಕಾರದ ಪ್ರಾಪರ್ಟಿಯಾಗಿರಲಿಲ್ಲ. ಅದು ನಗರಸಭೆ ಪ್ರಾಪರ್ಟಿಯಾಗಿತ್ತು. ಆ ವಿಚಾರವಾಗಿ ನಾನು ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೆ. ಈ 34 ಎಕರೆ ಜಾಗ ನಗರಸಭೆಯ ಹೆಸರಿನಲ್ಲಿದೆ, ಅವರ ಸಹಮತಿಯನ್ನು ತೆಗೆದುಕೊಳ್ಳಿ, ಅವರ ಸಹಮತಿಯನ್ನು ತೆಗೆದುಕೊಂಡು ನೀವು ಮಾಡಬೇಕೆಂದು ಸಚಿವರಲ್ಲಿ ವಿನಂತಿ ಮಾಡಿಕೊಂಡಿದ್ದೆವು. ಆ ಸಮಯದ ಹೇಳಿಕೆ ಇದೆ. ಕಳೆದ ವರ್ಷದ ನಡವಳಿಕೆಯನ್ನು ಇಟ್ಟುಕೊಳ್ಳಿ. ಇದು ನಗರಸಭೆಯ ಆಸ್ತಿಯಾಗಿದ್ದು, ಇದನ್ನು ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳಿದ್ದೆ. ಮಾನ್ಯ ಸಚಿವರು ಚರ್ಚೆಯಲ್ಲಿ ತಾವು ಹೇಳಿಕೆಯನ್ನು ಕೊಟ್ಟಿದ್ದರು. ಏನೆಂದು ಹೇಳಿಕೆಯನ್ನು ಕೊಟ್ಟಿದ್ದೀರಿ ಎಂದರೆ; *"The survey numbers that have been furnished here, these are all the lands which are in possession of the Government..."* ಮಾನ್ಯ ಸಚಿವರು ಅಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ವಸ್ತುಸ್ಥಿತಿ ಈ ರೀತಿ ಇದ್ದರೂ ಸಹ ವಿಧೇಯಕವನ್ನು ಪಾಸ್ ಮಾಡಿಕೊಂಡರು. ವಿಧೇಯಕವನ್ನು ಪಾಸ್ ಮಾಡಿಕೊಂಡ ಮೇಲೆ ನಾವು ರಾಜ್ಯಪಾಲರ ಹತ್ತಿರ ಹೋಗಬೇಕಾಯಿತು. ನಾವು ರಾಜ್ಯಪಾಲರ ಹತ್ತಿರ

ಹೋಗಿ ಅವರ ಹತ್ತಿರ ಈ ವಿಷಯವಾಗಿ ಮನವಿ ಮಾಡಿಕೊಂಡೆವು. ಈ ಪ್ರಾಪರ್ಟಿ ಮುನ್ಸಿಪಾಲಿಟಿ ಪ್ರಾಪರ್ಟಿಯಾಗಿದೆ. ಅವರ ಅನುಮತಿಯನ್ನು ತೆಗೆದುಕೊಳ್ಳದೆ, ಅಲ್ಲಿ ಪ್ರಾಧಿಕಾರ ಮಾಡಲಿಕ್ಕೆ ಹೊರಟಿದ್ದಾರೆಂದು ನಾವು ರಾಜ್ಯಪಾಲರಿಗೆ ಹೇಳಿದೆವು. ಅವರು ಇದರ ಬಗ್ಗೆ ದಾಖಲಾತಿಗಳನ್ನು ಕೇಳಿದರು. 34 ಎಕರೆಗೆ ಸಂಬಂಧಪಟ್ಟಂತೆ ಮುನ್ಸಿಪಾಲಿಟಿಯ ದಾಖಲೆಗಳನ್ನು ತೆಗೆದುಕೊಂಡು ಬಂದು ಕೊಟ್ಟಿದ್ದೇವೆ. ಆಗ ಅವರು ಆ ವಿಧೇಯಕವನ್ನು ವಾಪಸ್ಸು ಕಳುಹಿಸಿದರು. ನೀವು ಅವರಿಗೆ ಹೇಳಿದ ಮೇಲೆ ಪ್ರಾಪರ್ಟಿ ಸರ್ಕಾರದ ಹೆಸರಿನಲ್ಲಿ ಇಲ್ಲ. ಅದನ್ನು ನೀವು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದಾಗ ನೀವು ಕ್ಯಾಬಿನೆಟ್ ತೆಗೆದುಕೊಂಡು ಹೋಗಿ ವಿಶೇಷ ಪವರ್ exercise ಮಾಡಿ ಕ್ಯಾಬಿನೆಟ್‌ನೊಳಗೆ ಆ ಪ್ರಾಪರ್ಟಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೀರಿ. ಈಗ ನನ್ನ ಪ್ರಶ್ನೆ ಏನೆಂದರೆ, ಮಾನ್ಯ ಸಚಿವರಾದ ಶ್ರೀಮಾನ್ ಹೆಚ್.ಕೆ.ಪಾಟೀಲ್ ರವರಿಗೆ ತಪ್ಪು ಮಾಹಿತಿಯನ್ನು ಕೊಟ್ಟು ಸದನದೊಳಗೆ ಈ ಪ್ರಾಪರ್ಟಿ ಸರ್ಕಾರದ ವಶದಲ್ಲಿ ಇದೆ ಎಂದು ಯಾರು ಹೇಳಿದರು? ಇದು ಸದನಕ್ಕೆ ಅವಮಾನ.

(ಮುಂದು)

(904) 21.08.2025 01.20 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):**

ಅರೆ..ನಾನು ಒಬ್ಬ ಸದಸ್ಯನಾಗಿ ಹೇಳಿದ್ದಕ್ಕೆ ಕಿಮ್ಮತ್ತಿಲ್ಲವೆ? ರಾಜ್ಯಪಾಲರು ನಿರ್ದೇಶನವನ್ನು ಕೊಟ್ಟ ಮೇಲೆ ನೀವು ಸಚಿವ ಸಂಪುಟದ ವಿಶೇಷಾಧಿಕಾರವನ್ನು exercise ಮಾಡಿ ನೀವು ಸರ್ಕಾರದ ವಶಕ್ಕೆ ಪಡೆದುಕೊಂಡಿರಿ. ಈ ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟರೇ? ಇದು ಸದನಕ್ಕೆ ಮಾಡಿದ ಅವಮಾನ.

**ಸಭಾಪತಿಯವರು:-** ಸಾಕು..ಸಾಕು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನನಗೆ ನೀವು ಅವಕಾಶ ಕೊಡಬೇಕು.

**ಸಭಾಪತಿಯವರು:-** ಆಗುವುದಿಲ್ಲ. ಮಾನ್ಯ ಸಚಿವರೆ, ಉತ್ತರ ಹೇಳಿ. ಈಗ ಭಾಷಣ ಮಾಡುತ್ತಾ ಕೂರುವುದಲ್ಲ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ನಾನು ಭಾಷಣ ಮಾಡುತ್ತಿಲ್ಲ. ಸ್ಪಷ್ಟೀಕರಣ ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಪ್ರದೀಪ್ ಶೆಟ್ಟರ್:-** ಅವರು ಆ ಭಾಗದ ಸದಸ್ಯರಿದ್ದಾರೆ. ಅವರಿಗೆ ಹೇಳಲು ಬಿಡಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಅವರು ಉತ್ತರವನ್ನು ಆಮೇಲೆ ಕೊಡಲಿ. ಮಾನ್ಯ ಸಂಕನೂರ ಅವರು ಮೊದಲು ಬಿಲ್ ಬಗ್ಗೆ ಮಾತನಾಡಲಿ.

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಬೇರೆಯ ವಿಷಯವನ್ನು ಮಾತನಾಡುತ್ತಿದ್ದಾರೆ. ಅದರಲ್ಲಿರುವ ವಿಷಯವೇನು? ರಾಜ್ಯಪಾಲರ ಹತ್ತಿರ ಹೋದೆವು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪಾಟೀಲರೆ, ಒಂದು ನಿಮಿಷ.. (ವಿರೋಧ ಪಕ್ಷದ ಸದಸ್ಯರ ಕಡೆಗೆ ತಿರುಗಿ) ನೀವು ಯಾರೂ ನನ್ನ ಮಾತನ್ನೇ ಕೇಳುವುದಿಲ್ಲವಲ್ಲ. **(ಗೊಂದಲ)** ಮಾನ್ಯ ಸಚಿವರೆ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ.. ಕುಳಿತುಕೊಳ್ಳಿ. ಮಾನ್ಯ ಸದಸ್ಯರೆ, ತಾವು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದನ್ನು ಸಚಿವರು ತಿಳಿದುಕೊಂಡಿದ್ದಾರೆ. ಈಗ ಅವರು ಉತ್ತರ ಹೇಳಲಿ. ನಂತರ ನಾನು ತಮಗೆ clarification ಗೆ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:-** ಮಾನ್ಯ ಸಂಕನೂರ ಅವರೆ, ಕುಳಿತುಕೊಳ್ಳಿ. ಅವರು ಮಾತನಾಡುವುದು ಕಡತಕ್ಕೆ ಹೋಗುವುದು ಬೇಡ. ಮಾನ್ಯ ಸಂಕನೂರ ಅವರೆ, ಕುಳಿತುಕೊಳ್ಳಿ.

**(ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಅವರು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರು ನನಗೆ ಅವಕಾಶವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೆ, ಮಾನ್ಯ ಸಂಕನೂರ ಅವರು ಹೇಳಿದ್ದಕ್ಕೆ ಎಲ್ಲಾ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. 6 ಜನರನ್ನು ಸೇರಿಸುವುದಕ್ಕೆ ಇರುವ ಬಿಲ್ ಇದು. ಇಷ್ಟಕ್ಕೆ ಮಾತ್ರ ನಾನು restrict ಮಾಡಬೇಕೆಂದಿತ್ತು. ನಾವು ಸರ್ಕಾರದವರು ಕಾನೂನು ತಂದಿದ್ದು. ಇಲ್ಲಿ ನಾವು ಸಚಿವ ಸಂಪುಟದ ವಿಶೇಷಾಧಿಕಾರವನ್ನು ಉಪಯೋಗ ಮಾಡಿ ಮುನಿಸಿಪಾಲಿಟಿಯಿಂದ ಸರ್ಕಾರಕ್ಕೆ

ಆಸ್ತಿಯನ್ನು ತೆಗೆದುಕೊಂಡಿದ್ದು, transfer ಮಾಡಿಕೊಂಡಿದ್ದು, it is all in the interest of Gadag. It is all in the interest of people. ನಮ್ಮ ಮುನಿಸಿಪಾಲಿಟಿಯಲ್ಲಿ ಖೊಟ್ಟಿ resolution ಮಾಡಿ ಅದನ್ನು ಲೀಸ್ ಕೊಡಬೇಕು ಎಂದು ಮಾಡಿದ್ದು, ಈಗಾಗಲೇ ಕ್ರಿಮಿನಲ್ ಕೇಸ್ ಆಗಿದ್ದು charge sheet ಆಗಿದೆ. ಅವುಗಳ ಯಾವುದೇ ವಿವರಕ್ಕೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಜನರಿಂದ ಯಾವ ಸಲಹೆಗಳು ಬಂದಿದ್ದವು, ವಿನಂತಿ ಬಂದಿದ್ದವು, ಮನವಿ ಬಂದಿದ್ದವು ಹಾಗೂ ಸಚಿವ ಸಂಪುಟದಲ್ಲಿಯೂ ಸಹ ಇದರ ಬಗ್ಗೆ ಸಲಹೆ ನೀಡಿದ್ದರು; ಅದರ ಹಿನ್ನೆಲೆಯಲ್ಲಿ C-i, C-ii, C-iii, C-iv, C-v, C-vi, ಈ ಆರು ಕ್ಯಾಟಗರಿಯವರನ್ನು ನಾಮಕರಣ ಮಾಡುವುದಕ್ಕೆ ಈ ಬಿಲ್ ಅನ್ನು ತಂದಿದ್ದೇವೆ. ಇದನ್ನು ನಾವು ಮಾಡುತ್ತೇವೆ. ತನ್ಮೂಲಕ ರಾಜ್ಯಪಾಲರು ನಮಗೆ ಚರ್ಚೆಯಲ್ಲಿ ಏನು ತಿಳಿಸಿದ್ದರೋ, ಅದನ್ನು ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ. ಆಸ್ತಿಯು ಹೇಗೆ ಸರ್ಕಾರದ ಕೈ ಬಿಟ್ಟುಹೋಗುತ್ತದೆ, ಮುನಿಸಿಪಾಲಿಟಿ ಕೈ ಬಿಟ್ಟು ಹೋಗುತ್ತದೆ ಎನ್ನುವುದು ಅವರಿಗೆ ಅರ್ಥವಾದ ಕ್ಷಣವೇ ಅವರು ತಾವೆಲ್ಲರೂ ಪಾಸ್ ಮಾಡಿಕೊಟ್ಟಿದ್ದಂಥ ಮಸೂದೆಗೆ ಅಂಗೀಕಾರ ಕೂಡ ಕೊಟ್ಟರು. ಅದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರಿಯಾದ ಮಾಹಿತಿ ಅವರಿಗೆ ಮುಟ್ಟಿದ ಕೂಡಲೇ ನಮಗೆ ಅಂಗೀಕಾರ ಕೊಟ್ಟಿದ್ದಕ್ಕಾಗಿ ಘನತೆವೆತ್ತ ರಾಜ್ಯಪಾಲರನ್ನು ನಾನು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತೇನೆ. ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕೆಂದು ಈ ಸದನವನ್ನು ಕೋರುತ್ತೇನೆ.

**ಶ್ರೀ ಎಸ್. ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ಅವರು ಅಲ್ಲಿ ಪ್ರಾಧಿಕಾರ ಮಾಡಲು ನಮಗೆ ಸಂಪೂರ್ಣವಾದ ಬೆಂಬಲವಿದೆ. ಇದು ಅಭಿವೃದ್ಧಿಗೆ ಪೂರಕವಾಗಿರುವ ಬಿಲ್ ಆಗಿರುವುದರಿಂದ ನಾನು ಸ್ವಾಗತ ಮಾಡುತ್ತೇನೆಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನನ್ನ technical point ಏನು? ಕಾನೂನು ಬಾಹಿರ ಸಭೆಗಳಿಂದ ಆದದ್ದೇನು? ಅಂದಿನ ದಿನವೇ ಮಾನ್ಯ ಸಚಿವರು ಆ ಪ್ರಾಪರ್ಟಿ ಸರ್ಕಾರದ ಆಸ್ತಿ ಎಂದು ಹೇಳಿಕೆಯನ್ನು ಕೊಟ್ಟರು. ಸರ್ಕಾರದ ಪ್ರಾಪರ್ಟಿ ಇದ್ದಾಗ ಪುನಃ ಸಚಿವ ಸಂಪುಟದ ಮುಂದೆ ಹೋಗುವ ಅವಶ್ಯಕತೆ ಏನು? ಪುಟ ಸಂಖ್ಯೆ ೩ರಲ್ಲಿ include ಮಾಡಿದ್ದಾರೆ.

ಮಾನ್ಯ ಸಚಿವರೆ, ನನಗೆ ನಿಮ್ಮ ಬಗ್ಗೆ ಗೌರವವಿದೆ. ನೀವು ಕಾನೂನು ಸಚಿವರು. ನಿಮ್ಮಷ್ಟು ನಮಗೆ ಕಾನೂನಿನ ಜ್ಞಾನವಿಲ್ಲ. ಆದರೆ ಪ್ರಶ್ನೆಯೇನು? ಯಾವ ಅಧಿಕಾರಿ ನಿಮಗೆ ತಪ್ಪು ಮಾಹಿತಿಯನ್ನು ಕೊಟ್ಟು ಆ ಪ್ರಾಪರ್ಟಿ ಸರ್ಕಾರದ ಪರವಾಗಿದೆಯೆಂದು ಹೇಳಿದವರು? ತಪ್ಪಲ್ಲವೆ? ಇದು ಸದನಕ್ಕೆ ಅವಮಾನ ಅಲ್ಲವೆ? ನೀವು ಮಾಡುವುದೆಲ್ಲಾ ಒಳ್ಳೆಯದು, ಅದಕ್ಕೆ ನಮ್ಮ ಬೆಂಬಲವಿದೆ. ನಾನು proceedings ಅನ್ನು ತೆಗೆದುಕೊಂಡಿದ್ದೇನೆ.

ನಾವು ನಿಮ್ಮನ್ನು support ಮಾಡುತ್ತೇವೆ. ಯಾವಾಗಲೂ ನಾವು ನಿಮ್ಮ ಜೊತೆಯಲ್ಲಿದ್ದೇವೆ. ತಪ್ಪು ಮಾಹಿತಿಯನ್ನು ಯಾವ ಅಧಿಕಾರಿ ಕೊಟ್ಟರು? ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟ ಅಧಿಕಾರಿಯ ಮೇಲೆ ನೀವು ಯಾವ ಕ್ರಮ ಕೈಗೊಳ್ಳುತ್ತೀರಿ? That is my basic question. ಆಗ ನಿಮ್ಮ ಪ್ರಾಪರ್ಟಿ ನಿಮ್ಮ ಹೆಸರಿನಲ್ಲಿತ್ತೆಂದರೆ ಸಚಿವ ಸಂಪುಟದ ಮುಂದೆ ಈ ವಿಷಯವನ್ನು ಏಕೆ ತೆಗೆದುಕೊಂಡು ಹೋದಿರಿ? ನಂತರ ಇಂತಹ possession ತೆಗೆದುಕೊಂಡಿದ್ದು, ಇದಕ್ಕೆ approval ಕೊಡಬೇಕೆಂದು ರಾಜ್ಯಪಾಲರ ಬಳಿ ಹೋದಿರಿ. ಆಗ ಅವರು approval ಕೊಟ್ಟರು.

ಮಾನ್ಯ ಸಭಾಪತಿಯವರೆ, ನನಗೆ ಇನ್ನೊಂದು ಪ್ರಶ್ನೆಯಿದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಂಕನೂರ ಅವರೆ, ತಮಗೆ ತಪ್ಪು ಮಾಹಿತಿ ಬಂದಿದೆ. ರಾಜ್ಯಪಾಲರು ಅದಕ್ಕೆ ನಮಗೆ ಕೊಡಲಿಲ್ಲ. ನಾವು ಅವರೆದುರಿಗೆ ಹೇಗೆ ಮುನಿಸಿಪಾಲಿಟಿ ಠರಾವು ಖೊಟ್ಟಿ ಠರಾವು ಆಗಿದೆ, ಏನು police complaint ಆಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಆ ವಿಷಯಕ್ಕೆ ಇದಕ್ಕೆ ಸಂಬಂಧವಿಲ್ಲ. ಅದು ನಂತರದ ಘಟನೆ..

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಂಕನೂರ ಅವರೆ, ನೀವು ಹೇಳಿದಿರಿ. ರಾಜ್ಯಪಾಲರ ಬಳಿ ಏಕೆ ಹೋದಿರಿ ಎಂದು ನೀವು ಕೇಳಿದಿರಿ. ಅದಕ್ಕೆ ನಾನು ಸದನಕ್ಕೆ ಹೇಳಬೇಕಲ್ಲವೆ?

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಂಕನೂರ ಅವರೆ, ನಾನು ಯಾರು ಯಾರು ರಾಜ್ಯಪಾಲರ ಬಳಗೆ ಹೋಗಿದ್ದರೆಂದು ಹೇಳಲಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ನಾನು ಹೋಗಿದ್ದೀನೆ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಿ.ಸಿ.ಪಾಟೀಲರು ಹೋಗಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್:-** ನಾನು ಹೇಳುವುದಿಲ್ಲ, ನೀವು ಹೇಳಿ. ಯಾರು resolution ಮಾಡಿದವರು, ಯಾರ ಮೇಲೆ criminal case ಆಗಿ charge sheet ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳಲು ಬರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಂಕನೂರ ಅವರೆ, ಮಾನ್ಯ ಸಚಿವರು ಹೇಳುವುದನ್ನು ಕೇಳಿ.

**ಶ್ರೀ ಹೆಚ್.ಕೆ.ಪಾಟೀಲ್:-** ಆದರೆ ನಾನು ಇಷ್ಟನ್ನು ತಮಗೆ ಹೇಳಬಯಸುತ್ತೇನೆ. ನಾವು ಏನೇನು ಮಾಡಿದ್ದೆವೋ ಅದೆಲ್ಲಾ ಗದಗ್‌ನ ಹಿತದೃಷ್ಟಿಯಿಂದ, ಸರ್ಕಾರದ ಹಿತದೃಷ್ಟಿಯಿಂದ. ಸಾರ್ವಜನಿಕರ ಆಸ್ತಿ ಸಾರ್ವಜನಿಕರಿಗೆ ಉಳಿಯಬೇಕು ಎಂದು ಮಾಡಿರುವಂಥದ್ದು.

ಇದು ಒಂದು ದಿವಸದ್ದಲ್ಲ. ಸುಮಾರು 50 ವರ್ಷಗಳ ಹಿಂದೆ ಕಣವಿ ಕ್ವಾಟೆಪ್ಪನವರು ಇದ್ದಾಗಿನಿಂದ ಇರುವಂಥದ್ದು. ಮಾನ್ಯ ಸಭಾಪತಿಯವರೆ, ತಮಗೆ ಕಣವಿ ಕ್ವಾಟೆಪ್ಪನವರ ಬಗ್ಗೆ ತಿಳಿದೇ ಇದೆ. ಕಣವಿ ಕ್ವಾಟೆಪ್ಪನವರು ಇದ್ದಾಗ ಸುಪ್ರೀಂ ಕೋರ್ಟ್‌ನವರೆಗೆ ಹೋಗಿ, ಸುಪ್ರೀಂ ಕೋರ್ಟ್ ನಿರ್ಣಯವಾಗಿದ್ದರೂ ಕೂಡ ಕಬ್ಜ ತೆಗೆದುಕೊಳ್ಳಲಿಕ್ಕಾಗಿರಲಿಲ್ಲ. ಸರ್ಕಾರದ ಕಬ್ಜ ತೆಗೆದುಕೊಳ್ಳಲಿಕ್ಕಾಗಿರಲಿಲ್ಲ. ಮುನಿಸಿಪಾಲಿಟಿ ಕಬ್ಜ ತೆಗೆದುಕೊಳ್ಳಲಿಕ್ಕಾಗಿರಲಿಲ್ಲ. ಆಮೇಲೆ ಸರ್ಕಾರದ ಆದೇಶವಾಗಿ, ಶ್ರೀ ಹಿರೇಮಠ ಅವರು ಜಿಲ್ಲಾಧಿಕಾರಿಗಳಾಗಿದ್ದಾಗ ಎಲ್ಲಾ ಆಸ್ತಿಯನ್ನು ಸರ್ಕಾರದ ತಾಬಾ ತೆಗೆದುಕೊಂಡರು. ಮುನಿಸಿಪಾಲಿಟಿಯೊಂದಿಗೆ ಉಳಿದುಕೊಂಡು ಆ ಆಸ್ತಿಯನ್ನು ಉಳಿಸಿದರು. ಈ ಎಲ್ಲಾ ವಿವರಗಳನ್ನು ಹೇಳಬೇಕಾದರೆ ಬಹಳ ಸಮಯ ಬೇಕಾಗುತ್ತದೆ. ಇವತ್ತು ಈ ಬಿಲ್ ತಂದಿರುವುದು ಏಕೆಂದರೆ 6 ಜನರನ್ನು ಮೊದಲ ಮೂಲ ಬಿಲ್‌ನಲ್ಲಿದ್ದಂಥ ಸಮಿತಿಗೆ, ಪ್ರಾಧಿಕಾರಕ್ಕೆ 6 category ಯವರನ್ನು ಸೇರಿಸುತ್ತಿದ್ದೇವೆ. ಅದಕ್ಕಾಗಿ ನಿಮ್ಮ ಅನುಮೋದನೆಯನ್ನು ಕೇಳುತ್ತಿದ್ದೇನೆ ಎಂದು ಹೇಳಬಯಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಈಗ ಆ ಖೊಟ್ಟಿ ಠರಾವು ಮಾಡುವುದು, ಆಸ್ತಿ ಬೇರೆ ಮಾಡುವುದಕ್ಕೆ ಯಾವುದೇ ಸಂಬಂಧವಿಲ್ಲ. ಆ ಘಟನೆ ಆದದ್ದೇ ಬೇರೆ.

**ಸಭಾಪತಿಯವರು:-** ಈಗ ನೀವೇನು ಮಾಡಂತೀರಿ?

**ಶ್ರೀ ಎಸ್.ವ್ಹಿ.ಸಂಕನೂರ:-** ಏನೂ ಇಲ್ಲ. ಕಾನೂನು ಸಚಿವರು ನಮ್ಮವರೇ ಇದ್ದಾಗ ತಪ್ಪೇಕೆ ಆಯಿತು?

**ಸಭಾಪತಿಯವರು:-** ಆಯಿತು, ತಪ್ಪನ್ನು ಸರಿಪಡಿಸುತ್ತಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಚಿವರೆ, ನಿಮ್ಮ ಬಗ್ಗೆ ನಮಗೆ ನೋವೆನ್ನಿಸುತ್ತದೆ. ನೀವು ಕಾನೂನು ಸಚಿವರಾಗಿದ್ದಾಗ ತಪ್ಪು ಮಾಹಿತಿ ಕೊಟ್ಟವರು ಯಾರು? ಹಾಗಿದ್ದಲ್ಲಿ ನೀವು ಸಚಿವ ಸಂಪುಟದ ಮುಂದೆ ಏಕೆ ಹೋದಿರಿ?

**ಸಭಾಪತಿಯವರು:-** ಅವರಿಗೆ enquire ಮಾಡಿ ತಿಳಿಸಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಎರಡನೆಯದಾಗಿ ನಾನು ವೈಯಕ್ತಿಕವಾಗಿ ತಿಳಿದುಕೊಂಡಂತೆ ಇವತ್ತು ತಿದ್ದುಪಡಿ ಬಿಲ್‌ಗೆ ಯಾರ್ಯಾರನ್ನು Members ಎಂದು ಹೇಳಿದ್ದರೋ ಅವರನ್ನೆಲ್ಲಾ Members ಅನ್ನು ಮಾಡಿ ಬಿಲ್ ಅನ್ನು ತಂದಿದೀರಿ. ನನಗೆ ಇರುವಂಥ legal knowledge ಪ್ರಕಾರ ಇವತ್ತು ಇದು ಅಧಿಕೃತವಾಯಿತು. ಅಂದರೆ ಪ್ರಾಧಿಕಾರವನ್ನು ರಚನೆ ಮಾಡಲಿಕ್ಕೆ ಅಸ್ತಿತ್ವ ಸರ್ಕಾರಕ್ಕೆ ಬಂದಿತು. ಒಪ್ಪುತ್ತೀರೊ ಇಲ್ಲವೋ ಮಾನ್ಯ ಸಚಿವರೆ? ಮೊದಲೇ ಆಗಿದ್ದರೆ, ಇವತ್ತು ಏಕೆ ಒಪ್ಪಿಗೆಗಾಗಿ ಇದು ಸದನಕ್ಕೆ ಬಂದಿತು?

**ಶ್ರೀ ಹೆಚ್.ಕೆ.ಪಾಟೀಲ್:-** ಇದಕ್ಕೆ ಆರು ಜನರನ್ನು ಸೇರಿಸುತ್ತಿದ್ದೇವಲ್ಲ, ಅದಕ್ಕೆ ಒಪ್ಪಿಗೆಗಾಗಿ ಸದನಕ್ಕೆ ಬಂದಿದೆ. ತಾವು ದಯಮಾಡಿ ಅದನ್ನು ಗಮನಿಸಬೇಕು. ನಮ್ಮ ಬಿಲ್ ಪ್ರತಿಯನ್ನು ತಾವು ದಯಮಾಡಿ ನೋಡಬೇಕು. ಬಿಲ್ ಪ್ರತಿಯಲ್ಲಿ ಪ್ರಕರಣ 3 ರ ತಿದ್ದುಪಡಿಯನ್ನು ನಾವು ನಿಮ್ಮ ಎದುರಿಗೆ ಪ್ರಸ್ತಾಪ ಮಾಡುತ್ತಿದ್ದೇವೆ. It is not the full Bill. It is the amendment to the old Bill and we are including six Members apart from the existing 15 or so. ಆ 15 ಜನರ ಜೊತೆಗೆ ಈ 6 ಜನರನ್ನು ಸೇರಿಸುತ್ತಿದ್ದೇವೆ. The whole Bill was assented by the Governor.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, ಆ ಕ್ಷೇತ್ರಕ್ಕೆ ನಾವು 4 ಜನ ಎಂ.ಎಲ್.ಸಿ.ಗಳಿದ್ದೇವೆ. ಅವರು ಒಬ್ಬರೇ ಒಬ್ಬರೆಂದು ಬರೆದಿದ್ದಾರೆ. ಎರಡು ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಹಾಗೂ ಎರಡು ಶಿಕ್ಷಕ ಹಾಗೂ ಪದವೀಧರ ಕ್ಷೇತ್ರಗಳಿಂದ ಬಂದಿರುವುದು.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಚಿವರೆ, ತಾವು ಯಾರೆಂದು ಹೆಸರು ಹೇಳಿಬಿಡಿ. ಏಕೆಂದರೆ ನಾನು ಮತ್ತು ಸಲೀಂ ಅಹ್ಮದ್ ಇಬ್ಬರಿದ್ದೇವೆ. ನಮ್ಮ ಹೆಸರು ಇದೆಯೋ ಇಲ್ಲವೋ ಹೇಗೆ ತಿಳಿಯುತ್ತದೆ?

(ಮುಂದು)

(905) 21-08-2025 (1.30) ಕೆಜಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ. ಮಾನ್ಯ ಸದಸ್ಯರು 15 ಜನರಲ್ಲಿ ಕೇವಲ 4 ಜನರು ಎಂದಷ್ಟೇ ತಿಳಿದುಕೊಂಡಿದ್ದಾರೆ. ಮತ್ತೆ ಯಾರಾದರೂ ಇರಬಹುದು. ಮಾನ್ಯ ಸದಸ್ಯರಾದ ಸಲೀಂ ಅಹಮದ್‌ರವರು ಹಿಂದಿನ ಸರ್ಕಾರದ ಕಾಲದಲ್ಲಿ ನನ್ನನ್ನು Member ಮಾಡಿ ನಾನು ಆ Constituency ಅನ್ನು represent ಮಾಡುತ್ತೇನೆಂದು ಹೇಳಿದರೂ ಸಹ ಸಾಧ್ಯವಾಗಲಿಲ್ಲ. ಈಗ 4 ಜನ ಎಂ.ಎಲ್.ಸಿ.ಗಳು

ಇದ್ದಾರೆ. ಒಬ್ಬರು ಎಂ.ಪಿ. ಇದ್ದಾರೆ. ಆ ವ್ಯಾಪ್ತಿಯೊಳಗೆ ಇನ್ನೊಬ್ಬರು ಎಂ.ಪಿ. ಬರಬಹುದು. ಆದ್ದರಿಂದ, ಪ್ರಾಧಿಕಾರದ ಅಧಿಕಾರದ ವ್ಯಾಪ್ತಿಯೊಳಗೆ ಬರುವ ಪ್ರಾದೇಶಿಕ ಮತಕ್ಷೇತ್ರದ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸದಸ್ಯರುಗಳ ಪೈಕಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ನಾಮ ನಿರ್ದೇಶಿಸಿದ ಒಬ್ಬ ಸದಸ್ಯರು ಇರುತ್ತಾರೆಂದು ಹೇಳುತ್ತಿದ್ದೇವೆ. ಮಾನ್ಯ ಸಭಾಪತಿಯವರು ಯಾರನ್ನು ಮಾಡುತ್ತಾರೆ, ಮಾನ್ಯ ಸಭಾಪತಿಯವರು seniority ಮೇಲೆ ಮಾಡುತ್ತಾರೆಯೋ ಅಥವಾ ಇರುವವರಲ್ಲಿಯೇ ಮಾಡುತ್ತಾರೆಯೋ ಅಥವಾ ಅಲ್ಲಿ ಇರಬೇಕೆಂದು ಬಯಸುವವರನ್ನು ಮಾಡುತ್ತಾರೆಯೋ ಎಂಬುದು ಮಾನ್ಯ ಸಭಾಪತಿಯವರಿಗೆ ಬಿಟ್ಟಿದು. ಈ ಅಧಿಕಾರ ಮಾನ್ಯ ಸಭಾಪತಿಯವರಿಗೆ ಇರುತ್ತದೆ ಎಂಬ ಕಾನೂನನ್ನು ಮಾಡಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನಾವು 4 ಜನ ಸದಸ್ಯರು ಇದ್ದೇವೆ. ಅದಕ್ಕೆ ಒಬ್ಬರ ಬದಲಿಗೆ ಇಬ್ಬರನ್ನು consider ಮಾಡಿ ಎಂದು ನಾವು ಮನವಿ ಮಾಡುತ್ತೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:- "ಖಂಡ 2 ಮತ್ತು 3 ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ) (ಶ್ರೀ ರಹೀಂ ಖಾನ್, ಪೌರಾಡಳಿತ ಮತ್ತು ಹಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ರ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಗದಗ-ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ನಿನ್ನೆ ರಾತ್ರಿ 12 ಗಂಟೆಯವರೆಗೆ ಸದನ ನಡೆದ ಬಗ್ಗೆ ಮಾಧ್ಯಮದವರು ಈ ಸದನದಲ್ಲಿ ನಡೆಯುವಂತಹ ಎಲ್ಲಾ ವಿಷಯಗಳನ್ನು ಪತ್ರಿಕೆಗಳಲ್ಲಿ ಮತ್ತು ಟಿ.ವಿ.ಮಾಧ್ಯಮಗಳಲ್ಲಿ ಬಿತ್ತರಿಸಿದ್ದಾರೆ. ಹಾಗಾಗಿ, ಈ ಸದನದ ವತಿಯಿಂದ ಮಾಧ್ಯಮದವರಿಗೆ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ):-** ಮಾನ್ಯ ಸಭಾಪತಿಯವರೇ, ನಮ್ಮದ್ದು 2 ಬಿಲ್‌ಗಳಿವೆ. ದಯವಿಟ್ಟು ಅವುಗಳನ್ನು ತೆಗೆದುಕೊಳ್ಳಿ.

(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮಂಜುನಾಥ್ ಭಂಡಾರಿಯವರು ಪೀಠದಲ್ಲಿ ಉಪಸ್ಥಿತರಾದರು)

**ಋ) ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ):-** ಮಾನ್ಯ ಸಭಾಪತಿಯವರೇ, "ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025" ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕದ ಒಂದು ಸಣ್ಣ ತಿದ್ದುಪಡಿಯನ್ನು, ಬಹಳ ಸರಳವಾಗಿ ಇರುವಂತಹ ತಿದ್ದುಪಡಿಯನ್ನು ನ್ಯಾಯಾಲಯದ ಆದೇಶಗಳ ಅನುಪಾಲನೆಯ ದೃಷ್ಟಿಯಿಂದ ಇವತ್ತು ಮಂಡನೆ ಮಾಡಿದ್ದೇವೆ. The Karnataka Conduct of Government Litigation Act ಏನಿದೆ, ಅದನ್ನು ನಮ್ಮ ಸರ್ಕಾರ ಬಂದ ಮೇಲೆ ನಾವು ಅದನ್ನು enact ಮಾಡಿದ್ದೇವೆ. ಇದರ ಉದ್ದೇಶ ಏನಿತ್ತು ಎಂದರೆ, ಸರ್ಕಾರದ ವ್ಯಾಜ್ಯಗಳು ಏನಿವೆ, Government is the biggest litigant. ಮಾನ್ಯ ಸದಸ್ಯರಾದ ಕೆ.ಪ್ರತಾಪ್ ಸಿಂಹ ನಾಯಕ್‌ರವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. Almost one third of the litigations are with the Government. Either Government has litigation with people or litigation with its own entities or litigation with its own instrumentalities. ಈ ಒಂದು ವ್ಯಾಜ್ಯಗಳ ನಿರ್ವಹಣೆಯೊಳಗೆ, ಅದರಲ್ಲೂ ಆಸಕ್ತರು, ಪ್ರಭಾವಿಗಳು ಹೆಚ್ಚು ಲಾಭ ಬರಬಹುದಾಗಿರುವಂತಹ ಪ್ರಕರಣಗಳಲ್ಲಿ ನಮ್ಮ ವ್ಯಾಜ್ಯ ನಿರ್ವಹಣೆಯಲ್ಲಿಯೇ ಲೋಪ ಇರುತ್ತಿತ್ತು. ಕೊರತೆ ಇರುತ್ತಿತ್ತು. ನಮ್ಮ ವಕೀಲರು ಒಂದು ರೀತಿಯಲ್ಲಿ ಅನಾಸಕ್ತಿ/ನಿರಾಸಕ್ತಿ ತೋರಿಸುತ್ತಿದ್ದರು. ಏನೋ ಒಂದು ಕೆಲಸ ನಡೆಯುತ್ತದೆ, ಒಂದು adjournment ಆದರೆ, ಆ ಕೆಲಸವನ್ನು ಮುಗಿಸಿಕೊಳ್ಳುತ್ತಿರುತ್ತಾರೆ. ಆ ರೀತಿ adjournment ತೆಗೆದುಕೊಳ್ಳುತ್ತಿದ್ದರು. ಒಟ್ಟು ಲೋಪಗಳು/ಕೊರತೆಗಳು ಎದ್ದು ಕಾಣುತ್ತಿದ್ದವು. ಆ ಸಂದರ್ಭದಲ್ಲಿ ನಾವು ಈ ವ್ಯಾಜ್ಯ ನಿರ್ವಹಣೆಗಾಗಿ ಕಾನೂನನ್ನು ತಂದಿದ್ದೆವು. ಆ ಕಾನೂನಿನ ಮುಖಾಂತರ ನಮ್ಮ provisions ನೊಳಗೆ ವಕೀಲರು ಆಗಿದ್ದವರಿಗೆ ಗೊತ್ತಾಗುತ್ತದೆ. ಕೆಲವು

ಕಡೆಗಳಲ್ಲಿ ನಮ್ಮ representation ನೇ ಇರುತ್ತಿರಲಿಲ್ಲ. ಅದಕ್ಕೆ, we have compelled them. We have made it mandatory that they should argue the case. Not only they should argue the case, they must give written argument. The written argument will compel the Judges also to be very cautious and serious on Government litigation. ಆ ತರಹದ ಹಲವಾರು ಕಾನೂನುಗಳನ್ನು ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ನ್ಯಾಯಾಲಯದವರು ನೀವು ಅಧಿಕಾರಿಯನ್ನು ಗೊತ್ತುಪಡಿಸಿ, nodal officer ರವರನ್ನು ಗೊತ್ತುಪಡಿಸಿ ಎನ್ನುವ ಕೆಲವು ಆದೇಶಗಳನ್ನು ಮಾಡಿದರು. ಆ ಕಾರಣದಿಂದ nodal officer ರವರನ್ನು ಗೊತ್ತುಪಡಿಸುವಂತಹ ಒಂದು provision ಅನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಈ ಕರ್ನಾಟಕ ವ್ಯಾಜ್ಯ ನಿರ್ವಹಣೆಯೊಳಗೆ ನಾವು ಬರೀ ಜಗಳವಾಡಿಕೊಂಡು ಹೋಗುವುದು ಅಥವಾ ಪ್ರಕರಣಗಳನ್ನು ಗೆದ್ದುಕೊಳ್ಳುತ್ತಾ ಹೋಗುವುದಲ್ಲ. ಈಗ ಕೆಲವು ತೀರ್ಪುಗಳು ಬಂದಿರುತ್ತವೆ. It may be against the Government. ಆದರೆ, ಆ ತೀರ್ಪುಗಳನ್ನು ಅನುಷ್ಠಾನ ಮಾಡದೇ ಹೋದರೆ ಏನು ಮಾಡುತ್ತೀರಿ? ಜನರು ಏನು ಮಾಡುವುದಕ್ಕೆ ಸಾಧ್ಯವಾಗುದಿಲ್ಲ. ಆದ್ದರಿಂದ, ಈ ತೀರ್ಪುಗಳನ್ನು ಸಮಯಕ್ಕೆ ಸರಿಯಾಗಿ ಆ ನಿಗದಿತ ಸಮಯದೊಳಗೆ ಅನುಷ್ಠಾನ ಆಗಬೇಕು. ಅವುಗಳ ಮೇಲೆ Orders ಮಾಡಿದ್ದರೆ, ಆ Order ಗಳ ಪಾಲನೆಯಾಗಬೇಕು. ಆ ನಿರ್ದೇಶನಗಳನ್ನು ಗಂಭೀರವಾಗಿ ಗಮನಿಸಬೇಕು. ಈ ಎಲ್ಲಾ ಹಿನ್ನೆಲೆಯೊಳಗೆ ನಾವು ನ್ಯಾಯಾಲಯದ ಆದೇಶದ ಪಾಲನೆಗೆ ವಿಶೇಷ provision ಅನ್ನು ಮಾಡಿದ್ದೇವೆ. ಆ ಎಲ್ಲಾ ನ್ಯಾಯಾಲಯದ ಆದೇಶದ ಅನುಪಾಲನೆಗಾಗಿ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸುವಂತಹ ಒಂದು ತಿದ್ದುಪಡಿ ಇದಾಗಿದೆ. ಅದರ ಜೊತೆಗೆ ನ್ಯಾಯಾಲಯದ ಆದೇಶಗಳನ್ನು ಜಾರಿಗೊಳಸುವಿಕೆ ಅಥವಾ ಅನುಪಾಲನೆಯ ಮೇಲ್ವಿಚಾರಣೆ ನಡೆಸುವುದಕ್ಕೆ ಗೊತ್ತುಪಡಿಸಿದ ಅಧಿಕಾರಿಯೊಬ್ಬರನ್ನು ನೇಮಿಸುವಂತಹದ್ದನ್ನು ಮಾಡುತ್ತೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕಾಗಿ ಈ ಸಣ್ಣ ತಿದ್ದುಪಡಿಯನ್ನು ತರಲಾಗಿದ್ದು, ದಯಮಾಡಿ ಈ ಸದನ ಇದನ್ನು ಒಪ್ಪಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಕಾನೂನು ಸಚಿವರು ಈ ವಿಶೇಷ ವಿಧೇಯಕವನ್ನು ಮೊದಲ ಬಾರಿ ಮಂಡಿಸಿದ್ದಾರೆ. ಇದು ಇಲ್ಲಿಯವರೆಗೆ ಇರಲಿಲ್ಲ. ನಮಗೆ ಇದರ ಅಗತ್ಯತೆ ಬಗ್ಗೆ ಇವತ್ತಿನ ದಿವಸ ಪ್ರಶ್ನೆ ಉದ್ಭವವಾಗಿದೆ. ಈಗಾಗಲೇ ಪ್ರತಿಯೊಂದು ಇಲಾಖೆಗೂ ಒಬ್ಬೊಬರು nodal officer ಹಾಗೂ District Judge cadre officer ಸಧ್ಯಕ್ಕೆ ಇದ್ದಾರೆ. ಹಾಗಾದರೆ, ಅವರು ಏನು ಮಾಡುತ್ತಾರೆ? ಪ್ರತಿಯೊಂದು ಇಲಾಖೆಗೂ District Judge cadre officer ಇದ್ದಾರೆ. ಅವರು ಏನು ಮಾಡುತ್ತಾರೆ? Judgments ಬಗ್ಗೆ supervise ಮಾಡುವಂತಹದ್ದು, compliance ಮಾಡುವಂತಹದ್ದರ ಬಗ್ಗೆ, Assistant

Commissioner or Tahsildar or Secretary ರವರು ಮಾಡಿದ ತೀರ್ಪಿನ ವಿರುದ್ಧ ಅವರು High Court or District Court ಗೆ ಹೋಗಿರುತ್ತಾರೆ. ಆ ರೀತಿ ಹೋದಂತಹ ಸಂದರ್ಭದಲ್ಲಿ ಎಲ್ಲಾ provision ಗಳನ್ನು ನೋಡಿಯೇ the concerned officer passes the Order. ಯಾವುದೋ ಒಂದು application ಇದ್ದಂತಹದ್ದು. ಒಬ್ಬ ವ್ಯಕ್ತಿ ವಿರುದ್ಧ officer ಆದೇಶ ಮಾಡಿರುತ್ತಾರೆ. ಹಾಗಾಗಿ, ಯಾವುದೋ ಒಂದು ವಿಷಯದ ವಿರುದ್ದ ನ್ಯಾಯಾಲಯಕ್ಕೆ ಹೋಗಿರುತ್ತಾನೆ. ಆ ರೀತಿ ಹೋದಂತಹ ಸಂದರ್ಭದಲ್ಲಿ ಆ provisions ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡು ಮಾಡಿರಬೇಕು. ಎಲ್ಲಾ knowledge ಅನ್ನು ಇಟ್ಟುಕೊಂಡು ಮಾಡಿದಂತಹ ವ್ಯಕ್ತಿ ಆಮೇಲೆ ಅವರಿಗೆ assist ಮಾಡುವಂತಹ ಒಬ್ಬರು District Judge cadre officer ಪ್ರತಿಯೊಂದು ಇಲಾಖೆಯಲ್ಲಿ ಇರುತ್ತಾರೆ.

(ಮುಂದು)

(906) 21.08.2025 01.40 ಎಂವಿ (ಎಸ್‌ವಿ)-ಕೆಎಸ್ (ವೈಸ್ ಛೇರ್‌ಮನ್ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):-**

ಪ್ರತಿಯೊಂದು ಇಲಾಖೆಯಲ್ಲಿಯೂ ಅವರಿಗೆ assist ಮಾಡುವುದಕ್ಕೆ district level nodal officers and District Judge's cadre officers ಇರುತ್ತಾರೆ. ನ್ಯಾಯಾಲಯದಲ್ಲಿ ಏನೇನು ಆಗುತ್ತದೆಯೆಂದು, he has to supervise, observe, see what the results are and compliance ಅನ್ನು ಯಾವ ರೀತಿ ಮಾಡಬೇಕು, ಅದರಿಂದ ತೊಂದರೆ ಏನಾಗಿದೆ ಎಂದು ನೋಡಬೇಕು. ಆ ರೀತಿ Government Order ಮಾಡಿರುವಂತಹ ಅಧಿಕಾರಿಗೆ ತಾನು ಮಾಡಿದ್ದರ ಬಗ್ಗೆ ಜವಾಬ್ದಾರಿಯೇ ಇಲ್ಲ ಎಂದರೆ, how the Government will fix his responsibility? ಅವನಿಗೆ ಏನು ಕೆಲಸವಿದೆ? District Judge's cadre officers ಅವರ ಬಳಿ ಹೋಗಿ ಕೇಳ, ಇದು ಜಾರಿಯಾಗಬೇಕು. ಜಾರಿಯಾಗದಿದ್ದರೆ ಈ ರೀತಿಯ ತೊಂದರೆ ಇದೆ ಎಂದು ಮನವಿ ಮಾಡಬೇಕು. ಆಗುತ್ತದೆಯೆಂದರೆ appeal ಮಾಡಬೇಕು, ಇಲ್ಲವಾದರೆ compliance ಮಾಡಲೇಬೇಕು. ಇವೆಲ್ಲವನ್ನು, the nodal officers should bring all these things to the notice of the District Judge's cadre officers. ಅವನಿಗೆ ಆ ಕೆಲಸ ಮಾಡುವ ವ್ಯವಸ್ಥೆ ಇದ್ದಾಗ, ಅವನಿಗೆ ಜವಾಬ್ದಾರಿ ಫಿಕ್ಸ್ ಮಾಡಬೇಕು. ಅದು ಬಿಟ್ಟು ಇನ್ನ್ಯಾರನ್ನೋ ನೇಮಿಸಿ, ಅವರು ಬಂದು ಬಂದು ಮತ್ತೆ suggestion ಕೊಡುವಂಥದ್ದು, ಅವನು ನನಗೆ ಗೊತ್ತಿಲ್ಲ, ನನಗೆ ಸಮಯಕ್ಕೆ ಸರಿಯಾಗಿ ಮುಟ್ಟಿಲ್ಲ, in time ಅಪೀಲ್ file ಮಾಡಲಿಕ್ಕಾಗಲಿಲ್ಲ ಈ ರೀತಿ ನೆಪ ಹೇಳಿಕೊಳ್ಳುತ್ತಾ ನಮ್ಮ ಕಡೆಯಲ್ಲಿ ಒಂದು ಮಾತನ್ನು ಹೇಳುತ್ತಾರೆ. ಒಬ್ಬ ಆಳನ್ನು supervision ಮಾಡಲು ಮತ್ತೊಬ್ಬ ಆಳು, ಅವನ ಮೇಲೆ ಹಿರಿಯಾಳು, ಅವನ ಮೇಲೆ ಮೇಲಾಳು ಎಂದು ನಮ್ಮ ಕಡೆ ಮಾತಾಡುತ್ತಿರುತ್ತೇವೆ. ಒಂದೊಂದು ಸಣ್ಣ ಕೆಲಸಕ್ಕೂ ಈ ರೀತಿ ಮಾಡುವಂಥದ್ದಾದರೆ ಸರ್ಕಾರದ ಕೆಲಸ ಹೋಗುತ್ತದೆ. Supervise ಮಾಡಲು ಅವರವರಿಗೆ responsibility fix ಮಾಡಬೇಕು. 50-60 ವರ್ಷಗಳು

ಇರಲಾರದಂಥ ಕಥೆ ಈಗ ಏಕೆ ಬರೆಯಬೇಕು? ಅಧಿಕಾರಿಗಳು ಕೇವಲ payment ತೆಗೆದುಕೊಳ್ಳಲಿದ್ದಾರೆಯೇ? ತಾವು ಮಾಡಿದಂಥ ಆದೇಶದ ಬಗ್ಗೆ ಅವರಿಗೆ responsibility fix ಮಾಡುವುದಿಲ್ಲವೆ? ಅನೇಕ ಉದಾಹರಣೆಗಳಿವೆ.

ತಾವು ತಂದಿರುವ ಈ ವಿಧೇಯಕವು ಅಪ್ರಸ್ತುತ ಎನ್ನುವ ವಿಚಾರವನ್ನು ನಾನು ಹೇಳಬಯಸುತ್ತೇನೆ.

ಎರಡನೆಯದಾಗಿ ಸ್ಪಷ್ಟೀಕರಣ ಕೇಳಬಯಸುತ್ತೇನೆ. 'Designated Officer' ಎಂದು ಹೇಳುತ್ತಿದ್ದು, ಜಿಲ್ಲೆಗೊಬ್ಬ ಅಧಿಕಾರಿ ಎಂದು ನೇಮಿಸುತ್ತೀರೋ ಅಥವಾ ತಾಲ್ಲುಕು ಮಟ್ಟದಲ್ಲಿ ನೇಮಿಸುತ್ತೀರೊ ಅಥವಾ ರಾಜ್ಯಕ್ಕೊಬ್ಬರನ್ನು ನೇಮಿಸುತ್ತೀರೋ ಅವರಿಗೆ ಸಿಬ್ಬಂದಿ, ಸೌಕರ್ಯ, ಕಾರ್ ಎಲ್ಲವನ್ನೂ ನೀಡಬೇಕು. ಮೊದಲೇ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ತೊಂದರೆಯಿದ್ದು payment ಕೊಡುವುದಕ್ಕಾಗುತ್ತಿಲ್ಲ. ಆದಾಗ್ಯೂ ಇಂಥ ಕ್ರಮಕ್ಕೆ ಸರ್ಕಾರ ಏಕೆ ಮುಂದಾಗುತ್ತಿದೆ ಎನ್ನುವುದು ನನ್ನ ಪ್ರಶ್ನೆ.

ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಮಾನ್ಯ ಕಾನೂನು ಸಚಿವರಿಗೆ ಹೇಳಬಯಸುತ್ತೇನೆ. ಹಣಕಾಸಿನ ತೊಂದರೆ ಅನುಭವಿಸುತ್ತಿರುವ ಈ ವ್ಯವಸ್ಥೆಯಲ್ಲಿ ನೂರಾರು ಒಂದು-ಒಂದು ಕೋಟಿ ಹಚ್ಚಿಕೊಳ್ಳುವ officers or district cadre officers ಎನ್ನುವಂಥದ್ದು ಮಾಡಬಾರದು. ನಾನು ನಿನ್ನೆ ನೋಡಿದೆ. 224 ಕ್ಷೇತ್ರಗಳಲ್ಲಿ 'Legal Bank' ಗಳನ್ನು ರಚನೆ ಮಾಡುತ್ತೇವೆಂದು ಮಾನ್ಯ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ. ಅವರದ್ದೇ ಏನಾದರೂ ಜೋಡಿಸುವಂಥ ಕೆಲಸವೋ ಏನೋ ನನಗೆ ಗೊತ್ತಾಗುತ್ತಿಲ್ಲ. I do not understand this point. Legal officers ನೇಮಿಸುವಂಥದ್ದು, ಅವರಿಗೂ suggestion ಕೊಡುವಂಥದ್ದು, irrespective of the government office work, ಅವರಿಗೂ ಮಾಡುವ ಹುನ್ನಾರ ಇದೆಯೇನೋ ಎಂಬ ಸಂಶಯ ನನಗೆ ಮೂಡುತ್ತಿದೆ. ದಯವಿಟ್ಟು ನನಗೆ ಸ್ಪಷ್ಟೀಕರಣ ಕೊಡಬೇಕು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಸಚಿವರು ತಂದಿರತಕ್ಕಂಥ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 ಅನ್ನು ಸ್ವಾಗತ ಮಾಡುತ್ತಾ, ಎರಡು ವಿಚಾರಗಳ ಬಗ್ಗೆ clarification ಅಷ್ಟೇ ಕೇಳಬಯಸುತ್ತೇನೆ. 28(1) ನಲ್ಲಿ ಸರ್ಕಾರದ ಅಧಿಸೂಚನೆ ಮೂಲಕ ನ್ಯಾಯಾಲಯವು ಹೊರಡಿಸಿದ ಯಾವುದೇ ಆದೇಶ ಜಾರಿ ಮತ್ತು ಅನುಪಾಲನೆಯ ಮೇಲ್ವಿಚಾರಣೆ ಮಾಡಲು ಒಬ್ಬ ಅಧಿಕಾರಿಯನ್ನು ಗುರುತುಪಡಿಸುವುದು ಎಂದು ಹೇಳಲಾಗಿದೆ. Whether it is at the State level, District level, or Taluk level, where will be the Designated Officer's office be located? ಇವರು ಎಲ್ಲಿ ಕಛೇರಿಯನ್ನು ಮಾಡುತ್ತಾರೆ, ಏನು ಮಾನಿಟರ್ ಮಾಡುತ್ತಾರೆ, what are all the works ಇವರಿಗೆ ತಾವು ಕೊಡಲಿಕ್ಕೆ ಬಯಸುತ್ತೀರಿ ಎಂದು ಕೇಳಬಯಸುತ್ತೇನೆ.

ತಾವು ಉದ್ದೇಶ ಮತ್ತು ಕಾರಣಗಳು ಇಲ್ಲಿ ಹೇಳಿದಿರಿ. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ ಮಂಡನೆ ಮಾಡಲು ಕಾರಣ ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ್ದ ನಿರ್ದೇಶನದ ಅನುಷ್ಠಾನವಾಗಿ ಮಾಡಲಾಗಿದೆ. This implies that there are some observations from the

hon'ble High Court. ಹೈಕೋರ್ಟ್ ಒಂದು observations ಮಾಡಿರಲೇ ಬೇಕು. ಏನು ಆ observations ಏಕಾಗಿ ಆಯಿತು ಎನ್ನುವುದರ ಬಗ್ಗೆ, I want an explanation from the hon'ble Minister in this regard. ನಾವೆಲ್ಲಾ ಜಿಲ್ಲಾ ನ್ಯಾಯಾಲಯಗಳಲ್ಲಿ ಪ್ರಾಕ್ಟೀಸ್ ಮಾಡುವ ವಕೀಲರು. ನಮಗೆ ತಿಳಿದಿದೆ. ಅಲ್ಲಿ ಸರ್ಕಾರಿ ಪ್ಲೀಡರ್‌ಗಳಿರುತ್ತಾರೆ, ಬೇಕಾದಷ್ಟು ಸರ್ಕಾರಿ ಮೆಷಿನರಿಗಳಿರುತ್ತವೆ. ಅವರು ಸರ್ಕಾರದ ಪರವಾಗಿ ಇದ್ದಂಥವರು, ಸರ್ಕಾರದ ವಿರೋಧವಾಗಿ ಹೋಗಿರುವಂಥವರು. ನಾವು appear ಆಗುವ ಅನೇಕ ಪ್ರಕರಣಗಳಲ್ಲಿ, appeal period ನ ಕೊನೆಯ ದಿನಾಂಕ ಮುಗಿದರೂ ಸಹ condonation ಮೇಲೆ ಬಂದಿರುವಂಥದ್ದು ಬಹಳಷ್ಟು ಪ್ರಕರಣಗಳಲ್ಲಿ ನೋಡುತ್ತೇವೆ. ಇಂಥದ್ದನ್ನು ಸರಿ ಮಾಡಲಿಕ್ಕೆ we need some officers. What is their role and how will they function? ಎನ್ನುವಂಥದ್ದರ ಬಗ್ಗೆ ಸ್ವಲ್ಪ ಸ್ಪಷ್ಟತೆ ಇದ್ದರೆ ಉತ್ತಮವಾಗಿತ್ತು ಮತ್ತು ಹೈಕೋರ್ಟ್ ಈ ಒಂದು ತೀರ್ಮಾನಕ್ಕೆ ಬರಲಿಕ್ಕೆ observation ಮಾಡಲಿಕ್ಕೆ ಕಾರಣವೇನು ಎಂಬುದನ್ನು ತಮ್ಮಿಂದ explanation ಅನ್ನು ನಾನು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ನಾನು ಕಾನೂನು ವಿದ್ಯಾರ್ಥಿ ಅಲ್ಲ, ಆದರೆ ಕಾನೂನು ಎನ್ನುವುದು ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತದೆ.

**ವೈಸ್ ಛೇರ್ಮನ್:-** ಲಾ ಪಾಯಿಂಟ್ಸ್ ಹಾಕುತ್ತೀರಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಹೆಚ್.ಕೆ.ಪಾಟೀಲರು ಕಾನೂನು ಪಂಡಿತರು. ಮಾನ್ಯ ಪೂಜಾರರು ಕಾನೂನು ಪಂಡಿತರೇ. ಒಬ್ಬ ವಿದ್ಯಾರ್ಥಿಯಾಗಿ ನಾನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಉದಾಹರಣೆಗೆ ಹೈಕೋರ್ಟ್‌ನಿಂದ ಇರಬಹುದು, ಜಿಲ್ಲಾ ಕೋರ್ಟ್‌ನಿಂದ ಇರಬಹುದು ಯಾವುದೇ ಹಂತದ ನ್ಯಾಯಾಲಯದಿಂದ ಇರಬಹುದು ಸುಪ್ರೀಂ ಕೋರ್ಟ್‌ವರೆಗೆ ಆದೇಶ ಬಂದ ಮೇಲೆ implement ಮಾಡದೆ ಹೋದರೆ, ಅದು Contempt of Court ಆಗುತ್ತದೆ ಅಥವಾ ಮೇಲಿನ ನ್ಯಾಯಾಲಯಗಳಿಗೆ ಮೇಲ್ಮನವಿ ಸಲ್ಲಿಸಬಹುದು. ಅದಕ್ಕೆ ನೀವು ಅಧಿಕಾರಿಯ ನೇಮಕವನ್ನು ಏನು ಮಾಡುತ್ತೀರೋ ಅವರು 15 ದಿನಗಳಿಗೊಮ್ಮೆ implement ಆಗಿದ್ದು ಮತ್ತು implement ಮಾಡದೆ ಇರುವುದರ ಬಗ್ಗೆ, execute ಮಾಡಿರುವುದು ಮತ್ತು execute ಮಾಡದಿರುವುದರ ಬಗ್ಗೆ ವರದಿಯನ್ನು ಕೊಡಬೇಕು ಎಂದು ಹೇಳಿದ್ದೀರಿ. It is a very positive point. ನಾನು ವಿನಂತಿ ಮಾಡುತ್ತೇನೆ. ಉದಾಹರಣೆಗೆ ನಮ್ಮ ಅಧಿಕಾರಿಗಳು ಯಾರದ್ದೋ ಮುಂಬಡ್ತಿಯಾಗಬೇಕಿತ್ತು, ಯಾವುದೋ ಕಾರಣಕ್ಕೆ ಆಗಿಲ್ಲ. ಆದೇಶ ಬಂದಿದೆ. ಅದನ್ನು execute ಮಾಡಬೇಕು. ಈ ವಿಷಯದಲ್ಲಿ ಏನಾಗುತ್ತದೆ ಎಂದರೆ ಸರ್ಕಾರಕ್ಕೆ ಇಷ್ಟವಿದ್ದರೆ implement ಆಗುತ್ತದೆ. ಸರ್ಕಾರಕ್ಕೆ ಇಷ್ಟವಿಲ್ಲದೆ ಹೋದರೆ implement ಆಗುವುದಿಲ್ಲ. ಸರ್ಕಾರದ ಕೆಲವರು ನೀವು ಮೇಲಿನ ನ್ಯಾಯಾಲಯಗಳಿಗೆ ಹೋಗಿ ಎಂದು ಹೇಳುತ್ತಾರೆ. ಅಂದರೆ ಸರ್ಕಾರ ಸಮಸ್ಯೆಯನ್ನು solve ಮಾಡಬಹುದು, ಸಮಸ್ಯೆಯನ್ನು ನಿರ್ಮಾಣವೂ ಮಾಡಬಹುದು. ಕೋರ್ಟ್‌ನಲ್ಲಿ ಕೇಸ್‌ಗಳು ಏಕೆ ಹೆಚ್ಚಾಗಿದೆ ಎಂಬುದರಲ್ಲಿ ನಾವೆಲ್ಲರೂ ಭಾಗಿದಾರರಾಗಿದ್ದೇವೆ. ಬೇಕಿದ್ದು, ಬೇಡವಾಗಿದ್ದು, implement

ಆಗಬೇಕಾದದ್ದು, implement ಆಗಬಾರದ್ದು ಇವೆಲ್ಲವುಗಳನ್ನು ನಾವು ನಿರ್ಮಾಣ ಮಾಡುತ್ತೇವೆ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ನೇಮಕ ಮಾಡಿಕೊಳ್ಳುವ ಅಧಿಕಾರಿಗೆ ಏನು powers ಇರುತ್ತದೆ? Powers ಏನೂ ಇರುವುದಿಲ್ಲ, ನ್ಯಾಯಾಲಯವೇ ಆದೇಶ ನೀಡಿಬಿಡುತ್ತದೆ. ಸರ್ಕಾರ implement ಮಾಡಲೇಬೇಕು. It is mandatory to implement the judgment. Judgement ಎಂಬುದು ಅಂತಿಮ, ಅದನ್ನು mandatory ಆಗಿ implement ಮತ್ತು execute ಮಾಡಬೇಕಾಗಿರುವಂಥದ್ದು. ಅಕಸ್ಮಾತ್ execute ಮಾಡದೇ ಹೋದರೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಯಾವ ಹಂತದ ಅಧಿಕಾರಿಯನ್ನು ನೇಮಕ ಮಾಡುತ್ತೀರಿ? ನಿವೃತ್ತ ನ್ಯಾಯಾಧೀಶರೇ ಅಥವಾ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರೇ ಹೀಗೆ ಅವರು ರಾಜ್ಯಮಟ್ಟದಲ್ಲಿರುತ್ತಾರೆಯೋ, ಜಿಲ್ಲಾ ಮಟ್ಟದಲ್ಲಿರುತ್ತಾರೆಯೋ ಎಂದು ಮಾನ್ಯ ಪೂಜಾರ್ ಅವರು ಆಗಲೇ ಕೇಳಿದರು. ರಾಜ್ಯಮಟ್ಟದಲ್ಲಿಯೇ ಇರುತ್ತಾರೆಂದರೆ ತಾಲ್ಲೂಕಾ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದವರೆಗೆ execute ಮಾಡಬೇಕಾದಂಥ ಕೇಸ್‌ಗಳಿವೆ. ಅದು ಕೂಡ ಒಂದು ದೊಡ್ಡ ಪಟ್ಟಿಯಾಗುತ್ತದೆ. Executed and non-executed cases ಎಂಬುದು ಒಂದು ದೊಡ್ಡ ಪಟ್ಟಿಯಾಗುತ್ತದೆ. ಆ ಸಂದರ್ಭದಲ್ಲಿ ಇದನ್ನು ಇನ್ನೂ ಸ್ವಲ್ಪ ವಿವರಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಪ್ರತಾಪಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರಿಂದ ನನಗೆ ಬೇಕಾದ ಒಂದು ಸ್ಪಷ್ಟೀಕರಣವೇನೆಂದರೆ ಈ ಅಧಿಕಾರಿ ಯಾರಿಗೆ ಉತ್ತರದಾಯಿಯಾಗಿರುತ್ತಾರೆ? 15 ದಿನಗಳಿಗೊಮ್ಮೆ ವರದಿಯನ್ನು ನೀಡಬೇಕು. ಆ ವರದಿಯನ್ನು ಅವರು ಯಾರಿಗೆ ಕೊಡಬೇಕು? ಯಾರು ಈ ಅಧಿಕಾರಿಯನ್ನು ಗಮನಿಸುತ್ತಾರೆ? ಮಾನ್ಯ ಸಚಿವರು ಇದರ ಬಗ್ಗೆ ವಿವರಣೆಯನ್ನು ಕೊಡುವಾಗ ಹೇಳಿರುವುದಕ್ಕೆ ನಾನು ನನ್ನ ಸಂಪೂರ್ಣ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಶರವಣ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಭರವಸೆ ಸಮಿತಿಯಲ್ಲಿ ಸದನದಲ್ಲಿ ಕೊಟ್ಟ ಭರವಸೆಗಳ ಕಾನೂನಿನ ಭಾಗವನ್ನು ಪ್ರತಿ ಬಾರಿಯೂ ನಾವು ಚರ್ಚೆ ಮಾಡುತ್ತೇವೆ. (ಮುಂದು)

(907) 21.08.2025 01.50 LL-KS (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ.(ಮುಂದು)**

ಎಷ್ಟೋ ಬಾರಿ ಸತತವಾಗಿ ನಡೆದಂತಹ ಸಮಿತಿ ಸಭೆಯಲ್ಲಿ ನಾವು ಬಾಕಿ ಭರವಸೆಗಳನ್ನು ಗಮನಿಸಿದಾಗ, ಕೆಲವು ವಿಷಯಗಳಲ್ಲಿ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಹಣ ಬರುವಂಥದ್ದು ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ, ಕೋರ್ಟ್‌ನಿಂದ ಆದೇಶ ಕೂಡ ಆಗಿರುತ್ತದೆ. ಆದರೆ, ಅದರ ರಿಕವರಿ ಆಗುತ್ತಿರುವುದಿಲ್ಲ ಎಂದು ಹೇಳುವಂತಹ ಹಲವಾರು ಪ್ರಸಂಗಗಳನ್ನು ನೋಡಿದಾಗಲೂ ಪ್ರತಿ ಇಲಾಖೆಯಲ್ಲಿ ಲೀಗಲ್ ಸೆಲ್ ಎಂದು ಹೇಳುವಂಥದ್ದು ಇರುತ್ತದೆ. ಆದರೆ, ಕೋರ್ಟ್ ಕೇಸುಗಳ ಬಗ್ಗೆ ಅವರ ಗಮನ ಬಹಳ ಕಡಿಮೆ ಇರುತ್ತದೆ ಎಂದು ಕಾಣುತ್ತದೆ. ಯಾವುದಾದರೂ

ಇಲಾಖೆಗೆ ಭರವಸೆ ಸಮಿತಿಯ ನೋಟಿಸ್ ಹೋದ ಮೇಲೆ, ಅವರು ಸಮಿತಿ ಸಭೆಗೆ ಬರಬೇಕಾದರೆ, ಆಗ ಅಲ್ಲಿ ಸಮಿತಿಯಲ್ಲಿ ಉತ್ತರ ಕೊಡಬೇಕು ಎನ್ನುವ ದೃಷ್ಟಿಯಲ್ಲಿ ಏನೋ ಒಂದು ತಯಾರಿ ಮಾಡಿಕೊಂಡು ಬರುತ್ತಾರೆ. ಪುನಃ ಆ ವಿಚಾರ ಇಲಾಖೆಯವರಿಗೆ ನೆನಪಾಗುವುದು ಯಾವಾಗ ಎಂದರೆ, ಮುಂದಿನ ಭರವಸೆ ಸಮಿತಿಗೆ ಮಾತ್ರ. ಒಂದು ವೇಳೆ ಮಾನ್ಯ ಅಧ್ಯಕ್ಷರು ಆ ವಿಷಯವನ್ನು ಪ್ರತಿ ವಾರ ನಿರಂತರ ಸಭೆ ಕರೆದು ವಿಚಾರಿಸಿದಾಗ ಅದು ಏನೋ ಒಂದು ಸಣ್ಣ ಪ್ರಗತಿ ಕಾಣುತ್ತದೆ. ಇಲ್ಲವಾದರೆ, ಮುಂದೆ ಯಾವಾಗಲೋ ಅಂದರೆ, 3-6 ತಿಂಗಳಿಗೆ ಅದು ನೆನಪಿಗೆ ಬರುತ್ತದೆ. ಹಾಗಾಗಿ, ಈ ವ್ಯವಸ್ಥೆ ಒಳ್ಳೆಯದು. ಆದರೆ, ಮಾನ್ಯ ಪಿ.ಹೆಚ್. ಪೂಜಾರ್‌ರವರು ಹೇಳಿದಂತೆ, ಈಗಾಗಲೇ ಒಂದು ಒಳ್ಳೆಯ ವ್ಯವಸ್ಥೆ ಇದೆ. ಅದರ ಜೊತೆಗೆ, ಇನ್ನೊಂದು ಮೇಲೆ ಮೇಲೆ ನೋಡುವಂತಹದ್ದಾಗಿದೆ. ಅಷ್ಟಕ್ಕೆ ಅದು ಆಗಬಾರದು. ಅನೇಕ ಬಾರಿ ಮಾನ್ಯ ಮುಖ್ಯಮಂತ್ರಿಗಳು ಸಹ ಇದನ್ನು ಗಮನಿಸಿರುವುದನ್ನು ನಾನು ದಿನಪತ್ರಿಕೆಯಲ್ಲಿ ಓದಿರುತ್ತೇನೆ. ಹೆಚ್ಚಿನ ಪ್ರಕರಣಗಳು ಅಂದರೆ, ಸರ್ಕಾರವೇ ಗೆಲ್ಲಬೇಕಾದಂತಹ ಪ್ರಕರಣಗಳು. ಶೇಕಡ ನೂರಕ್ಕೆ ನೂರರಷ್ಟು ಎಲ್ಲಾ ರೀತಿಯ ಗ್ರೌಂಡ್ಸ್ ಸರ್ಕಾರದ ಪರವಾಗಿ ಇದ್ದರೂ ಸಹ, ನೂರರಲ್ಲಿ ತೊಂಭತ್ತೊಂಬತ್ತು ಪ್ರಕರಣಗಳು ಸರ್ಕಾರದ ವಿರುದ್ಧವಾಗಿ ಆಗುವಂಥದ್ದನ್ನು ನೋಡುವಾಗ, ಲೀಗಲ್ ಸೆಲ್‌ಗಳಿಂದ follow-up ಏನಿದೆ, ಅದು ಬಹಳ ಕೊರತೆ ಇದೆ ಎಂಬುದು ಕಾಣುತ್ತದೆ. ಖಂಡಿತವಾಗಿ ಆದೇಶಗಳನ್ನು ಅನುಪಾಲನೆ ಮಾಡದೇ, ಅದು ಅನುಷ್ಠಾನವಾಗುವಂತಹ ಸ್ಥಿತಿ ಸರ್ಕಾರದಲ್ಲಿ ಬಹಳ ಕಡಿಮೆ ಇದೆ. ಈ ವಿಷಯದಲ್ಲಿ ಮಾನ್ಯ ಸಚಿವರ observation ಸರಿ ಇದೆ. ಆ ದೃಷ್ಟಿಯಲ್ಲಿ ಈ ಅಧಿಕಾರಿ ಯಾರಿಗೆ ಉತ್ತರ ನೀಡುವವರಾಗಿದ್ದಾರೆ? ಅಂದರೆ, ಈ ಅಧಿಕಾರಿ 15 ದಿನಗಳಿಗೊಮ್ಮೆ ವರದಿ ಕೊಡುವಂತಹದ್ದು ಯಾರಿಗೆ? ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಮತ್ತು ಶ್ರೀ ಪಿ.ಹೆಚ್. ಪೂಜಾರ್‌ರವರು ಮೇಲ್ವಿಚಾರಣಾ ಅಧಿಕಾರಿಯವರನ್ನು ನೇಮಿಸುವ ಬಗ್ಗೆ ಹೇಳಿದ್ದಾರೆ. ಈ ವ್ಯವಸ್ಥೆಯಲ್ಲಿ ಮೇಲ್ವಿಚಾರಣಾಧಿಕಾರಿಯವರು ರಾಜ್ಯದಲ್ಲಿ ಒಬ್ಬರು ಇರುತ್ತಾರೆಯೇ ಅಥವಾ ಜಿಲ್ಲೆಗಳಲ್ಲಿ ಬೇರೆ ಇದ್ದಾರೆಯೇ ಎಂದು ಹೇಳಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 ಅನ್ನು ಸ್ವಾಗತ ಮಾಡುತ್ತಾ, ಇದರಲ್ಲಿ ಸರ್ಕಾರವು ಅಧಿಕಾರಿಗಳ ನೇಮಕ ಮಾಡತಕ್ಕಂತಹ ಸಂದರ್ಭದಲ್ಲಿ ಅವರಿಗೆ ಯಾವ ಮಾನದಂಡದ ಮೇಲೆ ಅಧಿಕಾರಿಗಳನ್ನು ಮಾಡುತ್ತಿದೆ? ಅವರ ಕಾಲಾವಧಿ ಎಷ್ಟು? ಯಾರನ್ನು ಅಧಿಕಾರಿಯನ್ನಾಗಿ ನೇಮಿಸಬೇಕು ಮತ್ತು ಅವರ ಅರ್ಹತೆ ಏನು ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಇರುವುದಿಲ್ಲ. ಈಗಾಗಲೇ ಸರ್ಕಾರದ ಕಾರ್ಯಚಟುವಟಿಕೆಯನ್ನು ಮಾಡುವುದಕ್ಕೆ ಸರ್ಕಾರಿ ವಕೀಲರು ಇದ್ದಾರೆ. ಕೋರ್ಟ್‌ನ ಆದೇಶ ಮಾಡುವುದಕ್ಕೆ, ಅಪೀಲು ಮಾಡುವುದಕ್ಕೆ ಅಥವಾ ಕೋರ್ಟ್‌ನಲ್ಲಿರುವ ಕೇಸುಗಳ ನಿರ್ವಹಣೆ ಮಾಡುವುದಕ್ಕೆ ಸರ್ಕಾರಿ ವಕೀಲರನ್ನು ಈಗಾಗಲೇ ನೇಮಕ ಮಾಡಿರುವಂತಹ ಸಂದರ್ಭದಲ್ಲಿ, ಆ ಸರ್ಕಾರಿ ವಕೀಲರ ಮೇಲೆ ಈ ಅಧಿಕಾರಿಗಳು ಇರುತ್ತಾರೆಯೋ ಅಥವಾ ಅವರ ಕೆಳಹಂತದಲ್ಲಿ ಕೆಲಸ ಮಾಡುತ್ತಾರೋ ಎಂಬ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಅಲ್ಲದೇ, ಈ ಅಧಿಕಾರಿಗಳ ಅವಶ್ಯಕತೆ ಇದೆಯೇ ಎನ್ನುವಂಥದ್ದು

ನಮ್ಮ ಮುಂದೆ ಪ್ರಶ್ನೆ ಬರುತ್ತದೆ. ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು ಹೇಳಿದ ಹಾಗೆ, ಸರ್ಕಾರಕ್ಕೆ ಸಂಬಂಧಪಟ್ಟಂತಹ ಬಹಳಷ್ಟು ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿಗಳ ಹಿನ್ನೋಟವನ್ನು ನಾವು ನೋಡುತ್ತಿದ್ದೇವೆ. ಗೆದ್ದಿರುವಂತಹ ಪ್ರಕರಣಗಳು ಸಹ ಬಹಳಷ್ಟು ಕಡಿಮೆ ಇರುತ್ತವೆ. ಈ ರೀತಿ ಇರುವಂತಹ ಸಂದರ್ಭದಲ್ಲಿ ಅವರ ಜೊತೆ ಮತ್ತೊಬ್ಬ ಅಧಿಕಾರಿಯನ್ನು ನೇಮಿಸಿದಾಗ ಅಂದರೆ, ಸರ್ಕಾರಿ ವಕೀಲರು ಮತ್ತು ಅಧಿಕಾರಿಗಳ ಜೊತೆ ಸಹಮತ ಇರುವಂಥದ್ದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅವರು ಒಂದು ಮಾಡುವುದು, ಇವರು ಒಂದು ಮಾಡುವುದರ ಮೂಲಕ ವಿಭಿನ್ನ ರೀತಿಯ ನಡವಳಿಕೆಗಳು ಆಗುವಂತಹ ವ್ಯವಸ್ಥೆ ಆಗುತ್ತವೆ. ಹಾಗಾಗಿ, ಈಗ ಇರುವಂತಹ ಅಧಿಕಾರಿಗಳನ್ನೇ ಅಥವಾ ವ್ಯವಸ್ಥೆಯನ್ನು ಬಲಪಡಿಸುವಂತಹ ಕೆಲಸ ಮಾಡಬೇಕು. ಅದರ ಬದಲಾಗಿ, ಮತ್ತೊಬ್ಬರನ್ನು ನೇಮಕ ಮಾಡುವುದರಿಂದ ಕೆಲಸ ಬಹಳ ಆಗುತ್ತದೆ ಎನ್ನುವಂಥದ್ದನ್ನು ನಾವು ಗಮನಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ, ಈ ತಿದ್ದುಪಡಿ ವಿಧೇಯಕದಲ್ಲಿ ಇನ್ನು ಅನೇಕ ತಿದ್ದುಪಡಿಗಳನ್ನು ಹಾಗೂ ಬದಲಾವಣೆಯನ್ನು ತರುವಂತಹ ಕೆಲಸವನ್ನು ಮಾಡಬೇಕಾಗುತ್ತದೆ.

ಬಹಳಷ್ಟು ಕಡೆಗಳಲ್ಲಿ ಹೊಸ ನ್ಯಾಯಾಲಯಗಳನ್ನು ಕೊಡುತ್ತಿವೆ. ಬಾಗಲಕೋಟೆ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಸುಮಾರು 37,000 ಮುಳುಗಡೆ ಪ್ರಕರಣಗಳು ಬಾಕಿ ಇರುತ್ತವೆ. ಅಂದರೆ, ಸಂತ್ರಸ್ತರಿಗೆ ಕೊಡಬೇಕಾದಂತಹ ಪರಿಹಾರ ಹಣದ ಮೌಲ್ಯವನ್ನು ನಿರ್ಧಾರ ಮಾಡುವಂತಹ ಪ್ರಕರಣಗಳು ಬಾಕಿ ಇರುತ್ತವೆ. ಸನ್ಮಾನ್ಯ ಮಂತ್ರಿಗಳೇ ಬಂದು, ನಮ್ಮ ಜಿಲ್ಲೆಯಲ್ಲಿ ಎರಡು ನ್ಯಾಯಾಲಯಗಳನ್ನು ಹೆಚ್ಚಿಗೆ ಕೊಟ್ಟಿರುತ್ತಾರೆ. ಆದರೆ, ಆ ನ್ಯಾಯಾಲಯಕ್ಕೆ ಬೇಕಾದಂತಹ ಅಗತ್ಯ ಸಿಬ್ಬಂದಿಗಳು ಇರುವುದಿಲ್ಲ. ನ್ಯಾಯಾಲಯ ಪ್ರಾರಂಭ ಮಾಡಿ, ಆರು ತಿಂಗಳು ಕಳೆದರೂ ಸಹ ಇನ್ನು ಅಲ್ಲಿ ಸರ್ಕಾರಿ ವಕೀಲರ ನೇಮಕ ಆಗಿರುವುದಿಲ್ಲ. ಸರ್ಕಾರಿ ವಕೀಲರನ್ನು ನೇಮಕ ಮಾಡಬೇಕಾದರೆ ಹುದ್ದೆಗಳ ಸೃಷ್ಟಿಯಾಗಬೇಕು. ಆ ಹುದ್ದೆಗಳ ಸೃಷ್ಟಿ ಆಗಬೇಕಾಗಿದ್ದರೂ ಸಹ, ಆ ನ್ಯಾಯಾಲಯಗಳಲ್ಲಿ ಮಾನ್ಯ ನ್ಯಾಯಾಧೀಶರು ಬಂದು ಕುಳಿತಿರುತ್ತಾರೆ. ಆದರೆ, ಅಗತ್ಯ ಸಿಬ್ಬಂದಿ ಇಲ್ಲ; ಟೈಪಿಸ್ಟ್ ಇಲ್ಲ, ಸ್ಟೆನೋಗ್ರಾಫರ್ ಇಲ್ಲ; ಸರ್ಕಾರಿ ವಕೀಲರು ಇರುವುದಿಲ್ಲ. ಈ ರೀತಿ ಇದ್ದರೆ, ಅವರು ನ್ಯಾಯಾಲಯಗಳನ್ನು ಹೇಗೆ ನಡೆಸಬೇಕು? ಈ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ಮತ್ತೊಬ್ಬರು ಅಧಿಕಾರಿಯನ್ನು ನೇಮಕ ಮಾಡುವುದು ಎಷ್ಟು ಸೂಕ್ತ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಅದರ ಬದಲಾಗಿ, ಪ್ರಸ್ತುತ ಇರುವಂತಹ ನ್ಯಾಯಾಲಯಗಳಿಗೆ ಬೇಕಾಗಿರುವಂತಹ ವ್ಯವಸ್ಥೆಯನ್ನು ಕೊಡಬೇಕು, ಸಿಬ್ಬಂದಿಗಳನ್ನು ಕೊಡಬೇಕು ಮತ್ತು ಅದರ ಜೊತೆಗೆ ಇರುವಂತಹ ಸರ್ಕಾರಿ ವಕೀಲರ ಮೇಲೆ ಇದು ನಿರ್ವಹಣೆ ಆಗುವಂಥದ್ದು ಬಹಳ ಉಪಯುಕ್ತವಾಗಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬಹಳಷ್ಟು ನ್ಯಾಯಾಲಯಗಳ ಕಟ್ಟಳೆಗಳು ಬಾಕಿ ಇರುತ್ತವೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಾಕಿ ಇರುವಂತಹ ಪ್ರಕರಣಗಳನ್ನು ನೋಡುವುದಕ್ಕಾಗಿ ಸರ್ಕಾರ ಈಗಾಗಲೇ ಪ್ರತಿ ನ್ಯಾಯಾಲಯಕ್ಕೂ ಸಹ ಒಬ್ಬೊಬ್ಬರನ್ನು ನೇಮಕ ಮಾಡಲಾಗಿರುತ್ತದೆ. ಆದರೆ, ಈಗಿರುವಂತಹ ಸರ್ಕಾರಿ ವಕೀಲರಿಗೆ ಹಾಗೂ ಇವರಿಗೆ ಹೊಂದಾಣಿಕೆ ಇರುವುದಿಲ್ಲ. ಇದರಿಂದಾಗಿ, ಎಷ್ಟು ಪ್ರಕರಣಗಳು ಇವೊತ್ತಿನ ದಿವಸ ಇತ್ಯರ್ಥವಾಗಿ,

ಮುಂದಿನ 90 ದಿನಗಳಲ್ಲಿ ಹಣವನ್ನು ಪಾವತಿ ಮಾಡಿ ಎಂದು ಮಾನ್ಯ ಹೈಕೋರ್ಟ್ ಆದೇಶ ಮಾಡಿರುತ್ತದೆ. ಆದರೆ, ಒಂದು ವರ್ಷವಾದರೂ ಸಹ, ಆ ಹಣ ಪಾವತಿ ಆಗಿರುವುದಿಲ್ಲ. ಇವೊತ್ತಿನ ದಿವಸ 3,500/- ಕೋಟಿಯಷ್ಟು ಬಿಲ್‌ಗಳು ಯುಕೆಪಿಯಲ್ಲಿ ಪಾವತಿಸಬೇಕಾದಂತಹ ಹಣ ಬಾಕಿ ಉಳಿದಿರುತ್ತದೆ. ಆ ಹಣದಲ್ಲಿ ಶೇಕಡ 50 ರಷ್ಟು, ಶೇಕಡ 25 ರಷ್ಟು ಹಣವನ್ನು ಕಟ್ಟಬೇಕೆಂದು ಮಾನ್ಯ ಹೈಕೋರ್ಟ್ ಆದೇಶವಾಗಿರುತ್ತದೆ. ಆದರೂ ಸಹ ಹಣ ಕಟ್ಟುವುದಕ್ಕೆ ಆಗುತ್ತಿಲ್ಲ. ಇದರಲ್ಲಿ ಕೋರ್ಟ್ ವೈಫಲ್ಯವೋ? ಸರ್ಕಾರದ ವೈಫಲ್ಯವೋ? ಸಂತ್ರಸ್ತರ ವೈಫಲ್ಯವೋ? ದೇಶದ ಒಳಿತಿಗಾಗಿ ತಮ್ಮ ಜಮೀನನ್ನು ಕೊಟ್ಟಂತಹ ರೈತರ ವೈಫಲ್ಯವೋ ಎಂಬ ಪ್ರಶ್ನೆ ಇವೊತ್ತಿನ ದಿವಸ ನಮ್ಮ ಮುಂದೆ ಬರುತ್ತದೆ. ಇದು ತಿದ್ದುಪಡಿ ವಿಧೇಯಕಕ್ಕೆ ಸಂಬಂಧಿಸಿದ ವಿಷಯ ಅಲ್ಲದೇ ಇರಬಹುದು. ಆದರೆ, ಮಾನ್ಯ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಸರ್ಕಾರ ನಿರ್ವಹಣೆ ಮಾಡಬೇಕಾಗಿರುವಂತಹ ಜವಾಬ್ದಾರಿಯಾಗಿರುತ್ತದೆ. ಇಲ್ಲದೇ ಇದ್ದರೆ, ಇದು ನ್ಯಾಯಾಂಗ ನಿಂದನೆಯಾಗುತ್ತದೆ. ಏಕೆಂದರೆ, ಮುಂದಿನ 90 ದಿನಗಳಲ್ಲಿ ಪರಿಹಾರ ನೀಡಬೇಕಾಗಿರುವಂತಹ ಹಣದಲ್ಲಿ ಶೇಕಡ 50 ರಷ್ಟು ಅಥವಾ ಶೇಕಡ 25 ರಷ್ಟು ಹಣ ಪಾವತಿ ಮಾಡಬೇಕೆಂದು ಹೇಳಿದರೂ ಸಹ, ಸರ್ಕಾರ ಆ ಹಣವನ್ನು ಪಾವತಿ ಮಾಡುತ್ತಿಲ್ಲ. ಅದರಂತೆ, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು ರೂ.3,500/- ಕೋಟಿಗಳ ಪರಿಹಾರ ಹಣ ಬಾಕಿ ಇರುತ್ತದೆ. ಇದೆಲ್ಲವೂ ಸಹ ಸರಿಹೋಗಬೇಕಾದರೆ ನ್ಯಾಯಾಲಯದ ವ್ಯವಸ್ಥೆಯ ಜೊತೆಗೆ, ಆಡಳಿತಾತ್ಮಕವಾದಂತಹ ಸರ್ಕಾರದ ಜವಾಬ್ದಾರಿ ಬಹಳ ಇದೆ. ಹಾಗಾಗಿ, ನ್ಯಾಯಾಲಯಗಳ ಪ್ರಕರಣಗಳನ್ನು ಸರಳವಾಗಿ ಬಗೆಹರಿಸುವುದಕ್ಕೆ ಇಡೀ ರಾಜ್ಯಾದ್ಯಂತ ಈ ವಿಧೇಯಕವನ್ನು ಜಾರಿಗೆ ತರಲಾಗುತ್ತಿದೆ. ಆದರೆ, ವಿಶೇಷವಾಗಿ ಇಂತಹ ಪ್ರಕರಣಗಳಲ್ಲಿ ಅಥವಾ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ, ರೈಲ್ವೆ ಯೋಜನೆಗಳಿಗೆ ರೈತರ ಜಮೀನುಗಳನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುತ್ತದೆ. ಪ್ರಕರಣಗಳ ಜಾಸ್ತಿಯಾದಂತಹ ಸಂದರ್ಭದಲ್ಲಿ ವಿಶೇಷವಾಗಿ ಅವುಗಳನ್ನು ಇತ್ಯರ್ಥ ಮಾಡಿ, ಪರಿಹಾರ ಕೊಡುವಂತಹ ಕೆಲಸ ಆಗಬೇಕು. ಹಾಗಾಗಿ, ಈ ತಿದ್ದುಪಡಿ ವಿಧೇಯಕದಲ್ಲಿ ಅಂತಹದ್ದಕ್ಕೂ ಅವಕಾಶ ಮಾಡಿ, ಸರ್ಕಾರ ವಿಶೇಷ ಜವಾಬ್ದಾರಿಯನ್ನು ತೆಗೆದುಕೊಂಡು ಮಾನ್ಯ ನ್ಯಾಯಾಲಯದಲ್ಲಿರುವಂತಹ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವಂತಹ ಕೆಲಸ ಇಂತಹ ಹೊಸ ಹೊಸ ಕಾನೂನುಗಳ ಮೂಲಕ ಆಗಲಿ ಎನ್ನುವ ಅಪೇಕ್ಷೆ ನನ್ನದಾಗಿರುತ್ತದೆ.

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ತಂದಿರುವಂತಹ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 ಅನ್ನು ಒಳ್ಳೆಯ ದೃಷ್ಟಿಯಿಂದ ತರಲಾಗಿದೆ. ಆದರೆ, ಪ್ರತಿ ಇಲಾಖೆಯಲ್ಲಿಯೂ ಸಹ, ನಾನು ಕಂಡಂತೆ ಯಾವುದೇ ಒಂದು ವಿಷಯದ ಬಗ್ಗೆ ಸದನದಲ್ಲಿ ಚರ್ಚೆಯಾಗಿ ಅದರ ಮೇಲೆ ಭರವಸೆ ಆಗಿರುತ್ತದೆ. ಸಂಬಂಧಪಟ್ಟ ಸಚಿವರು ಅಥವಾ ಸರ್ಕಾರ ಈ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಅಥವಾ ಹಣ ವಸೂಲಾತಿ ಮಾಡುತ್ತೇವೆ, ಸರ್ಕಾರಕ್ಕೆ ಆಗಿರುವಂತಹ ನಷ್ಟವನ್ನು ಭರಿಸುವಂತಹ ಕೆಲಸವನ್ನು ಮಾಡುತ್ತೇವೆಂದು ಹೇಳಿ, ಹಲವಾರು ಇಲಾಖೆಗಳಲ್ಲಿ ಏನೇ ಭರವಸೆ

ಕೊಟ್ಟಿರುತ್ತಾರೆ. ಈ ವಿಷಯದ ಬಗ್ಗೆ ಮಾನ್ಯ ಪ್ರತಾಪ ಸಿಂಹ ನಾಯಕ್ ರವರು ಹೇಳಿರುತ್ತಾರೆ ಮತ್ತು ಸಭಾಪತಿ ಸ್ಥಾನದಲ್ಲಿ ಕುಳಿತಿರುವ ಶ್ರೀ ಮಂಜುನಾಥ್ ಭಂಡಾರಿಯವರಾದ ತಾವು ಕೂಡ ಭರವಸೆ ಸಮಿತಿಯ ಸದಸ್ಯರಾಗಿರುತ್ತಾರೆ. ಭರವಸೆ ಸಮಿತಿ ಮುಂದೆ ಬರುವಂತಹ ಅನೇಕ ಪ್ರಕರಣಗಳಲ್ಲಿ ಈ ಪ್ರಕರಣ ಕೋರ್ಟ್‌ನಲ್ಲಿದೆ. ಆರು ತಿಂಗಳಾಯಿತು, ಒಂದು ವರ್ಷ ಆಯಿತು ಎಂದು ಹೇಳುತ್ತಾರೆ. ಆದರೆ, ಆ ದಿನಾಂಕವನ್ನು ಸಹ ಸರಿಯಾಗಿ follow-up ಮಾಡುವುದಿಲ್ಲ. ಪ್ರತಿ ಇಲಾಖೆಯಲ್ಲಿ ಲೀಗಲ್ ಸೆಲ್ ಅನ್ನು ಮೊದಲು ಜಾರಿಗೆ ತರಬೇಕು. ಆ ಲೀಗಲ್ ಸೆಲ್ ಬಹಳ ಇಲಾಖೆಯಲ್ಲಿ ಇಲ್ಲವೆಂದು ನನಗೆ ಮಾಹಿತಿ ಬಂದಿರುತ್ತದೆ. ಒಂದು ಇಲಾಖೆಯಲ್ಲಿ ಆಗುವಂತಹ ಆಗುಹೋಗುಗಳು ಅಥವಾ ಕಾನೂನು ಹೋರಾಟಕ್ಕೆ ಯಾರನ್ನೋ ವಕೀಲರನ್ನಾಗಿ ನೇಮಕ ಮಾಡುತ್ತಾರೆ, ಯಾರೋ ವಕೀಲರು ಸರ್ಕಾರದ ನ್ಯಾಯಬದ್ಧವಾದ ವಿಚಾರ ಏನಿರುತ್ತದೆ, ಅದನ್ನು ಕೂಡ ಸರಿಯಾದ ರೀತಿಯಲ್ಲಿ ಪಾಲನೆ ಮಾಡುವುದಿಲ್ಲ. ಅಂದರೆ, ವಿಚಾರಣಾ ದಿನಾಂಕ ತೆಗೆದುಕೊಳ್ಳುವುದಕ್ಕಾಗಲಿ, ಸೂಕ್ತ ಕಾನೂನು ಹೋರಾಟ ಮಾಡುವುದಕ್ಕಾಗಲಿ, ನಮ್ಮ ಸರ್ಕಾರದ ಪರವಾಗಿ ನ್ಯಾಯ ಕೊಡಿಸುವಂತಹ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಅದು ಮಾನ್ಯ ಸಚಿವರ ಗಮನಕ್ಕೂ ಸಹ ಬಂದಿರುತ್ತದೆ. ಏಕೆಂದರೆ, ಅವರು ಕೂಡ PAC (Public Accounts Committee) ಯಲ್ಲಿ ಅಧ್ಯಕ್ಷರಾಗಿದ್ದಾಗ, ಅವರ ಜೊತೆಯಲ್ಲಿ ನಾನು ಕೂಡ ಕೆಲಸ ಮಾಡಿದ್ದೇನೆ. ಅವರು ಕೂಡ ಹಿಂದಿನ ಸರ್ಕಾರದಲ್ಲಿದ್ದಾಗ, ನನ್ನನ್ನು ಬಹಳ ಸಾರಿ ನೋಡಿರುತ್ತಾರೆ. ಬಹುಶಃ ಇದರಲ್ಲಿ ಮಾನ್ಯ ಸಚಿವರ ಉದ್ದೇಶ ಚೆನ್ನಾಗಿದೆ. ಆದರೆ, ಸರ್ಕಾರಕ್ಕೆ ಏನು ನ್ಯಾಯ ಸಿಗಬೇಕು, ಆ ಹಾದಿಯಲ್ಲಿ ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅವರಿಗೆ ಏನು ಶಿಕ್ಷೆ ಕೊಡಬೇಕು ಎನ್ನುವುದರ ಬಗ್ಗೆ ಕೂಡ ಗಮನಹರಿಸಬೇಕು. ಏಕೆಂದರೆ, ಅಧಿಕಾರಿಗಳು ನಿರಂತರವಾಗಿ ವರ್ಗಾವಣೆಯಾಗುತ್ತಲೇ ಇರುತ್ತಾರೆ. ಅಲ್ಲದೇ, "ಸರ್, ನಾನು ಈಗ ಈ ಇಲಾಖೆಗೆ ಬಂದಿರುತ್ತೇನೆ. ಒಂದು ವಾರ ಆಯಿತು, ಹತ್ತು ದಿನ ಆಯಿತು, ಒಂದು ತಿಂಗಳು ಆಯಿತು, ಮೂರು ತಿಂಗಳು ಆಯಿತು ಎಂದು ಹೇಳುತ್ತಾರೆ. ಆದರೆ, ಸಿಸ್ಟಮ್ ಕೆಲಸ ಮಾಡಬೇಕು. ಮ್ಯಾನ್ ಅಲ್ಲ. ಮ್ಯಾನ್‌ಪವರ್‌ನಲ್ಲಿ ಅಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ? ಮಾನ್ಯ ಸಚಿವರು ಬರುತ್ತಾರೆ, ಹೋಗುತ್ತಾರೆ. ಸರ್ಕಾರ ಬರುತ್ತದೆ, ಸರ್ಕಾರ ಹೋಗುತ್ತದೆ. ಆದರೆ, ಒಂದು ಸಿಸ್ಟಮ್ ಇದೆಯಲ್ಲಾ, ಅದು ಯಾವಾಗಲೂ ಕೆಲಸ ಮಾಡಬೇಕಾಗುತ್ತದೆ. (ಮುಂದು)

(೯೦೮) 21.08.2025 2.00 ವೈಎಲ್-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):-**

ಇವತ್ತು ನಾವು ಗೆಲ್ಲುವಂಥ ಬಹಳ ಕೇಸ್‌ಗಳೇನಿವೆ, ಅದಕ್ಕೆ ಸರ್ಕಾರದ ವತಿಯ ವಕೀಲರು, ಕಾನೂನು ಕೋಶದ ವೈಫಲ್ಯದಿಂದಾಗಿ ಸೋಲುವಂಥ ಅನೇಕ ಘಟನೆಗಳಿಂದಾಗಿ ಸರ್ಕಾರಕ್ಕೆ ಲುಕ್ಸಾನು ಆಗಿರುವಂಥ ಕೋಟ್ಯಂತರ

ರೂಪಾಯಿ ಆಸ್ತಿ, ಹಣವನ್ನು ನೋಡಿದ್ದೇವೆ. ಇವತ್ತಿಗೂ ಬಹಳಷ್ಟು ತಪ್ಪಿತಸ್ಥ ಅಧಿಕಾರಿಗಳು ಸೇವೆಯಲ್ಲಿದ್ದಾಗಲೇ ಇಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರೂ ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಆ ಅಧಿಕಾರಿ ನಿವೃತ್ತಿ ಹೊಂದಿ ಸುಮಾರು 4 ವರ್ಷಗಳು ಕಳೆದರೂ ಅವರ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳುವುದಿಲ್ಲ; ಯಾವುದನ್ನೂ ವಸೂಲಾತಿ ಮಾಡುವುದಿಲ್ಲ; ಯಾವುದೇ ಪ್ರಕರಣದಲ್ಲಿ ಅವರನ್ನು ಏನು ಮಾತನಾಡಿಸುವಂತಿಲ್ಲ; ಆ ಒಂದು ಪರಿಸ್ಥಿತಿ ತಂದಿಟ್ಟಿದ್ದಾರೆ. 'ಏನಪ್ಪಾ, ತಪ್ಪಿತಸ್ಥ ಅಧಿಕಾರಿ ವಿರುದ್ಧ ಏತಕ್ಕೆ ಕ್ರಮಕೈಗೊಂಡಿಲ್ಲವೆಂದು ಕೇಳಿದರೆ; ಸಾರ್, 'ಅವರು ನಿವೃತ್ತಿ ಹೊಂದಿದ್ದು, ಅವರಿಗೆ ನೋಬಲ್ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಎಲ್ಲವನ್ನೂ ಕೊಟ್ಟು, ಬೀಳ್ಕೊಡುಗೆ ಸಮಾರಂಭ ಮಾಡಿ ಕಳುಹಿಸಿಕೊಟ್ಟಿದ್ದೇವೆ' ಎಂದು ನಂತರ ಬಂದಿರುವಂಥ ಅಧಿಕಾರಿಗಳು ಬಹಳ ಅಚ್ಚುಕಟ್ಟಾಗಿ ಉತ್ತರ ಕೊಟ್ಟಿರುವಂಥ ನಿದರ್ಶನವನ್ನು ಕಂಡಿದ್ದೇವೆ. ಆದ್ದರಿಂದ ಕಾನೂನು ಕೋಶವನ್ನು ಭದ್ರಗೊಳಿಸಬೇಕು. ಎರಡನೆಯದಾಗಿ, ಇಲಾಖಾವಾರು ಎಷ್ಟು ಕೇಸ್‌ಗಳು ಬಾಕಿ ಇವೆ ಎಂಬುದರ ಕುರಿತು ಈಗಾಗಲೇ ಪ್ರಶ್ನೆ ಕೇಳಿದ್ದು, ಅದು ಸಹ ಪ್ರಶ್ನೋತ್ತರವಾಗಿ ಇಲ್ಲಿಯವರೆಗೂ ಬಂದಿರಲಿಲ್ಲ, ಇವತ್ತು ಬಂದಿದೆ. ನಮ್ಮ ಸರ್ಕಾರದ ಎಷ್ಟು ಇಲಾಖೆಗಳಲ್ಲಿ ಕಾನೂನು ಕೋಶವನ್ನು ಅಳವಡಿಸಿಕೊಂಡು, ಯಾವ ವಕೀಲರನ್ನು ಅದಕ್ಕೆ ನೇಮಿಸಲಾಗಿರುತ್ತದೆ, ಅವರು ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ, ಅಂಥವರನ್ನು ತೆಗೆದುಹಾಕಬೇಕು. ಯಾರು ಸರಿಯಾದ ರೀತಿಯಲ್ಲಿ ಅದನ್ನು ನಿಭಾಯಿಸುತ್ತಾರೆ, ಅವರಿಗೆ ಸಹಕಾರ ನೀಡಿ. ಜೊತೆಗೆ ಆ ಪ್ರಕರಣಗಳು ಏತಕ್ಕಾಗಿ ಬಾಕಿಯಲ್ಲಿವೆ; ಎಷ್ಟು ದಿವಸಗಳಿಂದ ಬಾಕಿಯಲ್ಲಿವೆ; ಎಂಬುದರ ಬಗ್ಗೆ ಮಾನ್ಯ ಸಚಿವರು ಪರಿಶೀಲನಾ ಸಭೆ ನಡೆಸಬೇಕಾಗುತ್ತದೆ ಹಾಗೂ ಯಾವ ದಿನಾಂಕದಂದು ಹಿಯರಿಂಗ್ ಆಗಿದೆ; ಮತ್ತೆ ಯಾವ ದಿನಾಂಕದಂದು ಕೇಸನ್ನು ತೆಗೆದುಕೊಳ್ಳಲಾಗಿದೆ; ಏತಕ್ಕೆ ಆ ಪ್ರಕರಣಕ್ಕೆ ನ್ಯಾಯ ಸಿಗುತ್ತಿಲ್ಲ ಎನ್ನುವುದರ ಬಗ್ಗೆ ಉತ್ತಮವಾದ ಕೆಲಸವಾಗಬೇಕಾಗಿದೆ. ಈ ವಿಧೇಯಕದಲ್ಲಿ ತಂದಿರುವಂಥದು ಉತ್ತಮವಾದ ತಿದ್ದುಪಡಿಯಾಗಿದ್ದು, ಇಲ್ಲವೆಂದು ಹೇಳುವುದಿಲ್ಲ. ಜೊತೆಗೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಕಾನೂನು ಪಂಡಿತರಾಗಿದ್ದು, ಅವರ ವ್ಯಾಪ್ತಿಯಲ್ಲಿ ಬರುವಂಥ ಪ್ರಕರಣಗಳು ಇತ್ಯರ್ಥವಾಗಬೇಕು. ನಮ್ಮ ರಾಜ್ಯದ ಯಾವುದೇ ಇಲಾಖಾಧಿಕಾರಿ ಇರಲಿ, ಅವರಿಗೂ ಸಹ ಶಿಕ್ಷೆಯಾಗಬೇಕು. 'ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು' ಎನ್ನುವ ಹಾಗೆ ಆ ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಅಂತಹ ಒಂದು ಕಾನೂನನ್ನು ಈ ತಿದ್ದುಪಡಿ ವಿಧೇಯಕದಲ್ಲಿ ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದುವರೆವಿಗೂ ಸಾಕಷ್ಟು ವಕೀಲ ಸದಸ್ಯರು ಮಾತನಾಡಿದ್ದು, ಅದರಲ್ಲಿ ಮಾನ್ಯ ಎನ್.ರವಿಕುಮಾರ್‌ರವರು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ನಷ್ಟವನ್ನುಂಟು ಮಾಡಿದ ತಪ್ಪಿತಸ್ಥ ಅಧಿಕಾರಿಗೆ ಲಕ್ಷ ರೂಪಾಯಿಗಳ ದಂಡ ವಿಧಿಸಿ, ವರ್ಗಾವಣೆಗೊಳಸುವಂಥ ಕೆಲಸ ಮಾಡುತ್ತೇವೆ. ಇದು ಮೊದಲು ವಕೀಲರನ್ನು ನೇಮಕ ಮಾಡಿಕೊಳ್ಳುವಂಥ ಪ್ರಕ್ರಿಯೆಯಿಂದ ಪ್ರಾರಂಭವಾಗಬೇಕು. ಸರ್ಕಾರ ವಕೀಲರನ್ನು ನೇಮಕ ಮಾಡಿಕೊಳ್ಳುವಾಗ ಆ ಮಾನದಂಡಗಳೇನಿವೆ ಎಂಬುದನ್ನು ಯೋಚನೆ ಮಾಡಿ, ನೇಮಕ ಮಾಡಿಕೊಂಡ ಪಕ್ಷದಲ್ಲಿ ತುಂಬಾ ಚೆನ್ನಾಗಿ ಹೋಗುತ್ತದೆ. Influence ಮೇಲೆ ವಕೀಲರನ್ನು ನೇಮಕ ಮಾಡಿಕೊಂಡರೆ, ಇಂತಹ ಸಮಸ್ಯೆಗಳು ಬರುವುದು ಸಹಜ. ಎರಡನೆಯದಾಗಿ, ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಒಂದು ಪ್ರಕರಣ ಕೈಗೆತ್ತಿಕೊಂಡರೆ, ರೂ. 1,000, ರೂ. 2,000 ಗಳಂತೆ ಶುಲ್ಕವನ್ನು ಪಾವತಿಸುತ್ತೇವೆ. ಒಂದು ವೇಳೆ ಅವರೇನಾದರೂ ಹೊಂದಿಕೊಂಡರೆ ಎಷ್ಟೋ ಜನ ವಕೀಲರು,... ಉದಾಹರಣೆಗೆ ಹೇಳುವುದಾದರೆ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಸದನದಲ್ಲಿಯೇ ಇದ್ದು, ಮೈಸೂರು ನಗರ ಪಾಲಿಕೆ, ಮೈಸೂರು ನಗರ ಪ್ರಾಧಿಕಾರದಲ್ಲಿ ಎಷ್ಟು ಮಂದಿ ವಕೀಲರು ಇದ್ದರು, ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲ. ಕೆಲವರು ಕೋಟ್ಯಾಧಿಪತಿಯಾಗಿದ್ದಾರೆ. ಏತಕ್ಕೆ? ಆ ವಕೀಲರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ influence ಮಾಡಿಸುವುದು, ಅವರಿಗೆ ಕೊಡಬೇಕಾದಂಥ ಶುಲ್ಕ ಮತ್ತು follow-up ಮಾಡುವ ಬಗ್ಗೆ ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಈಗಾಗಲೇ ಹೇಳಿದರು. follow-up ಮಾಡುವಾಗ ಯಾವ ಅಧಿಕಾರಿಯನ್ನು ಅನುಪಾಲನೆಗಾಗಿ ನೇಮಕ ಮಾಡಲಾಗುತ್ತದೆ, ಆ ಅಧಿಕಾರಿ ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು. ಹಾಗೆಯೇ ಯಾರನ್ನು ನೇಮಕ ಮಾಡಬೇಕೆಂಬುದನ್ನು ಮಾನ್ಯ ಸಚಿವರು ಹೇಳುತ್ತಾರೆ. ಆದಾದ ಮೇಲೆ ಪಾಲನೆ ಮಾಡಬೇಕು. ಮಾನ್ಯ ಎನ್.ರವಿಕುಮಾರ್‌ರವರು ಸಹ ಬಹಳ ಚೆನ್ನಾಗಿ ಹೇಳಿದ್ದಾರೆ. ಸರ್ಕಾರ ಅವರಿಗೆ ಏನು ಬೇಕಾಗುತ್ತದೆ, ಅದನ್ನು ಅನುಪಾಲನೆ ಮಾಡುತ್ತಾರೆ. ಯಾವುದೂ ಬೇಡವೋ ಅದನ್ನು ಅನುಪಾಲನೆ ಮಾಡುವುದಿಲ್ಲ. ಮೊದಲು ನ್ಯಾಯ ಎನ್ನುವುದು ನ್ಯಾಯವಾಗಿ ಆಗಬೇಕು. ಸರ್ಕಾರದ ಪರವಾಗಿ ಬಂದರೆ ಒಂದು ರೀತಿ ಇರುತ್ತಾರೆ; ಸರ್ಕಾರದ ವಿರುದ್ಧವಾಗಿ ಬಂದರೆ ಒಂದು ರೀತಿ ಇರುತ್ತಾರೆ; ಯಾರ ಪರವಾಗಿ ನ್ಯಾಯ ಬರುತ್ತದೆಯೋ, ಆ ಅಧಿಕಾರಿ ಹೊಂದಿಕೊಂಡರೆ ಒಂದು ರೀತಿ ಆಗುತ್ತದೆ; ಒಂದು ವೇಳೆ ಆತ ಹೊಂದಿಕೊಳ್ಳಲಿಲ್ಲವೆಂದರೆ, ಒಂದು ರೀತಿ ಆಗುತ್ತದೆ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮಾತನಾಡುವಾಗ ಸಾಕಷ್ಟು ಪ್ರಕರಣಗಳು ಜಾಸ್ತಿಯಾಗುತ್ತಿವೆ; ಕೋರ್ಟ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿವೆ ಎಂದು ಹೇಳಿದರು.

ಇವತ್ತು ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ Karnataka Scheduled Castes and Scheduled Tribes (Prohibition of Transfer of Certain Lands) Act ಜಾಗೃತಿಗೊಳಸುವಂಥ ವಿಚಾರ ಬಂದಿದೆ. ಹೆಣ್ಣುಮಕ್ಕಳಿಗೂ ಆಸ್ತಿಯಲ್ಲಿ ಸಮಪಾಲು ಎನ್ನುವಂಥ ನ್ಯಾಯ ಬಂದ ಮೇಲೆ ನ್ಯಾಯಾಲಯದಲ್ಲಿ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಹಾಗಾಗಿ ನಾನು ಒಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಅನುಪಾಲನೆ ಮಾಡಲು ಯಾವ ಅಧಿಕಾರಿಯನ್ನು ನೇಮಕ ಮಾಡಲಾಗಿರುತ್ತದೆ, ನಿವೃತ್ತಿ ಹೊಂದಿರುವವರನ್ನು ದಯವಿಟ್ಟು ನೇಮಕ ಮಾಡಬೇಡಿ. ಹಾಗೆಯೇ ಮಾನ್ಯ ಟಿ.ಎ.ಶರವಣನವರು ಹೇಳಿದ ಹಾಗೆ, ವರ್ಗಾವಣೆಯಾಗಿ ಆ ಅಧಿಕಾರಿ ಬೇರೆ ಕಡೆ ಹೋಗುತ್ತಾರೆ. ಆದರೆ, ಸರ್ಕಾರಕ್ಕೆ ಆಗಿರುವಂಥ ನಷ್ಟವನ್ನು ತುಂಬಿಕೊಳ್ಳುವುದು ಹೇಗೆ ಎಂಬುವುದನ್ನು ಮಾನ್ಯ ಸಚಿವರು ಸದನದಲ್ಲಿ ತರಬೇಕು. ಯಾರನ್ನು ನೇಮಕ ಮಾಡಲಾಗುತ್ತದೆ; ಆತ ತಪ್ಪು ಮಾಡಿದ ಸಂದರ್ಭದಲ್ಲಿ ಏನು ಶಿಕ್ಷೆ ವಿಧಿಸಲಾಗುತ್ತದೆ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಹೆಚ್. ಕೆ.ಪಾಟೀಲ್‌ರವರು ತಂದಿರುವಂಥ ತಿದ್ದುಪಡಿ ಮಸೂದೆ ಏನಿದೆ, ಈ ಮಸೂದೆ ಒಳ್ಳೆಯ ದೃಷ್ಟಿಯಲ್ಲಿ ತಂದಿದ್ದಾರೆ. ಹಾಗಾಗಿ, ಕೆಲವು ಸದಸ್ಯರು ಕೊಟ್ಟಿರುವಂಥ ಸೂಚನೆಗಳನ್ನು ಅಳವಡಿಸಿಕೊಂಡರೆ, ಇದೊಂದು ಒಳ್ಳೆಯ ವಿಧೇಯಕವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ):-** ಮಾನ್ಯ ಸಭಾಪತಿಯವರೇ, ಇದೊಂದು ಸಣ್ಣ ವಿಧೇಯಕವಾದರೂ ಕೂಡ ಇದರ ಬಗ್ಗೆ ಬಹಳ ವಿಸ್ತೃತವಾಗಿ ಮಹತ್ವದ ಸಲಹೆ-ಸೂಚನೆಗಳನ್ನು ಕೊಡುತ್ತಾ, ಸಾಕಷ್ಟು ಚರ್ಚೆ ಮಾಡಲಾಗಿದೆ. ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಮಾನ್ಯ ಪಿ.ಹೆಚ್.ಪೂಜಾರ್, ಮಾನ್ಯ ಐವನ್ ಡಿ'ಸೋಜಾ, ಮಾನ್ಯ ಎನ್.ರವಿಕುಮಾರ್, ಮಾನ್ಯ ಪ್ರತಾಪ್ ಸಿಂಹ ನಾಯಕ್.ಕೆ, ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ, ಮಾನ್ಯ ಟಿ.ಎ.ಶರವಣ, ಮಾನ್ಯ ಸಿ.ಎನ್.ಮಂಜೇಗೌಡರವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಪಿ.ಹೆಚ್.ಪೂಜಾರಿಯವರು ಎಷ್ಟು ಮಂದಿಯನ್ನು ನೇಮಿಸುತ್ತೀರಿ? ಅದೇ ದೊಡ್ಡ ಪಟ್ಟಿಯಾಗುತ್ತದೆ ಅಲ್ಲವೇ? ಎಂದು ಹೇಳಿದ್ದು, what is important is justice. ನ್ಯಾಯ ಕೊಡಿಸುವ ಸಲುವಾಗಿ ಹೇಗೆ ಮಾಡುತ್ತೇವೆ, ಯಾವ ರೀತಿ ಮಾಡುತ್ತೇವೆ; ಎಷ್ಟೇ ಭಾಗವಾದರೂ ಕೂಡ ನ್ಯಾಯ ಕೊಡಿಸಬೇಕಲ್ಲವೇ ಎನ್ನುವಂಥ ತತ್ವದ ಹಿನ್ನೆಲೆಯೊಳಗೆ ಒಟ್ಟು ವ್ಯವಸ್ಥೆಯನ್ನು ನೋಡಬೇಕಾಗುತ್ತದೆ. ಏತಕ್ಕೆ ಇಷ್ಟು ಪೋಲೀಸರು ಬೇಕು? ಕಳುವಾದರೆ 10 ಕಳುವಾಗಬಹುದೇನೋ, ಬಿಟ್ಟವೋ ಅದಕ್ಕೆ ಇಷ್ಟು ಮಂದಿ ಏತಕ್ಕೆ ಪೋಲೀಸ್‌ನವರು ಬೇಕು ಎಂದರೆ, ಅದು ಸರಿಯಾದ ನೀತಿಯಾಗುವುದಿಲ್ಲ. ನಾನು

ಹೇಳುವುದೇನೆಂದರೆ, ನ್ಯಾಯಾಲಯದ ಆದೇಶಗಳನ್ನು ಜಾರಿಗೊಳಿಸಲು ಅಥವಾ ಅನುಪಾಲನೆ ಮೇಲ್ವಿಚಾರಣೆ ನಡೆಸಲು ಅಧಿಕಾರಿಗಳನ್ನು ಗೊತ್ತುಪಡಿಸುತ್ತೇವೆ. ಅಂತಹ ಅಧಿಕಾರಿಯನ್ನು ಜಿಲ್ಲಾವಾರು, ವಿಭಾಗವಾರು ಒಬ್ಬರಂತೆ ನೇಮಿಸಬೇಕಾದರೆ, ಅವರಿಗೆ paraphernalia ಕೊಟ್ಟು, ಅಂತಹ ಅಧಿಕಾರಿಯನ್ನೇ ನೇಮಿಸುತ್ತೇವೆ ಎಂದು ಹೇಳಬಯಸುತ್ತೇನೆ.

ಎರಡನೆಯದಾಗಿ, ನ್ಯಾಯಾಲಯದ ಆದೇಶದ ಅನುಪಾಲನೆಗಾಗಿ ಕಾರ್ಯ ವಿಧಾನವನ್ನೇ ನಿರ್ದಿಷ್ಟಪಡಿಸುವುದು ಅವಶ್ಯಕತೆ ಇದೆ. ಕರ್ನಾಟಕ ಸಹಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ, 2023 ರಲ್ಲಿ ವ್ಯಾಜ್ಯ ನಿರ್ವಹಣೆ ಕಾನೂನು ತಿದ್ದುಪಡಿ ತಂದ ಮೇಲೆ ಸುಧಾರಣೆಯಾಗಿಲ್ಲ ಎಂದು ಹೇಳುವುದಿಲ್ಲ, ಸುಧಾರಣೆಯಾಗಿದೆ. ಆದರೆ, ಸರ್ಕಾರದ ಫೋಕಸ್ ಏನಿರುತ್ತದೆ ಮತ್ತು ಅವರ focus ಏನಿರುತ್ತದೆ ಎಂದರೆ, ದೊಡ್ಡ ಕೇಸ್ ಮೇಲೆ ಇರುತ್ತದೆ. ಸುಮಾರು ರೂ.3,050 ಕೋಟಿಗಳ ಪ್ಯಾಲೆಸ್ ಗ್ರೌಂಡ್ ಕೇಸ್ ಏನಿದೆ, ಅದರ ಮೇಲೆ ನಮ್ಮೆಲ್ಲರ focus ಇರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಹ ದೊಡ್ಡ ದೊಡ್ಡ ವಕೀಲರು ಹಾಜರಾಗುತ್ತಾರೆ. ನಮ್ಮ ವಿರುದ್ಧದವರೇ ಆಗಿರಲಿ ಅಥವಾ ನಮ್ಮ ಪರವಾಗಿದ್ದವರೇ ಆಗಿರಲಿ, ಅಂತಹ ಕೇಸ್ ಮೇಲೆ ಮಾತ್ರ ಸರ್ಕಾರದ ವಿಶೇಷ ಗಮನ ಇರುತ್ತದೆ.

(೯೦೯) 21.08.2025/2.10/ಎಸ್‌ಕೆ-ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಹೆಚ್. ಕೆ. ಪಾಟೀಲ್ (ಮುಂದು)**

ಆದರೆ ನಿಮಗೆ ಆಶ್ಚರ್ಯವಾಗಬಹುದು ಮತ್ತು ಅಷ್ಟೇ ನೋವಾಗುತ್ತದೆ. 2022ರ ಒಳಗೆ 3.957contempt cases were filed and pending. ಒಟ್ಟು 3,957 ಪ್ರಕರಣಗಳು ಬೇರೆ ಬೇರೆ ಹಂತದಲ್ಲಿ ಪೆಂಡಿಂಗ್ ಇದ್ದವು. ರಾಜ್ಯ ಸರ್ಕಾರ 3957 ಕೇಸ್‌ನೊಳಗೆ ನಾವು ಏನು act ಮಾಡಬೇಕು, judgement ಅನ್ನು ಏನು implement ಮಾಡಬೇಕು, honour ಮಾಡಬೇಕು, ಆದೇಶವನ್ನು ನಾವು ಪಾಲನೆ ಮಾಡಬೇಕು. ಇವನ್ನು ಸರ್ಕಾರವಾಗಿಯೇ ಮಾಡಿದ್ದಿಲ್ಲ. 2023ರಲ್ಲಿ ನಮ್ಮ ಸರ್ಕಾರ ಬಂದ ಮೇಲೆ our major thrust was to see that contempt petitions are got disposed of. ಸಣ್ಣ ಸಣ್ಣ ಕೆಲಸಕ್ಕೆ ಇರಬಹುದು. ಒಬ್ಬ ಅಧಿಕಾರಿಯು ಬಂದು ಹೇಳಿ ಹೋಗಬೇಕು ಎನ್ನುವಂತಹದ್ದು ಇರುತ್ತದೆ. ಅಫಿಡೆವಿಟ್ ಹಾಕಬೇಕು ಎನ್ನುವುದು ಇರುತ್ತದೆ. He will not come and file affidavit. ಯಾವುದೋ ಒಂದು ಕೇಸ್‌ನೊಳಗೆ ಸರ್ಕಾರ

ಮೂವತ್ತು ದಿವಸದೊಳಗೆ ಒಂದು ಲಕ್ಷ ರೂಪಾಯಿಗಳನ್ನು ಯಾರೊಬ್ಬರಿಗೆ ಕೊಡಬೇಕು ಎನ್ನುವುದು ಇರುತ್ತದೆ. Neither we appeal nor we pay. ಅವರೇನಾದರೂ ಬುದ್ಧಿವಂತನಿದ್ದ ಮತ್ತು ಜಾಣನಿದ್ದರೆ, ಅವನಿಗೆ ಸರಿಯಾದ ವಕೀಲರು ಸಿಕ್ಕಿದ್ದ ಎಂದರೆ, ಅವರು ಹೈಕೋರ್ಟ್ ಮತ್ತೊಂದು ಕಡೆ ಹೋಗಿ contempt petition ಹಾಕಿ, ನಿಮಗೆ ಹೇಗೆ ವಸೂಲಿ ಮಾಡಬೇಕೋ ಹಾಗೇ ವಸೂಲಿ ಮಾಡಿಕೊಳ್ಳುವುದಕ್ಕೆ ಅವನಿಗೆ ತಾಕತ್ತು ಇರುತ್ತದೆ. ಅವರು ವಸೂಲಿ ಮಾಡಿಕೊಳ್ಳುತ್ತಾರೆ. ಈ ತರಹ ಸುಮಾರು 4000 ಪ್ರಕರಣಗಳು ಎಂದರೆ it is something which is very shocking. ಇದಲ್ಲದೇ ಇವೆಲ್ಲಾ contempt, cases ಏನಿವೆ, these are the cases where people are alert, where we have very active Advocates who are supporting our clients. They may be against us. But they are citizens of the state. ಅಂದರೆ ಹತ್ತಾರು ಸಾವಿರ judgements, I am making this statement as a Law Minister. ಒಂದು ಸಾವಿರ ಹೆಚ್ಚು ಕಡಿಮೆ ಇರಬಹುದು. Around 10,000 verdicts, judgements, orders, directions of the courts are pending solutions. I am very happy to say that our new team of Advocates, our Advocate General and his Associates, Additional Advocate Generals and Government Advocates during last one and half year, they have focussed their attention and today if you ask me the total pendency is somewhere around less than 500. What is more important is not just contempt cases, the other cases, ಅವನು ಪಾಪದವನು, ಆದೇಶವಾದರೂ ಸರ್ಕಾರ ಏನು ಮಾಡಲಿಲ್ಲ ಎಂದರೆ ಅವನಿಗೆ ದುಡ್ಡು ಕೊಡುವುದಿದ್ದರೆ, ಅವನು compensation ಬೇಕಾಗಿತ್ತು. Compensation ತೆಗೆದುಕೊಳ್ಳದಿದ್ದರೆ, ಹೆಚ್ಚು ಆಸಕ್ತಿ ತೆಗೆದುಕೊಂಡಿರುತ್ತಾನೆ. ಇತರೆ ಪ್ರಕರಣಗಳು ಇರುತ್ತವೆಯೆಲ್ಲ, ಅಲ್ಲಿ ಅವನು ಏನೂ ಮಾಡಿರುವುದಿಲ್ಲ. ಅಂತಹ ಪ್ರಕರಣಗಳು ಬಹಳ ದೊಡ್ಡ ಪ್ರಮಾಣದಲ್ಲಿ ಇವೆ. ಅವುಗಳನ್ನು ಕಡಿಮೆಗೊಳಿಸುವಂತಹ ಅವುಗಳನ್ನು ನಾವು ಬೇಗ ಅನುಪಾಲನಾ ವರದಿ ಬರುವ ಹಾಗೆ ಮಾಡಿ, ಅನುಪಾಲನಾ ವರದಿಯ ಮೂಲಕ ನ್ಯಾಯವನ್ನು ಒದಗಿಸುವುದಕ್ಕಾಗಿ ನಾವು ವಿಶೇಷವಾಗಿರುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಒಂದೊಂದು ವರ್ಷ ನಿಮಗೆ ಹೇಳುತ್ತೇನೆ., I don't want to hide the numbers. In the year 2023 the number of contempt cases filed are 744 in Bengaluru High Court, 194 in Dharwad High Court Bench, 160 in Kalburgi High Court. In the year 2023

itself it was 1,098. In 2024 it was 1254. In 2025 it is 659 and lot of cases are got dropped in the year 2023. ಅದು 851 drop ಆದವು. 2024ರಲ್ಲಿ 550 drop ಆದವು. 2025ರೊಳಗೆ 179 ಮಾತ್ರ drop ಆಗಿವೆ. ಅಂದರೆ ಇಷ್ಟು contempt cases ಆಗುತ್ತಿದ್ದರೆ, ಉಳಿದ judgement ಗಳು ಸಹಜವಾಗಿ ಸರ್ಕಾರದಲ್ಲಿ ಅಲ್ಲಲ್ಲಿಯೇ ಉಳಿದುಕೊಂಡು ಬಿಟ್ಟಿವೆ. ಈಗ Assistant Commissioner ಗೆ ಕೋರ್ಟ್‌ನವರು ಆದೇಶ ಮಾಡುತ್ತಾರೆ. ಅದು ನಮಗೂ ನಿಮಗೆಲ್ಲರಿಗೂ ಗೊತ್ತಿದೆ. ಒಂದು ತಿಂಗಳಿನಲ್ಲಿ Assistant Commissioner is Office ಅನ್ನು ಜಪ್ತಿ ಮಾಡಿದ್ದಾರೆ. ಅವರ ಟೇಬಲ್ ಹೊರಗಿಟ್ಟಿದ್ದಾರೆ. ಅವರ ಕಾರು ಹಿಡಿದಿದ್ದಾರೆ ಎಂಬ ಬಗ್ಗೆ ಯಾವುದಾದರೂ ದಿನದಲ್ಲಿ ಒಂದೆರಡು ಕೇಸ್ ಆಗಿರುವ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನಾವು ಓದುತ್ತೇವೆ. It has just lost that importance. ಅದು ನಮಗೆ ಸುದ್ಧಿ ಎನಿಸುವುದಿಲ್ಲ.

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮೈಸೂರು...

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮೈಸೂರು ಒಂದೇ ಅಲ್ಲ, ಮೈಸೂರು, ಬಾಗಲಕೋಟೆ, ಗದಗ್, ಹುಬ್ಬಳ್ಳಿ, ಮುಧೋಳ, ಜಮಖಂಡಿ ಬೇಕಾದ ಕಡೆಗಳಲ್ಲಿ ನೀವು ಹೋಗಿರಿ ಅಂದರೆ ಇಷ್ಟು ಕೇಸ್‌ಗಳಾದರೂ ಸಹಿತ as House of Elders, we are yet to show the great seriousness. ಇವತ್ತು ಈ ಚರ್ಚೆಯ ಮೂಲಕ ವಿಶೇಷ ಗಂಭೀರತೆಯನ್ನು ತೋರಿಸಿದ್ದೀರಿ. ಇದು ನಮ್ಮ ಇಲಾಖೆಗೆ ಮತ್ತು ನಮ್ಮ working ಗೆ ಒಂದು ದೊಡ್ಡ boost ಕೊಡುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಈ ಹಿಂದೆ ನಾನು ಕಾನೂನು ಸಚಿವನಾಗಿದ್ದಾಗ, ಒಂದು ಸಮಿತಿ ಮಾಡಿದ್ದೆ. ಮಾನ್ಯ ಮುಖ್ಯ ಕಾರ್ಯದರ್ಶಿಗಳ ನೇತೃತ್ವದೊಳಗೆ ಈ ಒಂದು judgements ಅನ್ನು implement ಮಾಡುವಂತಹದ್ದನ್ನು ಮೇಲ್ವಿಚಾರಣೆ ಮಾಡುವುದಕ್ಕೆ monitoring implementation of the judgements and order of the courts. But, unfortunately, they had couple of meetings, they just stopped working. ನಾನು ಈಗ ಚಿಂತನೆ ಮಾಡುತ್ತಿದ್ದೇನೆ. ಈ Lower Court orders ಏನಿವೆ, ಅದನ್ನು implementation ಮಾಡುವುದಕ್ಕೆ ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಮಾಡುವುದಕ್ಕೆ ಕಾನೂನು ಕಾರ್ಯದರ್ಶಿಗಳ ನೇತೃತ್ವದೊಳಗೆ ಒಂದು ಸಮಿತಿ ಮಾಡಬೇಕು ಹಾಗೂ High Court verdicts and judgements ಏನಿದ್ದಾವೆ, ಅವುಗಳನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಮಾನ್ಯ ಮುಖ್ಯ

ಕಾರ್ಯದರ್ಶಿಗಳ ನೇತೃತ್ವದೊಳಗೆ ಒಂದು ಸಮಿತಿ ಮಾಡಬೇಕೆಂದು ಸರ್ಕಾರ ಚಿಂತನೆ ಮಾಡುತ್ತಿದೆ. ಅದನ್ನು ಬೇಗ ಮಾಡುತ್ತೇವೆ. ಆದಷ್ಟು ಬೇಗ ನಮ್ಮ ಕೋರ್ಟ್‌ಗೆ ಗೌರವ ಉಳಿಯಬೇಕು ಮತ್ತು ಕಾನೂನಿಗೆ ಗೌರವ ಉಳಿಯಬೇಕು. If court orders are not respected, it is a failure of law and order. That should not happen. ಆ ಹಿನ್ನೆಲೆಯಲ್ಲಿ ಇವತ್ತು ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅನುಪಾಲಕರನ್ನು ನೇಮಿಸುತ್ತೇವೆ. ಒಬ್ಬರು ಹೆಚ್ಚಾದರೂ ಕಡಿಮೆಯಾದರೂ ಒಂದು ರೂಪಾಯಿ ಹೆಚ್ಚು ಕಡಿಮೆ ಖರ್ಚಾದರೂ ಅದನ್ನು ಮಾಡಬೇಕಾಗಿರುವುದು ಅಗತ್ಯ. ಈ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 ಅನ್ನು ಬಹಳ ತೀವ್ರಗತಿಯಿಂದ ಮತ್ತು ಪರಿಣಾಮಕಾರಿಯಾಗಿ implement ಮಾಡುವುದಕ್ಕೆ ಏನೇನು ಮಾಡಬೇಕೋ, ಅದನ್ನು ಮಾಡುತ್ತೇವೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದೊಂದು clarification ಇದೆ. ಮಾನ್ಯ ಸಚಿವರು ಹೇಳಿರುವುದು ಬಹಳ convincing ಇದೆ. ಅದರಲ್ಲಿ ಏನು doubt ಇಲ್ಲ.

**ವೈಸ್ ಛೇರ್ಮನ್:-** ಮಾನ್ಯ ಪೂಜಾರ್‌ರವರೇ, ಈ ವಿಧೇಯಕದ ಬಗ್ಗೆ ತುಂಬಾ ಚರ್ಚೆಯಾಗಿದೆ. ಮಾನ್ಯ ಸಚಿವರು ಉತ್ತರ ಕೊಟ್ಟಾಗಿದೆ. ತಾವು ಮತ್ತೆ ಕೇಳುತ್ತಾ ಹೋದರೆ, ಅದು debating ಗೆ ಹೋಗಿಬಿಡುತ್ತದೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಚಿವರಿಗೆ ಕೇಳಿದ್ದಕ್ಕೆ ಅವರಿಂದ ಉತ್ತರ ಬರಲಿಲ್ಲ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, Government Pleaders ಸಾಕಷ್ಟು ಇದ್ದಾರೆ. Advocates, District Cadre ದವರು ಇದ್ದಾರೆ ಎಲ್ಲಾ ಕಡೆಗಳಲ್ಲಿ ತುಂಬಿದ್ದಾರೆ. Responsibility fix ಮಾಡಬೇಕಲ್ಲ ಎನ್ನುವ ಆತಂಕ ನನ್ನದೊಂದು. ಆಮೇಲೆ orders pass ಮಾಡುವಂತಹ ಒಬ್ಬ ಅಧಿಕಾರಿಗೆ ಬರೀ payment ತೆಗೆದುಕೊಂಡು ಹೋಗಿ ಇದು ನನ್ನ ಜವಾಬ್ದಾರಿಯಲ್ಲ ಎನ್ನುವವರೆಗೂ ಅವರನ್ನು ಬಿಡಬಾರದು. He has to go and approach the concerned Officer, Government Pleaders, Nodal Officers, District Cadre Administration ಯಾರು ಬರುತ್ತಾರೋ, ಎಲ್ಲರೂ ನೋಡಿಕೊಂಡು Legal Officers ಮಾತನಾಡಿ, ಪರಿಹಾರವನ್ನು ಕಂಡುಕೊಳ್ಳುವ ಜವಾಬ್ದಾರಿ ಅವರಿಗೆ fix ಆಗಬೇಕಲ್ಲ. ನನ್ನದೇನಿಲ್ಲ,

order ಪಾಸಾದ ಮೇಲೆ ನೀನು ನೋಡು ಅವರಿಗೆ ನ್ಯಾಯವಾಗಿ ಕೊಟ್ಟುಬಿಟ್ಟಿದ್ದೇನೆ. ನನ್ನ responsibility ಮುಗಿದು ಹೋಯಿತು. It is his responsibility, Officer ಮಾಡಬೇಕು ಎನ್ನುವಂತಹದ್ದು ಎಷ್ಟು ಸರಿ? ಇದು ಏನಾಗುತ್ತದೆ Red Tapism ಎನ್ನುವಂತಹ ಸ್ಥಿತಿಗೆ ಬರುವಂತಹದ್ದು ನಿಶ್ಚಿತವಾಗುವಂತಹದ್ದು.

(ಮುಂದು)

(910) 21.08.2025 2.20 TCH-AK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು)**

ಆಮೇಲೆ ಇನ್ನೊಂದು ವಿಚಾರವನ್ನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಈಗ ಇದಕ್ಕೆ district level officers ಅನ್ನು ನೇಮಕ ಮಾಡುತ್ತೇವೆಂದು ಹೇಳಿದರು. ಈಗ designated officers ಅನ್ನು ನೇಮಕ ಮಾಡುತ್ತಿದ್ದೀರಿ, ಅಂದರೆ ಅವರಿಗೆ to move the court, to sign, to file and to take affidavit, Power of Attorney ಅನ್ನು ಏನಾದರೂ ಕೊಡುತ್ತಿದ್ದೀರಾ? ಆ ರೀತಿ ಅಲ್ಲಿಯವರೆಗೆ ಆಗುತ್ತದೆ ಎನ್ನುವುದಾದರೆ ಇವರದ್ದು order ಮಾಡಿಸಿದರೆ ಅವರ ಕೆಲಸ ಮುಗಿದು ಹೋಗುತ್ತದೆಯೇ ಎಂಬ question ಬರುತ್ತದೆ. ನೀವೇನು ಅವರಿಗೆ Power of Attorney ಕೊಡುತ್ತಿದ್ದೀರಿ, ಮತ್ತೊಬ್ಬರಿಗೆ convincing aspect ಮೇಲೆ ಒಬ್ಬರಿಗೊಬ್ಬರು consensus ತರುವಂಥದ್ದು. ಇದಕ್ಕೆ ಏನಾದರೂ ಆಗುವಂಥದ್ದು ಇದೆಯೇ. ಇದು ಏತಕ್ಕೆ ಬೇಕು?

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ತಂದಿರುವುದು ಒಳ್ಳೆಯದೆ. ಅಂತಿಮವಾಗಿ ಸಾರ್ವಜನಿಕರಿಗೆ ಇದರಿಂದ ಲಾಭ ಆಗಬೇಕು. ಬಹಳ ದುರಂತವೇನೆಂದರೆ ಮತ್ತೊಬ್ಬ ವ್ಯಕ್ತಿ implementation ಮಾಡುವುದಕ್ಕೆ ತಾಲ್ಲೂಕ್ ಲೆವೆಲ್‌ನಲ್ಲಿ, ಜಿಲ್ಲಾ ಲೆವೆಲ್‌ನಲ್ಲಿ ಮತ್ತು ರಾಜ್ಯ ಲೆವೆಲ್‌ನಲ್ಲಿ. ಈಗ ನಮ್ಮ ಇಲಾಖೆಗಳು ಮತ್ತು ನಮ್ಮ ಸೊಸೈಟಿ ಮತ್ತು ನಮ್ಮ ವ್ಯವಸ್ಥೆಯಲ್ಲಿ ಹೇಗೆ ಇರಬೇಕೆಂದರೆ, ಜಡ್ಜ್‌ಮೆಂಟ್ ಬಂದಿದೆಯೆಂದರೆ, ಯಾವ ಹಂತದಲ್ಲಿ ಜಡ್ಜ್‌ಮೆಂಟ್ ಬಂದಿದೆ; ಉದಾಹರಣೆಗೆ ಹೇಳುವುದಾದರೆ, ತಾಲ್ಲೂಕ್ ಲೆವೆಲ್‌ನಲ್ಲಿ ತಾಲ್ಲೂಕ್ ಕೋರ್ಟ್ implement ಮಾಡಬೇಕಾಗಿತ್ತು. ಇವತ್ತಿನ ದಿವಸ ಅಲ್ಲಿ ಉಸ್ತುವಾರಿ ಬೇಕಾಗಿದೆ. ಎರಡನೆಯದಾಗಿ ಮತ್ತೆ ಇನ್ನೊಂದು system ಏನೆಂದರೆ ಜಿಲ್ಲಾ ಲೆವೆಲ್‌ನಲ್ಲಿ District Court ನಿಂದ ಜಡ್ಜ್‌ಮೆಂಟ್ ಬಂದಿದೆ. ಅದು implement ಆಗಬೇಕು. ಆದರೆ ಅದು implement ಆಗುವುದಿಲ್ಲ. ಮತ್ತೆ ಉಸ್ತುವಾರಿ ಆಗುತ್ತದೆ. ಈ ರೀತಿ Single Bench, Double Bench,

Triple Bench, Final Bench, ತಾಲ್ಲೂಕ್ ಕೋರ್ಟ್, ಜಿಲ್ಲಾ ಕೋರ್ಟ್, ರಾಜ್ಯ ಹೈಕೋರ್ಟ್ ಮತ್ತು ಅಂತಿಮವಾಗಿ ಸುಪ್ರಿಂ ಕೋರ್ಟ್‌ವರೆಗೆ ಹೋಗುತ್ತೇವೆ. ನನಗೆ ಅನಿಸುವುದೇನೆಂದರೆ ಜಡ್ಜ್‌ಮೆಂಟ್ ಬಂದಿರುವುದು implement ಆಗಬೇಕು. ಅದು ಎಷ್ಟು ದಿನದೊಳಗೆ implement ಆಗಬೇಕು? ಇವೆಲ್ಲದಕ್ಕೂ systems ಇವೆ. ಆದ್ದರಿಂದ ಇದಕ್ಕೆ ಏನಾದರೂಂದು system development ಆಗಬೇಕು. ಆದಷ್ಟು ಬೇಗನೆ ಒಬ್ಬ ಹತಾಶನಾಗುವುದಕ್ಕೆ ಮುಂಚೆ ಅಥವಾ ಸಾಕಪ್ಪಾ ಎನ್ನುವುದಕ್ಕೆ ಮುಂಚೆ ಜಡ್ಜ್‌ಮೆಂಟ್ ಕೊಡಬೇಕು. ಅದು promotion ಇರಲಿ, appointment ಇರಲಿ ಅಥವಾ ಅದು ಯಾವುದೇ ಹಂತದ ಕೇಸ್ ಇರಲಿ. ಆದಷ್ಟು ಬೇಗನೆ ವ್ಯಕ್ತಿಗೆ ಈ ನ್ಯಾಯ ಸಿಗಬೇಕು. ಉದಾಹರಣೆಗೆ ಹೇಳುವುದಾದರೆ ಈ ವಿಷಯದಲ್ಲಿ stay ಇದೆ, abeyance ಇದೆ, ಸಾಕಷ್ಟು ವಿಷಯಗಳಿವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಸರ್ಕಾರಿ ವಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:- "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಸರ್ಕಾರಿ ವಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2025ರ ಕರ್ನಾಟಕ ಸರ್ಕಾರಿ ವಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:-** ಈಗ ಸದನವನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(911) 21/08/2025 4:10 ಎಸ್‌ಪಿಆರ್/ವಿಕೆ

**(ಅಪರಾಹ್ನ 2 ಗಂಟೆ 24 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ 4 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**09. ಪ್ರಕಟಣೆ**

ಸಭಾಪತಿಯವರು:- ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ :

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು "ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2025 ಅನ್ನು ಪುನರ್ ಪರ್ಯಾಲೋಚಿಸಿ ಅಂಗೀಕರಿಸಿತೆಂದು, ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025
2. ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ (ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧ ರಕ್ಷಣೆ) ವಿಧೇಯಕ, 2025
3. ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ (ತಿದ್ದುಪಡಿ) ವಿಧೇಯಕ, 2025
4. ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ವಿಧೇಯಕ, 2025

10 ವರದಿಯನ್ನೊಪ್ಪಿಸುವುದು

**ಡಾ॥ ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 5ನೇಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**11. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 1218**

**ರಾಜ್ಯದಲ್ಲಿನ ನೇಮಕಾತಿ ಪ್ರಾಧಿಕಾರಗಳ ವಿಭಿನ್ನ ನಿಯಮಗಳ ಅನುಸಾರ ನೇಮಕಾತಿ ಮಾಡಲು ಅವಕಾಶ ಮಾಡಿಕೊಟ್ಟಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆಗುತ್ತಿರುವ ಅನ್ಯಾಯದ ಕುರಿತು**

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ನೇಮಕಾತಿ ಪ್ರಾಧಿಕಾರಗಳಾದ ಕೆಪಿಎಸ್‌ಸಿ, ಕೆಇಎ, ಕೆಎಸ್‌ಪಿ ಹಾಗೂ ಇತರ ಪ್ರಾಧಿಕಾರಗಳು ನೇಮಕಾತಿಯಲ್ಲಿ 371(ಜೆ)ಗೆ ಸಂಬಂಧಿಸಿದ ಸರ್ಕಾರದ ಸುತ್ತೋಲೆಗಳಂತೆ ನೇಮಕಾತಿ ಮಾಡದೆ ಮನಸ್ಸಿಗೆ ಬಂದಂತೆ ವಿಭಿನ್ನ ನಿಯಮಗಳಂತೆ ನೇಮಕಾತಿ ಮಾಡಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td rowspan="3">371(ಜೆ) ರಡಿ ನೇಮಕಾತಿಗೆ ಸಂಬಂಧಿಸಿದಂತೆ 2015 ರಿಂದ ಇಲ್ಲಿಯವರೆಗೆ ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 3 ಹೈಕಕೋ 2019, ದಿನಾಂಕ 15.06.2022ರಲ್ಲಿ, ವಿವಿಧ ನೇಮಕಾತಿ ಪ್ರಾಧಿಕಾರಗಳು ಇನ್ನು ಮುಂದೆ ಮಿಕ್ಕುಳಿದ ವೃಂದ ಮತ್ತು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ನೇರ ನೇಮಕಾತಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಅಧಿಸೂಚನೆಯನ್ನು ಪ್ರತ್ಯೇಕವಾಗಿ ಹೊರಡಿಸಿ, ಪ್ರತ್ಯೇಕ ನೇಮಕಾತಿ ಪ್ರಕ್ರಿಯೆ ಕೈಗೊಂಡು ಆಯ್ಕೆಯನ್ನು ಅಂತಿಮಗೊಳಿಸುವಂತೆ ತಿಳಿಸಲಾಗಿರುತ್ತದೆ.<br><br>ಆದರೆ ಕೆಲವು ಇಲಾಖೆಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸುತ್ತೋಲೆ ಸಂಖ್ಯೆ: ಸಿಆಸುಇ 3 ಹೈಕಕೋ 2018 ದಿನಾಂಕ: 06.06.2020ರ ಸುತ್ತೋಲೆಯಂತೆ ಒಂದೇ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಒಂದೇ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿರುವ ಪ್ರಕರಣಗಳಲ್ಲಿ, ಹೈದರಾಬಾದ್-ಕರ್ನಾಟಕ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿರುವುದನ್ನು ತಡೆಯಲು ದಿನಾಂಕ 26.05.2025ರಂದು ಅನುಚ್ಛೇಧ 371(ಜೆ) ಅನುಷ್ಠಾನದ ಮೇಲ್ವಿಚಾರಣೆಗಾಗಿ ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿಯು ತೆಗೆದುಕೊಂಡ ತೀರ್ಮಾನಗಳಂತೆ ಸುತ್ತೋಲೆ ಸಂಖ್ಯೆ: ಸಿಆಸುಇ 77 ಹೈಕಕೋ 2025, ದಿನಾಂಕ 03.06.2025ನ್ನು ಹೊರಡಿಸಲಾಗಿದೆ.<br>(ಸುತ್ತೋಲೆಯ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).<br><br>ಮುಂದುವರೆದು, ಮೇಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ, ತಪ್ಪಿದಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸಹ ತಿಳಿಸಲಾಗಿರುತ್ತದೆ</td></tr>
<tr><td>ಆ)</td><td>ಕೆಪಿಎಸ್‌ಸಿ, ಯು ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ಮೂಲವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಮಾಡಿಕೊಳ್ಳುತ್ತಿದೆ. ಆದರೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮಾತ್ರ ಕಲ್ಯಾಣ ಕರ್ನಾಟಕ ಹಾಗೂ ಉಳಿಕೆ ಮೂಲ ವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಹೊರಡಿಸದೇ ಒಂದೇ ಅಧಿಸೂಚನೆಯನ್ನು ಹೊರಡಿಸಿ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಇ)</td><td>ಈ ಬಗ್ಗೆ, ನಿಯಮ ಉಲ್ಲಂಘಿಸಿದ ಅಧಿಕಾರಿಗಳ ಮೇಲೆ ಇಲಾಖೆ ಕೈಗೊಂಡ ಕ್ರಮಗಳೇನು;(ವಿವರ ನೀಡುವುದು)</td></tr>
</table>

| | | |
|---|---|---|
| (ಈ) | ಈ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಈಗಾಗಲೇ ನಡೆಸಿರುವ ಎಲ್ಲಾ ಹುದ್ದೆಗಳ ನೇಮಕಾತಿಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಹಲವಾರು ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳಿಗೆ ಕೋರ್ಟ್‌ನಲ್ಲಿ ಪ್ರಕರಣಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ತೆಗೆದುಕೊಳ್ಳಲಾಗುವುದು; | 371(ಜೆ) ರಡಿ ಕೈಗೊಂಡ ಹಲವು ನೇಮಕಾತಿ ಪ್ರಕ್ರಿಯೆಗಳ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. |
| (ಉ) | ಇದೊಂದು ಗಂಭೀರ ವಿಷಯವಾಗಿರುವುದರಿಂದ ಈ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಈಗಾಗಲೇ ಮಾಡಿರುವ ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿಗಳನ್ನು ರದ್ದುಗೊಳಿಸಿ ಮರು ನೇಮಕಾತಿ ಮಾಡುವಂತೆ ಮಾಡಲು ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳುತ್ತದೆ; ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಕೋರ್ಟ್ ಮೊರೆ ಹೋಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆಯಲ್ಲವೇ?<br>(ಈ ಬಗ್ಗೆ ಸರ್ಕಾರದ ಸೂಕ್ತ ನಿಲುವನ್ನು ತಿಳಿಸುವುದು) | ***ಒಂದೇ ಪರೀಕ್ಷೆ ನಡೆಸಿ ಅಂತಿಮ ಆಯ್ಕೆಪಟ್ಟಿ ಪ್ರಕಟಿಸದೇ ಇರುವ*** ನೇಮಕಾತಿ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸರ್ಕಾರದಿಂದ ಹೊರಡಿಸಲಾಗಿರುವ ದಿನಾಂಕ 01.02.2023ರ ಸುತ್ತೋಲೆಯನ್ನು ಪ್ರಶ್ನಿಸಿ ಹಲವಾರು ಪ್ರಕರಣಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಮತ್ತು ಮಾನ್ಯ ಉಚ್ಛ ನ್ಯಾಯಾಲಯಗಳಲ್ಲಿ ದಾಖಲಾಗಿರುತ್ತವೆ.<br><br>ಸದರಿ ಪ್ರಕರಣಗಳಲ್ಲಿ ಸರ್ಕಾರದ ಕ್ರಮಗಳನ್ನು ಸಮರ್ಥಿಸಿಕೊಳ್ಳಲು, ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ.<br><br>ಈ ಪ್ರಕರಣಗಳು ನ್ಯಾಯಾಲಯದ ಮುಂದೆ ಬಾಕಿಯಿರುವುದರಿಂದ, ಸದರಿ ವಿಷಯವು ವಿಚಾರಣಾಧೀನ (sub-judice) ಆಗಿರುತ್ತವೆ. ಆದುದರಿಂದ, ಈ ನೇಮಕಾತಿಗಳನ್ನು ರದ್ದುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಿಆಸುಇ 110 ಹೈಕಕೋ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಲ್ಯಾಣ ಕರ್ನಾಟಕ ಭಾಗಕ್ಕೆ ಭಾರತ ಸಂವಿಧಾನದ ಅನುಚ್ಛೇದ 371 (ಜೆ) ರಡಿ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರವು ಅನೇಕ ಸುತ್ತೋಲೆಗಳನ್ನು ಹೊರಡಿಸಿದೆ. 2016, 2019, 2020, 2022, 2023 ಮತ್ತು 2025 ನೇ ಇಸವಿಗಳಲ್ಲಿ ಸುತ್ತೋಲೆಗಳನ್ನು ಹೊರಡಿಸಿದೆ. ಈ ಎಲ್ಲಾ ಸುತ್ತೋಲೆಗಳಿಂದ ಗೊಂದಲವುಂಟಾಗಿ ಬೇರೆ ಬೇರೆ ನೇಮಕಾತಿ ಪ್ರಾಧಿಕಾರಿಗಳು ಬೇರೆ ಬೇರೆ ರೀತಿಯ ನೇಮಕಾತಿಗಳನ್ನು ಮಾಡುತ್ತಿದ್ದಾರೆ. ಹೀಗಾಗಿ ನಮ್ಮ ಭಾಗದ ಯುವಕರಿಗೆ ನ್ಯಾಯಾಲಯದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಕರಣಗಳು ಬಾಕಿ ಇದ್ದು, ಇವರುಗಳಿಗೆ ಯಾವುದೇ ನ್ಯಾಯ ದೊರೆತಿರುವುದಿಲ್ಲ. ಈ ಕಾರಣಕ್ಕಾಗಿ ಇದನ್ನು ಸರಿಪಡಿಸುವ ಕೆಲಸವನ್ನು ಮುಖ್ಯಮಂತ್ರಿಗಳು ಮಾಡಬೇಕೆಂದು ನಾನು ತಮ್ಮ ಮೂಲಕ ಕೋರುತ್ತೇನೆ.

ದಿನಾಂಕ 03/06/2025 ರಂದು ಸರ್ಕಾರವು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಅದರ ಪ್ರತಿಯನ್ನೂ ಸಹ ಒದಗಿಸಲಾಗಿರುತ್ತದೆ. ಎರಡು ಬೇರೆ ಬೇರೆ ರೀತಿಯ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಅಂದರೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಒಂದು ರೀತಿಯ ಪರೀಕ್ಷೆಯಾದರೆ, ಮತ್ತೊಂದು ಭಾಗಕ್ಕೆ ಮತ್ತೊಂದು ರೀತಿಯ ಪರೀಕ್ಷೆಯನ್ನು ಮಾಡಿದ್ದಾರೆ. ಅಂದರೆ ಸ್ಥಳೀಯ ವೃಂದಕ್ಕೆ ಮತ್ತು ಉಳಿಕೆ ಮೂಲ ವೃಂದಕ್ಕೆ ಬೇರೆ ಬೇರೆ ರೀತಿಯ ಪರೀಕ್ಷೆಗಳನ್ನು ಮಾಡಿ, ಬೇರೆ ಬೇರ ರೀತಿಯ ಪಟ್ಟಿಗಳನ್ನು ಮಾಡಿದ್ದಾರೆ. ಈ ರೀತಿಯ ವಿಭಾಗಗಳನ್ನು ಮಾಡಿದ್ದು, ಇದು ತಪ್ಪಾಗಿರುತ್ತದೆ. ಇದನ್ನು ಮೂಲವಾಗಿ ಯಾವ ರೀತಿಯಾಗಿ ಪರಿಗಣಿಸಬೇಕು ಎಂದರೆ, ಎಸ್.ಸಿ./ಎಸ್.ಟಿ. ಮೀಸಲಾತಿಯು ಯಾವ ರೀತಿಯಾಗಿದೆಯೋ, ಇದೂ ಸಹ ಅದೇ ರೀತಿಯಾದ ಮೀಸಲಾತಿಯಾಗಿದೆ. ಇದನ್ನು ನಾನು ಹೇಳುತ್ತಿಲ್ಲ; ಬದಲಾಗಿ ಅನೇಕ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಹೇಳುತ್ತಿವೆ. ಇದು ಪ್ರತ್ಯೇಕವಾದ ಮೀಸಲಾತಿಯಲ್ಲ; ಇದನ್ನು ಸಂಸತ್ತಿನಲ್ಲಿ ತಿದ್ದುಪಡಿಯ ಮೂಲಕ ಜಾರಿಗೆ ತಂದಿದ್ದಾರೆ. ಹೀಗಾಗಿ ಎಸ್.ಸಿ./ಎಸ್.ಟಿ. ಮೀಸಲಾತಿಗೂ ಈ ಮೀಸಲಾತಿಗೂ ಯಾವುದೇ ವ್ಯತ್ಯಾಸವಿಲ್ಲ. ಸಾಮಾನ್ಯ ವರ್ಗದಲ್ಲಿ ಎಸ್.ಸಿ.ಗಳು ಮತ್ತು ಇತರೆ ಎಲ್ಲರೂ ಸಹ ಅರ್ಹರಿರುತ್ತಾರೆ. ಪದೋನ್ನತಿ ಮತ್ತು ಇತರೆಗಳಿಗೆ ಅವರು ಎಸ್.ಸಿ. ಆಗಿ ಮುಂದುವರೆಯುತ್ತಾರೆ. ಆದರೆ, ಇಲ್ಲಿ ಏನಾಗಿದೆ ಎಂದರೆ, ಉಳಿಕೆ ಮೂಲ ವೃಂದದಲ್ಲಿ ಅವರುಗಳು ಆಯ್ಕೆಗೊಂಡ ನಂತರ, ಅವರುಗಳಿಗೆ ಕಲ್ಯಾಣ ಕರ್ನಾಟಕ ಭಾಗದ ಪ್ರಯೋಜನಗಳನ್ನು ಅಂದರೆ ಪದೋನ್ನತಿ ಅಥವಾ ಇತರೆ ಯಾವುದೇ ಪ್ರಯೋಜನಗಳನ್ನು ನೀಡುವುದಿಲ್ಲ. ಅಂದರೆ ಕಲ್ಯಾಣ ಕರ್ನಾಟಕ ಭಾಗದವರು ಉಳಿಕೆ ಮೂಲ ವೃಂದದಲ್ಲಿ ಆಯ್ಕೆಗೊಂಡರೆ, ಕಲ್ಯಾಣ ಕರ್ನಾಟಕ ಭಾಗದ ಪ್ರಯೋಜನಗಳು ನಿಮಗೆ ಬರುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಈ ರೀತಿಯ ಗೊಂದಲಗಳನ್ನುಂಟು ಮಾಡಿದ್ದು, ಅಲ್ಲಿ ತಪ್ಪುಗಳಾಗುತ್ತಿವೆ. ಉಳಿಕೆ ಮೂಲ ವೃಂದದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳು ಆಯ್ಕೆಗೊಂಡರೆ, ಇದನ್ನು ಜಾರಿಗೊಳಿಸಿದರೆ, ಯಾವುದೇ ಅನ್ಯಾಯವಾಗುವುದಿಲ್ಲ. ಮುಂದುವರೆದು, ಇದು ಕೇವಲ ನೇಮಕಾತಿಗೆ ಮಾತ್ರವಲ್ಲದೇ, ಪದೋನ್ನತಿಗೂ ಸಹ ಅನ್ವಯಿಸಬೇಕು. It doesn't stop there.

ಎಸ್.ಸಿ./ಎಸ್.ಟಿ. ಯವರು ಸಾಮಾನ್ಯ ವರ್ಗದಲ್ಲಿ ಆಯ್ಕೆಗೊಂಡ ನಂತರ ಮೀಸಲಾತಿಯ ಮುಂದಿನ ಪ್ರಯೋಜನಗಳು ಸಿಗುವುದಿಲ್ಲವೆಂದು ಯಾರೂ ಸಹ ಹೇಳುವುದಿಲ್ಲ. They continue to get the benefit. ಇದೇ ರೀತಿಯಾಗಿ ಇದೂ ಸಹ ಆಗಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಉತ್ತರಿಸಿದ ನಂತರ ನಾನು ಇನ್ನೆರಡು ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಶ್ರೀ ಶಶೀಲ್ ಜಿ.ನವೋಶಿಯವರೆ, ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಜಿಲ್ಲೆಯವರೇ ಆದ ಶ್ರೀ ಪ್ರಿಯಾಂಕ್ ಖರ್ಗೆ ರವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡಲಾಗಿದೆ. ಈ ಸಮಿತಿಯು ನೇಮಕಾತಿ, ಪದೋನ್ನತಿ ಇವುಗಳೆಲ್ಲವನ್ನೂ ನೋಡಿಕೊಳ್ಳುತ್ತಿದೆ. ಈ ಸಮಿತಿಯು ಇತ್ತೀಚೆಗೆ ಅಂದರೆ ದಿನಾಂಕ 03/06/2025 ರಂದು ಸುತ್ತೋಲೆಯನ್ನು ಹೊರಡಿಸಿದೆ. ಈ ಸಮಿತಿಯು ಕಲ್ಯಾಣ ಕರ್ನಾಟಕ ಭಾಗದ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿದೆ ಎನ್ನುವುದು ನನ್ನ ಭಾವನೆಯಾಗಿದೆ. ದಿನಾಂಕ 03/06/2025 ರ ಸುತ್ತೋಲೆಯ ಮೂಲಕ ಕಲ್ಯಾಣ ಕರ್ನಾಟಕ ಭಾಗದ ಸಮಸ್ಯೆಗಳು ಮತ್ತು ಆತಂಕಗಳು ಬಗೆಹರಿಯುತ್ತವೆ ಎಂದು ನಾನು ಅಂದುಕೊಂಡಿದ್ದೇನೆ. ಶ್ರೀ ಪ್ರಿಯಾಂಕ್ ಖರ್ಗೆ ರವರು ಪ್ರಸ್ತುತ ವಿದೇಶಕ್ಕೆ ಹೋಗಿದ್ದಾರೆ. ಹೀಗಾಗಿ ಅವರು ಸ್ವದೇಶಕ್ಕೆ ಹಿಂದಿರುಗಿದ ನಂತರ ಅವರೊಂದಿಗೆ ಮಾತನಾಡಿ ಇದಕ್ಕೆ ಅಗತ್ಯವಾಗಿರುವುದನ್ನು ಪರಿಶೀಲನೆ ಮಾಡುತ್ತೇವೆ ಎಂದು ನಾನು ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಸರಿಯಾದ ಉತ್ತರವನ್ನು ನೀಡಿದ್ದಾರೆ. ಅವರಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಉಳಿಕೆ ಮೂಲ ವೃಂದದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳು ನೇಮಕಗೊಂಡಿದ್ದಾರೆ ಎನ್ನುವುದು ಆಗಬೇಕು. ಪದೋನ್ನತಿ ವಿಷಯದಲ್ಲಿಯೂ ಸಹ ಇದರ ಪ್ರಯೋಜನ ದೊರೆಯುವಂತಾಗಬೇಕು. ಪದೋನ್ನತಿಗೆ ಸಂಬಂಧಪಟ್ಟಂತೆ ದಿನಾಂಕ 24/03/2023 ರಂದು ಸುತ್ತೋಲೆಯನ್ನು ಹೊರಡಿಸಿದ್ದು, ಇದು ಇದುವರೆವಿಗೂ ಸಹ ಜಾರಿಗೆ ಬಂದಿರುವುದಿಲ್ಲ. ಈ ಸುತ್ತೋಲೆ ಇನ್ನೂ ಜಾರಿಗೆ ಬಾರದ ಕಾರಣ ಈ ರೀತಿಯ ಗೊಂದಲಗಳಾಗಿವೆ. ದಯಮಾಡಿ ಇದನ್ನು ಜಾರಿಗೆ ಬರುವಂತೆ ಮಾಡಬೇಕೆಂದು ನಾನು ಕೋರುತ್ತೇನೆ. (ಮುಂದು)

(912)21-08-2025/4-20/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿದ್ಧರಾಮಯ್ಯ(ಮುಂದು..)**

ಶ್ರೀಯುತ ಶಶೀಲ್ ಜಿ. ನಮೋಶಿಯವರೆ, ತಾವು ಹೇಳುವುದರ ಬಗ್ಗೆ ನನ್ನದೇನೂ ವಿರೋಧವಿಲ್ಲ. ನೀವು ಹೇಳಿರತಕ್ಕಂತಹ ಸಲಹೆಗಳು ಏನಿವೆ, ಈ ಸಲಹೆಗಳ ಬಗ್ಗೆ ಶ್ರೀಯುತ ಪ್ರಿಯಾಂಕ್ ಖರ್ಗೆಯವರ ಜೊತೆ ಮಾತನಾಡುತ್ತೇನೆ. ಏಕೆಂದರೆ, he is heading the Cabinet Sub Committee. ಅವರು

ಆದಮೇಲೆ ದಿನಾಂಕ 3-6-2025 ರಲ್ಲಿ ಒಂದು ಸುತ್ತೋಲೆ ಆಗಿರುವಂತಹದ್ದು ಇದೆ. ನೀವು ಹೇಳತಕ್ಕಂತಹ ಸಮಸ್ಯೆಗಳ ಮತ್ತು ಸಲಹೆಗಳ ಬಗ್ಗೆ ಅವರ ಜೊತೆ ಚರ್ಚೆ ಮಾಡುತ್ತೇವೆ. ಏಕೆಂದರೆ Article 371(J) ಮಾಡಿದವರೇ ನಾವುಗಳಾಗಿದ್ದೇವೆ. ನಾನು ಮುಖ್ಯಮಂತ್ರಿಯಾಗಿರುವಂತಹ ಸಮಯದಲ್ಲಿಯೇ ಮಾಡಿರುವುದಾಗಿದೆ. ಮಾನ್ಯ ಸಚಿವರಾದ ಶ್ರೀಮಾನ್ ಹೆಚ್.ಕೆ.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಆ ಕಮಿಟಿ ಕೊಟ್ಟಂತಹ ವರದಿಯನ್ನು ಯಥಾವತ್ತಾಗಿ ಒಪ್ಪಿಕೊಂಡು ಆದೇಶ ಮಾಡುವುದರೊಂದಿಗೆ ಆ ಕೆಲಸವನ್ನು ಮಾಡಿದವರೇ ನಾವುಗಳಾಗಿರುತ್ತೇವೆ. ಆದ್ದರಿಂದ, ಹೈದ್ರಾಬಾದ್-ಕರ್ನಾಟಕಕ್ಕೆ ನ್ಯಾಯ ಸಿಗಬೇಕು. ಅಲ್ಲಿ ಇರತಕ್ಕಂತಹ ಅಭ್ಯರ್ಥಿಗಳಿಗೆ ನ್ಯಾಯ ಸಿಗಬೇಕು. ಅದಕ್ಕೆ ಏನು ಮಾಡಬೇಕಾಗಿದೆಯೋ ಆ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶ್ರೀ ಪ್ರಿಯಾಂಕ್ ಖರ್ಗೆಯವರಿಗೆ ಒಂದು ಸಭೆಯನ್ನು ಕರೆಯಲಿಕ್ಕೆ ಹೇಳಿ. ಆಸಕ್ತಿ ಇದ್ದಂತಹ ಶಾಸಕರುಗಳಾದ ನಾವುಗಳು ಕೆಲವು ಸಲಹೆಗಳನ್ನು ಕೊಡುತ್ತೇವೆ. ಅದರ ಪ್ರಕಾರ ಅವರು ಅದನ್ನು ಜಾರಿಗೆ ತರಲಿ.

**ಸಭಾಪತಿಯವರು:-** ಆಯಿತು, ಅ ರೀತಿಯಲ್ಲಿ ಮಾಡಿ. ಆಗಬಹುದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಆಯಿತು, ಮಾಡೋಣ.

## ಪ್ರಶ್ನೆ ಸಂಖ್ಯೆ 1234 ಮತ್ತು 1292

## ಬೆಂಗಳೂರು ನಗರದ ಸ್ವಚ್ಛತೆ/ಕಸ ವಿಲೇವಾರಿ ಕುರಿತು

ಉಪ ಮುಖ್ಯಮಂತ್ರಿಗಳು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಮ್ಮ ದೇಶದಲ್ಲಿ ಬೆಂಗಳೂರು ಮಹಾನಗರ ಸ್ವಚ್ಛತೆಯನ್ನು ಕಾಪಾಡುವಲ್ಲಿ 36ನೇ ಸ್ಥಾನ ಪಡೆದಿರುವುದು ನಿಜವೇ; ನಮ್ಮ ಬೆಂಗಳೂರು ಉದ್ಯಾನವನಗಳ ನಗರ ಕೆರೆಗಳ ಬೀಡು ನಿವೃತ್ತದಾರರ ಸ್ವರ್ಗ, ಸಿಲಿಕಾನ್ ವ್ಯಾಲಿ ಎಂಬ ಹೆಗ್ಗಳಿಕೆ ಪಡೆದಿದ್ದರೂ ಸ್ವಚ್ಛತೆಯಲ್ಲಿ ಹಿಂದುಳಿಯಲು ಕಾರಣಗಳೇನು; | ಹೌದು.<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತ್ಯಾಜ್ಯ ವಿಂಗಡಣೆಯಲ್ಲಿ, ಒಟ್ಟಾರೆ ಶೇಕಡ 55 ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಕೆಲವೊಂದು ವಾರ್ಡ್‌ಗಳಲ್ಲಿ ಶೇಕಡ 80 ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br>• ಕೇಂದ್ರೀಕೃತ ಸಂಸ್ಕರಣಾ ಘಟಕಗಳಲ್ಲಿ ಹಸಿ ತ್ಯಾಜ್ಯವನ್ನು ಸಾಂಪ್ರದಾಯಕ ರೀತಿಯಲ್ಲಿ ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದ್ದು, ಸದರಿ ಪ್ರಕ್ರಿಯೆಯಲ್ಲಿ ತ್ಯಾಜ್ಯವು 32 ರಿಂದ 35 ದಿನಗಳ ಅವಧಿಯಲ್ಲಿ ಕೊಳೆತು ಗೊಬ್ಬರವಾಗುತ್ತಿದ್ದು, ಸದರಿ ಗೊಬ್ಬರವನ್ನು ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br>• ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿಯಲ್ಲಿ ಮುಂದಿನ 30 ವರ್ಷಗಳಿಗೆ, ಸಮಗ್ರತ್ಯಾಜ್ಯ ನಿರ್ವಹಣೆ ಮಾಡಲು ಎರಡು ಪ್ರದೇಶಗಳಲ್ಲಿ ಸುಮಾರು 100 ಎಕರೆ ಜಾಗದಲ್ಲಿ (ಪ್ರತಿ ಪ್ರದೇಶದಲ್ಲಿ) ಕೈಗೊಳ್ಳಲು ಯೋಜಿಸಲಾಗಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಆ) | ಹಸಿತ್ಯಾಜ್ಯ ಮತ್ತು ಒಣ ತ್ಯಾಜ್ಯ ವಿಲೇವಾರಿ ಸರ್ಕಾರ ಕೈಗೊಂಡಿರುವ ಕಾರ್ಯಗಳು ಪ್ರಗತಿಯನ್ನು ಸಾಧಿಸಲು ವಿಫಲವಾಗಲು ಕಾರಣಗಳೇನು; ಹಸಿ ತ್ಯಾಜ್ಯ ಆಚೆ ವಿಲೇವಾರಿಯಲ್ಲಿ ಬಹಳಷ್ಟು ಬಾರಿ ಕಸವು ಕೊಳೆತು ನಾರುವ ಸ್ಥಿತಿ ಮುಟ್ಟಿರುತ್ತದೆ. ಕಂಪೋಸರ್ ಬಳಕೆಯ ನಂತರದ ನೈರ್ಮಲ್ಯಕ್ಕೆ ಕಾರಣವಾಗಿದೆ, ಪರಿಹಾರ ಮಾರ್ಗಗಳೇನು ಕಸ ವಿಲೇವಾರಿ ಮಾಡುವ ಬಗ್ಗೆ ಚಿಂತಿಸದಿರಲು ಕಾರಣವೇನು; | |
| ಇ) | ಕಸ ಸಂಗ್ರಹದ ಹಣವನ್ನು ಸರ್ಕಾರ ಎಷ್ಟು ಶೇಕಡ ಏರಿಸಿದೆ; ಏರಿಸಿರುವುದಕ್ಕೆ ಮಾನದಂಡಗಳೇನು, ಏರಿಕೆಯಿಂದ ಬಿಬಿಎಂಪಿಗೆ ಆಗಿರುವ ಒಟ್ಟು ಹಣದ ಮೊತ್ತವೆಷ್ಟು; ಇದು ಹಿಂದೆ ಸಂಗ್ರವಾಗುತ್ತಿದ್ದ ಹಣಕ್ಕಿಂತ ಎಷ್ಟು ಪಟ್ಟು ಹೆಚ್ಚಾಗಿದೆ; ಹೆಚ್ಚಾದ ಮೊತ್ತದಿಂದ ಯಾವ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ; ಕೂಡಲೇ ಇಷ್ಟು ಏರಿಕೆ ಮಾಡಿರುವುದರ ಹಿಂದಿನ ಲೆಕ್ಕಾಚಾರವೇನು; ಯಾವ ಮಾನದಂಡವನ್ನು ಅನುಸರಿಸಿ ಏರಿಕೆ ಮಾಡಲಾಗಿದೆ; ಕಸ ವಿಲೇವಾರಿಗೆ ನಿಗದಿತ ಯೋಜನೆಗಳೇನು; | • ಕೇಂದ್ರ ಸರ್ಕಾರದ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016, ನಿಯಮ 15(ಇ) ಮತ್ತು (ಎಫ್)ರಲ್ಲಿ ತಿಳಿಸಲಾದಂತೆ ಮತ್ತು ಪಾಲಿಕೆಯ ಬೈಲಾ-2020 ರಂತೆ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ 2025-26ನೇ ಸಾಲಿನಲ್ಲಿ ಬಳಕೆದಾರರ / ಸೇವಾ ಶುಲ್ಕ ವಿಧಿಸಲಾಗಿದ್ದು, ಸದರಿ ಶುಲ್ಕವನ್ನು ಆಸ್ತಿ ತೆರಿಗೆ ಜೊತೆಯಲ್ಲಿ ಸಂಗ್ರಹಿಸಲಾಗುತ್ತಿದೆ.<br>• ಸದರಿ ಬಳಕೆದಾರರ ಶುಲ್ಕವನ್ನು ಪ್ರಸ್ತುತ ಆರ್ಥಿಕ ಸಾಲಿನಿಂದ ಅನ್ವಯಿಸಿದ್ದು, ಈ ಮೊತ್ತವನ್ನು ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯಕ್ಕೆ ಉಪಯೋಗಿಸಲಾಗುತ್ತದೆ.<br>• ಪ್ರಾಥಮಿಕ ಘನತ್ಯಾಜ್ಯ ಸಂಗ್ರಹಣೆ ಮತ್ತು ದ್ವಿತೀಯ ವಿಲೇವಾರಿಗಾಗಿ ಪ್ರತಿ ವಿಭಾಗಕ್ಕೆ ಒಂದು ಅಥವಾ ಎರಡು<br>• ಪ್ಯಾಕೇಜ್‌ರಂತೆ ಒಟ್ಟು 33 ಪ್ಯಾಕೇಜ್‌ಗಳಿಗೆ ಏಳು ವರ್ಷಗಳ ಅವಧಿಗೆ ನಿರ್ವಹಿಸಲು ಯೋಜನೆ ರೂಪಿಸಲಾಗಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

| | | |
|---|---|---|
| ಈ) | ಒಣ ಕಸ ವಿಲೇವಾರಿಯನ್ನು ಸರ್ಕಾರವು ಖುದ್ದು ಮಾಡುತ್ತಿದೆಯೇ; ಅಥವಾ ಯಾವುದಾದರೂ ಏಜೆನ್ಸಿ ಮೂಲಕ ಮಾಡಿಸಲಾಗಿದೆಯೇ; ಒಣ ಕಸ ವಿಲೇವಾರಿಯಲ್ಲಿ ಪ್ಲಾಸ್ಟಿಕ್, ಗಾಜು ಬಳಸಿದ ಬಾಟಲುಗಳು ಹೇಗೆ ವಿಲೇವಾರಿಯಾಗುತ್ತವೆ; | • ಮನೆ ಮನೆಗಳು ಮತ್ತು ಸಣ್ಣ ವಾಣಿಜ್ಯ ಮಳಿಗೆಗಳಿಂದ ಒಣತ್ಯಾಜ್ಯವನ್ನು ಸಂಗ್ರಹಿಸಿ, ಒಣತ್ಯಾಜ್ಯ ಸಂಗ್ರಹಣಾ ಘಟಕಗಳಿಗೆ ವಿಲೇವಾರಿ ಮಾಡುವ ಕಾರ್ಯವನ್ನು ಪ್ರತಿ ವಾರ್ಡ್‌ಗೆ ನಿಗದಿಪಡಿಸಿದ ಖಾಸಗಿ ಎಜೆನ್ಸಿಗಳಿಗೆ ನೀಡಿದ್ದು, ಸದರಿ ಒಣತ್ಯಾಜ್ಯ ಸಂಗ್ರಹಣಾ ಘಟಕಗಳ ನಿರ್ವಹಣೆ ಮಾಡಲು ಜೀವನೋಪಾಯಕ್ಕಾಗಿ ಚಿಂದಿ ಆಯುವವರಿಗೆ ನೀಡಲಾಗಿರುತ್ತದೆ.<br>• ಒಣತ್ಯಾಜ್ಯ ಸಂಗ್ರಹಣಾ ಘಟಕಗಳಲ್ಲಿ ಶೇಖರಣೆಯಾಗುವ ಹೆಚ್ಚು ಮೌಲ್ಯವುಳ್ಳ ಮರು ಬಳಕೆಯಾಗುವ ಪ್ಲಾಸ್ಟಿಕ್, ಬಳಸಿದ ಬಾಟಲ್‌ಗಳಂತಹ ವಸ್ತುಗಳನ್ನು ಮರು ಬಳಕೆದಾರರಿಗೆ ಕಳುಹಿಸಲಾಗುತ್ತಿರುತ್ತದೆ. ಹೆಚ್ಚು ಕ್ಯಾಲೋರಿಫಿಕ್ ವ್ಯಾಲ್ಯೂ ಹೊಂದಿರುವ ಕಡಿಮೆ ಮೌಲ್ಯವುಳ್ಳ ಪ್ಲಾಸ್ಟಿಕ್ ಹಾಗೂ ಇತರೆ ವಸ್ತುಗಳನ್ನು ತ್ಯಾಜ್ಯದಿಂದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಗೆ ವಿಲೇವಾರಿ ಮಾಡಲಾಗುತ್ತಿದೆ. |
| ಉ) | ಹಳೆ ಕಟ್ಟಡ ಒಡೆದ ಕಸದ ನಿರ್ವಹಣೆ ಹೇಗಿದೆ; ಬೆಂಗಳೂರಿನಲ್ಲಿ ಪ್ರತಿ ವರ್ಷ ಹಳೆ ಕಟ್ಟಡಗಳ ನೆಲಸಮ ಕಾರ್ಯ ನಡೆಯುತ್ತಿದೆ ಇದಕ್ಕೆ ವಿಧಿಸಿರುವ ಮಾನದಂಡಗಳೇನು; ಬಾತ್ರೂಮ್ ಟಾಯ್ಲೆಟ್ ಗ್ರಾನೈಟ್ ಟೈಲ್ಸ್ ಹಾಗೂ ಪೋರ್ಸ್ಲಿನ್ ವಸ್ತುಗಳ ವಿಲೇವಾರಿ ಕ್ರಮಗಳೇನು; | • ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ನಿಯಮಗಳನ್ವಯ, ತ್ಯಾಜ್ಯದ ಉತ್ಪಾದಕರು ತ್ಯಾಜ್ಯವನ್ನು ಸಂಸ್ಕರಣಾ ಘಟಕಗಳಿಗೆ ನೀಡುವಂತೆ ಸಾರ್ವಜನಿಕ ಪ್ರಕಟಣೆ ನೀಡಲಾಗಿರುತ್ತದೆ.<br>• ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾದ ಸಂಸ್ಕರಣಾ ಘಟಕದಲ್ಲಿ, ಬಾತ್ರೂಮ್, ಟಾಯ್ಲೆಟ್, ಗ್ರಾನೈಟ್ ಟೈಲ್ಸ್ ಮತ್ತು ಪೋರ್ಸ್ಲಿನ್ ಹಾಗೂ ಇತರೆ ಕಟ್ಟಡ ನಿರ್ಮಾಣ ಭಗ್ನಾವಶೇಷಗಳ ತ್ಯಾಜ್ಯವನ್ನು ಮರುಬಳಕೆ ಮಾಡುವ ವಸ್ತುಗಳಾಗಿ ಸಂಸ್ಕರಿಸಿ ಮರು ಬಳಕೆಗೆ ಉಪಯೋಗಿಸಲಾಗುತ್ತಿದೆ. |
| ಊ) | ಬೆಂಗಳೂರು ಮಹಾನಗರವನ್ನು ಸುಂದರ ಆಧುನಿಕ ಮಾಡುವ ಹಂತದಲ್ಲಿ ಹಳೆ ಕಟ್ಟಡಗಳ ಕಸವಿಲೇವಾರಿಗೆ ಸರ್ಕಾರ ಹಾಕಿಕೊಂಡ ಯೋಜನೆಗಳೇನು; ಬೆಂಗಳೂರು ಮಹಾನಗರಕ್ಕಾಗಿ ವಿಶೇಷ ಗಮನ ನೀಡಲಾಗಿದೆಯೇ; ನೀಡಿದ್ದರೆ ವಿವರವಾದ ಮಾಹಿತಿ ನೀಡಲಾಗುವುದೇ? | • ಅತೀ ವೇಗವಾಗಿ ಬೆಳೆಯುತ್ತಿರುವ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು, ಪ್ರಸ್ತುತ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಸ್ಥಾಪಿಸಲಾದ ಪ್ರತಿನಿತ್ಯ 1750 ಮೆ.ಟನ್ ಸಾಮರ್ಥ್ಯವುಳ್ಳ ಎರಡು ಸಂಸ್ಕರಣಾ ಘಟಕಗಳಲ್ಲಿ ನಿರ್ವಹಣೆ ಮಾಡಲಾಗುತ್ತಿರುತ್ತದೆ.<br>• ಸದರಿ ಸಂಸ್ಕರಣಾ ಘಟಕಕ್ಕೆ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ಕಾರ್ಯಕ್ಕೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.<br>• ಹೆಚ್ಚುವರಿ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ಸಂಗ್ರಹಿಸಿ ಸಂಸ್ಕರಿಸಲು ನಾಲ್ಕು ಘಟಕಗಳನ್ನು ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |

ನಅಇ 396 ಎಂಎನ್‌ವೈ 2025

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಂತಹ ತಮಗೆ ಧನ್ಯವಾದಗಳು. ಮಾನ್ಯ ಸಭಾಪತಿಯವರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಬೆಂಗಳೂರನ್ನು ಬ್ರಾಂಡ್ ಬೆಂಗಳೂರು ಮತ್ತು ಗ್ರೇಟರ್ ಬೆಂಗಳೂರು ಆಗಿ ಮಾಡಲಿಕ್ಕೆ ಹೊರಟಿದ್ದಾರೆ, ಬೆಂಗಳೂರಿನಲ್ಲಿ ಕಸದ ವಿಲೇವಾರಿಗೆ ಸಂಬಂಧಿಸಿದಂತೆ ಮೂರು ಭಾಗಗಳಲ್ಲಿ ಪ್ರಶ್ನೆ ಕೇಳಿದ್ದೇನೆ.

1. ಒಣ ಕಸ, 2.ಘನತ್ಯಾಜ್ಯ. 3.debris ಈ ಮೂರಕ್ಕೂ ವಿಲೇವಾರಿ ಹೇಗೆ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ ಎಲ್ಲಿಯೂ ಕೂಡ ಒಂದು ವಿಷನ್ ಇರುವುದಿಲ್ಲ. ಮತ್ತೆ ಮುಂಬರುವಂತಹ ಎಷ್ಟು ವರ್ಷಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೀರಿ, ಇದರ ಬಗ್ಗೆ ಏನು ಮಾಡುತ್ತೇವೆಂದು ಹೇಳಿ ಒಂದು ರೋಡ್ ಮ್ಯಾಪ್ ಇರುವುದಿಲ್ಲ. ನೋಡಿ, ಈಗಾಗಲೇ ಕಸ ಬೃಹತ್ ಪ್ರಮಾಣದಲ್ಲಿ ಏರಿಕೊಂಡು ಕುಳಿತಿದೆ. ಇದರಲ್ಲಿ ಈಗಾಗಲೇ ಲಕ್ಷಾಂತರ ಟನ್ ಕಸ ಗುಡ್ಡೆ ಗುಡ್ಡೆಯಾಗಿ ಬಿದ್ದಿರುತ್ತದೆ. ಇದನ್ನು ಬಯೋಮೈನಿಂಗ್ ಮೂಲಕ ಮಾಡುತ್ತೇವೆಂದು ಹೇಳಿ ಒಂದು ದೊಡ್ಡ ಪ್ರಾಜೆಕ್ಟ್ ನಡೆಯುತ್ತಿದೆ. ಆದರೆ, ಅದು ಇಲ್ಲಿಯತನಕ ಊರ್ಜಿತವಾಗಿರುವುದಿಲ್ಲ. ಅದು ಎಲ್ಲಾ ಕಡೆ ಇದ್ದು ಗಬ್ಬು ನಾರುತ್ತಿದೆ ಎನ್ನುವ ಮಾಹಿತಿ ಬಂದಿದೆ. ಜೊತೆಗೆ ಇದನ್ನು ಈಗಾಗಲೇ ಸಂಗ್ರಹವಾಗಿರುವಂತಹ ಕಸದ ವಿಚಾರ ಒಂದು ಸಮಸ್ಯೆಯಾದರೆ, ಅಂದರೆ, ಈಗ ಜನರೇಟ್ ಆಗುತ್ತಿರುವಂತಹ ಕಸ. ಇದಕ್ಕೆ ಇವರು ಏನು ಯೋಚನೆ ಮಾಡಿದ್ದಾರೆನ್ನುವುದನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟೀಕರಿಸಬೇಕು. ಹಾಗೆಯೇ ಇದಕ್ಕೆ ಸ್ವಚ್ಛ ಭಾರತ್ ಮಿಷನ್ ನಿಂದಲೂ ಸಹ ಹಣ ಬರುತ್ತಿದೆ ಎಂದು ಹೇಳಲಾಗುತ್ತಿದೆ. ಹಣ ಬರುತ್ತಿದ್ದರೆ ಎಷ್ಟು ಹಣ ಬರುತ್ತಿದೆ ಎಂದು ಹೇಳಬೇಕು. ಇದು ಹಸಿ ಕಸಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಒಣ ಕಸವನ್ನು ತೆಗೆದು ಹಾಕಲಿಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಟೆಂಡರ್ ವಿಷಯವಾಗಿ ಈಗ ಕೋರ್ಟ್‌ನಲ್ಲಿದೆ. ಕೋರ್ಟ್ ಸಹ ಈ ವಿಚಾರದಲ್ಲಿ ಛೀಮಾರಿ ಹಾಕಿದೆ. ಅಂದರೆ, ನಿಮಗೆ ಕಸ ವಿಲೇವಾರಿ ಮಾಡುವ ಜಾಗಕ್ಕಿಂತ ಟೆಂಡರ್ ಕರೆಯುವುದೇ ಮುಖ್ಯವೇ ಎಂದು ಕೋರ್ಟ್ ಕೇಳಿದೆ. ಮೊದಲೇ ರಾಜ್ಯ ಸರ್ಕಾರ ಉತ್ತರ ಕೊಟ್ಟಿರುವುದರಲ್ಲಿ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಮತ್ತೆ, ನೀವು ಉತ್ತರ ಕೊಟ್ಟಿರುವುದಕ್ಕೆ ಬದ್ಧರಾಗಿಲ್ಲವೆಂದು ಹೇಳಿ, ನಿಮ್ಮ ಮೇಲೆ ಏತಕ್ಕೆ ಕ್ರಮ ಜರುಗಿಸಬಾರದು, Contempt of Court ಆರೋಪ ಏತಕ್ಕೆ ಮಾಡಬಾರದು ಎಂದು ಕೋರ್ಟ್ ಕೇಳುತ್ತಿದೆ. ಹಾಗಾದರೆ, ನಮಗೆ ಕಸ ವಿಲೇವಾರಿಗಿಂತ ಟೆಂಡರ್ ಕರೆಯುವುದರಲ್ಲಿಯೇ ಆಸಕ್ತಿ ಇದೆಯೇ? ಇದಕ್ಕೆ ಉತ್ತರ ಬೇಕು, ನಂತರ ನಾನು ಇದರ ಬಗ್ಗೆ ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್(ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಬಹಳ ಸಂತೋಷ. ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್‌ರವರು ನಮ್ಮ ಬೆಂಗಳೂರು ಬಗ್ಗೆ ಇಷ್ಟೊಂದು ಆಸಕ್ತಿ ವಹಿಸಿ,

ಕಸದಿಂದ ರಸ ತೆಗೆಯುವಂತಹ ವಿಚಾರದಲ್ಲಿ ಚರ್ಚೆ ಮಾಡಿದ್ದು, ಅದರಲ್ಲೂ ಸಹ ನಾನು ಎಂ.ಎಲ್.ಎ ಆದಾಗಿನಿಂದಲೂ ಸಹ ಇಷ್ಟೊಂದು ದೊಡ್ಡ ಪ್ರಶ್ನೆಯನ್ನು ಕೇಳಿರುವುದನ್ನು ನಾನು ನೋಡಿಯೇ ಇರುವುದಿಲ್ಲ. ಎರಡು ಪುಟಗಳಷ್ಟು ಪ್ರಶ್ನೆ ಇದೆ. ನಾನು ಸಹ ಅದಕ್ಕೆ ಎರಡು ಪುಟಗಳಷ್ಟು ಉತ್ತರವನ್ನು ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೆ, ಇದು ಒಂದು ದೊಡ್ಡ ಮಾಫಿಯಾ ಆಗಿರುತ್ತದೆ. ಈ ವಿಚಾರ ತಮಗೂ ಸೇರಿದಂತೆ ಎಲ್ಲರಿಗೂ ಗೊತ್ತಿದೆ. ಬೆಂಗಳೂರಿನ ಈ ಕಸದ ಮಾಫಿಯಾ ಅಷ್ಟೊಂದು ಸುಲಭವಾಗಿ ಬೇಧಿಸಲಿಕ್ಕೆ ಆಗಲಿಲ್ಲ. ನಿಮ್ಮ ಸರ್ಕಾರ ಬಂದಂತಹ ಸಮಯದಲ್ಲಿ ನೀವು ಏನು 97-98 ವಾರ್ಡ್‌ಗಳನ್ನು ತೆರೆದಿದ್ದೀರಿ, ಅದನ್ನೂ ಮಾಡಲಿಕ್ಕೆ ಬಿಡಲಿಲ್ಲ. ಹಿಂದೆಯೂ ಸಹ ಮಾಡಲಿಕ್ಕೆ ಬಿಡಲಿಲ್ಲ. ಬರಿ ಅಲಾಟ್‌ಮೆಂಟ್‌ನಲ್ಲಿಯೇ ಇದನ್ನು ಮಾಡಿಕೊಂಡು ಬಂದಿದ್ದೀರಿ. ಈಗ ನಾನು ಇದನ್ನು ಏನಾದರೂ ಮಾಡಬೇಕೆಂದು ಹೇಳಿ, ಇಂಡೋರ್‌ಗೆ ಹೋಗಬೇಕು, ದೆಹಲಿಗೆ ಹೋಗಬೇಕು, ಹೈದ್ರಾಬಾದ್‌ಗೆ, ಚೆನ್ನೈಗೆ ಹೋಗಬೇಕೆಂದು ಹೇಳಿ, ಈ ಎಲ್ಲಾ ಕಡೆಗಳಿಗೂ ಹೋಗಿ ನೋಡಿಕೊಂಡು ಬಂದಿದ್ದೇವೆ. ಚುನಾವಣೆ ಇದ್ದುದರಿಂದ ಇಂಡೋರ್‌ಗೆ ಹೋಗಲಿಕ್ಕೆ ಆಗಲಿಲ್ಲ. ಹಿಂದೆ ನಮ್ಮ ಸರ್ಕಾರ ಇದ್ದಂತಹ ಸಮಯದಲ್ಲಿ ನಾನು ಇಂಧನ ಸಚಿವನಾಗಿ ಕೆಲಸ ಮಾಡುತ್ತಿದ್ದೆ. ಸುಮಾರು 8-9 ಕಡೆಗಳಲ್ಲಿ ಪವರ್ ಘಟಕಗಳಿಗೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಅವುಗಳು ಒಂದೂ ಸಹ ಯಶಸ್ವಿಯಾಗಲಿಲ್ಲ. ಒಂದೇ ಒಂದು ಮಾತ್ರ ನಮ್ಮ ಕೆ.ಪಿ.ಸಿ. ವತಿಯಿಂದ ಬಿಡದಿಯಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು 3-4 ಸೈಟ್‌ಗಳನ್ನು ಕೂಡ ಎಲ್ಲವನ್ನು ವಿಸಿಟ್ ಮಾಡಿದ್ದಾರೆ. ಇದಕ್ಕೆ ಏನಾದರೂ ಮಾಡಿ ಇದನ್ನು ಮಾಡಬೇಕೆಂದು ಹೇಳಿ ನಾನು ಇದರ ಬಗ್ಗೆ ಕೋರ್ಟ್‌ನಲ್ಲಿ ಹೋರಾಟ ಮಾಡಿಸಿ, ಕೊನೆಗೆ ಆ ಒಂದು ಟೆಂಡರ್ ಏನಾಗಿತ್ತು, ಟೆಂಡರ್‌ನಲ್ಲಿ illegal issues ನಡೆದಿದೆ. ಇದನ್ನು cartel ಮಾಡಿಕೊಂಡಿದ್ದಾರೆಂದು ಹೇಳಿ ಕೊನೆಯಲ್ಲಿ ವರದಿ ಬಂದ ಮೇಲೆ ಒಂದು ತನಿಖೆಯನ್ನು ಮಾಡಿಸಿ, ಅದನ್ನು cancel ಮಾಡಿಸಿ, ಈಗ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಎಂದು ಹೇಳಿ ಟೆಂಡರ್ ನ್ನು ಕರೆದಿದ್ದೇವೆ. ಇದರ ಜೊತೆಗೆ transfer stations ಕೂಡ ಮಾಡಿದ್ದೇವೆ. ಜೊತೆಗೆ ಮುಂದಕ್ಕೆ ಏನಾದರೂ ಮಾಡಬೇಕೆಂದು ಹೇಳಿದ್ದೇವೆ. ಈಗ ತಾವು ಏನು ಕೋರ್ಟ್ ವಿಚಾರ ಹೇಳುತ್ತಿದ್ದೀರಿ, ಕೋರ್ಟ್ ಸ್ಪಷ್ಟವಾಗಿ ಈ ಹಿಂದೆ ಇದ್ದಂತಹ ಟೆಂಡರ್ ಅನ್ನು ಕ್ಯಾನ್ಸಲ್ ಮಾಡಿ ನೀವು ಹೊಸದಾಗಿ ಟೆಂಡರ್ ಕರೆಯಿರಿ ಎಂದು ಹೇಳಿ ನಮ್ಮ ಹತ್ತಿರವೇ ಬರೆಸಿಕೊಂಡು ನಾವು 33 ವಾರ್ಡ್‌ಗಳು ಅಂದರೆ 28 ಕ್ಷೇತ್ರಗಳಿದ್ದು, ಅದರಲ್ಲಿ ಕೆಲವು ಕ್ಷೇತ್ರಗಳು ದೊಡ್ಡದಾಗಿದ್ದು, ಅದನ್ನು ಸೇರಿಸಿ, 33 ಪ್ಯಾಕೇಜ್ ಎಂದು ಮಾಡಿ ಟೆಂಡರ್ ಅನ್ನು ನಾವು ಕರೆದಿದ್ದೇವೆ. 4 ಜಾಗಗಳಲ್ಲಿ ನಾವು ಅದನ್ನು ಸಂಸ್ಕರಣೆ ಮಾಡಬೇಕು, ಗ್ಯಾಸ್ ಉತ್ಪಾದನೆ ಮಾಡಬೇಕು, ಪವರ್ ಉತ್ಪಾದನೆ ಮಾಡಬೇಕೆಂದು ಹೇಳಿ ನಾನು ದೆಹಲಿ, ಹೈದ್ರಾಬಾದ್, ಚೆನ್ನೈಗೆ ಹೋಗಿ ಈ ವಿಚಾರವಾಗಿ ನೋಡಿಕೊಂಡು ಬಂದಿದ್ದೇನೆ. ಒಂದು ಕಡೆ ಈಗ ಲೇಟೆಸ್ಟ್ ಆಗಿ ಗ್ಯಾಸ್ ಉತ್ಪಾದನೆ ಮಾಡಲಿಕ್ಕೂ

ಆಗುತ್ತದೆ. Power generation ಸಹ ಮಾಡಲಿಕ್ಕಾಗುತ್ತದೆ. Power generation ಕಡಿಮೆ ಪ್ರಮಾಣದಲ್ಲಿ ಮಾಡಲಿಕ್ಕಾಗುವುದಿಲ್ಲ. ಕನಿಷ್ಠ ಪಕ್ಷ 20 ಮೆಗಾವ್ಯಾಟ್ ಗಿಂತ ಜಾಸ್ತಿ ಇದ್ದರೆ ಮಾತ್ರ ಏನಾದರೂ ಮಾಡಲಿಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ಇದು ಒಂದು ದೊಡ್ಡ ಯೋಜನೆಯಾಗಿದ್ದು, ಇವತ್ತು ಏನೋ ಕೋರ್ಟ್‌ನವರು ನಮಗೆ ಅನುಮತಿಯನ್ನು ಕೊಟ್ಟಿದ್ದಾರೆ. ಟೆಂಡರ್ ಕರೆಯಲಾಗಿದೆ. ಎರಡು ಕಡೆ ಜಾಗವನ್ನು ನೈಸ್ ರಸ್ತೆ ಹತ್ತಿರ ಬಿಡಿಸಿಕೊಳ್ಳಲಾಗಿದೆ. ಮೊದಲು ಆ ಜಾಗ ನೈಸ್ ನವರಿಗೆ ಆಗಿತ್ತು. ಅವರಿಂದ ಎನ್.ಓ.ಸಿ. ತೆಗೆದುಕೊಂಡು ಮಾಡಲಾಗುತ್ತಿದೆ. ಇನ್ನೊಂದು ಕಡೆ ಅಂದರೆ ದೊಡ್ಡಬಳ್ಳಾಪುರದಲ್ಲಿ ಯಾವುದೋ ಒಂದು ಜಾಗದಲ್ಲಿಯೂ ಸಹ Pollution Control Board clearance ಇತ್ತು. ಆ ಜಾಗದ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡು ಅನುಮತಿಯನ್ನು ತೆಗೆದುಕೊಂಡು ಇದನ್ನು ಮಾಡಲಿಕ್ಕೆ ಈಗಾಗಲೇ ವ್ಯವಸ್ಥೆಯನ್ನು ಮಾಡಿದ್ದೇವೆ. ನಮಗೆ ಇದರ ಬಗ್ಗೆ ಅರಿವು ಇದ್ದು, ನಿಮ್ಮ ಪ್ರಶ್ನೆಗಳನ್ನೆಲ್ಲಾ ನಾನು ನೋಡಿದ್ದೇನೆ. ಮೊದಲು ಇದು 43 ಸ್ಟೇಜ್‌ನಲ್ಲಿ ಇದ್ದುದ್ದು, ಈಗ 36ನೇ ಸ್ಟೇಜ್‌ಗೆ ಬೆಂಗಳೂರು ನಗರ ಬಂದಿರುವುದು ನಿಜ. ಬೆಂಗಳೂರನ್ನು ಕಾಪಾಡಬೇಕು, ಈಗ machines ಅನ್ನೂ ಕೂಡ ನಾವು ಗುರುತಿಸುತ್ತಿದ್ದೇವೆ. ಅದನ್ನೂ ಸಹ ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟು ಮಾಡಬೇಕು. ನಾವು ಕಾರ್ಪೋರೇಷನ್‌ನವರು ತೆಗೆದುಕೊಂಡು ಆ ಲಾರಿಯವರಿಗೆ, ಆ ಕ್ಲೀನರ್‌ಗಳಿಗೆ ಹೇಳುವಂತಹ ಸಮಸ್ಯೆ ಬೇಡವೆಂದು ಹೇಳಿ ಈ ಎಲ್ಲಾ ಕಾರ್ಯಗಳನ್ನು ಮಾಡಬೇಕೆಂದು ವ್ಯವಸ್ಥೆ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ತಾವು ಏನು ಗಮನಸೆಳೆದಿದ್ದೀರಿ, ಖಂಡಿತವಾಗಿಯೂ ಸಹ ಬೆಂಗಳೂರು ನಗರದ ವಿಚಾರವಾಗಿ ಬಹಳಷ್ಟು ವಿಷಯಗಳನ್ನು ತಮ್ಮ ಪ್ರಶ್ನೆಯಲ್ಲಿಯೇ ತಿಳಿಸಿದ್ದು, ಮುಂದೆ ಯಾವ ದಿಕ್ಕಿನಲ್ಲಿ ಹೋಗಬೇಕೆಂದು ಸಹ ತಿಳಿಸಿದ್ದೀರಿ. ಇನ್ನು ಸಹ ತಮ್ಮದೇನಾದರೂ ಸಲಹೆಗಳು ಇದ್ದರೆ ಅವುಗಳನ್ನು ನಾವು ಸ್ವೀಕಾರ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೆ, ನನ್ನ ಇನ್ನೊಂದು ಪ್ರಶ್ನೆಗೆ ಸೇವಾ ಶುಲ್ಕ ವಿಧಿಸಲಾಗಿದೆ ಎಂದು ಹೇಳುತ್ತಿದ್ದಾರೆ. ಸೇವಾ ಶುಲ್ಕದ ಬಗ್ಗೆ ತಮ್ಮ ಗಮನ ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ನೋಡಿ, ಬೆಂಗಳೂರಿನವರಾದ ನಾವುಗಳು ಈಗಾಗಲೇ 36% ಸೆಸ್‌ನ ಹೊಡೆತದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಬೆಂಗಳೂರಿನಲ್ಲಿ ಎಂತೆಂಥಹ ಸೆಸ್ ಬೀಳುತ್ತದೆ ಎಂದರೆ, garbage cess, beggar cess, education cess, pollution cess, library cess ಇದರ ಜೊತೆಗೆ user fee ಇರುತ್ತದೆ. User fee ಎಷ್ಟು exorbitant ಆಗಿದೆ ಎಂದರೆ, ಈ ವಿಚಾರವನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ನೋಡಿ ಒಂದು ಸಿಂಗಲ್ ಹೌಸ್ ಅಂದರೆ 30' x 40' ಕ್ಕೆ ಮೊದಲು 120 ರೂಪಾಯಿಗಳು ಇದ್ದು, ಈಗ ಅದಕ್ಕೆ 720 ರೂಪಾಯಿಗಳನ್ನು ಹಾಕಿದ್ದಾರೆ. ಅಂದರೆ, raise of 500%.

ಹಾಗೆಯೇ ಅಪಾರ್ಟ್‌ಮೆಂಟ್‌ನಲ್ಲಿರುವಂತಹ ಒಂದು ಕ್ಲಬ್ ಹೌಸ್‌ಗೆ ಮೊದಲು 1,800 ರೂಪಾಯಿಗಳಿದ್ದು, ಈಗ 18,800 ರೂಪಾಯಿಗಳನ್ನು ಹಾಕಿದ್ದಾರೆ. 944% ಜಾಸ್ತಿ ಹಾಕಿದ್ದಾರೆ. ಹಾಗೆಯೇ ಮಾಲ್‌ಗೆ ಮೊದಲು 3,600 ರೂಪಾಯಿಗಳಿದ್ದು, ಮಾಲ್ ಅನ್ನು ಈಗ ಯಾವ ಲೆಕ್ಕದಲ್ಲಿ ತೆಗೆದುಕೊಂಡಿದ್ದಾರೆಂದು ಗೊತ್ತಿಲ್ಲ, ಅದಕ್ಕೆ ವಿವರಣೆಯನ್ನು ಕೊಡಬೇಕು. 5,25,000 ರೂಪಾಯಿಗಳಿಗೆ ಹೆಚ್ಚು ಮಾಡಿದ್ದು, 14,483% ಜಾಸ್ತಿ ಮಾಡಿದ್ದಾರೆ. ಹಾಗೆಯೇ ಆಸ್ಪತ್ರೆಗಳಿಗೆ 9,600 ರೂಪಾಯಿಗಳನ್ನು ಹಾಕುತ್ತಿದ್ದರು, 2,75,000 ರೂಪಾಯಿಗಳನ್ನು ಹಾಕಿದ್ದಾರೆ. ಅಂದರೆ, 2,765% ಜಾಸ್ತಿ ಮಾಡಿದ್ದಾರೆ. ಹಾಗೆಯೇ ಸಿಂಗಲ್ ಹೌಸ್ ಗೆ 50'x80'ಕ್ಕೆ 600 ರೂಪಾಯಿಗಳಿತ್ತು. ಇವತ್ತು 5,400 ರೂಪಾಯಿಗಳನ್ನು ಮಾಡಿದ್ದಾರೆ. 800% ಜಾಸ್ತಿಮಾಡಿದ್ದಾರೆ. ಅದು ಖಾಲಿ ಸೈಟ್ ಆಗಿದೆ. ಖಾಲಿ ಸೈಟ್‌ಗೆ ಮೊದಲು 3,600 ರೂಪಾಯಿ ಇದ್ದುದು 67,000 ರೂಪಾಯಿ ಆಗಿದೆ. ಇದಿಷ್ಟು ಜಾಸ್ತಿಯಾಗಿದ್ದು, ಇದರ ಬಗ್ಗೆ ನಾನು ಲೆಕ್ಕ ಕೇಳುತ್ತಿದ್ದು, ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ತಿಳಿಸಬೇಕು. ನೋಡಿ, ನೀವು ಈಗಾಗಲೇ ಕಸ 1,600 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಹಿಂದೆ ಬಿಜೆಪಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಖರ್ಚು ಮಾಡುತ್ತಿದ್ದುದು 700 ಕೋಟಿ ರೂಪಾಯಿಗಳು. ಈಗ 4,000 ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಸಂಗ್ರಹ ಮಾಡುತ್ತಿದ್ದೀರಿ, ಏತಕ್ಕೆ? ಬೆಂಗಳೂರಿನಲ್ಲಿ ದಿನಕ್ಕೆ 6 ಟನ್ ಕಸ ಬೀಳುತ್ತದೆ. 6 ಟನ್ ಕಸವನ್ನು ಪ್ರೋಸಸಿಂಗ್ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಅವರು ಉತ್ತರ ಕೊಡುತ್ತಾರೆ. ಈಗ ಮಾಡುತ್ತಿರುವುದು ಹೆಚ್ಚು ಎಂದರೆ 1 ಟನ್ ಕಸವನ್ನು ಪ್ರೋಸಸಿಂಗ್ ಮಾಡುತ್ತಿದ್ದಾರೆ. ತೆಗೆದುಕೊಂಡು ಹೋಗಿ landfill ಮಾಡಲಿಕ್ಕೆ 4,000 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬೇಕೆ? ಏತಕ್ಕೆ ಇಷ್ಟೊಂದು ಹಣವನ್ನು ಸಂಗ್ರಹ ಮಾಡಿದಿರಿ? ಇದಕ್ಕೆ ಕಾರಣ ಏನು?

**ಸಭಾಪತಿಯವರು:-** ಇದಕ್ಕೆ ಉಪ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದನ್ನು ನಾನು ತಪ್ಪು ಎಂದು ಹೇಳುತ್ತಿಲ್ಲ. ನೋಡಿ ಕಾನೂನಿನಲ್ಲಿ ಏನಿದೆ ಎಂದು ಹೇಳಿದರೆ ಅವರುಗಳಿಗೆ ನಾವು ಪೇಪರ್ ನೋಟಿಫಿಕೇಷನ್ ಅನ್ನು ಕೊಟ್ಟುಬಿಟ್ಟು ನಿಮ್ಮದು ಏನೇನು ಕಸ ಇದೆ ಎಂದು ನೀವು ಡಿಕ್ಲೇರ್ ಮಾಡಿಕೊಳ್ಳಿ ಎಂದು ನಾವು ಹೇಳಿದ್ದೇವೆ. ಯೂನಿಟ್ ಪ್ರಕಾರ ಅವರು ಡಿಕ್ಲೇರ್ ಮಾಡಿಕೊಳ್ಳುತ್ತಾರೆ. ಈಗಾಗಲೇ ಬೆಂಗಳೂರು ನಗರದಲ್ಲಿ ಸುಮಾರು 35,000 ಜನರು ನಮ್ಮ ಕಸವನ್ನು ನಾವೇ ಪರಿಶುದ್ಧ ಮಾಡಿಕೊಳ್ಳುತ್ತೇವೆಂದು, ನಾವೇ ವಿಲೇವಾರಿ ಮಾಡಿಕೊಳ್ಳುತ್ತೇವೆಂದು ಹೇಳಿ ಅವರು ಡಿಕ್ಲೇರ್ ಮಾಡಿಕೊಂಡಿದ್ದಾರೆ. ಅದಕ್ಕೆ ನಾವು ಅವಕಾಶವನ್ನು ಕೊಟ್ಟಿದ್ದೇವೆ. ಅದು ಅವರ ಕೆಲಸ. ಅವರ ಕಸವನ್ನು ಅವರು ಕ್ಲೀನ್ ಮಾಡಿಕೊಳ್ಳುವುದೋ ಬರ್ನ್ ಮಾಡಿಕೊಳ್ಳುವುದೋ, ಮತ್ತೊಂದು ಕೆಲಸವನ್ನು ಮಾಡಿಕೊಳ್ಳುವುದೋ ಅದಕ್ಕೆಲ್ಲಾ ಅವರಿಗೆ ಅವಕಾಶ ಇದೆ. ಇನ್ನು ತಾವು ಈ ರೇಟ್‌ಗಳ ವಿಚಾರವನ್ನು ತಾವು

ಏನು ಹೇಳುತ್ತಿದ್ದೀರಿ, ಇದು 2016 ರಲ್ಲಿ ಕೇಂದ್ರ ಸರ್ಕಾರ (Central Government) ಘನ ತ್ಯಾಜ್ಯ ನಿರ್ವಹಣಾ ನಿಯಮದಲ್ಲಿ ಒಂದು ಹೊಸ ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ. 2020ರಲ್ಲಿ ಇಲ್ಲಿಯೇ ತಮ್ಮ ಪಕ್ಷದ ಒಂದು ಬೋರ್ಡ್ ಇತ್ತು. ಅದಕ್ಕೆ ಗೌತಮ್ ಎಂದು ಹೇಳಿ ಯಾರೋ ಇದ್ದರು.
(ಮುಂದು)

(913) 21.08.2025 04.30 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):-**

ಅವರೇ ಅದನ್ನು adopt ಮಾಡಿಕೊಂಡು, ಅವರೇ resolution ಮಾಡಿಕೊಂಡು ಕೇಂದ್ರ ಸರ್ಕಾರ ಕಳಿಸಿಕೊಟ್ಟಿರುವ ದರವನ್ನು ಅಳವಡಿಸಿಕೊಂಡಿದೆ. ಆ ಆದೇಶದ ಗೆಜೆಟ್ ಕೂಡ ನನ್ನ ಬಳಿ ಇಲ್ಲಿದೆ. Waste generation - 5 ಕೆ.ಜಿ.ಗೆ ತಿಂಗಳಿಗೆ ರೂ.500. 10 ಕೆ.ಜಿ.ಗೆ ರೂ.1400. 25 ಕೆ.ಜಿ.ಗೆ ರೂ.3,500, 50 ಕೆ.ಜಿ.ಗೆ ರೂ.7,000, 100 ಕೆ.ಜಿ.ಗೆ ರೂ.14,000 ಎಂದು ಇದೆ. ಇದನ್ನು ನೋಡಿ ನನಗೂ ಆಶ್ಚರ್ಯವಾಯಿತು. ಆಮೇಲೆ vacant site ಗೆ per square feet ಗೆ ರೂ.20 ಎಂದು ಕಳುಹಿಸಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಗೆಜೆಟ್ ಅನ್ನು ನಾನು ತಮಗೆ ಕೊಡುತ್ತೇನೆ. ಇದು ಜಾಸ್ತಿ ಆಯಿತು ಎಂದು ನಾನು ಈಗ ಕೇವಲ ಶೇ.25 ಅಷ್ಟೇ ಸಂಗ್ರಹಿಸುತ್ತಿದ್ದೇನೆ. We are collecting only 25%. ಕೇಂದ್ರ ಸರ್ಕಾರ ಏನು ಆದೇಶ ಕೊಟ್ಟಿತ್ತೋ, ನಮ್ಮ ಕಾರ್ಪೋರೇಷನ್‌ಗಳಲ್ಲಿ ಅಳವಡಿಸಿಕೊಳ್ಳಲಾಗಿತ್ತೋ ಅದಕ್ಕೆ ಇದು ಜಾಸ್ತಿಯಾಯಿತು ಎಂಬುದನ್ನು ನಾನೂ ಮನಗಂಡು ಶೇ.25 ಅಷ್ಟೇ ಸಂಗ್ರಹಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಈಗ ಕೇವಲ ರೂ. 202.40 ಹೆಚ್ಚು ಕಡಿಮೆ ರೂ.2.50 ಅಷ್ಟು ಮಾತ್ರ collect ಮಾಡುವುದಕ್ಕೆ ಒಂದು ಚಿಕ್ಕ ನಿವೇಶನದ per square feet ಗೆ ಸಂಗ್ರಹಿಸಲು ತೀರ್ಮಾನಿಸಿದ್ದೇವೆ. ದೊಡ್ಡ ದೊಡ್ಡ ಮನೆಗಳು, ಮಾಲ್‌ಗಳು ಮುಂತಾದವರು ಹೆಚ್ಚು ಕಸ ಉತ್ಪತ್ತಿಯಾಗುವುದರ ಬಗ್ಗೆ ಅವರೇ admit ಮಾಡಿಕೊಂಡಿದ್ದಾರೆ. ನಮ್ಮ ಕಸವನ್ನು ನಾವೇ ಸುಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ನಾವು ರೆಡಿಯಿದ್ದೇವೆ. ಅವರ ಕಾಂಪೌಂಡ್‌ನ ಒಳಗೆ ಹಾಕಿಕೊಂಡು ಏನು ಬೇಕಾದರೂ ಮಾಡಿಕೊಳ್ಳಲಿ. ಅದಕ್ಕೆ ಅಗತ್ಯವಾದ ಸಹಕಾರವನ್ನು ಕೊಡಲು ನಾವು ಸಿದ್ಧರಿದ್ದೇವೆ. ಇದನ್ನು ನಾವು ತೆಗೆದುಕೊಂಡು ಹೋದಾಗ ಮನೆಯ ಚದರ ಅಡಿಗೆ ಇಷ್ಟು, ಖಾಲಿ ನಿವೇಶನದ ಚದರ ಅಡಿಗೆ ಇಷ್ಟು ಎಂದು, ಇತ್ತೀಚೆಗೆ ನಾವು ಖಾಲಿ ಸೈಟ್‌ಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕೆಂದು ಅದಕ್ಕೊಂದು ಹೊಸ ಕಾನೂನನ್ನು ಮಾಡಲು ಚಿಂತಿಸುತ್ತಿದ್ದೇವೆ. ಎಷ್ಟೋ ಕಡೆಗಳಲ್ಲಿ ನೋಡಿದ್ದೇವೆ. ಸುಮ್ಮನೆ ಎಲ್ಲಾ ಕಸವನ್ನು ತೆಗೆದುಕೊಂಡು ಹೋಗಿ ಖಾಲಿ ಸೈಟ್‌ನಲ್ಲಿ ಹಾಕುತ್ತಾರೆ.

ಮೊನ್ನೆ ಪ್ರಧಾನ ಮಂತ್ರಿಗಳು ಅರಮನೆ ರಸ್ತೆಯಲ್ಲಿ ಬಂದರು. ಈಗ ನಾವು ಅರಮನೆ ರಸ್ತೆಯುದ್ದಕ್ಕೂ ಒಂದು ಹಸಿರು ಗೋಡೆಯನ್ನು ನಿರ್ಮಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಲಿಯಿದೆ ಎಂದು ಕಸವನ್ನು

ತೆಗೆದುಕಂಡು ಹೋಗಿ ತುಂಬುತ್ತಾರೆ. ಖಾಲಿ ಸೈಟ್ ಇರುವವನೂ ಕೂಡ ತನ್ನ ಜಾಗವನ್ನು ಸ್ವಚ್ಛವಾಗಿರಿಸಿಕೊಂಡು ಕಾಂಪೌಂಡ್ ಹಾಕಿಕೊಳ್ಳಬೇಕು. ಇಲ್ಲವಾದರೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಈ ಸಂದರ್ಭದಲ್ಲಿ ತಾವೇನು price ವಿಚಾರ ಹೇಳಿದಿರಿ, ತಮ್ಮದೇನಾದರೂ ಸಲಹೆಯಿದ್ದಲ್ಲಿ ಖಂಡಿತ ಜನರ ಅನುಕೂಲಕ್ಕೋಸ್ಕರ ಎಲ್ಲವನ್ನೂ rectify ಮಾಡುತ್ತಿದ್ದೇವೆ. ಎ ಖಾತಾ, ಬಿ ಖಾತಾ, ಎಲೆಕ್ಟ್ರಾನಿಕ್ ಖಾತಾ, property tax collection ಎಲ್ಲವನ್ನೂ set right ಮಾಡುತ್ತಿದ್ದೇವೆ. ಇಷ್ಟೊಂದು ನಾವೇ ಒಪ್ಪಿಕೊಂಡರೆ ಹೇಗೆ ಎಂದು ನನಗೂ ಆಶ್ಚರ್ಯವಾಯಿತು. ಇದನ್ನು ಮುಂದೆ ಕಾರ್ಪೋರೇಷನ್‌ನವರು ಬಂದವರು ತೀರ್ಮಾನ ಮಾಡಿಕೊಳ್ಳಲಿ ಎಂದು ಹೇಳಿ ರೂ.1 ಇದ್ದುದನ್ನು 25 ಪೈಸೆಗೆ ಇಳಿಸಿದ್ದೇನೆ. ಇಷ್ಟು ಮಾತ್ರ ನಾನು ಮಾಡಿದ್ದೇನೆ. ಇನ್ನು ಏನಾದರೂ ಇದ್ದರೂ ಯಾರಾದರೂ ಏನಾದರೂ ಸಲಹೆಗಳನ್ನು ಕೊಟ್ಟರೆ ಮಾತನಾಡೋಣ. ನಂತರ ನಿಮ್ಮ ಸಲಹೆಯನ್ನು ಸ್ವೀಕಾರ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ.

**ಶ್ರೀ ಕೇಶವ ಪ್ರಸಾದ್ ಎಸ್:-** ಮಾನ್ಯ ಸಭಾಪತಿಯವರೆ, ಇನ್ನೊಂದು, debris ಬಗ್ಗೆ ಹೇಳಿಲ್ಲ. Debris ಬಗ್ಗೆ ವಿವರಣೆ ಕೊಡಬೇಕು. ಏಕೆಂದರೆ ಖಾಲಿ ಸೈಟುಗಳಲ್ಲಿ, ರಸ್ತೆ ಬದಿಯಲ್ಲಿ debris ತಂದು ಹಾಕುತ್ತಾರೆ. ಕೆರೆಗಳಲ್ಲಿ ತುಂಬುತ್ತಾರೆ.

**ಸಭಾಪತಿಯವರು:-** ಇಲ್ಲ. ಉತ್ತರ ಹೇಳಬೇಡಿ ಉಪ ಮುಖ್ಯಮಂತ್ರಿಗಳೇ. ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಏನ್ರೀ ಕೇಶವ್ ಅವರೆ, ನೀವು? ಕುಳಿತುಕೊಳ್ಳಿ; ನಿಮಗೇನು ತಿಳಿಯುತ್ತದೆಯೋ ಇಲ್ಲವೋ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೆ, debris ಬಗ್ಗೆ ಉತ್ತರ ಕೊಟ್ಟಿದ್ದೇನೆ. ಯಾರು ಲಾರಿಗಳಲ್ಲಿ ತುಂಬಿಕೊಂಡು ಬಂದು ಕೆರೆಗಳ ಪಕ್ಕ, ರಸ್ತೆಯ ಪಕ್ಕ ಸುರಿಯುತ್ತಾರೆಯೋ ಅವರ ಮೇಲೆಲ್ಲಾ ಕ್ರಮ ಕೈಗೊಳ್ಳಬೇಕೆಂದು ನಾನು ಪೋಲೀಸರಿಗೆ ಹೇಳಿದ್ದೇನೆ. ಮಾನ್ಯ ಗೃಹ ಸಚಿವರು ಅದರ ಬಗ್ಗೆ ಗಮನವಿಟ್ಟಿದ್ದಾರೆ. ಎಲ್ಲಾ ಕಡೆಗಳಲ್ಲಿ ಕ್ಯಾಮೆರಾಗಳನ್ನು ಹಾಕಬೇಕೆಂದು ಹೇಳಿದ್ದೇನೆ. ತಾವು ಹೇಳಿದ್ದು ಸರಿಯಿದೆ. ತೆಗೆದುಕೊಂಡು ಹೋಗಿ ರಸ್ತೆಗಳ ಪಕ್ಕ, ಕೆರೆಗಳ ಪಕ್ಕ ಸುರಿಯುತ್ತಾರೆ. ಅದನ್ನೂ ಟೆಂಡರ್ ಕರೆದಿದ್ದೇವೆ. ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ ಏನಾದರೂ ಉಪಯೋಗ ಮಾಡಿಕೊಳ್ಳುವ ವ್ಯವಸ್ಥೆ ಮಾಡುತ್ತೇವೆ.

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಉಪ ಮುಖ್ಯಮಂತ್ರಿಯವರೆ, ಸಂಬಂಧಪಟ್ಟವರೊಂದಿಗೆ ಸಭೆ ಏರ್ಪಡಿಸಿ, ನಮ್ಮನ್ನೂ ಕರೆಯಿರಿ.

**ಶ್ರೀ ಡಿ.ಕೆ.ಶಿವಕುಮಾರ್:-** ಆಗಬಹುದು. ತಾವು ಆಸಕ್ತರಿದ್ದೀರಿ. ಬೆಂಗಳೂರು ಎಂ.ಎಲ್.ಎ. ಗಳ ಜೊತೆಯಲ್ಲಿ ನಿಮ್ಮನ್ನೂ ಕರೆಯುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. :-** ಧನ್ಯವಾದಗಳು ಸರ್.

**ಸಭಾಪತಿಯವರು:-** ನೋಡಿ ಮಾನ್ಯ ಕೇಶವ ಪ್ರಸಾದ್ ಅವರೆ, ಈ ರೀತಿ ಇನ್ನೊಂದು ಬಾರಿ repeat ಮಾಡಬೇಡಿ. ನಾನು ಬೆಲ್ ಮಾಡಿದೆನೆಂದರೆ ನೀವು ಕೇಳಬೇಕು. ನನ್ನ ಮಾತಿಗೇನು ಕಿಮ್ಮತ್ತೇ ಇಲ್ಲವೆ?

## ಪ್ರಶ್ನೆ ಸಂಖ್ಯೆ 1239

## ಸರ್ಕಾರದ ವಿವಿಧ ಯೋಜನೆಗಳ ಜಾಹೀರಾತುಗಳ ಬಗ್ಗೆ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಸಾರ್ವಜನಿಕರ ದೈನಂದಿನ ಜೀವನದಲ್ಲಿ ತಲುಪಿಸಲು ಸರ್ಕಾರ ಯಾವ ಯಾವ ಮಾಧ್ಯಮಗಳು ಹಾಗೂ ಮಾರ್ಗಗಳನ್ನು ಬಳಸುತ್ತಿದೆ; (ಸಂಪೂರ್ಣ ವಿವರ ಒದಗಿಸುವುದು). | ಸರ್ಕಾರವು ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಜಾರಿಗೆ ತರುವ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ತಲುಪಿಸಲು ವಿವಿಧ ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಸರ್ಕಾರದ ಯೋಜನೆಗಳ ಜಾಹೀರಾತುಗಳನ್ನು ಬಿಡುಗಡೆ ಮಾಡಲಾಗುತ್ತದೆ.<br>**ಮುದ್ರಣ ಮಾಧ್ಯಮ**: ರಾಜ್ಯ ಪ್ರಾದೇಶಿಕ ಮತ್ತು ಜಿಲ್ಲಾ ಪತ್ರಿಕೆಗಳ ಮೂಲಕ ಆಕರ್ಷಕ ಜಾಹೀರಾತುಗಳನ್ನು ಮತ್ತು ಶೇ 60:40ರ ಅನುಪಾತದಲ್ಲಿ ವಿಶೇಷ ಪುರವಣಿಗಳನ್ನು ಪ್ರಕಟಿಸಲಾಗುತ್ತದೆ.<br>**ವಿದ್ಯುನ್ಮಾನ ಮಾಧ್ಯಮ**: ಟಿ.ವಿ., ರೇಡಿಯೋ ಮತ್ತು ಚಲನಚಿತ್ರ ಮಂದಿರ, ರೈಲ್ವೆ, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಟಿ.ವಿ.ಫಲಕಗಳು ಮತ್ತು ಶ್ರವ್ಯ ಮಾಧ್ಯಮಗಳ ಮೂಲಕ ಹಾಗೂ ಡಿಜಿಟಲ್ ಮಾಧ್ಯಮಗಳನ್ನು ಬಳಸಿಕೊಂಡು ಜಾಹೀರಾತುಗಳನ್ನು ಪ್ರಸಾರ ಮಾಡಲಾಗುತ್ತದೆ.<br>ಟಿ.ವಿ. ವಾಹಿನಿಗಳಲ್ಲಿ ಸರ್ಕಾರದ ಯೋಜನೆಗಳ ಕುರಿತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳ ಸಂದರ್ಶನ ಮತ್ತು ಸರ್ಕಾರದ ವಿಶೇಷ ಕಾರ್ಯಕ್ರಮಗಳನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮತ್ತು ಉದ್ಘಾಟಿಸಲಿರುವ ಕಾರ್ಯಕ್ರಮಗಳನ್ನು ಸುದ್ದಿ ವಾಹಿನಿಗಳಲ್ಲಿ ನೇರ ಪ್ರಸಾರ ಮಾಡಲಾಗುವುದು.<br>ಇಲಾಖಾ ಒಡೆತನದ ಪ್ರಚಾರ ಫಲಕ, ಖಾಸಗಿ ಪ್ರಚಾರ ಫಲಕ, ಬಸ್ ಬ್ರ್ಯಾಂಡಿಂಗ್, ಆಟೋ ಬ್ರ್ಯಾಂಡಿಂಗ್, ಟ್ರೈನ್ ಬ್ರ್ಯಾಂಡಿಂಗ್, ಕಿರು ಪುಸ್ತಕಗಳ ಪ್ರಕಟಣೆಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ. |
| ಆ) | ಸರ್ಕಾರ ತನ್ನ ಹಲವು ಕಾರ್ಯಕ್ರಮಗಳ ಯೋಜನೆಗಳ ಪ್ರಚಾರಕ್ಕಾಗಿ ಜಾಹೀರಾತು ನೀಡುವ ಸಂದರ್ಭದಲ್ಲಿ ಯಾವುದೇ ವ್ಯಯ ಮಿತಿ ನಿಗದಿ ಪಡಿಸಿರುವುದೇ ; | ಸರ್ಕಾರವು ಪತ್ರಿಕೆಗಳ ಪ್ರಸಾರ ಸಂಖ್ಯೆಗೆ ಅನುಗುಣವಾಗಿ ಅಂಗೀಕೃತ ದರವನ್ನು ನಿಗದಿಪಡಿಸಲಾಗಿದ್ದು, ಸದರಿ ದರಗಳನ್ವಯ ಹಾಗೂ ರಾಷ್ಟ್ರಮಟ್ಟದ ಪತ್ರಿಕೆಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ. (ಬಿ.ಒ.ಸಿ) ನಿಗದಿಪಡಿಸಿರುವ ದರಗಳನ್ವಯ ಜಾಹೀರಾತು ಬಿಡುಗಡೆ ಮಾಡಲಾಗುತ್ತದೆ. ಅದೇ ರೀತಿ ಟಿ.ವಿ. ವಾಹಿನಿಗಳಿಗೆ ಬಾರ್ಕ್ ಸಂಸ್ಥೆ ನೀಡುವ ವೀಕ್ಷಕರ ಸಂಖ್ಯೆಗೆ ಅನುಗುಣವಾಗಿ ನಿಗದಿಪಡಿಸಿರುವ ಜಾಹೀರಾತು ದರದಂತೆ ಮತ್ತು ರೇಡಿಯೋ ಹಾಗೂ ಇತರ ಸಮೂಹ ಮಾಧ್ಯಮಗಳಿಗೆ ಕೇಂದ್ರ ಸರ್ಕಾರದ ಡಿ.ಎ.ವಿ.ಪಿ. (ಬಿ.ಒ.ಸಿ) ನಿಗದಿಪಡಿಸಿರುವ ದರಗಳಂತೆ ಜಾಹೀರಾತು ಬಿಡುಗಡೆ ಮಾಡಲಾಗುತ್ತದೆ.<br>ವಿವಿಧ ಸಮೂಹ ಮಾಧ್ಯಮಗಳಿಗೆ ಸರ್ಕಾರದಿಂದಲೇ ಜಾಹೀರಾತು ದರಗಳನ್ನು ನಿಗದಿಪಡಿಸಿರುವುದರಿಂದ ಮಾಹಿತಿ, |

| | | |
|---|---|---|
| | | ಶಿಕ್ಷಣ ಹಾಗೂ ಸಂವಹನ ಚಟುವಟಿಕೆಗಳಡಿ ಜಾಹೀರಾತು ವೆಚ್ಚಗಳಿಗೆ ಸರ್ಕಾರವು ನಿಗದಿಪಡಿಸಿರುವ ಅನುದಾನದ ಮಿತಿಯಲ್ಲಿ ಯೋಜನೆ ರೂಪಿಸಿಕೊಂಡು ವಿವಿಧ ಸಮೂಹ ಮಾಧ್ಯಮಗಳ ಮುಖಾಂತರ ಯೋಜನೆ ರೂಪಿಸಿಕೊಂಡು ಸರ್ಕಾರದ ಜನಪರ ಯೋಜನೆಗಳ ಪ್ರಚಾರ ಕಾರ್ಯ ಕೈಗೊಳ್ಳಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಜಾಹೀರಾತು ನೀತಿ advertisement policy ಇದೆಯೇ ಇತ್ತೀಚೆಗೆ ಈ ಜಾಹೀರಾತು ನೀತಿಯಲ್ಲಿ ಯಾವುದಾದರೂ ಬದಲಾವಣೆಗಳಾಗಿದೆಯೇ, ಆಗಿದ್ದಲ್ಲಿ ವಿವರ ಒದಗಿಸುವುದು ; | ಸರ್ಕಾರವು ಸಣ್ಣ ಮತ್ತು ಮಧ್ಯಮ ವರ್ಗದ ಪತ್ರಿಕೆಗಳಿಗೆ ಬೆಳವಣಿಗೆಗಾಗಿ ಜಾರಿಗೆ ತರಲಾಗಿರುವ ಜಾಹೀರಾತು ನೀತಿ-2013 ಜಾಹೀರಾತು ಅನುಷ್ಠಾನ ನಿಯಮಗಳು- 2014 ಪ್ರಸ್ತುತ ಜಾರಿಯಲ್ಲಿರುತ್ತದೆ.<br>ಜಾಹೀರಾತು ಅನುಷ್ಠಾನ ನಿಯಮಗಳು ಜಾರಿಗೆ ಬಂದು ಹತ್ತು ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಜಾಹೀರಾತು ಅನುಷ್ಠಾನ ನಿಯಮಗಳನ್ನು ಪರಿಷ್ಕರಿಸಲು ಉದ್ದೇಶಿಸಿ ಪರಿಷ್ಕೃತ ಕರಡು ಜಾಹೀರಾತು ಅನುಷ್ಠಾನ ನಿಯಮಗಳನ್ನು ತಯಾರಿಸಲಾಗಿದ್ದು, ಸರ್ಕಾರದಲ್ಲಿ ಪರಿಶೀಲನೆಯ ಹಂತದಲ್ಲಿರುತ್ತದೆ. |
| ಈ) | ಈ ಜಾಹೀರಾತು ನೀತಿಯ ಪ್ರಕಾರ ಸರ್ಕಾರ ನೀಡುವ ಜಾಹೀರಾತುಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮುದ್ರಿತ ಮಾಧ್ಯಮಗಳ ಮೂಲಕ ಸಮುಚಿತವಾಗಿ ವಿತರಣೆ ಮಾಡಲಾಗುತ್ತಿದೆಯೇ ; | ಪ್ರಸ್ತುತ ಜಾರಿಯಲ್ಲಿರುವ ಜಾಹೀರಾತು ಅನುಷ್ಠಾನ ನಿಯಮಗಳನ್ವಯ, ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಸಂದರ್ಭಾನುಸಾರ ರಾಜ್ಯ, ರಾಷ್ಟ್ರೀಯ ಹಬ್ಬ, ಮಹನೀಯರ ಜಯಂತಿ ಮತ್ತು ಸರ್ಕಾರದ ಸಾಧನೆ ಹಾಗೂ ಯೋಜನೆ/ ಕಾರ್ಯಕ್ರಮಗಳ ಕುರಿತು ಆಕರ್ಷಕ ಮತ್ತು ಪ್ರೋತ್ಸಾಹ ರೂಪದ ಜಾಹೀರಾತುಗಳನ್ನು ಸಮುಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ. |
| (ಉ) | 2023-24 ಮತ್ತು 2024-25ನೇ ಸಾಲಿನಲ್ಲಿ ಪತ್ರಿಕೆಗಳ ಮೂಲಕ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನೀಡಲಾಗಿರುವ ಜಾಹೀರಾತುಗಳಾವುವು; (ಪ್ರತ್ಯೇಕ ಪಟ್ಟಿಯನ್ನು ಇಲಾಖಾವಾರು ನೀಡುವುದು). | ಅನುಬಂಧ ಲಗತ್ತಿಸಿದೆ. |
| (ಊ) | ಕಳೆದ ಎರಡು ವರ್ಷದಲ್ಲಿ ಈ ಜಾಹೀರಾತುಗಳಲ್ಲಿ ಯಾವುದೇ ಮಾಧ್ಯಮ ಸಂಸ್ಥೆಗೆ ಅನುಚಿತವಾಗಿ ಹೆಚ್ಚಿನ ಪ್ರಮಾಣದ ಹಣ ಬಿಡುಗಡೆ ಆಗಿರುವ ಬಗ್ಗೆ, ಯಾವುದಾದರೂ ಆಡಿಟ್ ವರದಿ ಅಥವಾ ಪರಿಶೀಲನೆ ನಡೆದಿದೆಯೆ? (ನಡೆದಿದ್ದಲ್ಲಿ ಸಂಪೂರ್ಣ ವಿವರ ಒದಗಿಸುವುದು). | ಇರುವುದಿಲ್ಲ. |

**ಸಂ: ಕೆಸಿಐ-ಪಿಐಪಿ/217/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಲಾಗಿದೆ. 16 ಬಾರಿ ಬಜೆಟ್ ಮಂಡನೆ ಮಾಡಿದಂತಹ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೂಡ ತುಂಬಾ intelligent ಆಗಿದೆ ಎನ್ನುವಂಥದ್ದು ಕಾಣುತ್ತಿದೆ. ನಾನು ಬಹಳ ನೇರವಾಗಿ ಕೇಳಿದ್ದೆನು. ಸರ್ಕಾರ ಬಂದ ನಂತರ ಅಂದರೆ 2023-24ರಿಂದ ಎರಡು ವರ್ಷದ ಜಾಹೀರಾತುಗಳು print media ಮತ್ತು electronic media ಗಳಿಗೆ ಯಾವ್ಯಾವ ಜಾಹೀರಾತು ಕೊಟ್ಟಿದ್ದಾರೆ ಮತ್ತು ಅದಕ್ಕೆ ಎಷ್ಟು ಖರ್ಚಾಗಿದೆ ಎಂಬುದು ನನ್ನ ಪ್ರಶ್ನೆಯಾಗಿತ್ತು. ನನ್ನ ಉದ್ದೇಶ ಇದ್ದದ್ದು ಪ್ರತಿದಿನ ದಿನಪತ್ರಿಕೆಯ ಮುಖಪುಟದಲ್ಲಿ ಜಾಹೀರಾತುಗಳನ್ನು ನೋಡಿದಾಗ ಹೊಸ ಯೋಜನೆಗಳು, ಒಳ್ಳೊಳ್ಳೆಯ ಯೋಜನೆಗಳು, ಜನಪರವಾದಂಥ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಿದ್ದಾರೆ. ಹಾಗಾಗಿ ಜನರೂ ಕೂಡ ಅದಕ್ಕೆ register ಮಾಡಿದ್ದು, ಅವರಿಗೆ ಬೇಕಾದ ಸಹಕಾರ ಸಿಗುತ್ತಿದೆ. ಆದರೆ ಜಾಹೀರಾತುಗಳು ಇಷ್ಟೊಂದು ಬರುತ್ತಿರುವಾಗ ನಮಗೆ ಹೆದರಿಕೆಯಾಗುವ ರೀತಿಯಲ್ಲಿ ಆ ಜಾಹೀರಾತುಗಳು ಕಾಣುತ್ತಿದ್ದವು. ಪ್ರತಿಯೊಂದು ಮಾಧ್ಯಮದಲ್ಲಿಯೂ 60:40 ಅನುಪಾತದಲ್ಲಿ ಕೊಡುತ್ತಿದ್ದುದರ ಬಗ್ಗೆ ಉತ್ತರದಲ್ಲಿಯೂ ತಿಳಿಸಿದ್ದಾರೆ. ವಿದ್ಯುನ್ಮಾನ ಹಾಗೂ ಮುದ್ರಣ ಎರಡೂ ಮಾಧ್ಯಮಗಳಲ್ಲಿ ಯಾವ ರೀತಿ ಕೊಡಲಾಗುತ್ತಿದೆ ಎಂದು ನಾನು ಕೇಳಿದ್ದೆನು. ಜಾಹೀರಾತಿಗಾಗಿ ಎಷ್ಟು ಮೊತ್ತ ಖರ್ಚು ಮಾಡಲಾಗುತ್ತಿದೆ ಎನ್ನುವುದು ಆ ಉತ್ತರದಲ್ಲಿ ಎಲ್ಲಿಯೂ ಕಾಣಲಿಲ್ಲ. ಜಾಹೀರಾತಿಗಾಗಿ ಒಟ್ಟು ಎಷ್ಟು expenditure ಆಗಿದೆ ಎನ್ನುವುದು ನನ್ನ ಮೂಲ ಪ್ರಶ್ನೆಯಾಗಿತ್ತು. ಅದು ಇರಲಿಲ್ಲ. ಏನೆಂದರೆ ಪತ್ರಿಕೆಗಳಲ್ಲಿ ಕೊಡುತ್ತಿರುವುದು ನಮಗೂ ಖುಷಿಯಿದೆ. ಏಕೆಂದರೆ ಇಷ್ಟು ವರ್ಷಗಳ ಕಾಲ ನಮಗೆ ಹಲವಾರು ಸುದ್ದಿಗಳನ್ನು ಕೊಡುತ್ತಿವೆ. ಇಲ್ಲಿ ನಾವು ನೋಡಬೇಕಾಗಿರುವುದೇನೆಂದರೆ advertisement policy 4 ವರ್ಷಗಳಿಂದ ಬಾಕಿಯಿದೆ. ಅದು ಇನ್ನೂ ಆಗಿಲ್ಲ.

ಇನ್ನೊಂದು ಅಂಶವೇನೆಂದರೆ ನಮ್ಮ ಊರಿನಲ್ಲಿಯಿರಬಹುದು, ಬೇರೆ ಕಡೆಯೂ ಇರಬಹುದು. ಕೇವಲ ಒಂದು PDF ಮಾಡಿ ಅದು ಸಾವಿರ ಮುದ್ರಣ ಆಗುತ್ತದೆ ಎನ್ನುವಾಗ ಅದಕ್ಕೆ restriction ಮಾಡುವುದು ಎಲ್ಲಿದೆ? ಅದು ಕೂಡ ನಮಗೆ ಕಾಣುತ್ತಿಲ್ಲ. ಕೊನೆಯದಾಗಿ 2023-24ನೇ ಸಾಲಿನಲ್ಲಿ ಜನರಿಗೆ ಯೋಜನೆಗಳ awareness ಗೋಸ್ಕರ ಮಾಡಿದಿರಿ. ತೊಂದರೆಯಿಲ್ಲ. 2024-25, 2025-26 ಈಗಲೂ ಕೂಡ ಎಲ್ಲಾ ಪತ್ರಿಕೆಗಳಲ್ಲಿ front page ನಲ್ಲಿ ಜಾಹೀರಾತು ನೀಡಲು ಇಷ್ಟೊಂದು ದುಡ್ಡು ಏಕೆ ಖರ್ಚು ಮಾಡಲಾಗುತ್ತಿದೆ? ಒಂದು ಕಡೆ ರಾಜ್ಯದ ಅಭಿವೃದ್ಧಿಗೆ ದುಡ್ಡಿಲ್ಲ ಎಂದು ಹೇಳುತ್ತಾ ಇಷ್ಟು ದೊಡ್ಡ ಮಟ್ಟದಲ್ಲಿ ಯೋಜನೆಗಳನ್ನು ಮಾಡಿ ಅದರ ಜಾಹೀರಾತಿಗೆ ಇಷ್ಟು ದುಡ್ಡನ್ನು ಏಕೆ ಖರ್ಚು ಮಾಡಲಾಗುತ್ತಿದೆ ಎಂದು ನಾನು ಕೇಳಬಯಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಒಂದು ಸರ್ಕಾರ ಎಂದ ಮೇಲೆ ನಾವು ಏನು ಯೋಜನೆಗಳನ್ನು ಮಾಡುತ್ತೇವೆ, ಕಾರ್ಯಕ್ರಮಗಳನ್ನು ಮಾಡುತ್ತೇವೆ, ಅದನ್ನು ಜನರಿಗೆ ತಿಳಿಸುವಂಥ ಕೆಲಸ ಮಾಡಲೇಬೇಕಾಗುತ್ತದೆ. ಅದನ್ನು ಕೇಂದ್ರ ಸರ್ಕಾರವೂ ಮಾಡುತ್ತದೆ, ರಾಜ್ಯ ಸರ್ಕಾರಗಳೂ ಮಾಡುತ್ತವೆ. ಕೇಂದ್ರದಲ್ಲಿ ಇನ್ನೂ ಹೆಚ್ಚಾಗಿಯೇ ಮಾಡುತ್ತಾರೆ. ನಾವು ಮುದ್ರಣ ಮಾಧ್ಯಮದ ಮೂಲಕ ಮತ್ತು ಎಲೆಕ್ಟ್ರಾನಿಕ್

ಮಾಧ್ಯಮದ ಮೂಲಕ, ರಾಷ್ಟ್ರಮಟ್ಟದ ಪತ್ರಿಕೆಗಳ ಮೂಲಕ, ರಾಷ್ಟ್ರಮಟ್ಟದ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಮಾಡುತ್ತೇವೆ. ನಾವು ಇದಕ್ಕೆಲ್ಲಾ ದರ ನಿಗದಿ ಮಾಡಿರುವುದು ತಮಗೆ ತಿಳಿದೇ ಇದೆ.

60:40ರ ಅನುಪಾತದಲ್ಲಿ ಶೇ.60 ನಾವು ಕೊಡುತ್ತೇವೆ, ಶೇ.40 ಮಾಧ್ಯಮದವರು ಕೊಡುತ್ತಾರೆ. ಇವರು ಎಲ್ಲಿಯೂ ಕೂಡ ನೇರವಾಗಿ ಎಷ್ಟು ಖರ್ಚಾಗಿದೆಯೆಂದು ಕೇಳಿಲ್ಲ. ಆದರೂ ಕೂಡ ಉತ್ತರ ಕೊಡುತ್ತೇನೆ. 2020-21 ರಲ್ಲಿ ರೂ.111.15 ಕೋಟಿ, 2021-22ರಲ್ಲಿ ರೂ.88.02 ಕೋಟಿ, 2022-23ರಲ್ಲಿ ರೂ.134.05 ಕೋಟಿ, 2023-24ರಲ್ಲಿ ರೂ.101.74 ಕೋಟಿ, 2024-25ನೇ ಸಾಲಿನಲ್ಲಿ ಇಲ್ಲಿಯವರೆಗೆ ರೂ.95.45 ಕೋಟಿ ಆಗಿದೆ. 2022ನೇ ಸಾಲಿನಲ್ಲಿ ಹಿಂದಿನ ಸರ್ಕಾರದ ರೂ.30 ಕೋಟಿಗಳನ್ನು 2023ರಲ್ಲಿ ನೀಡಲಾಗಿದೆ. ಬಾಕಿಯನ್ನು ಕೂಡ ಬಿಟ್ಟು ಹೋಗಿದ್ದರು. ನಾವು ಹಿಂದಿನ ಸರ್ಕಾರಕ್ಕಿಂತಲೂ ಯದ್ವಾತದ್ವಾ ಹೆಚ್ಚು ಮಾಡಿದ್ದೇವೆಂಬ ನಿಮ್ಮ ಅಭಿಪ್ರಾಯವೆಲ್ಲ ಸುಳ್ಳು. ನಿಮ್ಮ ಉದ್ದಿಶ್ಯ ನನಗೆ ಅರ್ಥವಾಗುತ್ತದೆ. ಆದರೆ ನಾವು ಜಾಹೀರಾತು ಕೊಡಲೇಬೇಕಾಗುತ್ತದೆ. ಅದು ಯಾವುದೇ ಸರ್ಕಾರವಿದ್ದರೂ ಕೊಡಲೇಬೇಕಾಗುತ್ತದೆ. ಕೇಂದ್ರ ಸರ್ಕಾರವೂ ಕೂಡ ಕೊಡುತ್ತದೆ. ಹಿಂದಿನ ಸರ್ಕಾರದವರು ಕೊಟ್ಟಿದ್ದಾರೆ. ಇದು ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆ.

ಆದ್ದರಿಂದ 2013ರಲ್ಲಿ ಮಾಡಿದ ಹೊಸ ಪಾಲಿಸಿ, 2014ರಲ್ಲಿ ಮಾಡಿದ ನಿಯಮಾವಳಿಗಳು ಆರ್ಥಿಕ ಇಲಾಖೆಯಲ್ಲಿವೆ. ನಾನೇ ಹಣಕಾಸು ಸಚಿವನಾಗಿರುವುದರಿಂದ ಅದನ್ನು ತರಿಸಿಕೊಂಡು ಕೂಡಲೇ ಹೊಸ ಪಾಲಿಸಿಯನ್ನು ಮಾಡಲಾಗುವುದು. ಆಗಬಹುದೇ? (ಮುಂದು)

(914) 21-08-2025 (4.40) ಕೆಜಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾವು ಕೇಂದ್ರ ಸರ್ಕಾರದ ಅಷ್ಟೊಂದು ಆ ತರಹದ advertisement ಗಳನ್ನು ನಮ್ಮ ರಾಜ್ಯದಲ್ಲಿ ನೋಡುವುದಿಲ್ಲ. ಆದರೆ, ಸರ್ಕಾರ ಕೊಡುತ್ತಿರುವಂತಹ ಸಂಖ್ಯೆಗೂ ಮತ್ತು ನಾವು ಪ್ರತಿನಿತ್ಯ ನೋಡುತ್ತಿರುವಂತಹದಕ್ಕೂ ವ್ಯತ್ಯಾಸಗಳು ಕಾಣುತ್ತವೆ. ಸರ್ಕಾರ ವಾರ್ತಾ ಇಲಾಖೆಯಿಂದ ಕೊಡುವಂತಹ advertisement ಬೇರೆ ಇರಬಹುದು. ಆದರೆ, ಬೇರೆ ಬೇರೆ ಇಲಾಖೆಗಳಿಂದ advertisement ಗಳು ಬರುತ್ತವೆ. ಅಂದರೆ, Social Welfare Department ಇರಬಹುದು, Backward Classes Welfare Department ನಿಂದ ಇರಬಹುದು ಆ ತರಹದ advertisement ಗಳು ಬರುತ್ತವೆ. ಅದನ್ನು ಕ್ರೊಢೀಕರಣ ಮಾಡಿದಾಗ ಎಲ್ಲರಿಗೂ ಅನಿಸುತ್ತದೆ. ಇದು ನನ್ನ ಒಬ್ಬನದಲ್ಲ. Advertisement ಗೆ ಸಾಕಷ್ಟು ಹಣ ವ್ಯಯವಾಗುತ್ತಿದೆ ಎನ್ನುವಂತಹದ್ದು ನಮ್ಮ ಕಣ್ಣಿಗೆ ಕಾಣುವಂತಹದ್ದು. 2023-24ನೇ ಸಾಲಿನಲ್ಲಿ ಹೊಸ ಸರ್ಕಾರ, ಹೊಸ ಯೋಜನೆಗಳು ಇರುತ್ತವೆ. ನಾವು ಅದನ್ನು ಒಪ್ಪುತ್ತೇವೆ. ಮತ್ತೆ 2024-2025 ನೇ ಸಾಲಿನಲ್ಲಿ ಈಗಲೂ ಸಹ ದೊಡ್ಡ ದೊಡ್ಡ advertisement ಗಳು ಬಂದಾಗ ನಮಗೆ ಅನಿಸುತ್ತದೆ. ನಾವು ಶಾಸಕರಾಗಿ ಶಾಸಕರ ನಿಧಿಗೂ ಒಂದೊಂದು ಬಾರಿ ಕಷ್ಟವಾಗುತ್ತದೆ. ಈಗ 6 ತಿಂಗಳು ಆಯಿತು. ಇನ್ನು ಬಂದಿಲ್ಲ. ನಾವು ಬಂದವರಿಗೆ

ಕೊಡುವುದಕ್ಕೆ ಆಗುತ್ತಿಲ್ಲ. ಹಾಗಾಗಿ, ನಮಗೆ ಅಭಿವೃದ್ಧಿ ಕುಂಠಿತವಾಗುತ್ತಿದೆಯೇ ಏನೋ ಎನ್ನುವುದನ್ನು ಒಂದು ಕಡೆ ನೋಡುತ್ತಿದ್ದರೆ, ಇನ್ನೊಂದು ಕಡೆ advertisement ಗೆ ಇಷ್ಟೊಂದು ವೈಭವೀಕರಣ ಏಕೆ ಬೇಕೆಂದು ಅನಿಸುತ್ತದೆ. ಮತ್ತೆ PDF (Portable Document Format) ಮುಖಾಂತರ ಸಾಕಷ್ಟು ಜನರು ಪ್ರಚಾರ ಇರುವಂತಹದ್ದು ಇದೆ. ಅದನ್ನು ಯಾವ ರೀತಿ advertisement bill ಮಾಡುತ್ತಾರೆಂದು ಗೊತ್ತಿಲ್ಲ. ಸರ್ಕಾರ ಅಂತಹವರ ಬಗ್ಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಬಹಳಷ್ಟು ಸದಸ್ಯರು ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಅಭಿವೃದ್ಧಿ ಕುಂಠಿತವಾಗಿಲ್ಲ. I am making it very clear. ಅಭಿವೃದ್ಧಿ ಕುಂಠಿತವಾಗಿಲ್ಲ. ಸರ್ಕಾರದಲ್ಲಿ ಅಭಿವೃದ್ಧಿಗೆ ಹಣ ಇಲ್ಲ ಎಂದು ಹೇಳುವಂತಹದ್ದು ಸತ್ಯಕ್ಕೆ ದೂರವಾದಂತಹ ಮಾತು. ಹಾಗಿದ್ದರೆ, ಕಳೆದ ವರ್ಷ 2024-25 ನೇ ಸಾಲಿನಲ್ಲಿ 3,71,000 ಕೋಟಿ ರೂಪಾಯಿಗಳ ಬಜೆಟ್ ಇತ್ತು. ಈ ವರ್ಷ 4,09,000 ಕೋಟಿ ರೂಪಾಯಿಗಳ ಬಜೆಟ್ ಆಗಿದೆ. ಇದು ಹೇಗೆ ಹೆಚ್ಚಿಗೆ ಆಯಿತು?

**(ಗೊಂದಲ)**

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಯಾವುದನ್ನು ತಿಳಿದುಕೊಳ್ಳದೇ ಸುಮ್ಮನೆ ಮಾತನಾಡುತ್ತಾರೆ. (ಗೊಂದಲ) ನಾವು ಎಷ್ಟು ಖರ್ಚು ಮಾಡಿದ್ದೇವೆ ಎನ್ನುವುದಕ್ಕೆ ಅವರ ಬಳಿ ದಾಖಲೆಗಳು ಇವೆಯೇ? ನಾನು ಹೇಳುವುದನ್ನು ಅವರು ಕೇಳಬೇಕು. ಕಳೆದ ವರ್ಷ 2024-25ನೇ ಸಾಲಿನಲ್ಲಿ ಸುಮಾರು 52,000 ಕೋಟಿ ರೂಪಾಯಿಗಳಷ್ಟು Capital Expenditure ಆಗಿತ್ತು. ಈ ವರ್ಷ 86,000 ಕೋಟಿ ರೂಪಾಯಿಗಳು ಮಾಡಿದ್ದೇವೆ. ಅಂದರೆ, 2025-26ನೇ ಸಾಲಿನಲ್ಲಿ 86,000 ಕೋಟಿ ರೂಪಾಯಿಗಳು ಈ ಬಜೆಟ್‌ನಲ್ಲಿ ಆಗಿದೆ. ಅಭಿವೃದ್ಧಿ ಕುಂಠಿತವಾಗಿದ್ದರೆ, ಇದು ಹೇಗೆ ಹೆಚ್ಚಿಗೆ ಆಯಿತು? ವಿರೋಧ ಪಕ್ಷದವರು ಏನೋ ಮಾತನಾಡುವುದಕೋಸ್ಕರ ರಾಜಕೀಯ ಬಳಸಿ ಮಾತನಾಡುವುದಕ್ಕೆ ಹೋಗಬಾರದು. ಈಗ SCSP & TSP [Scheduled Castes Sub-Plan and Tribal Sub-Plan (Planning, Allocation and Utilization of Financial Resources)] Act. ಅದು ಪ್ರತಿ ವರ್ಷ SCSP& TSP ಹಣ ಹೆಚ್ಚಿಗೆ ಆಗುತ್ತಾ ಬಂದಿದೆ. ಇದು ಹೇಗೆ ಹೆಚ್ಚಿಗೆ ಆಗುವುದಕ್ಕೆ ಸಾಧ್ಯ? ಅಭಿವೃದ್ಧಿ ಖರ್ಚು ಜಾಸ್ತಿಯಾದರೆ, ಅದರಲ್ಲಿ 24.1% SCSP & TSP ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ SCSP&TSP ಶೇ. 24.1% ಖರ್ಚು ಮಾಡಲೇಬೇಕು. ಅವರ ಜಾತಿ ಸಂಖ್ಯೆಗೆ ಅನುಗುಣವಾಗಿ ಖರ್ಚು ಮಾಡಲೇಬೇಕು ಅಲ್ಲವೇ; ಅದು ಹೇಗೆ ಜಾಸ್ತಿ ಆಗುವುದಕ್ಕೆ ಸಾಧ್ಯವಾಗುತ್ತದೆ?

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳುವಂತಹ ಅಭಿಪ್ರಾಯ ಇದೆ. ನಾವು ಗ್ಯಾರಂಟಿ ಯೋಜನೆಗಳನ್ನು ಮಾಡಿದ ಮೇಲೆ ಅಭಿವೃದ್ಧಿ ಕುಂಠಿತವಾಗಿದೆ ಎಂದು ಅವರು ಹೇಳದಿದ್ದರೂ ಸಹ, ಗ್ಯಾರಂಟಿ ಯೋಜನೆಗಳನ್ನು ಮಾಡಿದ ಮೇಲೆ ಅಭಿವೃದ್ಧಿ ಕುಂಠಿತವಾಗಿದೆ. Developmental Expenditure ಸುಮಾರು 1,69,000 ಕೋಟಿ ರೂಪಾಯಿಗಳು. ಇದರಲ್ಲಿ ಶೇ. 24.1% ಅನ್ನು 42,017 ಕೋಟಿ ರೂಪಾಯಿಗಳನ್ನು SCSP&TSP ಗೆ ಖರ್ಚು ಮಾಡುತ್ತಿದ್ದೇವೆ. ಕಳೆದ ವರ್ಷ 39,000 ಕೋಟಿ ರೂಪಾಯಿಗಳು ಇತ್ತು. ಈಗ ಇದನ್ನು ಹೆಚ್ಚಿಗೆ ಮಾಡಿದ್ದೇವೆ. ಅಭಿವೃದ್ಧಿ ಜಾಸ್ತಿಯಾಗದೇ SCSP&TSP ಹೇಗೆ ಜಾಸ್ತಿಯಾಗುವುದಕ್ಕೆ ಸಾಧ್ಯವಾಗುತ್ತದೆ ಮಾನ್ಯ ನಾರಾಯಣಸ್ವಾಮಿಯವರೇ? (ಗೊಂದಲ) ಬಜೆಟ್ ಗಾತ್ರ ಅಲ್ಲ. ಬಜೆಟ್ ಗಾತ್ರಕ್ಕೆ ಅನುಗುಣವಾಗಿ ಮಾಡುವುದಲ್ಲ. ಅಭಿವೃದ್ಧಿ expenditure ಎಷ್ಟು ಆಗುತ್ತದೆ ಅದರಲ್ಲಿ ಶೇ. 24.1%. ನಾವು ಅಭಿವೃದ್ಧಿಗೆ 1,69,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಅದರಲ್ಲಿ ಶೇ. 24.1%. ಹಾಗಾಗಿ, 42,017 ಕೋಟಿ ರೂಪಾಯಿಗಳು ಬರಲಿಕ್ಕೆ ಸಾಧ್ಯವಾಗುತ್ತದೆ? ಹಾಗಾಗಿ, developmental works ಹೆಚ್ಚಾಗುತ್ತಲೇ ಇದೆ. ಈಗ ನಾವು ಗ್ಯಾರಂಟಿ ಯೋಜನೆಗಳಿಗೆ ಪ್ರತಿ ವರ್ಷ ಸುಮಾರು 52,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇದು ಇದಕ್ಕಿಂತ 53,000 ರಿಂದ 55,000 ಕೋಟಿ ರೂಪಾಯಿಗಳು ಆಗಬಹುದು. ಅಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಅದನ್ನು ಖರ್ಚು ಮಾಡಿದ್ದರೂ ಸಹ ಇದನ್ನು ಖರ್ಚು ಮಾಡುತ್ತೇವೆ. ಆದ್ದರಿಂದ, ಗ್ಯಾರಂಟಿ ಯೋಜನೆಗಳನ್ನು ಮಾಡುತ್ತಿರುವುದರಿಂದ, ಗ್ಯಾರಂಟಿ ಯೋಜನೆಗಳು ಜಾಸ್ತಿಯಾಗಿರುವುದರಿಂದ, ಗ್ಯಾರಂಟಿ ಯೋಜನೆಗಳ ಪ್ರಾಚಾರಕ್ಕೆ ಹಣ ಕೊಡುತ್ತಿದ್ದಾರೆ ಎನ್ನುವಂತಹ ಉದ್ದೇಶ ಅವರದ್ದು ಇದೆ ಎಂದು ಕಾಣಿಸುತ್ತದೆ. ಅಲ್ಲವೇ, ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರೇ,

**(ಗೊಂದಲ)**

**ಶ್ರೀ ಟಿ.ಎ.ಶರವಣ (ತಮ್ಮ ಸ್ಥಾನದಲ್ಲಿ ಕುಳಿತು):-** ಮಾನ್ಯ ಸಭಾಪತಿಯವರೇ, CAG (Comptroller and Auditor General of India) report ಹೇಳಿದೆ.

**ಸಭಾಪತಿಯವರು:-** ಮಾನ್ಯ ಟಿ.ಎ.ಶರವಣ್‌ರವರೇ, ಸುಮ್ಮನೆ ಇರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು CAG ವರದಿಯನ್ನು ಸಂಪೂರ್ಣವಾಗಿ ಓದಿಲ್ಲ. ಹಾಗಾಗಿ, ಓದಿದ ನಂತರ ಅವರಿಗೆ ಹೇಳುತ್ತೇನೆ. ಅವರು ಅವರಿಗೆ ಯಾವುದು ಅನುಕೂಲವಾಗುತ್ತದೆಯೋ ಅದನ್ನು ಹೇಳುತ್ತಾರೆ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಇಲ್ಲ, ಮಾನ್ಯ ಮುಖ್ಯಮಂತ್ರಿಯವರೇ,...

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಅವರಿಗೆ ಯಾವುದು ವಿರುದ್ಧ ಇದೆ ಅದನ್ನು ಅವರು ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಅಲ್ಲ, ಸುಮಾರು 52,000 ಕೋಟಿ ರೂಪಾಯಿಗಳು

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾವು ಹೊಸ ಪಾಲಿಸಿಯನ್ನು ಕೊಡುವುದಕ್ಕೆ ಮಾಡುತ್ತೇವೆ. ನಾವು ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸುತ್ತೇವೆ. ಹಾಗೆಯೇ, ನಾವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರೆಸುತ್ತೇವೆ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕುಂಠಿತವಾಗಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..,

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಜಗದೇವ್ ಗುತ್ತೇದಾರ್‌ರವರೆ, ತಾವು ತಮ್ಮ ಪ್ರಶ್ನೆ ಸಂಖ್ಯೆ; 1255 ಅನ್ನು ಕೇಳಿ.

(ಮಾನ್ಯ ಸದಸ್ಯರು ಸದನದಲ್ಲಿ ಗೈರುಹಾಜರಿದ್ದರು)

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, this is Question Hour. ನಾನು allow ಮಾಡುವುದಿಲ್ಲ. ಒಂದು ನಿಮಿಷ ಎಲ್ಲರೂ ಕೇಳಿ.

**(ಗೊಂದಲ)**

**ಶ್ರೀ ಎಸ್‌ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು Question Hour, ಚರ್ಚೆಗೆ ಅವಕಾಶ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನಾನು allow ಮಾಡುವುದಿಲ್ಲ. ನಾನು ಹೇಳುವುದನ್ನು ಒಂದು ನಿಮಿಷ ಕೇಳುತ್ತಿರೋ, ಇಲ್ಲವೋ, Question Hour ನಲ್ಲಿ ಪ್ರಶ್ನೆ ಕೇಳಿದವರಿಗೆ ಮಾತ್ರ ಮಾತನಾಡುವುದಕ್ಕೆ ಅಧಿಕಾರ ಇದೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಜ್ಯದ ಜನರು ಅಭಿವೃದ್ಧಿಯಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಪ್ರದೀಪ್ ಶೆಟ್ಟರ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸದಸ್ಯರೇ, ರಾಜ್ಯದ ಜನರು ಅದನ್ನು ಹೇಳುತ್ತಿಲ್ಲ. ರಾಜ್ಯದ ಜನರೆಲ್ಲರೂ ಖುಷಿಯಾಗಿದ್ದಾರೆ. ಬಿಜೆಪಿಯವರು ಅದನ್ನು ಹೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಇದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಈ ಹಂತದಲ್ಲಿನ ನಡವಳಿಗಳನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಪ್ರಶ್ನೆ ಸಂಖ್ಯೆ 1176**

**ಹುಬ್ಬಳ್ಳಿ ಮತ್ತು ಬೆಳಗಾವಿಗಳಲ್ಲಿರುವ ಕ್ರಿಕೆಟ್ ಸ್ಟೇಡಿಯಂಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಕುರಿತು**

| | | |
|---|---|---|
| ಅ | ಹುಬ್ಬಳ್ಳಿ ಬೆಳಗಾವಿ ಜಿಲ್ಲೆಗಳಲ್ಲಿರುವ ಅಂತರ್‌ರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗಳಲ್ಲಿ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹುಬ್ಬಳ್ಳಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಕ್ರಿಕೆಟ್ ಕ್ರೀಡಾಂಗಣಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸೇರಿರುವುದಿಲ್ಲ. ಸದರಿ ಕ್ರೀಡಾಂಗಣಗಳು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಸೇರಿರುತ್ತವೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಕರ್ನಾಟಕ ಸಂಘ ಸಂಸ್ಥೆಗಳ ಕಾಯ್ದೆ 1960ರಡಿ ನೊಂದಾಯಿತವಾದ ಸ್ವಾಯತ್ತ ಕ್ರೀಡಾ ಸಂಸ್ಥೆಯಾಗಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸಂಯೋಜಿತವಾಗಿದೆ. |
| ಆ | ಸದರಿ ಸ್ಟೇಡಿಯಂಗಳನ್ನು ಸರಿಯಾದ ನಿರ್ವಹಣೆ ಮಾಡದೇ ನಿರ್ಲಕ್ಷಿಸುತ್ತಿರುವುದಕ್ಕೆ ಕಾರಣವೇನು; | ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಸಮರ್ಪಕವಾಗಿ ಕ್ರೀಡಾಂಗಣಗಳನ್ನು ನಿರ್ವಹಣೆ ಮಾಡುತ್ತಿದ್ದು, ಹುಬ್ಬಳ್ಳಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಕ್ರಿಕೆಟ್ ಸ್ಟೇಡಿಯಂಗಳನ್ನು ವಿಶ್ವ ದರ್ಜೆಯ ಅತ್ಯಾಧುನಿಕ ಸವಲತ್ತುಗಳನ್ನು ಹೊಂದಿರುವ ಕ್ರೀಡಾಂಗಣಗಳನ್ನಾಗಿ ಮಾಡಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ರವರು ತಿಳಿಸಿರುತ್ತಾರೆ. |
| ಇ | ಸದರಿ ಜಿಲ್ಲೆಗಳಲ್ಲಿರುವ ಸ್ಟೇಡಿಯಂಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿ ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಪಂದ್ಯಾವಳಿಗಳನ್ನು ಆಯೋಜಿಸಿ ಉತ್ತರ ಕರ್ನಾಟಕ ಭಾಗದ ಯುವ ಗ್ರಾಮೀಣ ಕ್ರೀಡಾಪಟುಗಳನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸದರಿ ಕ್ರೀಡಾಂಗಣಗಳಲ್ಲಿ ರಣಜಿ ಪಂದ್ಯಾವಳಿ, ಭಾರತ "ಎ" ಪಂದ್ಯಾವಳಿಗಳನ್ನು ಆಯೋಜಿಸಿ ಪಂದ್ಯಗಳನ್ನು ನಡೆಸಲಾಗುತ್ತಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯವರು ತಿಳಿಸಿರುತ್ತಾರೆ |

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ನಾನು ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳಲ್ಲಿರುವ K.S.C.A. (Karnataka State Cricket Association) ಬಗ್ಗೆ ಪ್ರಶ್ನೆ ಕೇಳಿದ್ದೆ. 2003 ರಲ್ಲಿ ಮಾನ್ಯ ಎಸ್. ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದರು. (ಮುಂದು)

(915) 21-08-2025/4.50/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರದೀಪ್ ಶೆಟ್ಟರ್ (ಮುಂದು):-**

2003ರಲ್ಲಿ ನಾವು 8 ರಿಂದ 10 ಜನರು ಹುಬ್ಬಳ್ಳಿಯಲ್ಲಿ 22 ವರ್ಷಗಳ ಹಿಂದೆ ಕ್ರಿಕೆಟ್ ಆಡುತ್ತಿದ್ದೆವು. ಆಗ ನಮಗೆ K.S.C.A. (Karnataka State Cricket Association) ಕ್ರೀಡಾಂಗಣ ಉತ್ತರ ಕರ್ನಾಟಕ ಭಾಗಕ್ಕೆ

ಬೇಕೆಂದು, ಉತ್ತರ ಕರ್ನಾಟಕದ ಒಳ್ಳೊಳ್ಳೆ ಕ್ರೀಡಾಪಟುಗಳು ಕ್ರಿಕೆಟ್ ಆಡಬೇಕು ಮತ್ತೆ ಅವರು ಮುಂದೆ ಬರಬೇಕೆಂದು ಒಂದು ವರ್ಷ follow-up ಮಾಡಿ, 2003ರಲ್ಲಿ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು ಆಗ ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ನಾವು ಒಂದು ವರ್ಷ ಅವರ ಬೆನ್ನು ಹತ್ತಿ ಆ ground ನ 15 ಎಕರೆ ರೆವಿನ್ಯೂ ಜಮೀನನ್ನು 2003ರಲ್ಲಿ ಮಾನ್ಯ ಎಸ್.ಎಂ.ಕೃಷ್ಣರವರು ಕೆ.ಎಸ್.ಸಿ.ಎ.ಗೆ ಕೊಟ್ಟರು. ಅದಾದನಂತರ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಸಮಯವನ್ನು ತೆಗೆದುಕೊಂಡರು. ಸುಮಾರು 7 ರಿಂದ 8 ವರ್ಷಗಳವರೆಗೆ ಆ ಜಮೀನನ್ನು ಅಭಿವೃದ್ಧಿಪಡಿಸಲೇ ಇಲ್ಲ.

**ಶ್ರೀ ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅದು 14 ಎಕರೆ 32 ಗುಂಟೆ ಜಮೀನು.

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):-** ಮಾನ್ಯ ಸಭಾಪತಿಯವರೇ; ಹೌದು ಸರ್, ನಾನು round figure 15 acres ಎಂದು ಹೇಳಿದೆ. ಆ ಜಮೀನನ್ನು ಕ್ರೀಡಾಂಗಣ ಮಾಡುವುದಕ್ಕೆ ಏಳೆಂಟು ವರ್ಷ ತೆಗೆದುಕೊಂಡರು. ನಾವು ಅವರ ಬೆನ್ನು ಹತ್ತಿ, ಅದನ್ನು ವಾಪಸ್ಸು ತೆಗೆದುಕೊಂಡು ಬಿಡುತ್ತೇವೆಂದು ಹೇಳಿದ್ದೆವು. 2006ರಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ನಾವು ಅವರಿಗೆ ಹೇಳಿದ ಮೇಲೆ ಅದರ ಕೆಲಸವನ್ನು ಪ್ರಾರಂಭ ಮಾಡಿಸಿದರು. ಆ ಕ್ರೀಡಾಂಗಣವನ್ನು ಮಾಡಿದ ಮೇಲೆ ಹೆಸರಿಗೆ ಎಂದು ಎರಡು-ಮೂರು ಮ್ಯಾಚ್‌ಗಳನ್ನು ಆಡಿಸಿದರು. ಅಂದರೆ, ರಣಜಿ ಟ್ರೋಫಿ ಮತ್ತು Under-19 international match ಆಡಿಸಿದರು. ಈಗ ಐದಾರು ವರ್ಷದಿಂದ ಅಲ್ಲಿ ಯಾವುದೇ ಮ್ಯಾಚ್‌ಗಳನ್ನು ಆಡಿಸುತ್ತಲೇ ಇಲ್ಲ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸಂಸ್ಥೆಯವರು ಸರಿಯಾಗಿ ನಿಯಂತ್ರಣ ಮಾಡಿಕೊಂಡು ಹೋಗುತ್ತಾರೆಂದು ಹೇಳಿದ್ದಾರೆ. ಈಗ ಐದಾರು ವರ್ಷಗಳಿಂದ ಆ ಕ್ರೀಡಾಂಗಣ ದನಗಳ ಮತ್ತು ನಾಯಿಗಳ ಬೀಡಾಗಿದೆ, ಅಲ್ಲಿಗೆ ಯಾರ್‍ಯಾರೋ ಬರುತ್ತಾರೆ. ಈಗ ಅಲ್ಲಿ ಎಲ್ಲಾ ಪಾಳು ಬಿದ್ದಿದೆ. ಅದಕ್ಕೆ ಅದನ್ನು ಸರ್ಕಾರ ತೆಗೆದುಬಿಡಲಿ. ಏಕೆಂದರೆ, ಈಗ ಮಹಾರಾಜ ಕಪ್ ನಡೆಯುತ್ತಿದೆ. ಆ ಮಹಾರಾಜ ಕಪ್ ಅನ್ನು ಮೈಸೂರಿಗೆ ಶಿಫ್ಟ್ ಮಾಡುತ್ತಾರೆ. ನಾನು ನೋಡಿದ ಹಾಗೆ ಉತ್ತರ ಕರ್ನಾಟಕದ ಅಭಿವೃದ್ಧಿಯ ವಿಚಾರದಲ್ಲಿ highest ನಿರ್ಲಕ್ಷ್ಯವಿದೆ. ಆದುದರಿಂದ, ಉತ್ತರ ಕರ್ನಾಟಕಕ್ಕೆ ಪ್ರತ್ಯೇಕವಾಗಿ ಕೊಟ್ಟುಬಿಡಿ. ನಮಗೆ ನಿಮ್ಮ ಸಹವಾಸವೇ ಬೇಡವೇ ಬೇಡ. ನಾವೆಲ್ಲರೂ ಬಂದುಬಿಡುತ್ತೇವೆ. ಈಗ ಏನಾದರೂ ಮಾತನಾಡಿದರೆ, ಮೈಸೂರು-ಬೆಂಗಳೂರು ಎನ್ನುತ್ತಾರೆ. ಈಗ ಮೈಸೂರಿಗೆ ಮಹಾರಾಜ ಕಪ್ ಅನ್ನು ಕೊಡುವುದಕ್ಕೆ ಏನಿತ್ತು? ಅದನ್ನು ನಮ್ಮ ಭಾಗಕ್ಕೆ ನೀಡಿ. ಆಗ ನಮ್ಮ ಹುಡುಗರು ಸಹ ಬಂದು ಆಟವಾಡುತ್ತಾರೆ. ಈಗ ಹುಬ್ಬಳ್ಳಿಯಲ್ಲಿ ಹಾಕಿದಂತಹ ಎಲ್ಲಾ floodlight ಗಳನ್ನು ಕೆ.ಎಸ್.ಸಿ.ಎ.ನವರು ಕಿತ್ತುಕೊಂಡು ಹೋಗಿದ್ದಾರೆ. ಇತ್ತೀಚೆಗೆ ಒಂದು ಕಪ್ಪು ಚುಕ್ಕೆ ಬಂತು. ಈಗ ಆರ್.ಸಿ.ಬಿ.ಗೆ ಸಂಬಂಧಪಟ್ಟಂತೆ ಅಷ್ಟೊಂದು ಸಂಭ್ರಮ ಮಾಡುವಂಥದ್ದು ಬೇಕಾಗಿತ್ತೆ? ಅದು immediately, ಅವರು ಹಿಂದಿನ ದಿವಸ ಮ್ಯಾಚ್ ಗೆಲ್ಲುತ್ತಾರೆ, ಮರು ದಿವಸ ಮುಂಜಾನೆ ಕಾರ್ಯಕ್ರಮ. ಮಾನ್ಯ ಉಪ ಮುಖ್ಯಮಂತ್ರಿಗಳೆ, ಇದರಿಂದ

ಕೆ.ಎಸ್.ಸಿ.ಎ.ದವರು ಸರ್ಕಾರಕ್ಕೆ ಕೆಟ್ಟ ಹೆಸರು ತಂದರು. ಆರ್.ಸಿ.ಬಿ.ಯವರನ್ನು ತರಾತುರಿಯಲ್ಲಿ ಏಕೆ ಕರೆಯಿಸಬೇಕಾಗಿತ್ತು? ಇದರಿಂದ ಸುಮಾರು 11 ಜನರು ಸಾವನ್ನಪಿದರು.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವಂತೆ ಹೇಳಿ.

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಪ್ಪು ತಿಳಿದುಕೊಳ್ಳುವುದು ಬೇಡ. ಮಾನ್ಯ ಉಪ ಮುಖ್ಯಮಂತ್ರಿಗಳೆ, ಅವರಿಂದ ನಿಮಗೆ ಕೆಟ್ಟ ಹೆಸರು ಬಂತು. ನಾನು ನಿಮ್ಮ ಮೇಲೆ ಆಪಾಧನೆ ಮಾಡಿದರೆ, ಅದು ಚರ್ಚೆಯಾಗಲಿ. ಅದು ಕೆಳಮನೆಯಲ್ಲಿ ಅಗಿದೆ. ಈ ಪ್ರಶ್ನೆ ಕೆ.ಎಸ್.ಸಿ.ಎ ಕ್ರಿಡಾಂಗಣಕ್ಕೆ ಸಂಬಂಧಪಟ್ಟಂತೆ ಬಂದಿದೆ. ಆದುದರಿಂದ, ದಯವಿಟ್ಟು ಸರ್ಕಾರ ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಆ ಜಮೀನನ್ನು ವಾಪಸ್ಸು ತೆಗೆದುಕೊಂಡು ಬಿಡಲಿ ಎಂಬುದು ನನ್ನ ಆಗ್ರಹ.

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕ್ರಿಕೆಟ್ ಸ್ಟೇಡಿಯಂಗಳು ಆಗಿರುವುದಿಲ್ಲ. ಅದಾದ ಮೇಲೆ ರೆವಿನ್ಯೂ ಇಲಾಖೆಯವರು ಕೆ.ಎಸ್.ಸಿ.ಎ.ಗೆ ಕೊಟ್ಟುಬಿಟ್ಟಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ 30 ವರ್ಷಗಳ ಕಾಲ ಲೀಸ್‌ಗೆ ಕೊಟ್ಟಿದ್ದಾರೆ. ಅದು ಕ್ರೀಡಾ ಇಲಾಖೆಯ ಸ್ವಾಧೀನದಲ್ಲಿ ಇಲ್ಲ. ಆ ಎರಡೂ ಇಲ್ಲ. ಬೆಳಗಾವಿ ಜಿಲ್ಲೆಗೆ ನಗರಾಭಿವೃದ್ಧಿ ಇಲಾಖೆಯವರು ಕೊಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ ರೆವಿನ್ಯೂ ಇಲಾಖೆಯವರು ಕೊಟ್ಟಿದ್ದಾರೆ. ಈ ಎರಡಕ್ಕೂ agreement ಆಗಿರತಕ್ಕಂಥದ್ದು. ಅಂದರೆ, ಕೆ.ಎಸ್.ಸಿ.ಎ ಮತ್ತು ಹುಬ್ಬಳ್ಳಿ ಕ್ರೀಡಾಂಗಣಕ್ಕೆ. ಅವರು ಅದನ್ನು ಮಾಡಬೇಕು. ನಾನು ಅದರ CEO (Chief Executive Officer) ರವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ಎಲ್ಲಾ ನಿರ್ವಹಣೆಯನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಮೇಲೆ ಮತ್ತೊಂದು ಬಾರಿ ಮಾತನಾಡುತ್ತೇನೆ. ಏಕೆಂದರೆ, ಅದನ್ನು 30 ವರ್ಷಗಳಿಗೆ ಲೀಸ್‌ಗೆ ಕೊಟ್ಟಿರುವಂಥದ್ದು. ಈಗ ಅದು ನಮ್ಮ ಸ್ವಾಧೀನ ಮತ್ತು ಅಧೀನದಲ್ಲೂ ಇಲ್ಲ. ಅದಕ್ಕೆ ನಾವು ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ಈಗ ಮಾನ್ಯ ಸದಸ್ಯರು ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎಂದು ಏನು ಹೇಳುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ವೇಳೆ ನಡೆಯುತ್ತಿದ್ದರೆ, ಅದನ್ನು ಕೂಡಲೇ ನಿಲ್ಲಿಸುವುದಕ್ಕೆ ಕ್ರಿಕೆಟ್ ಸಂಸ್ಥೆಯವರ ಜೊತೆ ಮಾತನಾಡಿ, ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದು leased property ಆಗಿರುವುದರಿಂದ ಅದನ್ನು ಅವರು ನೋಡಿಕೊಳ್ಳುತ್ತಿದ್ದಾರೆ. ಮತ್ತೆ Board of Control for Cricket in India (BCCI) ನವರು ಭಾರತ 'ಎ' ಟೀಮ್‌ನ ಪಂದ್ಯಗಳನ್ನು ಏರ್ಪಾಡು ಮಾಡುತ್ತಾರೆ. ಇವರು ರಣಜಿ ಟ್ರೋಫಿ ಪಂದ್ಯಗಳನ್ನು ಏರ್ಪಾಡು ಮಾಡುತ್ತಾರೆ. ಆದುದರಿಂದ, ಮಾನ್ಯ ಸದಸ್ಯರು ಹೇಳಿರುವಂತಹ ಸಲಹೆಗಳು... KSCA is a registered body. It is registered under the Karnataka Societies Registration Act. ನಾನು ಕೆ.ಎಸ್.ಸಿ.ಎ.ಯವರ ಜೊತೆಯಲ್ಲಿ ಮಾತನಾಡುತ್ತೇನೆ. ಅದರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಜೊತೆಯಲ್ಲಿ ಮಾತನಾಡಿ, ಇವರು ಏನೇನು

ಹೇಳಿದ್ದಾರೆ, ಅದರಲ್ಲಿ ಕೆಲವು ನಡೆಯದೇ ಇರತಕ್ಕಂಥದ್ದು ನಿಜ. ಹಾಗಂತ, ಉತ್ತರ ಕರ್ನಾಟಕದವರಿಗೆ ಅನ್ಯಾಯ ಮಾಡಬೇಕು ಮತ್ತೆ ದಕ್ಷಿಣ ಕರ್ನಾಟಕದವರಿಗೆ ನ್ಯಾಯ ಮಾಡಬೇಕೆಂದು ಸರ್ಕಾರದಲ್ಲಿ ಇಲ್ಲವೇ ಇಲ್ಲ. ನಮ್ಮಲ್ಲಿ ಆ ರೀತಿಯ approach ಇಲ್ಲ. ನಮಗೆ ಸಮಗ್ರ ಕರ್ನಾಟಕ ಅಭಿವೃದ್ಧಿಯಾಗಬೇಕು. ಉತ್ತರ ಕರ್ನಾಟಕವೂ ಆಗಬೇಕು. ಆ ರೀತಿ ಇದ್ದರೆ, ನಾವು ಏಕೆ ಅನುಚ್ಛೇದ 371(ಜೆ) ಯನ್ನು ಜಾರಿಗೆ ತರುತ್ತಿದ್ದೆವು? ಮತ್ತೆ ನಾವು 5,000/- ಕೋಟಿ ರೂಪಾಯಿಗಳನ್ನು ಏಕೆ ಕೊಡುತ್ತಿದ್ದೆವು? ಈಗ ಉತ್ತರ ಕರ್ನಾಟಕ ಅಭಿವೃದ್ಧಿಯಾದರೆ ಮಾತ್ರ ಸರ್ವತ್ತೋಮುಖ ಅಭಿವೃದ್ಧಿ ಎಂದು ಹೇಳುವುದಕ್ಕೆ ಸಾಧ್ಯ. ನಾವು ಅದಕ್ಕೋಸ್ಕರ ಶ್ರೀ ಗೋವಿಂದರಾಜು ಸಮಿತಿಯನ್ನು ರಚನೆ ಮಾಡಿರುವುದು ಏಕೆಂದರೆ, ಅವರು ಅದರ ವರದಿ ಕೊಟ್ಟ ಮೇಲೆ ಸಮಗ್ರ ಕರ್ನಾಟಕವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರವಾಗಿ ಮಾಡಿರತಕ್ಕಂಥದ್ದು. ಈಗ ಡಾ: ಡಿ.ಎಂ.ನಂಜುಡಂಪ್ಪನವರ ವರದಿಯ impact ಏನಾಗಿದೆ ಎಂಬುದು ಗೊತ್ತಾಗಬೇಕಲ್ಲವೇ? ಅದು ಗೊತ್ತಾದ ಮೇಲೆ ಸರ್ಕಾರ ಮುಂದೆ ಏನು ಮಾಡಬೇಕು? ಅದಕ್ಕೆ ಸಲಹೆ ಕೊಟ್ಟು ವರದಿ ನೀಡಿ ಎಂದು ಸಮಿತಿ ರಚನೆ ಮಾಡಿದ್ದೇವೆ. ನಾವು ಅದನ್ನು ಮಾಡುತ್ತೇವೆ. ಆದುದರಿಂದ, ಮಾನ್ಯ ಸದಸ್ಯರು ನೀಡಿರುವಂತಹ ಸಲಹೆಗಳಿಗೆ ಸಂಬಂಧಪಟ್ಟಂತೆ ಕೆ.ಎಸ್.ಸಿ.ಎ.ನವರನ್ನು ಕರೆದು ಮಾತನಾಡುತ್ತೇನೆ.

**ಸಭಾಪತಿಯವರು:-** ಡಾ: ಧನಂಜಯ ಸರ್ಜಿಯವರೆ, ತಮ್ಮ ಪ್ರಶ್ನೆ ಸಂಖ್ಯೆ: 54 (588) ಕ್ಕೆ ಸಂಬಂಧಪಟ್ಟಂತೆ ಉತ್ತರ ನೀಡುವುದಕ್ಕೆ ಸಮಯಾವಕಾಶವನ್ನು ತೆಗೆದುಕೊಂಡಿದ್ದಾರೆ.

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, (ಗೊಂದಲ).

**ಸಭಾಪತಿಯವರು:-** ಅವರು ಸಮಯಾವಕಾಶವನ್ನು ತೆಗೆದುಕೊಂಡ ಮೇಲೆ ಹೇಗೆ ಉತ್ತರ ನೀಡುತ್ತಾರೆ?

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದು ಕಳೆದ ವಾರ ಇತ್ತು. ಈ ವಾರವೂ ಸಹ ಸಮಯವನ್ನು ತೆಗೆದುಕೊಂಡಿದ್ದಾರೆಂದರೆ ಏನು ಮಾಡುವುದು? ಈಗ ತಾವು ನನ್ನ ರಕ್ಷಣೆಗೆ ಬರಬೇಕು.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸಮಯದಲ್ಲಿ ಉತ್ತರ ನೀಡದೇ ಇದ್ದರೆ, ಮತ್ತೆ ಯಾವಾಗ ಉತ್ತರ ಕೊಡಬೇಕು. ಇವರು ಸದನ ನಡೆಯುವಾಗ ಉತ್ತರ ಕೊಡುವುದಿಲ್ಲ. ಬೇರೆ ಸಮಯದಲ್ಲಿ ಉತ್ತರ ಕೊಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ನೀವುಗಳು ಏನು ಎದ್ದು ಮಾತನಾಡುತ್ತಿರಿ? ನೀವು ಎಲ್ಲದಕ್ಕೂ ಸಹ interfere ಆಗುತ್ತೀರಾ...

**(ಗೊಂದಲ)**

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಅವರು ಉತ್ತರ ಕೊಡಬೇಕು. ಅದಕ್ಕೇ ಸರ್ಕಾರ ಇರುವುದು.

**(ಗೊಂದಲ)**

**ಸಭಾಪತಿಯವರು:-** ನಾನು ಉತ್ತರ ನೀಡಿ ಎಂದು ಹೇಳಿದ್ದೇನೆ. ಅದಕ್ಕೆ ಅವರು ಕಾಲಾವಕಾಶ ಕೇಳಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅದು ಇವತ್ತಾ ಅಥವಾ ನಾಳೆಯೇ?

**(ಗೊಂದಲ)**

**ಸಭಾಪತಿಯವರು:-** ಅದು ನನಗೆ ಗೊತ್ತಿಲ್ಲ. ಅವರು ಕಾಲಾವಕಾಶ ಕೇಳಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾಳೆ ಸದನ ಮುಗಿಯುವುದರಿಂದ ಅವರು ಉತ್ತರ ಕೊಡುವುದು ಯಾವಾಗ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ವಾರ ಸಮಯ ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ನಿಮಗೆಲ್ಲಾ ಯಾರು ಮಾತನಾಡುವುದಕ್ಕೆ ಹೇಳಿದ್ದಾರೆ? ಈಗ ಯಾರು ಪ್ರಶ್ನೆ ಕೇಳುತ್ತಾರೆ, ಅವರು ಉತ್ತರ ಹೇಳಬೇಕು. ಈ ರೀತಿ ಎಲ್ಲರೂ ಎದ್ದೆದ್ದು ಮಾತನಾಡಿದರೆ ಹೇಗೆ? ಇದು ಏನು ಧರ್ಮಶಾಲೆಯೇ? ಡಾ: ಧನಂಜಯ ಸರ್ಜಿಯವರೆ, ತಮ್ಮ ಪ್ರಶ್ನೆಗೆ ಸಮಯಾವಕಾಶವನ್ನು ಕೇಳಿದ್ದಾರೆ. ನಾನು ಅವರನ್ನು ಕೇಳಿ ಹೇಳುತ್ತೇನೆ.

**(ಗೊಂದಲ)**

**ಡಾ: ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ, ಇದು starred question ಆಗಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಸರಿಯಲ್ಲ. ತಾವು ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕು.

**(ಗೊಂದಲ)**

**ಸಭಾಪತಿಯವರು:-** ನಾನು ನಿಮಗೆ ಮತ್ತು ಅವರಿಗೆ ಇಬ್ಬರಿಗೂ ಸಹ ತರಾಟೆ ತೆಗೆದುಕೊಳ್ಳಬೇಕು. ತಾವು ವಿರೋಧ ಪಕ್ಷದ ನಾಯಕರು ಎಂದು ಎಷ್ಟು ಗೌರವ ಕೊಡುತ್ತೇನೆಂದು ತಿಳಿದುಕೊಳ್ಳಿ. ಈಗ ಅವರು ಸಮಯಾವಕಾಶವನ್ನು ಕೇಳಿದ್ದಾರೆ. ಅದಕ್ಕೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದಷ್ಟು ಬೇಗ ಉತ್ತರ ಕೊಡುವಂತೆ ಸರ್ಕಾರಕ್ಕೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾಳೆ ಕೊಡುವುದಕ್ಕೆ ಆಗುವುದಿಲ್ಲ. ಉತ್ತರವನ್ನು ಅವರ ಮನೆಗೆ ಕಳುಹಿಸಿಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಆಯಿತು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾಳೆ ಕೊಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ನಾಳೆ ಕೊಡತ್ತೇನೆಂದು ಸತ್ಯಕ್ಕೆ ದೂರವಾದ ಮಾತನ್ನು ಹೇಳಬೇಕಾಗುತ್ತದೆ. ಆದುದರಿಂದ, ಉತ್ತರವನ್ನು ಅವರ ಮನೆಯ ವಿಳಾಸಕ್ಕೆ ಕಳುಹಿಸಿಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಡಾ: ಧನಂಜಯ ಸರ್ಜಿಯವರೆ, ಮೊದಲು ಸರಿಯಾಗಿ ಇದ್ದೀರಿ. ಆದರೆ, ಈಗ ಏಕೋ ಬೇರೆ ರೀತಿ ಇದ್ದೀರಿ. ಈಗ ತಾವು ಕುಳಿತುಕೊಳ್ಳಿ. ನಿಮ್ಮನ್ನು ನೋಡಿ ಬೇರೆಯವರು ಕಲಿಯುತ್ತಾರೆ.

(ಮುಂದು)

(916) 21.08.2025 05.00 LL-MD (ಸಭಾಪತಿಯವರ ಉಪಸ್ಥಿತಿ)

**ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ : 522**

**ಫೈನಾನ್ಸ್ ಕಂಪನಿಗಳ ಮುಂದುವರೆದ ಕಿರುಕುಳದ ಬಗ್ಗೆ**

| | | |
|---|---|---|
| ಅ | ರಾಜ್ಯದಲ್ಲಿ ಕರ್ನಾಟಕ ಕಿರು ಸಾಲ ಮತ್ತು ಸಣ್ಣ (ಬಲವಂತದ ಕ್ರಮಗಳ ಪ್ರತಿ ಬಂಧಕ) ಕಾಯ್ದೆ 2025 ಜಾರಿಗೆ ತಂದಿದ್ದರೂ ಫೈನಾನ್ಸ ಕಂಪನಿಗಳು ಕಿರುಕುಳ ಮುಂದುವರೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಫೈನಾನ್ಸ ಕಂಪನಿಗಳು ಕಿರುಕುಳ ನೀಡುತ್ತಿರುವ ಕುರಿತು ಕರ್ನಾಟಕ ಕಿರು ಸಾಲ ಮತ್ತು ಸಣ್ಣ (ಬಲವಂತದ ಕ್ರಮಗಳ ಪ್ರತಿಬಂಧಕ) ಕಾಯ್ದೆ-2025ರ ಅಡಿಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. |
| ಆ | ಬಂದಿದ್ದಲ್ಲಿ, ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕೈಗೊಂಡ ಕ್ರಮಗಳೇನು: | ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕೈಗೊಂಡ ಕ್ರಮಗಳು ಕೆಳಗಿನಂತಿರುತ್ತದೆ:<br><br>1. ಕರ್ನಾಟಕ ಕಿರುಸಾಲ ಮತ್ತು ಸಣ್ಣಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ ಕಾಯ್ದೆ/ಅಧ್ಯಾದೇಶ-2025) ಅನ್ನು ಜಾರಿಗೊಳಿಸಿದೆ.<br>2. ದಿನಾಂಕ: 11.08.2025 ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.<br>3. ವಿವಿಧ ಜಿಲ್ಲೆಗಳಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳಿಗೆ ಜಿಲ್ಲಾ ಮಟ್ಟದಲ್ಲಿ ಸಭೆ/ಕಾರ್ಯಾಗಾರ ನಡೆಸಿ, ಸಾಲ ಪಡೆದ ರೈತರು ಮತ್ತು ಸಾರ್ವಜನಿಕರಿಗೆ ಕಿರುಕುಳ ನೀಡದಂತೆ, ತಿಳುವಳಿಕೆ ನೀಡಲಾಗಿರುತ್ತದೆ.<br>4. ಮೈಕ್ರೋಫೈನಾನ್ಸ್ ಕಂಪನಿಗಳ ಮುಖ್ಯಸ್ಥರು ಮತ್ತು ಸಿಬ್ಬಂದಿಗಳಿಗೆ ಠಾಣಾ ಮಟ್ಟದಲ್ಲಿ ಹಾಗೂ ಜಿಲ್ಲಾಮಟ್ಟದಲ್ಲಿ ಸಭೆಯನ್ನು ನಡೆಸಿ, ಸಾಲ ತೆಗೆದುಕೊಂಡಿರುವ ರೈತರು ಮತ್ತು ಸಾರ್ವಜನಿಕರಿಗೆ ಕಿರುಕುಳ ನೀಡದಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.<br>5. ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಥವಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಕಂದಾಯ, ಪೋಲೀಸ್ ಹಾಗೂ ಲೀಡ್ ಬ್ಯಾಂಕ್ ಮ್ಯಾನೇಜರ್ ಹಾಗೂ ಇತರ ಅಧಿಕಾರಿಗಳ ಉಪಸ್ಥಿತಿಯಲ್ಲಿ ಕಾರ್ಯಾಗಾರ ಏರ್ಪಡಿಸಿ ಮಾಹಿತಿ ನೀಡಲಾಗಿದೆ.<br>6. ಪೋಲೀಸ್ ಬೀಟ್ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಎಲ್ಲಾ ಮೈಕ್ರೋಫೈನಾನ್ಸಗಳ ಮೇಲೆ ನಿಗಾ ಇಡಲಾಗುತ್ತಿದೆ.<br>7. ಹಲವು ಜಿಲ್ಲೆಗಳಲ್ಲಿ ಕಿರುಕುಳ ಪ್ರಕರಣಗಳನ್ನು ದಾಖಲಿಸಿ, ಆರೋಪಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಮೈಕ್ರೋ ಫೈನಾನ್ಸಗಳಿಂದಾಗುವ ತೊಂದರೆಗಳ ಬಗ್ಗೆ ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. |

**ಶ್ರೀ ಸಿ.ಎನ್. ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಗೃಹ ಸಚಿವರಿಗೆ ಈ ಒಂದು ಸದನದಿಂದ ವೈಯಕ್ತಿಕವಾಗಿ ಮತ್ತು ಸಭೆಯ ಪರವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಪೋಲೀಸ್‌ನವರಿಗೆ ಪಿ ಕ್ಯಾಪ್ ಕೊಡುವುದಕ್ಕೆ ಅವರು ಸಹಮತ ನೀಡಿರುತ್ತಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಏನು ಉತ್ತರ ನೀಡಿದ್ದಾರೆ, ಅದು ತೃಪ್ತಿಕರವಾಗಿರುವುದಿಲ್ಲ. ದಿನಾಂಕ 12.02.2025ರಲ್ಲಿ ಮೈಕ್ರೋ ಫೈನಾನ್ಸ್ ಬಗ್ಗೆ ಸುಗ್ರೀವಾಜ್ಞೆ ತಂದಿರುತ್ತಾರೆ. ಆದರೆ, ಆ ಮೈಕ್ರೋ ಫೈನಾನ್ಸ್ ಬಗ್ಗೆ ಸುಗ್ರೀವಾಜ್ಞೆ ತಂದರೂ ಸಹ ಬೆಳಗಾವಿ, ತುಮಕೂರು, ಕೋಲಾರ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಸೇರಿ ಒಟ್ಟು 27 ಪ್ರಕರಣಗಳು ಆಗುತ್ತವೆ. ಅದರಲ್ಲಿ 69 ಆರೋಪಿಗಳನ್ನು ಬಂಧಿಸಲಾಗಿರುತ್ತದೆ. 17 ಜನರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇದರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿರುತ್ತದೆ ಎಂದು ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಉತ್ತರ ನೀಡುವಾಗ, "ಪ್ರಕರಣಗಳು ದಾಖಲಾಗಿರುತ್ತವೆ" ಎಂದು ಮಾತ್ರ ಹೇಳಿರುತ್ತಾರೆ. ಇದು ಅಷ್ಟು ತೃಪ್ತಿಕರವಾಗಿರುವುದಿಲ್ಲ. ಏಕೆಂದರೆ, ಕಾಯಿದೆ ಬಂದ ನಂತರವೂ ಸಹ, ಆತ್ಮಹತ್ಯೆ ಪ್ರಕರಣಗಳು, ಕಿರುಕುಳ ಪ್ರಕರಣಗಳು ಹೆಚ್ಚಾಗಿರುವುದನ್ನು ನೋಡಿದರೆ, ಕಾಯಿದೆಯ ಮೂಲ ಉದ್ದೇಶ ವಿಫಲವಾಗಿರುತ್ತದೆ. ಇದರಿಂದಾಗಿ, ಬಡವರು ಮತ್ತು ಮಧ್ಯಮ ವರ್ಗದವರು ನಿರಂತರವಾಗಿ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಹಾಗಾಗಿ, ಈ ಕಾಯಿದೆಯಿಂದ ಅವರಿಗೆ ಏನು ಪ್ರಯೋಜನವಾಗಿರುವುದಿಲ್ಲ. ಇದು ನಾನು ಕೇಳಿದಂತಹ ಮೊದಲನೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಉತ್ತರಕ್ಕೆ ನನ್ನ ಉಪಪ್ರಶ್ನೆಯಾಗಿರುತ್ತದೆ.

ಎರಡನೆಯದಾಗಿ, ಗ್ರಾಮೀಣ ಪ್ರದೇಶದಲ್ಲಿರುವಂತಹ ಜನರಿಗೆ ಹಲವಾರು ರೀತಿಯಾದಂತಹ ಸಭೆಗಳನ್ನು ಮಾಡಿ, ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಸಭೆ ಮಾಡಿ ಇದರ ಬಗ್ಗೆ ನಾವು ಹೆಚ್ಚಿನ ವಿಚಾರಗಳನ್ನು ತಿಳಿಸಿದ್ದೇವೆಂದು ಹೇಳಿರುತ್ತಾರೆ. ನಾನು ಕೂಡ ಗ್ರಾಮೀಣ ಪ್ರದೇಶದಿಂದ ಬಂದಂತಹವನು. ಹಾಗಾಗಿ, ಗ್ರಾಮೀಣ ಪ್ರದೇಶದಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಇದೆ. ಅವರುಗಳಿಗೆ ಇದರ ಬಗ್ಗೆ ಅರಿವನ್ನು ಯಾವ ರೀತಿ ಮೂಡಿಸಿದ್ದಾರೆಂಬುದು ನನಗೆ ಗೊತ್ತಿಲ್ಲ. Even today ಆತ್ಮಹತ್ಯೆ ಪ್ರಕರಣಗಳು ಆಗುತ್ತಲೇ ಇವೆ. ಜೊತೆಗೆ, ಪೋಲೀಸ್ ಬೀಟ್ ಮುಖಾಂತರ ಎಲ್ಲಾ ಮೈಕ್ರೋ ಫೈನಾನ್ಸ್‌ಗಳ ಮೇಲೆ ಕಾರ್ಯಾಚರಣೆ ಮಾಡಿ, ಅವರ ಮೇಲೆ ನಿಗಾ ಇಟ್ಟಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ, ಎಷ್ಟೋ ದಿನಪತ್ರಿಕೆಗಳಲ್ಲಿ ಪೋಲೀಸರು ಸಹ ಈ ಮೈಕ್ರೋ ಫೈನಾನ್ಸ್‌ನವರ ಜೊತೆ ಶಾಮೀಲಾಗಿ, ಸಾಲ ತೆಗೆದುಕೊಂಡವರ ಮನೆಗಳನ್ನು ಖಾಲಿ ಮಾಡಿಸುವಂಥದ್ದು ಮತ್ತು ಅವರನ್ನು ಹೊರಗೆ ಹಾಕುವಂತಹ ಪ್ರಕರಣಗಳನ್ನು ನೋಡಿರುತ್ತೇವೆ. ಮೂರನೆಯದಾಗಿ, ಆತ್ಮಹತ್ಯೆ ಮಾಡಿಕೊಂಡಂತಹ ಕುಟುಂಬದವರಿಗೆ ಸರ್ಕಾರ ಏನು ಪರಿಹಾರ ಕೊಟ್ಟಿದೆ ಎಂಬ ಪ್ರಶ್ನೆ ಕೇಳಿದ್ದೆನು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು, "ಪರಿಹಾರ ಕೊಡುವಂತಹ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ" ಎಂದು ಉತ್ತರ

ನೀಡಿರುತ್ತಾರೆ. ಅದಾದ ನಂತರ, 'ವಿಜಯವಾಣಿ' ದಿನಪತ್ರಿಕೆಯಲ್ಲಿ ಶ್ರೀಮತಿ ದೇವೀರಮ್ಮ ಕುಟುಂಬದವರಿಗೆ ಸರ್ಕಾರದಿಂದ ರೂ.8,10,000/- ಪರಿಹಾರ ಕೊಟ್ಟಿರುತ್ತಾರೆ. ಮಂಡ್ಯ ಜಿಲ್ಲೆ...

**ಸಭಾಪತಿಯವರು:-** ಮಾನ್ಯ ಮಂಜೇಗೌಡರವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಿದ ನಂತರ, ತಾವು ಉಪಪ್ರಶ್ನೆ ಕೇಳಿ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡರವರು ಕೇಳಿದಂತಹ ಪ್ರಶ್ನೆಗೆ ಉತ್ತರ ಕೊಟ್ಟಿರುತ್ತೇನೆ. ಅದಕ್ಕೆ ಅವರು, I am not happy with the reply ಎಂದು ಹೇಳಿದ್ದಾರೆ, ಬಹಳ ಸಂತೋಷ. ಅವರು ಖುಷಿಯಾಗುವುದಕ್ಕೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರ ಏನು ಮಾಡಿದೆ, ಅಷ್ಟು ಮಾತ್ರ ಉತ್ತರ ಕೊಡಬೇಕು. **(ಗೊಂದಲ)** ಮೈಕ್ರೋ ಫೈನಾನ್ಸ್ ಕಾನೂನು ಮಾಡಿದವರು ಯಾರು ಎಂದರೆ, **(ಗೊಂದಲ)** ನಾವೇ ಮಾಡಿದ್ದು. ಕರ್ನಾಟಕ ಕಿರು ಸಾಲ ಮತ್ತು ಸಣ್ಣ(ಬಲವಂತದ ಕ್ರಮಗಳ ಪ್ರತಿ ಬಂಧಕ) ಕಾಯ್ದೆ, 2025 ಕ್ಕೆ ಆಧ್ಯಾದೇಶ ಮಾಡಿದವರು ಯಾರು ಎಂದರೆ, ಅದು ನಾವೇ. ಆ ಕಾಯ್ದೆಯನ್ನು ಅನುಷ್ಠಾನಗೊಳಿಸುವುದರಲ್ಲಿ ಸಣ್ಣ-ಪುಟ್ಟ ದೋಷಗಳು ಇರಬಹುದು. ಹಾಗೆಂದ ಮಾತ್ರಕ್ಕೆ ಇಡೀ ಕಾಯ್ದೆಯೇ ಸರಿ ಇಲ್ಲ, ಕಾಯ್ದೆ ಮಾಡಿದ್ದೇ ಸರಿಯಿಲ್ಲ ಎಂದು ಹೇಳುವಂತಹ ವಾದ ಸರಿಯಾದುದಲ್ಲ. 2023ರಲ್ಲಿ ಅಂದರೆ, ಈ ಕಾನೂನು ಜಾರಿಗೆ ತರುವುದಕ್ಕೆ ಮೊದಲು 6 ಪ್ರಕರಣಗಳು ದಾಖಲಾಗಿದ್ದವು; ಅದರಲ್ಲಿ 8 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. 2024ರಲ್ಲಿ 27 ಪ್ರಕರಣಗಳು ದಾಖಲಾಗಿದ್ದವು; ಅದರಲ್ಲಿ 6 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. 2025ರಲ್ಲಿ ಅಂದರೆ, ಈ ಕಾನೂನು ಮಾಡುವುದಕ್ಕೆ ಮೊದಲು 105 ಪ್ರಕರಣಗಳು ದಾಖಲಾಗಿದ್ದವು; ಅದರಲ್ಲಿ 24 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. 2025ನೇ ಇಸವಿ ಜನವರಿ ತಿಂಗಳ ನಂತರ ಅಂದರೆ, ಈ ಕಾನೂನು ಜಾರಿ ಮಾಡಿದ ನಂತರ, ಜನವರಿ ತಿಂಗಳಿನಲ್ಲಿ 21 ಪ್ರಕರಣಗಳು ದಾಖಲಾಗಿದ್ದು, 4 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. 2025ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ 44 ಪ್ರಕರಣಗಳು ದಾಖಲಾಗಿದ್ದು, 10 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. ಮಾರ್ಚ್ ತಿಂಗಳಿನಲ್ಲಿ 22 ಪ್ರಕರಣಗಳು ದಾಖಲಾಗಿದ್ದು, 6 ಜನ ಆತ್ಮಹತ್ಯೆ ಮಾಡಿಕೊಂಡಿದ್ದರು. ಏಪ್ರಿಲ್ ತಿಂಗಳಿನಲ್ಲಿ 10 ಪ್ರಕರಣಗಳು ದಾಖಲಾಗಿದ್ದು, ಇಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅಂದರೆ, ಪ್ರಕರಣಗಳು ಕಡಿಮೆ ಸಂಖ್ಯೆಯಲ್ಲಿ ದಾಖಲಾಗುತ್ತಾ ಬಂದವು. ಮೇ ತಿಂಗಳಿನಲ್ಲಿ 02 ಪ್ರಕರಣಗಳು ದಾಖಲಾಗಿದ್ದು, ಶೂನ್ಯ ಆತ್ಮಹತ್ಯೆ ಆಗಿರುತ್ತದೆ. ಜೂನ್ ತಿಂಗಳಿನಲ್ಲಿ 01 ಪ್ರಕರಣ ದಾಖಲಾಗಿದ್ದು, ಒಬ್ಬರು ಮಾತ್ರ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಜುಲೈ ತಿಂಗಳಿನಲ್ಲಿ 05 ಪ್ರಕರಣಗಳು ದಾಖಲಾಗಿದ್ದು, ಒಬ್ಬರು ಮಾತ್ರ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಒಟ್ಟಾರೆಯಾಗಿ, 105 ಪ್ರಕರಣಗಳು ದಾಖಲಾಗಿದ್ದು, 24 ಜನರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಅಂದರೆ, ಪ್ರತಿ ವರ್ಷ ಈ ಪ್ರಕರಣಗಳು ಕಡಿಮೆಯಾಗುತ್ತಾ ಬಂದಿವೆ. ಹಾಗಾಗಿ, ಇವರ ಪ್ರಕಾರ ಪ್ರಕರಣಗಳು ಹೆಚ್ಚಾಗಿರುವುದಿಲ್ಲ. I am making it very clear. ಪ್ರಕರಣಗಳು ಕಡಿಮೆಯಾಗುತ್ತಿವೆ.

ಇನ್ನೊಂದು ವಿಚಾರವೇನೆಂದರೆ, ಆತ್ಮಹತ್ಯೆ ಮಾಡಿಕೊಂಡಂತಹವರ ಕುಟುಂಬಗಳಿಗೆ ಪರಿಹಾರ ಕೊಡುವಂತಹ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ. ಆದರೆ, ಮಾನ್ಯ ಸದಸ್ಯರು ಒಂದು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಕೂಡ ಆರ್ಥಿಕ ಇಲಾಖೆಯವರ ಜೊತೆ ಹಾಗೂ ಮುಖ್ಯ ಕಾರ್ಯದರ್ಶಿಯವರ ಜೊತೆ ಚರ್ಚೆ ಮಾಡಿರುತ್ತೇವೆ. ಅದೇನೆಂದರೆ, ರೈತರು ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡರೆ, ಅವರ ಕುಟುಂಬ ವರ್ಗದವರಿಗೆ ಹೇಗೆ ರೂ.5,00,000/- ಪರಿಹಾರ ಹಣವನ್ನು ಸರ್ಕಾರ ಕೊಡುತ್ತದೆಯೋ ಅದೇ ರೀತಿ, ಮೈಕ್ರೋ ಫೈನಾನ್ಸ್‌ನಿಂದ ಸಾಲ ತೆಗೆದುಕೊಂಡು ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬದವರಿಗೂ ಸಹ ಸರ್ಕಾರ ರೂ.5,00,000/- ಪರಿಹಾರ ಕೊಡುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳನ್ನು ಸುಮಾರು 35 ವರ್ಷಗಳಿಂದ ನೋಡಿರುತ್ತೇನೆ. ಅವರು ಬಡವರ ಪರವಾಗಿ ಕೆಲಸ ಮಾಡುವಂತಹ ಮತ್ತು ಬಡವರ ಬಗ್ಗೆ ಹೆಚ್ಚು ಕಾಳಜಿ ಇರುವಂತಹ ಮುಖ್ಯಮಂತ್ರಿಗಳಾಗಿರುತ್ತಾರೆ. ಹಾಗಾಗಿ, ನಾನು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ಮೈಕ್ರೋ ಫೈನಾನ್ಸ್‌ನಿಂದ ಸಾಲ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವವರೆಲ್ಲರೂ ಸಹ ಬಡವರೇ ಆಗಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಡವರ ಪರವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತದೆ. ಸರ್ಕಾರ ಹೊಸ ಕಾಯ್ದೆಯನ್ನು ಜಾರಿಗೆ ತಂದು, ಮೈಕ್ರೋ ಫೈನಾನ್ಸ್‌ನಿಂದ ಸಾಲ ಪಡೆದುಕೊಂಡು ಆ ಸಾಲವನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿರುತ್ತಾರೆ. ಈ ಆತ್ಮಹತ್ಯೆ ಪ್ರಕರಣಗಳು ಶೂನ್ಯ ಆಗಬೇಕಾದರೆ, ಕಿರು ಸಾಲ ಮತ್ತು ಸಣ್ಣ ಸಾಲ ಏನಿದೆ, ಅದನ್ನು ಯಾವುದೇ surety ಇಲ್ಲದೇ ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಕೊಡಿಸಿದರೆ, ಬಡವರಿಗೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, 24 ಇದ್ದದ್ದು, 44 ಇದ್ದದ್ದು, ಒಬ್ಬರಿಗೆ ಬಂದಿದೆ. ಅಲ್ಲದೇ, 10 ಜನ ಇದ್ದದ್ದು ಕಡಿಮೆಯಾಗುತ್ತಿದೆ. ಅದರಂತೆ, ಒಬ್ಬರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನಮ್ಮ ಉದ್ದೇಶ ಈ ಆತ್ಮಹತ್ಯೆ ಪ್ರಕರಣಗಳು ಶೂನ್ಯಕ್ಕೆ ಬರಬೇಕು. ಯಾರು ಆತ್ಮಹತ್ಯೆ ಮಾಡಿಕೊಳ್ಳಬಾರದು. ಒಂದು ವೇಳೆ ಯಾರಾದರೂ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಸರ್ಕಾರ ಅವರ ಕುಟುಂಬ ವರ್ಗದವರಿಗೆ ಈ ಕಾಯ್ದೆಯಡಿಯಲ್ಲಿ ಪರಿಹಾರ ಕೊಡುತ್ತದೆ ಎಂದು ಮಾನ್ಯ ಮಂಜೇಗೌಡರವರಿಗೆ ನಾನು ಬಹಳ ಸ್ಪಷ್ಟವಾಗಿ ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಅದೇ ರೀತಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡಿಸುವುದಕ್ಕೆ ಮಾತು ಕೊಡಬೇಕೆಂದು ಕೋರುತ್ತೇನೆ.

(ಮುಂದು)

(917) 21.08.2025 5.10 ವೈಎಲ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ: 1139**
**ಕೆರೆಗಳ ಅಭಿವೃದ್ಧಿ ಕುರಿತು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಮತ್ತು ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳು ಮತ್ತು ಕಟ್ಟೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಒಟ್ಟು 3788 ಕೆರೆಗಳ ವಿವರಗಳನ್ನು ಅನುಬಂಧ-1ಎ ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಒಟ್ಟು 32068 ಕೆರೆಗಳ ವಿವರಗಳನ್ನು ಅನುಬಂಧ-1ಬಿ ರಲ್ಲಿ ಹಾಗೂ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯ ಒಟ್ಟು 2048 ಕೆರೆಗಳ ವಿವರಗಳನ್ನು ಅನುಬಂಧ-1ಸಿ ರಲ್ಲಿ ನೀಡಲಾಗಿದೆ. |
| ಆ | ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳೇನು? (ತಾಲೂಕವಾರು ಮಾಹಿತಿ ನೀಡುವುದು) | ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು ನಿರಂತರ ಪ್ರಕ್ರಿಯೆಯಾಗಿದ್ದು, ಪ್ರತಿ ವರ್ಷ ಸಣ್ಣ ನೀರಾವರಿ ಇಲಾಖೆಗೆ ವಿವಿಧ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾಗುವ ಅನುದಾನ ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿಗಳ ಅವಶ್ಯಕತೆಗೆ ಅನುಗುಣವಾಗಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ **ಸಣ್ಣ ನೀರಾವರಿ** ಇಲಾಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 83 ಕೆರೆಗಳನ್ನು ರೂ.4000.50 ಲಕ್ಷಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಕಾಮಗಾರಿಗಳಿಗೆ ಅನುಗುಣವಾಗಿ ಒಟ್ಟು ರೂ.2032.14 ಲಕ್ಷಗಳ ವೆಚ್ಚವಾಗಿರುತ್ತದೆ. ವಿವರಗಳನ್ನು ಅನುಬಂಧ-2ಎ ರಲ್ಲಿ ನೀಡಲಾಗಿದೆ |
| ಇ | ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ? (ತಾಲೂಕುವಾ ಮಾಹಿತಿ ನೀಡುವುದು) | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್** ಇಲಾಖೆಯಿಂದ ಕೈಗೊಳ್ಳಲಾದ ಕೆರೆಗಳ ಅಭಿವೃದ್ಧಿ ಕಾಮಗಾರಿಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ಬಿ ರಲ್ಲಿ ನೀಡಲಾಗಿದೆ.<br><br>**ಜಲಸಂಪನ್ಮೂಲ ಇಲಾಖೆಯಿಂದ** ಕಳೆದ 03 ವರ್ಷಗಳಲ್ಲಿ ಕೆರೆ ತುಂಬಿಸುವ ಯೋಜನೆಗಳು (ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳೂ ಒಳಗೊಂಡಂತೆ) ಹಾಗೂ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು, ಒಟ್ಟಾರೆ 227 ಕೆರೆಗಳನ್ನು ಅಭಿವೃದ್ಧಿ/ ಕೆರೆ ತುಂಬಿಸುವ ರೂ.144.40 ಕೋಟಿ ಮೊತ್ತದ ಒಟ್ಟು 92 ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಈ ಪೈಕಿ 161 ಕೆರೆಗಳನ್ನು ತುಂಬಿಸುವ/ ಅಭಿವೃದ್ಧಿಪಡಿಸುವ ರೂ.101.20 ಕೋಟಿ ಮೊತ್ತದ 26 ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದೆ. ರೂ.43.20 ಕೋಟಿ ಮೊತ್ತದ 66 |

| | | |
|---|---|---|
| | | ಕಾಮಗಾರಿಗಳು ಸರ್ಕಾರದ ಆದೇಶ ದಿನಾಂಕ:22.05.2023 ರನ್ವಯ ತಡೆಹಿಡಿಯಲಾಗಿದ್ದು, ಕಾಮಗಾರಿಗಳ ವಿವರಗಳನ್ನು ಅನುಬಂಧ-2ಸಿ ರಲ್ಲಿ ನೀಡಲಾಗಿದೆ. |
| ಈ | ಶಿವಮೊಗ್ಗ ಜಿಲ್ಲೆಯಲ್ಲಿ ಮೂಲ ರೂಪ ಕಳೆದುಕೊಂಡ ಕೆರೆಗಳ ಮತ್ತು ಕಟ್ಟೆಗಳ ಸಂಖ್ಯೆ ಎಷ್ಟು? (ತಾಲೂಕುವಾ ಮಾಹಿತಿ ನೀಡುವುದು) | ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಮೂಲ ರೂಪ ಕಳೆದುಕೊಂಡ ಕೆರೆ/ ಕಟ್ಟೆಗಳು ಯಾವುದು ಇರುವುದಿಲ್ಲ. |

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಮತ್ತು ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳು ಮತ್ತು ಕಟ್ಟೆಗಳ ಸಂಖ್ಯೆ ಎಷ್ಟು? ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಒಟ್ಟು 3,788 ಕೆರೆಗಳ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಒಟ್ಟು 32,068 ಕೆರೆಗಳಿವೆ ಎಂದು ತಿಳಿಸಿದ್ದಾರೆ. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ನಾನು ಪ್ರಶ್ನೆಯನ್ನು ಕೇಳಿದ್ದೆನು. 3 ವರ್ಷಗಳಲ್ಲಿ ಅಭಿವೃದ್ಧಿಪಡಿಸಲಾದ ಕೆರೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ಬಿ ರಡಿ ನೀಡಲಾಗಿದ್ದು, 2022-23ನೇ ಸಾಲಿನಲ್ಲಿ 457 ಕೆರೆಗಳನ್ನು ಮತ್ತು 2023-24ನೇ ಸಾಲಿನಲ್ಲಿ 593 ಕೆರೆಗಳನ್ನು ಹಾಗೂ 2024-25ನೇ ಸಾಲಿನಲ್ಲಿ 479 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಊರು ಕಟ್ಟುವ ಮೊದಲು ಕೆರೆ ಕಟ್ಟು ಎನ್ನುವಂಥ ಗಾದೆ ಮಾತಿದೆ. ಈ ಗಾದೆಯನ್ನು ನಮ್ಮ ಪೂರ್ವಜರು ಏತಕ್ಕೆ ಕೊಟ್ಟಿದ್ದಾರೆಂದರೆ, ಕೃಷಿ ಮತ್ತು ಕುಡಿಯುವ ನೀರಿನ ಸವಲತ್ತು ಸಿಗಲಿ ಎಂಬ ಕಾರಣಕ್ಕೆ ಕಟ್ಟಿರುವಂಥ ಗಾದೆಯಾಗಿದೆ. ನಾನು ಉತ್ತರವನ್ನು ಗಮನಿಸಿದಾಗ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಕೆರೆಗಳ ಸಂಖ್ಯೆ ಮತ್ತು ಲೆಕ್ಕ ಶೀರ್ಷಿಕೆ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಕೆರೆಗಳ ಸಂಖ್ಯೆಯಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2022-23ನೇ ಸಾಲಿನಲ್ಲಿ-457, 2023-24ನೇ ಸಾಲಿನಲ್ಲಿ-593, 2024-25ನೇ ಸಾಲಿನಲ್ಲಿ-479 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದ್ದು, ಲೆಕ್ಕ ಶೀರ್ಷಿಕೆಯಡಿ 2022-23ನೇ ಸಾಲಿನಲ್ಲಿ-105. 2023-24ನೇ ಸಾಲಿನಲ್ಲಿ-103, 2024-25ನೇ ಸಾಲಿನಲ್ಲಿ-46 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಲಾಗಿದೆ. ಕೆರೆಗಳ ಸಂರಕ್ಷಣೆ ಮಾಡಬೇಕು; ಕೆರೆಗಳ ಅಭಿವೃದ್ಧಿ ಮಾಡಬೇಕು; ಕುಡಿಯುವ ನೀರನ್ನು ಅಭಿವೃದ್ಧಿ ಮಾಡಬೇಕು; ಕೃಷಿಗೆ ಮಹತ್ವ ಕೊಡಬೇಕೆಂದು; ಬೆಳಗ್ಗೆ ತಾನೇ ಹೇಳಿದ್ದೆವು.

**ಸಭಾಪತಿಯವರು:-** ಮಾನ್ಯ ಸಚಿವರೇ ತಾವು ಉತ್ತರವನ್ನು ನೀಡಿ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಬಲ್ಕೀಸ್ ಬಾನುರವರು ಕೇಳಿರುವಂಥ 3 ಪ್ರಶ್ನೆಗಳಿಗೆ ಬಹಳ ವಿವರವಾಗಿ ಅನುಬಂಧದಲ್ಲಿ ಉತ್ತರವನ್ನು ನೀಡಿದ್ದೇನೆ. ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳು ಎಷ್ಟಿವೆ ಎಂದು ಪ್ರಶ್ನೆ ಕೇಳಿದ್ದು, 3,788 ಎಂದು ಹೇಳಿದ್ದೇವೆ. ಹಾಗೆಯೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯ ಕೆರೆಗಳ ಸಂಖ್ಯೆ ಎಷ್ಟೆಂದರೆ ಒಟ್ಟು 32,068 ಇದ್ದು, ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 2,048 ಕೆರೆಗಳು ಎಂದು ವಿವರವಾಗಿ ಉತ್ತರವನ್ನು ನೀಡಿದ್ದೇವೆ. ಯಾವ್ಯಾವ ಇಲಾಖೆಯಿಂದ ಎಷ್ಟೆಷ್ಟು ಖರ್ಚಾಗಿದೆ ಎಂದು ಎಲ್ಲಾ ಇಲಾಖೆಯ ವಿವರವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರಿಗೂ ಇನ್ನೂ ಏನಾಗಬೇಕಾಗಿದೆ ಎಂಬುದನ್ನು ಹೇಳಿದರೆ, ನಾನು ಅದಕ್ಕೆ ಉತ್ತರವನ್ನು ನೀಡುತ್ತೇನೆ. ಜೊತೆಗೆ 2022-23ನೇ ಸಾಲಿನಿಂದ ನಮ್ಮ ಆರ್ಥಿಕ ಇಲಾಖೆಯ ಸುತ್ತೋಲೆ ಏನಿದೆ, ಅದರನ್ವಯ ಕೆಲವು ಕೆಲಸವನ್ನು ತಡೆಹಿಡಿಯಲಾಗಿದೆ. ಶಿವಮೊಗ್ಗ ಜಿಲ್ಲೆ ಮತ್ತು ರಾಜ್ಯಕ್ಕೆ ಸಂಬಂಧಿಸಿದಂತೆ ಇಷ್ಟು ಮಾತ್ರ ಇದೆ. ಆದಾಗ್ಯೂ ಮತ್ತೇನಾದರೂ ಮಾನ್ಯ ಸದಸ್ಯರು ಕೇಳುವುದಾದರೆ ಕೇಳಲಿ ಅದಕ್ಕೆ ನಾನು ಉತ್ತರ ನೀಡುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂಥ ಮಾಹಿತಿಯ ಪ್ರಕಾರ ಇರುವಂಥ ಕೆರೆಗಳನ್ನು ನಿಧಾನವಾಗಿ ಅಭಿವೃದ್ಧಿ ಮಾಡುತ್ತಿದ್ದಾರೆ. ಅತೀ ಅವಶ್ಯಕವಾಗಿ ಇರುವಂಥದು ಕೆರೆಗಳ ಅಭಿವೃದ್ಧಿಯಾಗಿದ್ದು, ಆ ಕೆರೆಗಳನ್ನು ಅಭಿವೃದ್ಧಿ ಮಾಡಬೇಕು. ಇದು ಬಹಳ ಸದೃಢವಾಗಿರುವಂಥ ಸರ್ಕಾರವಾಗಿದ್ದು, ಇಷ್ಟು ಕೆರೆಗಳಿದ್ದರೂ ಕೂಡ 2024-25ನೇ ಸಾಲಿನಲ್ಲಿ ಕೇವಲ double digit ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹಾಗಾಗಿ ನನ್ನ ಪ್ರಶ್ನೆಯೇನೆಂದರೆ, ಇನ್ನೂ ಹೆಚ್ಚು ಕೆರೆಗಳನ್ನು ಅಭಿವೃದ್ಧಿಪಡಿಸಬೇಕು. ಹಾಗೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಅಭಿವೃದ್ಧಿಯಾಗಿರುವಂಥ ಕೆರೆಗಳ ಪಟ್ಟಿಯಲ್ಲಿ ಎಲ್ಲಾ ತಾಲ್ಲೂಕಿಗೆ ಸಂಬಂಧಿಸಿದಂತೆ ನಾನು ಹೇಳುವುದಕ್ಕೆ ಹೋಗದೇ ನನ್ನ ಕ್ಷೇತ್ರವಾದ ಭದ್ರಾವತಿ ತಾಲ್ಲೂಕಿನಲ್ಲಿರುವ ಹೊಸಮನೆ ಕೆರೆಯನ್ನು ಅಭಿವೃದ್ಧಿಪಡಿಸಲಾಗಿದ್ದು, ಕೆಲಸವು ಪ್ರಗತಿ ಹಂತದಲ್ಲಿದೆ ಎಂದು ತಿಳಿಸಿದ್ದಾರೆ. ಈ ಸದನದ ಮೂಲಕ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸಲಿಕ್ಕೆ ಇಷ್ಟಪಡುತ್ತೇನೆ. ನಾನು ಅಲ್ಲಿಗೆ ಹೋಗಿ ನೋಡಿದಾಗ ಈಗಾಗಲೇ ಅಲ್ಲಿ ಒಂದು ಬ್ರಿಡ್ಜ್ ನಿರ್ಮಾಣ ಮಾಡಲು ಮಂಜೂರು ಮಾಡಲಾಗಿದ್ದು, ಈಗಾಗಲೇ ಆ ಬ್ರಿಡ್ಜ್ ಕೆಲಸವನ್ನೂ ಪೂರ್ಣಗೊಳಿಸಿದ್ದಾರೆ. ಅಲ್ಲಿ ಕೆರೆಗಳ ಅಭಿವೃದ್ಧಿ ಕೆಲಸವೂ ಒಂದು ಸ್ವಲ್ಪ ಇಲ್ಲ. ಅದೊಂದು heart of the town ಆಗಿದ್ದು, ಅಲ್ಲಿ ಎಷ್ಟು weeds ತುಂಬಿಕೊಂಡಿದೆ ಎಂದರೆ,...

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಉತ್ತರವನ್ನು ನೀಡಿ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಅಲ್ಲಿರತಕ್ಕಂಥ ಕೆರೆಗಳಿಗೆ ನನ್ನ ಮನವಿಯೇನೆಂದರೆ, ಕೆರೆಗಳ ಅಭಿವೃದ್ಧಿ ಎಂದರೆ, ಕೇವಲ ಹೂಳು ತೆಗೆಯುವುದು ಮಾತ್ರವಾಗಿಲ್ಲ.

**ಸಭಾಪತಿಯವರು:-** ಮಾನ್ಯ ಬಲ್ಕೀಸ್ ಬಾನುರವರೇ, ಸಾಕು ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟು ಮಾತನಾಡುತ್ತೀರಿ?

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ನಮ್ಮ ಶಿವಮೊಗ್ಗ ಜಿಲ್ಲೆಯೂ ಮಲೆನಾಡು ಜಿಲ್ಲೆಯಾಗಿದೆ. ಬಹಳಷ್ಟು ಕೆರೆಗಳು ಇರುವುದರಿಂದ ಹೂಳು ತೆಗೆಯಬೇಕು; revetment ಮಾಡಬೇಕು. ಇಂತಹ ಕೆಲಸವನ್ನು ಆದಷ್ಟು ತ್ವರಿತವಾಗಿ ನಮ್ಮ ಜಿಲ್ಲೆಯಲ್ಲಿರತಕ್ಕಂಥ ನೀರಾವರಿ ಸಹಕಾರಿ ಸಂಘಗಳ ಮೂಲಕ ಮಾಡಿಸಿದರೆ ಬಹಳಷ್ಟು ಒಳ್ಳೆಯದು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಷ್ಟು ಕೆರೆಗಳಿವೆ; ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದು, ಅದರಂತೆ ಪ್ರಾಯೋಗಿಕವಾಗಿ ಭದ್ರವತಿಯಲ್ಲಿರುವಂಥ ಕೆರೆಗಳ ಬಗ್ಗೆ ಸಹ ಕೇಳಲಾಗಿದೆ. ಅದರ ಮಾಹಿತಿಯನ್ನು ಪಡೆದು ಯಾವ ರೀತಿ ಸರಿಪಡಿಸಬೇಕು, ಅದನ್ನು ಮಾಡಿಕೊಡುತ್ತೇವೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಬಲ್ಕೀಸ್ ಬಾನುರವರೇ, ಒಂದು ಸಲ, ಎರಡು ಸಲ ಪ್ರಶ್ನೆ ಕೇಳಿ. ಅದನ್ನು ಬಿಟ್ಟು ಎಷ್ಟು ಸಲ ಪ್ರಶ್ನೆ ಕೇಳುತ್ತೀರಿ?

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ತಾಲ್ಲೂಕು ಹೊಸಹಳ್ಳಿ ಏತ ನೀರಾವರಿ ಪ್ರಗತಿಯಲ್ಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಸಾರ್ವಜನಿಕರು ನನಗೊಂದು ಪತ್ರವನ್ನು ಸಹ ಕೊಟ್ಟಿದ್ದಾರೆ. ಯಾವುದೇ ತರಹ ಕಾರ್ಯಕ್ರಮ ಅಲ್ಲಿ ನಡೆಯುತ್ತಿಲ್ಲ, ಒಂದು ಪೈಸೆಯ ಕೆಲಸ ಅಲ್ಲಿ ನಡೆಯುತ್ತಿಲ್ಲ. ಇದೇ ತರಹ ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವಂಥ ಶಿವಮೊಗ್ಗದ ಶಿಕಾರಿಪುರದಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಬಲ್ಕೀಸ್ ಬಾನುರವರು ಹೇಳಿದಂತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸಂಬಂಧಿಸಿದಂತೆ ಹೇಳಿದ್ದಾರೆ. ಅದರ ಬಗ್ಗೆ ಕೆಲಸ ನಡೆಯುತ್ತಿದೆ ಎಂದು ಅಧಿಕಾರಿಗಳು ಉತ್ತರ ನೀಡಿದ್ದಾರೆ. ಆದರೆ, ಮಾನ್ಯ ಬಲ್ಕೀಸ್ ಬಾನುರವರು ಸಾರ್ವಜನಿಕರು ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ಪತ್ರ ನೀಡಿದ್ದಾರೆ ಎಂದು ತಿಳಿಸಿದ್ದು, ಅದರ ಬಗ್ಗೆ ತಕ್ಷಣವೇ ಪರಿಶೀಲನೆ ಮಾಡಿ ಸರಿಪಡಿಸುತ್ತೇನೆ.

## ಪ್ರಶ್ನೆ ಸಂಖ್ಯೆ: 1180

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಇಲ್ಲಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಕುರಿತು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ ಹುಬ್ಬಳ್ಳಿ ಆವರಣದಲ್ಲಿ ಯಾವ ಯಾವ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳನ್ನು ನಡೆಸಲಾಗುತ್ತದೆ. (ಸಂಪೂರ್ಣವಾದ ಮಾಹಿತಿಯನ್ನು ನೀಡುವುದು) | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ ಹುಬ್ಬಳ್ಳಿ ಇಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ; (see table below) |
| ಆ | ಈ ಆವರಣದಲ್ಲಿರುವ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಮಂಜೂರಾದ ಒಟ್ಟು ಹುದ್ದೆಗಳು ಎಷ್ಟು? ಅವುಗಳಲ್ಲಿ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಹುದ್ದೆಗಳು ಎಷ್ಟು? | (see table below) |
| ಇ | ಕಾನೂನು ವಿಶ್ವವಿದ್ಯಾಲಯ ಅಡಿ ವಿವಿಧ ನಗರಗಳಲ್ಲಿ ಎಷ್ಟು ಘಟಕ (Constituent) ಕಾಲೇಜುಗಳು ನಿರ್ವಹಿಸುತ್ತೀವೆ? (ಸಂಪೂರ್ಣವಾದ ವಿವರ ನೀಡುವುದು) | ಕಾನೂನು ಶಾಲೆಯು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸುಪರ್ಧಿಯಲ್ಲಿ (ಆವರಣ) ನಡೆಯುತ್ತಿದೆ. ಇದನ್ನು ಹೊರತುಪಡಿಸಿ ಯಾವುದೇ Constituent ಕಾಲೇಜುಗಳು ಇರುವುದಿಲ್ಲ. |

Answer ಅ:

| Sl. No. | Name of the course |
|---|---|
| 01 | 5 Year B.A., LL.B., (Hons.) |
| 02 | 5 Year B.B.A., LL.B., (Hons.) |
| 03 | 5 Year B.Com., LL.B., (Hons.) |
| 04 | 2 Year LL.M., (Constitutional Law) |
| 05 | 2 Year LL.M., (IPE Law ) |
| 06 | 2 Year LL.M., (Criminal Law) |

Answer ಆ:

| ಬೋಧಕ ಹುದ್ದೆಗಳು | ಮಂಜೂರಾದ ಹುದ್ದೆಗಳ ಸಂಖ್ಯೆ) | ನೇಮಕಾತಿಗಾಗಿ ಮಂಜೂರಾದ ಹುದ್ದೆಗಳ ಸಂಖ್ಯೆ | ಖಾಯಂ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ | ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿರುವ ಹುದ್ದೆಗಳ ಸಂಖ್ಯೆ |
|---|---|---|---|---|
| ಪ್ರಾಧ್ಯಾಪಕರು | 10 | 02 | 01 | |
| ಸಹ-ಪ್ರಾಧ್ಯಾಪಕರು | 17 | 04 | | |
| ಸಹಾಯಕ ಪ್ರಾಧ್ಯಾಪಕರು | 41 | 18 | 10 | 16 |
| ಒಟ್ಟು | 68 | 24 | 11 | 16 |

..2

-2-

<table>
<tr><td>ಈ</td><td>ಈ ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಿರುವ ಅಪಿಲೇಟೆಡ್ ಕಾನೂನು ಕಾಲೇಜುಗಳು ಎಷ್ಟು? ಅವುಗಳಲ್ಲಿ ಮೂರು ವರ್ಷ ಹಾಗೂ ಐದು ವರ್ಷದ ಕೋರ್ಸ್‌ಗಳನ್ನು ನಡೆಸುತ್ತಿರುವ ಕಾಲೇಜುಗಳಾವವು? (ವಿವರವಾದ ಮಾಹಿತಿಯನ್ನು ನೀಡುವುದು)</td><td>ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಕಾನೂನು ಕಾಲೇಜುಗಳ ಸಂಖ್ಯೆ: 141 ಅವುಗಳಲ್ಲಿ ಮೂರು ವರ್ಷ ಹಾಗೂ ಐದು ವರ್ಷದ ಕೋರ್ಸ್‌ಗಳನ್ನು ನಡೆಸುತ್ತಿರುವ ಕಾಲೇಜುಗಳ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಉ</td><td>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಒಟ್ಟು ಮಂಜೂರಾದ ಬೋಧಕೇತರ ಹುದ್ದೆಗಳ ಎಷ್ಟು? ಅವುಗಳಲ್ಲಿ ಖಾಯಂ/ಗುತ್ತಿಗೆ ಹಾಗೂ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?</td><td>
<table>
<tr><th>ಮಂಜೂರಾದ ಹುದ್ದೆಗಳು</th><th>ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ</th></tr>
<tr><td>ಖಾಯಂ ನೇಮಕಾತಿಗಾಗಿ ಮಂಜೂರಾದ ಹುದ್ದೆಗಳ ಸಂಖ್ಯೆ: 71</td><td>ಖಾಯಂ ನೇಮಕಾತಿಗಾಗಿ ಮಂಜೂರಾದ ಹುದ್ದೆಗಳಲ್ಲಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ 04 ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಂಖ್ಯೆ 63.</td></tr>
<tr><td>ಗುತ್ತಿಗೆ 01</td><td>ಗುತ್ತಿಗೆ =01</td></tr>
<tr><td>ಹೊರಗುತ್ತಿಗೆ ಮೇಲೆ ಮಂಜೂರಾದ ಹುದ್ದೆಗಳು: 99</td><td>ಹೊರಗುತ್ತಿಗೆ ಏಜೆನ್ಸಿ ಮುಖಾಂತರ= 91</td></tr>
</table>
</td></tr>
<tr><td>ಊ</td><td>ಈ ವಿಶ್ವವಿದ್ಯಾಲಯ ಆವರಣದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು? ಹಾಗೂ ಅವರಿಗೆ ಎಷ್ಟು ವಸತಿ ನಿಲಯಗಳು ಇವೆ; ಅವುಗಳ ಸಾಮರ್ಥ್ಯ ಎಷ್ಟು? (ವಿವರವಾದ ಮಾಹಿತಿ ನೀಡುವುದು)</td><td>
ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆ
<table>
<tr><th>ಕ್ರ. ಸಂ.</th><th>ಕೋರ್ಸ್ ಹೆಸರು</th><th>ವಿದ್ಯಾರ್ಥಿ</th><th>ವಿದ್ಯಾರ್ಥಿನಿಯರು</th></tr>
<tr><td>01</td><td>5 Year B.B.A., LL.B., (Hons.)</td><td>198</td><td>195</td></tr>
<tr><td>02</td><td>5 Year B.A., LL.B., (Hons.)</td><td>237</td><td>239</td></tr>
<tr><td>03</td><td>5 Year B.Com., LL.B., (Hons.)</td><td>45</td><td>50</td></tr>
<tr><td>04</td><td>2 Year LL.M., (Constitutional Law)</td><td>06</td><td>17</td></tr>
<tr><td>05</td><td>2 Year LL.M., (IPR Law )</td><td>04</td><td>09</td></tr>
<tr><td>06</td><td>2 Year LL.M., (Criminal Law)</td><td>06</td><td>09</td></tr>
<tr><td colspan="2">Total</td><td>496</td><td>519</td></tr>
<tr><td colspan="2">ಪ್ರಸ್ತುತ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ</td><td colspan="2">1015</td></tr>
<tr><td colspan="2">ವಸತಿ ನಿಲಯಗಳ ಹೆಸರು</td><td colspan="2">ಸಾಮರ್ಥ್ಯ</td></tr>
<tr><td colspan="2">ಬಾಲಕರ ವಸತಿ</td><td colspan="2">200</td></tr>
<tr><td colspan="2">ಬಾಲಕಿಯವರ ವಸತಿ ನಿಲಯ-01</td><td colspan="2">130</td></tr>
<tr><td colspan="2">ಬಾಲಕಿಯವರ ವಸತಿ ನಿಲಯ-02</td><td colspan="2">78</td></tr>
</table>
</td></tr>
</table>

ಸಂಖ್ಯೆ: ಲಾ-ಹೆಚ್‌ಆರ್‌ಎಮ್/131/2025

18/8

(ಎಚ್.ಕೆ ಪಾಟೀಲ್)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ನವನಗರ, ಹುಬ್ಬಳ್ಳಿ. ಇದರಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಎಷ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ; ಈಗಾಗಲೇ ಎಷ್ಟು ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ? ಮತ್ತು ಎಷ್ಟು ಮಂದಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದೆನು. ಅದರ ಜೊತೆಗೆ Affiliated Law Colleges ಎಷ್ಟು ಮತ್ತು ಯಾವ್ಯಾವ ಕೋರ್ಸ್‌ಗಳನ್ನು ನಡೆಸಲಾಗುತ್ತದೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿವೆ? ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು ವಿವರವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆಗೆ 68 ಬೋಧಕ ಹುದ್ದೆಗಳು ಮಂಜೂರಾಗಿದ್ದು, 11 ಮಂದಿ ಮಾತ್ರ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು 16 ಮಂದಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ನನಗೆ ತಿಳಿದಿರುವಂತೆ ಈ ವಿಶ್ವವಿದ್ಯಾಲಯವು ಪ್ರಾರಂಭವಾಗಿ ಸುಮಾರು 15, 16 ವರ್ಷಗಳಾಗಿದ್ದು, ಮಂಜೂರಾದ 68 ಹುದ್ದೆಗಳ ಪೈಕಿ, 11 ಖಾಯಂ ಇದ್ದು, ಗುತ್ತಿಗೆ ಆಧಾರದ ಮೇಲೆ 16 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂದರೆ, ಸುಮಾರು ಶೇಕಡ 27 ರಷ್ಟು ಮಂದಿ ಮಾತ್ರ ಇದ್ದು, ಇನ್ನು ಸುಮಾರು 60% ಖಾಲಿ ಹುದ್ದೆಗಳಿವೆ. ಹಾಗಾಗಿ, ಸುಮಾರು 60% ಖಾಲಿ ಹುದ್ದೆಗಳಿರುವುದರಿಂದ ಯಾವ ರೀತಿ ಕಾನೂನು ವಿಶ್ವವಿದ್ಯಾಲಯಕ್ಕೆ ಗುಣಮಟ್ಟದ ಶಿಕ್ಷಣ ಕೊಡಲು ಸಾಧ್ಯವಿದೆ. ಶ್ರೇಷ್ಠ ವಕೀಲರನ್ನು ತಯಾರು ಮಾಡಲಿಕ್ಕೆ ಸಾಧ್ಯವಿದೆ? ಇದು ಬಹಳ ಕಷ್ಟದ ಕೆಲಸವಾಗಿದೆ. ಇತ್ತೀಚೆಗೆ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಗೆ ಸಂಬಂಧಿಸಿದಂತೆ, ಪತ್ರಿಕೆಯಲ್ಲಿ ಪ್ರಕಟಣೆ ಬಂದಿದೆ. ಬಾರ್ ಕೌನ್ಸಿಲ್ ಆಫ್ ಇಂಡಿಯಾರವರು ಕಾನೂನು ವಿಶ್ವವಿದ್ಯಾಲಯಕ್ಕೆ ಏನೆಂದು ನಿರ್ದೇಶನ ಕೊಟ್ಟಿದ್ದಾರೆಂದರೆ, 'ಹೊಸ ಕಾಲೇಜು ತೆರೆಯಲು ಅನುಮತಿ ಕೊಡಬಾರದು; ಇರುವ ಕಾಲೇಜಗಳನ್ನು ತೀವ್ರ ತಪಾಸಣೆಗೆ ಒಳಪಡಿಸಬೇಕು; ಯಾವ ಕಾಲೇಜಿನವರು ಮಾನದಂಡಗಳನ್ನು ಪಾಲಿಸಿಲ್ಲ, ಅಂತಹ ಕಾಲೇಜುಗಳನ್ನು ನಿರ್ದಾಕ್ಷಿಣ್ಯವಾಗಿ ಬಂದ್ ಮಾಡಬೇಕು; Affiliation ವಾಪಸ್ಸು ತೆಗೆದುಕೊಳ್ಳಬೇಕೆಂದು' ನಿನ್ನೆ ದಿವಸ ವಿಜಯವಾಣಿ ದಿನ ಪತ್ರಿಕೆಯಲ್ಲಿ ವರದಿಯಾಗಿದೆ.

(ಮುಂದು)

(918) 21.08.2025/5.20/ ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ವ್ಹಿ. ಸಂಕನೂರ (ಮುಂದು):-**

ಈ ಹಿನ್ನೆಲೆಯೊಳಗೆ ನಾನು ವಿನಂತಿ ಮಾಡುವುದೇನೆಂದರೆ, ನಮ್ಮ ರಾಜ್ಯಕ್ಕೆ ಕಾನೂನು ವಿಶ್ವವಿದ್ಯಾಲಯವು ಉಳಿದ affiliated ಕಾಲೇಜುಗಳಿಗೆ ಮಾದರಿಯಾಗಿರಬೇಕು. ವಿಶ್ವವಿದ್ಯಾಲಯ ಕಾಲೇಜುಗಳಿಗೆ ಶೇಕಡಾ 60 ರಷ್ಟು ಹುದ್ದೆಗಳು ಖಾಲಿಯಿವೆ. ಹದಿನೈದು ವರ್ಷಗಳಾದರೂ ಕೂಡ ಹುದ್ದೆಯನ್ನು ತುಂಬಿಕೊಂಡಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರಿಂದ ಏನು ಆಗಬೇಕು ಎಂಬ ಬಗ್ಗೆ ಹೇಳಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ನಾನು conclude ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ. ಸಂಕನೂರರವರೇ, ಇದು ಪ್ರಶ್ನೋತ್ತರ ವೇಳೆ. ಈಗಾಗಲೇ ಆರು ನಿಮಿಷಗಳ ಸಮಯವನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಮಾನ್ಯ ಸದಸ್ಯರೇ, ತಾವು ಕೇಳಿ. ಇದು ಪ್ರಶ್ನೋತ್ತರ ವೇಳೆಯಾಗಿದೆ. ತಾವು ಭಾಷಣ ಮಾಡಿದರೆ ಹೇಗೆ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಸಚಿವರಿಗೆ ಕೇಳುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಂಡು ಮಾತನಾಡುವುದಿಲ್ಲ. ನನ್ನ ಒತ್ತಾಯವೇನೆಂದರೆ, ಅಲ್ಲಿ ಹುದ್ದೆಗಳು ಏನು ಖಾಲಿ ಇವೆ, ಅವುಗಳನ್ನು ಬೇಗ ತುಂಬಬೇಕು. ಆ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ? ಆ ಹುದ್ದೆಗಳನ್ನು ತುಂಬುವಂತಹ ಸಂದರ್ಭದೊಳಗೆ ಎಷ್ಟು ಹುದ್ದೆಗಳನ್ನು ತುಂಬಬೇಕು ಮತ್ತು ಯಾವಾಗ ಹುದ್ದೆಗಳನ್ನು ತುಂಬುತ್ತೀರಿ ಎಂದು ಮಾನ್ಯ ಸಚಿವರು ಹೇಳುತ್ತಾರೆ ಎಂಬುದು ನನಗೆ ಗೊತ್ತಿದೆ. ಒಳಮೀಸಲಾತಿ ಸಂಬಂಧವಾಗಿ ಹುದ್ದೆಗಳನ್ನು ತುಂಬುವ ಬಗ್ಗೆ ನಿಂತಿದೆ. ಮಾನ್ಯ ಸಚಿವರು ಕೂಡ ಅಲ್ಲಿಗೆ ಬಂದು ಭೇಟಿ ಮಾಡಿದ್ದೀರಿ. ನನ್ನ ವಿನಂತಿ ಏನೆಂದರೆ, ಹುದ್ದೆಗಳನ್ನು ಭರ್ತಿ ಮಾಡುವಂತಹ ಸಂದರ್ಭದಲ್ಲಿ ಆ ಕಾಲೇಜಿನಲ್ಲಿ ಅಧ್ಯಾಪಕರು ಕಳೆದ ಹದಿನೈದು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಅವರ ವಯೋಮಿತಿ ಮೀರಿ ಹೋಗಿದೆ. ಅವರು ಆ ಕಾಲೇಜನ್ನು ಅಭಿವೃದ್ಧಿ ಮಾಡಿ, ಇಲ್ಲಿಯವರೆವಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದ್ದಾರೆ. ಹೊಸ ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಹದಿನೈದು ವರ್ಷಗಳಿಂದ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಆದ್ಯತೆ ಕೊಡುತ್ತೀರಾ ಅಥವಾ weightage ಕೊಡುತ್ತೀರೋ ಹೇಗೆ? ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಪ್ರೋಫೆಸರ್‌ರಾದ ಶ್ರೀ ಎಸ್.ವ್ಹಿ. ಸಂಕನೂರರವರಿಗೆ ಸಂದರ್ಭಾನುಸಾರವಾಗಿ ಉತ್ತಮವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಏಕೆಂದರೆ, ಪ್ರಶ್ನೋತ್ತರ ಅವಧಿ ಒಂದೊಂದೇ

ಇಲಾಖೆಯಲ್ಲ, ಸರ್ಕಾರವನ್ನೇ ಒಂದು ರೀತಿ ಜಾಗೃತ ಮಾಡಬೇಕು. ತಾವು ಕೇಳಿರುವ ಪ್ರಶ್ನೆಯಲ್ಲಿ ಒಂದು ಪ್ರಶ್ನೆಯನ್ನು ಬಿಟ್ಟಿರಿ. ನೀವು Academician. ನೀವು ಹೋದಾಗ academic ದೃಷ್ಟಿಯಿಂದ ನೋಡಿ, ಎರಡು ವರ್ಷಗಳಿಂದ ಏನಿತ್ತು ಈಗ ಏನಾಗಿದೆ? ಇದನ್ನು ನೋಡಿಕೊಂಡು ಬಂದು ಪ್ರಶ್ನೆ ಕೇಳಿದ್ದರೆ, ಅದು ಇಲ್ಲಿರುವ ಎಲ್ಲರಿಗೂ ಉಪಯೋಗವಾಗುತ್ತಿತ್ತು. ಅಷ್ಟೇ ಅಲ್ಲ. ಒಟ್ಟು ಕಾನೂನು ವಿಶ್ವವಿದ್ಯಾಲಯದ ದೃಷ್ಟಿಯಿಂದ ಅನುಕೂಲವಾಗುತ್ತಿತ್ತು. ನಾನು ಸಚಿವನಾಗಿ ಅಧಿಕಾರ ವಹಿಸಿಕೊಂಡಾಗ, ಮೊದಲನೆ ಸಭೆಯನ್ನು ಅಲ್ಲಿ ಮಾಡಿದಾಗ, academic year ಗೆ ಸುಮಾರು ನಾಲ್ಕು ತಿಂಗಳು ವ್ಯತ್ಯಾಸವಿತ್ತು. ಜುಲೈ 1st ಗೆ ಪ್ರಾರಂಭ ಮಾಡಬೇಕು ಎನ್ನುತ್ತೇವೆ. ಅವರು ಅದನ್ನು ಡಿಸೆಂಬರ್ 1st ಗೆ ಪ್ರಾರಂಭ ಮಾಡುತ್ತಿದ್ದರು. ಮೊದಲನೆಯದು, ಅದನ್ನು ಸಂಪೂರ್ಣವಾಗಿ ಸೆಪ್ಟೆಂಬರ್ 1ನೇ ತಾರೀಖಿನೊಳಗಾಗಿ classes ಅನ್ನು ಪ್ರಾರಂಭ ಮಾಡಿ ಈಗ ಆಗಸ್ಟ್ 16ನಿಂದ classes ಪ್ರಾರಂಭವಾಗಿ ನಡೆದಿವೆ ಎಂಬ ಬಗ್ಗೆ ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ಏಕೆಂದರೆ, academic year ಅನ್ನು advance ಮಾಡಿಕೊಳ್ಳುತ್ತಾ ಹೋಗುವುದು ಬಹಳ ಕಠಿಣ. ಬರಿ ಎರಡು ವರ್ಷದೊಳಗೆ we have covered about four months. ಇದು ಮೊದಲನೆಯದು.

ಎರಡನೆಯದಾಗಿ, ಅಲ್ಲಿ minimum strength of students ಇಟ್ಟುಬಿಟ್ಟಿದ್ದರೆ, ನಾವು ಅದನ್ನು ಒಂದು class ಗೆ 60 intake ಇದ್ದಿದ್ದನ್ನು I have increased it to four classes. ಇವತ್ತು ಅಲ್ಲಿ 240 ವಿದ್ಯಾರ್ಥಿಗಳನ್ನು intake ಅನ್ನು ಮಾಡಿದ್ದೇವೆ. ಆನಂತರ P.G. ಕೂಡ ಹೆಚ್ಚಿಗೆ ಮಾಡಿದ್ದೇವೆ. ಅದಕ್ಕೆ ಮಂಜೂರಾತಿ ಕೊಡುವಂತಹದ್ದು, ಕಾನೂನು ಕಾರ್ಯದರ್ಶಿಗಳ ಹಂತದಲ್ಲಿ ಅಂತಿಮವಾದ ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. ಹಾಗಾಗಿ, ನಾವು ನಿರ್ಣಯ ತೆಗೆದುಕೊಂಡಿದ್ದೇವೆ.

ಆದಾದ ಮೇಲೆ ಹಣಕಾಸು ವ್ಯವಸ್ಥೆಯೊಳಗೆ ನಮ್ಮ ವಿಶ್ವವಿದ್ಯಾಲಯದೊಳಗೆ 90 ಕೋಟಿ ರೂಪಾಯಿಗಳಷ್ಟು ಡಿಪಾಸಿಟ್ ಇಟ್ಟುಕೊಂಡಿದ್ದರು. ಮಾನ್ಯ ಬಸವರಾಜ ಎಸ್ ಹೊರಟ್ಟಿಯವರಿಗೆ ಬಹಳ ಸಂತೋಷವಾಗಿತ್ತು. ಏಕೆಂದರೆ, ಆ ವಿಶ್ವವಿದ್ಯಾಲಯ ಅಲ್ಲಿ ಉಳಿದಿತ್ತು ಎಂದರೆ ಅದಕ್ಕೆ ಸನ್ಮಾನ್ಯ ಬಸವರಾಜ ಎಸ್. ಹೊರಟ್ಟಿಯವರೇ ಕಾರಣ. ಅದನ್ನು ನಿರ್ವಹಣೆ ಮಾಡಿಕೊಳ್ಳಿ ಎಂದು ಆಗಲೇ PWD Guest House ಗೆ ಕೊಟ್ಟುಬಿಟ್ಟಿದ್ದರು. ಆ Guest House ಅನ್ನು ತೆಗೆದುಕೊಂಡು ಅಲ್ಲಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದೇವೆ. ಇವತ್ತು ಸುಮಾರು 50 ಕೋಟಿ ರೂಪಾಯಿಗಳ ವೆಚ್ಚದಿಂದ ಭವ್ಯವಾದ Administrative Building ಬರುವುದಕ್ಕೆ ಪ್ರಾರಂಭವಾಗಿದೆ. ನಿಶ್ಚಿತ ಠೇವಣಿ ಇಟ್ಟಿರುವಂತಹ ಸುಮಾರು 67 ಕೋಟಿ ರೂಪಾಯಿಗಳನ್ನು ಮೂಲಭೂತ ಸೌಕರ್ಯ ಕೊಡುವುದಕ್ಕೆ

ಪ್ರಾರಂಭ ಮಾಡಿದ್ದೇವೆ. ಅಲ್ಲಿ ಅರ್ಧದಷ್ಟು ಕೆಲಸವಾಗಿದೆ. By next year, we will be able to get the whole infrastructure ready. ಆದರೆ ದುರ್ದೈವ ಎಂದರೆ, ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಸದನದಲ್ಲಿ ಇಲ್ಲ. ಅವರು ಕೂಡ ಸದನದಲ್ಲಿ ಇರಬೇಕಾಗಿತ್ತು. ಅವರು ಇಲ್ಲಿ ಇಲ್ಲ ಎಂದು ನಾನು ಇಷ್ಟೇ ಹೇಳುತ್ತೇನೆ. ತಾವು ಕೂಡ ಆರ್ಥಿಕ ಇಲಾಖೆಯವನ್ನು ಕರೆಯಿರಿ. ನಾವು ಒಂದು ಸಭೆಯನ್ನು ಮಾಡೋಣ. ಕಾನೂನು ವಿಶ್ವವಿದ್ಯಾಲಯಕ್ಕೆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಏತಕ್ಕಾಗಿ ಅನುಮೋದನೆ ಕೊಡುತ್ತಿಲ್ಲ? ಹುದ್ದೆಗಳು ಇವೆ, ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅನುಮತಿ ಕೊಡುತ್ತಿಲ್ಲ. Outsource ತೆಗೆದುಕೊಳ್ಳಬೇಡಿ, contract basis ತೆಗೆದುಕೊಳ್ಳಬೇಡಿ. ಹುದ್ದೆ ಇಲ್ಲದೇ ಸಂದರ್ಶನ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಹೇಗೆ ಹೇಳುತ್ತೀರಾ? ವಿಶ್ವವಿದ್ಯಾಲಯವನ್ನು ಹೇಗೆ ಬಂದ್ ಮಾಡುತ್ತೀರಾ ಎಂದು ಹೇಳಿ ಇದೊಂದು ವಿಶ್ವವಿದ್ಯಾಲಯ ಸಲುವಾಗಿಯಲ್ಲ, even ಕರ್ನಾಟಕ ವಿಶ್ವವಿದ್ಯಾಲಯ ಸಲುವಾಗಿ ನೀವು ನಮ್ಮ ಜೊತೆ ಚರ್ಚೆ ಮಾಡಿದ್ದೀರಿ. ಅದರಿಂದ ಸಂಬಂಧಪಟ್ಟಿರುವಂತಹ ಆರ್ಥಿಕ ಕಾರ್ಯದರ್ಶಿಯವರನ್ನು ಸಹ ಕರೆದು ಸಭೆ ಮಾಡಿ, ಹುದ್ದೆಗಳು ಹಾಗೆಯೇ ಮುಂದುವರೆಯುತ್ತಿವೆ. ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆ ಇದೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಸದಸ್ಯರೇ, ತಾವು ಎಷ್ಟು ಪ್ರಶ್ನೆ ಕೇಳುತ್ತೀರಿ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಚಿವರೇ, ಇಲ್ಲ. ಈಗ ಆರ್ಥಿಕ ಇಲಾಖೆಯವರು ಈಗಾಗಲೇ

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಸದಸ್ಯರೇ, ಬೆಳಗ್ಗೆಯಿಂದ ಸಾಯಂಕಾಲದ ತನಕ ಏನೂ ಬೇಕಾದರೂ ಮಾಡಿಕೊಳ್ಳಬಹುದು. ಸುಮ್ಮನೆ...

**ಶ್ರೀ ಎಸ್.ವ್ಹಿ. ಸಂಕನೂರ:-** ಅದು ಹದಿನೈದು ವರ್ಷಗಳ ವಿಶ್ವವಿದ್ಯಾಲಯವಾಗಿದೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ಮಾನ್ಯ ಸಚಿವರೇ, ಅವರು ಅಲ್ಲಿ ಇರುತ್ತಾರೆ. ಇಲ್ಲಿ ಬರೀ ನಾಟಕ...

**ಶ್ರೀ ಕೇಶವ ಪ್ರಸಾದ್ ಎಸ್:-** ಮಾನ್ಯ ಸಭಾಪತಿಯವರೇ, ....

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರೇ, ನಿಮಗೆ ಏನು screw ಹಾಕಬೇಕಾ? ತಾವು ಸುಮ್ಮನೆ ಕುಳಿತುಕೊಳ್ಳಿ. ನೀನು ಎಲ್ಲವನ್ನೂ ಹೇಳಬೇಡ. ಇದೇನೂ ಆಟ ಆಡುತ್ತಿದ್ದೀರಾ?

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಷಯವಾಗಿದೆ. ಇದನ್ನು ನಾನು ಏತಕ್ಕೆ ಹೇಳಿದ್ದೇನೆ ಎಂದರೆ, ಬಾರ್ ಕೌನ್ಸಿಲ್‌ನವರು ಸೂಚನೆಯನ್ನು ಕೊಟ್ಟಿದ್ದಾರೆ. ಇವರು ಕಾಲೇಜು ನಡೆಸುವ ಮಾದರಿ ಇಲ್ಲವೆಂದರೆ, ಮತ್ತೊಂದು ಕಾಲೇಜಿಗೆ ಇವರು affiliation ಹೇಗೆ withdraw ಮಾಡುವುದಕ್ಕೆ ಬರುತ್ತದೆ? ನಾವು ಮೊದಲು model ಇರಬೇಕು. ನಾವು model ಇದ್ದರೆ, ಉಳಿದ affiliated college ಇರುವ ಹಾಗೆ ನಾವು model ಇರುವಂತೆ ಹೇಳುವುದಕ್ಕೆ ಬರುತ್ತದೆ. ಆದಷ್ಟು ಬೇಗ ಮಾಡಿ. ಇದು urgent ಇದೆ.

**ಶ್ರೀ ಹೆಚ್. ಕೆ. ಪಾಟೀಲ್:-** ಮಾನ್ಯ ಎಸ್.ವ್ಹಿ. ಸಂಕನೂರರವರೇ, model ಎಲ್ಲಿ ಇದೆ? ಈಗ type of examination ಬಗ್ಗೆ ಹೇಳುವುದಾದರೆ, we all must compliment that Dean Mrs. Bharamagoudar and the Vice-Chancellor. ನಾನು ತಮಗೆ ಹೇಳುತ್ತೇನೆ. Online question paper ಎಲ್ಲಿಯಾದರೂ successful ಆಗಿ ಇವತ್ತು operation ನೊಳಗೆ ಇತ್ತು ಎಂದರೆ, ನಮ್ಮ traditional ವಿಶ್ವವಿದ್ಯಾಲಯದೊಳಗೆ ಎಂದರೆ ಅದು ಹುಬ್ಬಳ್ಳಿ ಕಾನೂನು ವಿಶ್ವವಿದ್ಯಾಲಯದೊಳಗೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ಆರ್ಥಿಕ ಇಲಾಖೆಯವರು ಈಗಾಗಲೇ 14 ಹುದ್ದೆಗಳಿಗೆ ಮಂಜೂರಾತಿ ಕೊಟ್ಟು, ಅಧಿಸೂಚನೆ ಹೊರಡಿಸಿದ್ದು ಇದೆ. ಇದನ್ನು ಆರ್ಥಿಕ ಇಲಾಖೆಯವರು ಕೇಳುವಂತಹ ಅವಶ್ಯಕತೆ ಇಲ್ಲ. ಒಳ ಮೀಸಲಾತಿಯನ್ನು ಪ್ರಕಟ ಮಾಡಿದಿರಿ. ದಯವಿಟ್ಟು, ಆರ್ಥಿಕ ಇಲಾಖೆಯವರು ಮಂಜೂರಾತಿ ಕೊಟ್ಟಿರುವಂತಹ 14 ಹುದ್ದೆಗಳೇನಿವೆ, ಇದಕ್ಕೆ ತಕ್ಷಣ call for ಮಾಡುವುದಕ್ಕೆ ಹೇಳಿ. ಹೆಣ್ಣು ಮಕ್ಕಳ ಸಂಖ್ಯೆ admissions ಬಹಳ ಚೆನ್ನಾಗಿ ಆಗಿದೆ. ಆದರೆ ಅಲ್ಲಿ ವಸತಿ ಇಲ್ಲ. ಶಿವಮೊಗ್ಗ, ಕಾರವಾರ, ವಿಜಯಪುರ, ಬಾಗಲಕೋಟೆಯಿಂದ ಬರುತ್ತಾರೆ. ಮೆರಿಟ್ ಪ್ರಕಾರ admission ಸಿಕ್ಕಿರುತ್ತದೆ. ನವನಗರದಲ್ಲಿ ಅವರು ಎಲ್ಲಿ ಹೋಗಿ ಇರಬೇಕು?. ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಲು ಕಟ್ಟಡದ ಅವಶ್ಯಕತೆ ಇದೆ. ದಯವಿಟ್ಟು, ಅದನ್ನು ಮಂಜೂರು ಮಾಡಿಸಿ. ರಾಜ್ಯ ವ್ಯಾಪ್ತಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಹಳೆಯ ಕಾರು ಇದೆ. ನಮ್ಮ ಹಣಕಾಸಿನೊಳಗೆ ಇನ್ನೊಂದು ಕಾರು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ, ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಡುತ್ತಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಕರೆಸಬೇಕೆಂದರೆ, "ಕಾರು ಹಳೆಯದಾಗಿದೆ, ಇನ್ನೊಂದು ತೆಗೆದುಕೊಳ್ಳುತ್ತೇವೆ; ನೀವು ಕೊಡಬೇಡಿ, ನಮ್ಮ ಹಣದೊಳಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ, ಅದಕ್ಕೂ ಆರ್ಥಿಕ ಇಲಾಖೆಯವರು

ಅನುಮತಿಯನ್ನು ಕೊಡುತ್ತಿಲ್ಲ. ತಾವು ಸಚಿವರಾಗಿದ್ದು, ದಯವಿಟ್ಟು, ತಮ್ಮ ಅವಧಿಯಲ್ಲಿ ಏನಾದರೂ ಮಾಡಿಸಿ. ಮಾನ್ಯ ಬಸವರಾಜ ಎಸ್ ಹೊರಟ್ಟಿಯವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಈ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದು.

**ಶ್ರೀ ಹೆಚ್. ಕೆ. ಪಾಟೀಲ್:-** ನಾನು ಸಚಿವನಾಗಿದ್ದಾಗ, ಕುಲಪತಿಗಳು ಕೇಳಿಲ್ಲ, ಪತ್ರ ಬರೆದಿಲ್ಲ, approach ಆಗಿರುವುದಕ್ಕಿಲ್ಲ. ನನ್ನ ಕೈಕೆಳಗೆ ಬರುವಂತಹ ಮತ್ತು ನಮ್ಮ ಇಲಾಖೆಯ ಕೈಕೆಳಗೆ ಬರುವಂತಹ ಕುಲಪತಿಯವರಿಗೆ ಒಂದು ಒಳ್ಳೆಯ ಕಾರು ತೆಗೆದುಕೊಳ್ಳುವುದರಲ್ಲಿ ಏನಿದೆ? ಯಾರದಾರದೂ ಕಾರು ತಂದು ಅಲ್ಲಿ ಇಟ್ಟುಕೊಂಡಿರುವುದು, ಅವರೊಬ್ಬರನ್ನು pursue ಮಾಡಿರುವುದಕ್ಕಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ಎರಡು ಸಲ reject ಮಾಡಿದ್ದಾರೆ.

**ಶ್ರೀ ಹೆಚ್. ಕೆ. ಪಾಟೀಲ್:-** ಮಾನ್ಯ ಸದಸ್ಯರೇ, ಸುಮಾರು 70 ಕೋಟಿ ರೂಪಾಯಿಗಳ ಮೂಲಭೂತ ಸೌಕರ್ಯವನ್ನು ಮಾಡುವುದಕ್ಕೆ ಸಿದ್ಧಪಡಿಸಿದ್ದೇವೆ. ಎಲ್ಲಾ ರೀತಿಯಿಂದ expand ಮಾಡಿದ್ದೇವೆ. ಇನ್ನು ಮಾಡಿಲ್ಲ ಎಂದರೆ ಏನು? ನೀವು ನನ್ನ ಮೇಲೆ ಫಿರ್ಯಾದಿ ಹೇಳುವಂತಹದ್ದು ಪ್ರಶ್ನೆ ಇರಬಹುದು. ಅವರು ನಿಮ್ಮ ಎದುರಿಗೆ ಏನಾದರೂ ಅಸಮಾಧಾನ ತೋಡಿಕೊಂಡಿರಬಹುದು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ತಮ್ಮ ಹತ್ತಿರ ಹೇಳುವುದಕ್ಕೆ ಮುಜುಗರವಾಗಿರುವುದನ್ನು ಕೇಳಿದ್ದೇನೆ.

**ಶ್ರೀ ಹೆಚ್. ಕೆ. ಪಾಟೀಲ್:-** ಮುಜುಗುರ ಅಂದರೆ ಏನು?

**ಶ್ರೀ ಎಸ್.ವ್ಹಿ. ಸಂಕನೂರ:-** ನಾವು ಹೋದಾಗ ಎರಡು ಬಾರಿ ತೋರಿಸಿ, ಅವರು ನಮಗೆ ಪತ್ರ ಕೊಟ್ಟಿದ್ದಾರೆ.

**ಶ್ರೀ ಹೆಚ್. ಕೆ. ಪಾಟೀಲ್:-** ಇದು ನನಗೆ ಮತ್ತು ತಮಗೆ ಇಬ್ಬರ ಗೌರವ ಹಾಗೂ ಸದನದ ಘನತೆಗೆ ತಕ್ಕದ್ದಲ್ಲ. ಕಾರು ಕೊಟ್ಟಿಲ್ಲ, ಕಾರು ತೆಗೆದುಕೊಂಡಿಲ್ಲ ಎಂದು ಹೇಳಿದರೆ...

**ಶ್ರೀ ಎಸ್.ವ್ಹಿ. ಸಂಕನೂರ:-** ಅದು ಇಲ್ಲಿಯ ತನಕ ಹೋಗಬಾರದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಸಾಕು ಮಾಡಿ. ಮಾನ್ಯ ಜವರಾಯಿ ಗೌಡರವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ: 1117**

**ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಗೆ ತಂದಿರುವ ಕುರಿತು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ 2024 ಅನ್ನು ಜಾರಿಗೆ ತರಲಾಗಿದೆಯೇ, ಹಾಗಿದ್ದಲ್ಲಿ, ಸರ್ಕಾರದ ಅಧಿಸೂಚನೆ/ ಆದೇಶದ ಪ್ರತಿಯೊಂದಿಗೆ ಹಾಗೂ ಪ್ರದೇಶವಾರು ಮ್ಯಾಪ್‌ನ (ನಕ್ಷೆ) ಪ್ರತಿಯೊಂದಿಗೆ ಮಾಹಿತಿ ಒದಗಿಸುವುದು; | • ಹೌದು.<br>• ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 100 ಬಿಬಿಎಸ್ 2025 (ಭಾ-2), ದಿನಾಂಕ:14-05-2025ರಂತೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 ಅನ್ನು ದಿನಾಂಕ:15-05-2025ರಿಂದ ಜಾರಿಗೆ ತರಲಾಗಿದೆ. ಅಧಿಸೂಚನೆಯ ಪ್ರತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 100 ಬಿಬಿಎಸ್ 2025 (ಭಾ-2), ದಿನಾಂಕ:15-05-2025ರಂತೆ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ" ವ್ಯಾಪ್ತಿಯ ಪ್ರದೇಶವನ್ನು "ಗ್ರೇಟರ್ ಬೆಂಗಳೂರು ಪ್ರದೇಶ" ವೆಂದು ಗೊತ್ತುಪಡಿಸಲಾಗಿದೆ. ಅಧಿಸೂಚನೆಯ ಪ್ರತಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಆ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಎಷ್ಟು ನಗರ ಪಾಲಿಕೆಗಳಾಗಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ; (ನಿರ್ದಿಷ್ಟಪಡಿಸಿದ ಗಡಿಗಳ ವಿವರಗಳನ್ನು ಮ್ಯಾಪ್‌ನೊಂದಿಗೆ (ನಕ್ಷೆ) ವಿವರಣೆ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 170 ಬಿಬಿಎಸ್, ದಿನಾಂಕ:19-07-2025ರಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ 5 ಸಂಖ್ಯೆಯ ನಗರ ಪಾಲಿಕೆಗಳನ್ನು ಸ್ಥಾಪಿಸಲು ಅಧಿಸೂಚನೆಯನ್ನು ಹೊರಡಿಸಿ, 30 ದಿನಗಳ ಕಾಲಾವಧಿಯನ್ನು ನಿಗದಿಪಡಿಸಿ ಆಕ್ಷೇಪಣೆ ಅಥವಾ ಸಲಹೆಗಳನ್ನು ಆಹ್ವಾನಿಸಲಾಗಿದೆ. ಸದರಿ ಅಧಿಸೂಚನೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ. |
| ಇ) | ವಿಭಜಿಸಿದ ನಗರ ಪಾಲಿಕೆಗಳಲ್ಲಿ ಬರುವ ವಾರ್ಡ್‌ಗಳು ಸಂಪೂರ್ಣವಾಗಿ ಆಯಾ ವಿಧಾನ ಸಭಾ ಕ್ಷೇತ್ರದೊಳಗಡೆಯೆ ಬರಲಿವೆಯೇ: (ವಿವರಣೆ ನೀಡುವುದು) | ನಗರ ಪಾಲಿಕೆಗಳ ಗಡಿ ನಿಗದಿಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಿದ ನಂತರ, ವಾರ್ಡ್‌ಗಳ ಪುನರ್‌ವಿಂಗಡಣೆಗೆ ನಿಯಮಾನುಸಾರ ಕ್ರಮ ವಹಿಸಲಾಗುವುದು. |
| ಈ) | ವಿಭಜಿಸಿದ ನಗರ ಪಾಲಿಕೆ ವ್ಯಾಪ್ತಿಗೆ ಬರುವ ಮತ್ತು ಆಯಾ ವಿಧಾನ ಸಭಾ ಕ್ಷೇತ್ರಗಳಿಗೆ ಬರುವ ವಾರ್ಡ್‌ಗಳ ಹೆಸರುಗಳಾವುವು? (ಹೆಸರುಳ್ಳ ಪಟ್ಟಿಯನ್ನು ಒದಗಿಸುವುದು) | |

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆಯನ್ನು ಜಾರಿಗೆ ತರಲಾಗಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರ್. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಎಷ್ಟು ನಗರ ಪಾಲಿಕೆಗಳಾಗಿ ಮಾಡುತ್ತೀರಾ ಎಂದು ಪ್ರಶ್ನೆಯನ್ನು ಕೇಳಿದ್ದೆ. ಐದು ಮಹಾನಗರ ಪಾಲಿಕೆಗಳನ್ನು ರಚಿಸುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಪಾಲಿಕೆಗಳಲ್ಲಿ ಆಯಾಯ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳು ಆಯಾಯ ಕಾರ್ಪೋರೇಷನ್‌ನೊಳಗೆ ಬರುತ್ತವೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಇನ್ನೂ ಕಾಲಾವಧಿಯನ್ನು ನಿಗದಿಪಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಇನ್ನೂ Draft notification ನ್ನು ಕೊಟ್ಟಿದ್ದೇವೆ, ಇನ್ನೂ ಅಂತಿಮ ಅಧಿಸೂಚನೆ ಹೊರಡಿಸಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಗರಪಾಲಿಕೆಗಳ ಗಡಿಗಳನ್ನು ಇನ್ನೂ ನಿಗದಿಪಡಿಸಿ, ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ವಾರ್ಡ್‌ಗಳ ಪುನರ್ ವಿಂಗಡಣೆಗೆ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ. (ಮುಂದು)

(919) 21.08.2025 5.30 TCH-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎನ್.ಜವರಾಯಿಗೌಡ (ಮುಂದು)**

ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ನವೆಂಬರ್‌ನಲ್ಲಿ ಚುನಾವಣೆಯನ್ನು ನಡೆಸುತ್ತೇವೆಂದು ಸರ್ವೋಚ್ಚ ನಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ. ಇನ್ನು 5 ನಗರ ಪಾಲಿಕೆಗಳ ಗುಡಿಯನ್ನೇ ಗುರುತಿಸುವುದಕ್ಕೆ ಆಗಿಲ್ಲ. ಅದು ಇನ್ನೂ objection ಹಂತದಲ್ಲಿದೆ. ಇದಾದನಂತರ ವಾರ್ಡ್‌ಗಳ ಗಡಿರೇಖೆಗಳನ್ನು ಗುರುತಿಸಿ ಅದಕ್ಕೆ 30 ದಿನಗಳ objections call ಮಾಡಬೇಕು. ಅದು final ಆದನಂತರ category ಮಾಡಿ ನವೆಂಬರ್‌ನೊಳಗೆ ಮುಗಿಸುವುದಕ್ಕೆ ಆಗುತ್ತದೆಯೇ ಎನ್ನುವುದರ ಬಗ್ಗೆ ಉಪ ಪ್ರಶ್ನೆಯನ್ನು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ರವರು ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂಥವರು. ಗೌರವಾನ್ವಿತವಾಗಿ ಇವರು ಕೂಡ ಸದಸ್ಯರಾಗಿ ಇರಬೇಕೆಂದು ನಾವು ಅವರನ್ನು ಕೂಡ Joint Selection Committee ಯ Member ಕೂಡ ಮಾಡಿದ್ದೇವೆ. ಈಗ ತಮಗೆಲ್ಲಾ ಗೊತ್ತಿರುವಂತೆ ದಿನಾಂಕ 15.05.2025 ಈ G.B. Act (The Greater Bengaluru Governance Act) ಜಾರಿಗೆ ಬಂದಿದೆ. ಬಿ.ಬಿ.ಎಂ.ಪಿ ಏರಿಯಾವನ್ನು ನಾವು ದಿನಾಂಕ 15.05.2025 ರಂದೇ declare ಮಾಡಿದ್ದೇವೆ. ದಿನಾಂಕ 19.07.2025 ರಂದು 5 ಕಾರ್ಪೋರೇಷನ್

ಮಾಡಿದ್ದೇವೆ. ದಿನಾಂಕ 18.08.2025ರವರೆಗೂ 1 ತಿಂಗಳ ಕಾಲ ನೊಟಿಫಿಕೇಷನ್ ಇಶ್ಯೂ ಮಾಡಿ objections ಮತ್ತು suggestions ಗೆ ನಾವು ಅವಕಾಶ ಮಾಡಿಕೊಟ್ಟಿದ್ದೆವು. ನಾವು 4 ಭಾಗಗಳಾಗಿ ಮಾಡಿದ್ದೇವೆ. ಈಗ ಕೆಲವು ಕ್ಷೇತ್ರಗಳು ಭಾಗವಾಗಿವೆ. ದಾಸರಹಳ್ಳಿ North and West ಗೆ ಸೇರಿದೆ. ಆರ್.ಆರ್.ನಗರ North, South and West ಗೆ ಬಂದಿದೆ, ಪದ್ಮನಾಭನಗರ South and West ಗೆ ಬಂದಿದೆ, ಮಹದೇವಪುರ South and East ಗೆ ಬಂದಿದೆ ಮತ್ತು ಯಶವಂತಪುರ South ಗೆ ಬಂದಿದೆ. ಇನ್ನೂ ಕೆಲವು ಏರಿಯಾಗಳನ್ನು ಮುಂದಕ್ಕೆ ಸೇರಿಸಬೇಕಾಗಿದೆ, ಇದು ತಮಗೆಲ್ಲರಿಗೂ ಗೊತ್ತಿದೆ. ಈಗ ಇನ್ನು ದಿನಾಂಕ 01.11.2025ಕ್ಕೆ delimitation ಇದೆ. ಅದೇ ಒಂದು separate team ಇದೆ. corporation ಈಗ ಇರುವಂತಹ Commissioner ವ್ಯಾಪ್ತಿಯಲ್ಲಿ ಅವರಿಗೆ ಕೊಟ್ಟಿದ್ದೇವೆ, ಅವರು ಅದನ್ನು ಮಾಡುತ್ತಾರೆ. ಈಗ ನಾವು ಅದನ್ನು ಮಾಡುವಂತಹ ಸಂದರ್ಭ ಇಲ್ಲ. ನಾವೇನು ಈಗ affidavit ಅನ್ನು ಕೋರ್ಟ್‌ಗೆ ಸಲ್ಲಿಸಿದ್ದೇವೆ, ಅದರ ಬಗ್ಗೆ ಈಗಾಗಲೇ timeline ನಲ್ಲೇ ಇದೆ. ನಾವು ಯಾವುದೂ ಇದಕ್ಕೆ ಮಾಡಿಲ್ಲ. ನಿನ್ನೆತಾನೆ ನಾನು State Election Commission ಗೆ ನೀವು ಚುನಾವಣೆ ಮಾಡಬೇಕೆಂದು ಅಧಿಕಾರ ಕೊಡುವುದಕ್ಕೂ ಕೂಡ ನಾನು ಸಹಿ ಹಾಕಿದ್ದೇನೆ. ಏಕೆಂದರೆ ಒಂದು ದಿನ ಕೂಡ lapse ಆಗಬಾರದು. ಆದಷ್ಟುಬೇಗ ಒಂದು ಚುನಾಯಿತ ಪ್ರತಿನಿಧಿಗಳು ಅಧಿಕಾರಕ್ಕೆ ಬರಬೇಕೆಂಬ ದೃಷ್ಟಿಯಿಂದ ನಾವು ಆ timeline ನಲ್ಲಿದ್ದೇವೆ. ಇನ್ನು ಉಳಿದಂತಹ delimitation ward, ಅದು 01.11.2025ಕ್ಕೆ ಏನಾಗುತ್ತದೋ ಅದಾದ ನಂತರ notify ಮಾಡುತ್ತೇವೆ. ಈಗ ಅದನ್ನು notify ಮಾಡುವುದಕ್ಕೆ ಬರುವುದಿಲ್ಲ. ಇನ್ನು ಬೇರೆ ವ್ಯಾಪ್ತಿ ಯಾವ್ಯಾವ corporation ನಲ್ಲಿ ಏನೇನು ಬಂದಿದೆ ಅದಕ್ಕೂ notification ಇದೆ. ಮಾನ್ಯ ಸದಸ್ಯರಿಗೆ ಅದು ತಲುಪಿಲ್ಲವೆಂದರೆ, ಬೇಕಾದರೆ ನಾನು ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಯಾವ ಏರಿಯಾದಲ್ಲಿ boundary ಏನಿದೆ ಅದೆಲ್ಲಾ ಈಗಾಗಲೇ ಗೆಜೆಟ್ ನೋಟಿಫಿಕೇಷನ್ ಮಾಡಲಾಗಿದೆ. ಯಾವುವು north, south ಯಾವುದು ಎಲ್ಲಿಗೆ ಹೋಗುತ್ತದೆ, ಎಲ್ಲಿಗೆ ಬರುತ್ತದೆಂದು ನಾನು ಅವರಿಗೆ ತಲುಪಿಸುತ್ತೇನೆ. ಏಕೆಂದರೆ ಇದು public document. ಬೇಕಾದರೆ ತಮಗೆ ಈಗಲೇ ಕಳುಹಿಸಿಕೊಡುತ್ತೇನೆ. ದಿನಾಂಕ 19.07.2025ರಂದು 1,170 ವಾರ್ಡ್‌ಗಳಿಗೆ ನೋಟಿಫಿಕೇಷನ್ ಆಗಿದೆ. ಇನ್ನು ಏನಾದರೂ ಈ ವಿಚಾರದಲ್ಲಿ ಅವರಿಗೆ confusion ಇದ್ದಲ್ಲಿ ಮಾನ್ಯ ಸದಸ್ಯರು ಹೇಳಬೇಕು.

**ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಕಾಳಜಿ ಏನೆಂದರೆ, ಚುನಾವಣೆ ನಡೆದು ಸುಮಾರು 10 ವರ್ಷಗಳಾಗಿದೆ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು 3

ವರ್ಷಗಳು ಆಯಿತು. ಈಗಲಾದರು ಕೂಡ ಮಹಾನಗರ ಪಾಲಿಕೆಯ ಚುನಾವಣೆ ನಡೆಸಿ ಸ್ಥಳೀಯರ ಕೈಗೆ ಆಡಳಿತವನ್ನು ಕೊಟ್ಟರೆ ಸರ್ಕಾರಕ್ಕೆ ಹೊರೆ ಕಡಿಮೆಯಾಗುತ್ತದೆ. ಬೆಂಗಳೂರಿನಲ್ಲಿ ಮಳೆ ಬಂದಾಗ garbage ಸಮಸ್ಯೆ ಮತ್ತು ಹಲವಾರು ನೀರಿನ ಸಮಸ್ಯೆಗಳು ಬರುತ್ತಿವೆ. ಇವನ್ನೆಲ್ಲಾ ಸ್ಥಳೀಯವಾಗಿ ಆಯ್ಕೆಯಾಗಿ Corporator ರವರು ಮಾಡತಕ್ಕಂಥ ಕೆಲಸವನ್ನು ಇವತ್ತಿನ ದಿವಸ ಶಾಸಕರು ಮತ್ತು ಮಾನ್ಯ ಸಚಿವರುಗಳು ಮಾಡುತ್ತಿದ್ದಾರೆ. ಅದನ್ನು ತಪ್ಪಿಸಿ ಸ್ಥಳೀಯವಾಗಿ ಚುನಾವಣೆ ಮಾಡಿ ಅಧಿಕಾರವನ್ನು ಅವರಿಗೆ ಕೊಡಬೇಕೆಂದು ನಾನು ತಮ್ಮಲ್ಲಿ ನಾನು ಮನವಿ ಮಾಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಆಗಬಹುದು. ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡರವರ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ.1236**

**ಹಾಸನ ಜಿಲ್ಲೆಯ ಹೇಮಾವತಿ ಮತ್ತು ಯಗಚಿ ನದಿಅರಿವುಗಳನ್ನ ಗ್ರಾಮಗಳ ಕುರಿತು**

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಮತ್ತು ಯಗಚಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳು ಯಾವುವು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಯೋಜನೆಗಳಡಿಯಲ್ಲಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ ಹಾಗೂ ಯಗಚಿ ಯೋಜನೆಯಡಿಯಲ್ಲಿ ಯಾವುದೇ ಗ್ರಾಮವು ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವುದಿಲ್ಲ. |
| ಆ) | ಶೀತಪೀಡಿತವಾಗಿಲ್ಲವೆಂದು ಘೋಷಿಸಲ್ಪಟ್ಟಿರುವ ಗ್ರಾಮಗಳಲ್ಲಿ ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿದೆ; (ಈ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು) | ಶೀತಪೀಡಿತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ 12 ಸಂಖ್ಯೆಯ ಕಾಮಗಾರಿಗಳನ್ನು ರೂ.16.42 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಇ) | ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿರುವುದಿಲ್ಲವೆಂದು ಸರ್ಕಾರವೇ ಘೋಷಿಸಿರುವುದು ನಿಜವೇ; ಇದ್ದಲ್ಲಿ, ವಿವರಿಸುವುದು; | ಹೌದು. ಸರ್ಕಾರದ ಆದೇಶ ಸಂಖ್ಯೆ: ಕಂಇ/07ಎಕ್ಯೂಹೆಚ್ 2021 ಬೆಂಗಳೂರು, ದಿನಾಂಕ:27-08-2021 ರಲ್ಲಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಗ್ರಾಮವನ್ನು ಶೀತಪೀಡಿತವಾಗಿರುವುದಿಲ್ಲವೆಂದು ಘೋಷಿಸಲಾಗಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |
| ಈ) | ಸರ್ಕಾರದ ಆದೇಶದನ್ವಯ ಸದರಿ ಗ್ರಾಮವು ಶೀತವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; ಮಾಡಿದ್ದಲ್ಲಿ, ಅಭಿವೃದ್ಧಿ ಕಾರ್ಯಗಳ ಮತ್ತು ಪೂರ್ಣಗೊಂಡ ಕಾಮಗಾರಿಗಳ ಸಂಪೂರ್ಣ ಮಾಹಿತಿ ನೀಡುವುದು; | ಈ ಆದೇಶದನ್ವಯ, ತಾಂತ್ರಿಕ ಸಮಿತಿಯ ಸದಸ್ಯರುಗಳ ಶಿಫಾರಸ್ಸಿನಂತೆ ಶೀತಪೀಡಿತವಾಗುವುದನ್ನು ತಡೆಗಟ್ಟಲು ತಾಂತ್ರಿಕ ಮಾರ್ಗೋಪಾಯಗಳನ್ನು ಅಳವಡಿಸುವ ಕಾಮಗಾರಿಗಳಾದ ಕಟ್‌ಆಫ್ ನಾಲೆ/ ಟ್ರೆಂಚ್, ಸೀಪೇಜ್ ಡ್ರೇನ್, ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಮುಂತಾದವುಗಳನ್ನು ಕೈಗೊಳ್ಳಲು ರೂ.27.75 ಕೋಟಿಗಳ ಅವಶ್ಯಕತೆ ಇರುವುದಾಗಿ ಅಂದಾಜಿಸಲಾಗಿದೆ. ವಿವರವಾದ ಯೋಜನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುವುದು. |
| ಉ) | ಪ್ರಸ್ತುತ ಬಾಕಿಯಿರುವ ಅಭಿವೃದ್ಧಿ ಕಾಮಗಾರಿಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | ಈಗಾಗಲೇ ಕೈಗೆತ್ತಿಕೊಂಡಿರುವ 12 ಸಂ. ಕಾಮಗಾರಿಗಳ ಪೈಕಿ 10 ಸಂ. ಸಂಖ್ಯೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದಂತೆ ಕೆ.ಶಿಂಗೇನಹಳ್ಳಿ ಗ್ರಾಮದ ಕಾಮಗಾರಿಗಳ ಸಂಬಂಧ ನ್ಯಾಯಾಲಯ ಪ್ರಕರಣವಿದೆ ಮತ್ತು ಪ್ರಗತಿಯಲ್ಲಿರುವ ತೇವಡಹಳ್ಳಿ ಗ್ರಾಮದ ಕಾಮಗಾರಿಯನ್ನು 06 ತಿಂಗಳುಗಳಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಇದು ಸಮಾಧಾನಕರವಾಗಿಲ್ಲ. ಇದು ಬರೀ ಭರವಸೆ ಎನ್ನುವುದು ನನ್ನ ಭಾವನೆ. ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಮತ್ತು ಯಗಚಿ ಶೀತಪೀಡಿತವಾಗಿಲ್ಲವೆಂದು ಘೋಷಣೆಯಾಗಿರುವ ಗ್ರಾಮಗಳು ಯಾವುವು ಎಂದು ಪ್ರಶ್ನೆ ಕೇಳಿದ್ದೆನು. ಅಲ್ಲಿ ಮುಖ್ಯವಾಗಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕರೆ ಗ್ರಾಮದ ಗ್ರಾಮಸ್ಥರು ಶೀತಪೀಡಿತ ಪ್ರದೇಶವೆಂದು ಪರಿಗಣಿಸುವಂತೆ 2017 ರಲ್ಲಿ ಕರ್ನಾಟಕ ಹೈಕೋರ್ಟ್‌ಗೆ ಒಂದು ರಿಟ್ ಅರ್ಜಿ ಸಲ್ಲಿಸಿದ್ದರು. 2018ರಲ್ಲಿ ಕರ್ನಾಟಕ ಹೈಕೋರ್ಟ್ ಸದರಿ ಪ್ರಕರಣವನ್ನು ಇತ್ಯರ್ಥಪಡಿಸಿ 6 ತಿಂಗಳೊಳಗೆ ನೀವು ಸೂಕ್ತ ಕ್ರಮ ಜರುಗಿಸಬೇಕೆಂದು ಸರ್ಕಾರಕ್ಕೆ ಆದೇಶ ನೀಡಿತ್ತು. ಆ ಆದೇಶದಂತೆ 2020ರಲ್ಲಿ ಕಂದಾಯ ಇಲಾಖೆಯಿಂದ ಎಲ್ಲಾ ಇಲಾಖೆಗಳಿಗೂ ಅದು ವಸತಿ ಇಲಾಖೆ ಇರಬಹುದು, ಆರ್.ಡಿ.ಪಿ.ಆರ್. ಇರಬಹುದು ಮುಖ್ಯವಾಗಿ Irrigation Department ಈ ಎಲ್ಲಾ ಇಲಾಖೆಗಳಿಗೂ ಕೂಡ ಕಂದಾಯ ಇಲಾಖೆಯ ಪ್ರಾದೇಶಿಕ ಆಯುಕ್ತರು ಒಂದು ಆದೇಶ ಹೊರಡಿಸುತ್ತಾರೆ. ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಎಲ್ಲಾ ಮುಖ್ಯ ಇಂಜಿನಿಯರ್ ಇರಬಹುದು ಎಲ್ಲಾ ಉನ್ನತ ಅಧಿಕಾರಿಗಳನ್ನೊಳಗೊಂಡಂತೆ ಎಲ್ಲರೂ ಕೂಡ ಈ ಆನೇಕೆರೆ ಗ್ರಾಮಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡುತ್ತಾರೆ. ಅದರ ಬಗ್ಗೆ ಒಂದು ಸಭೆ ಕೂಡ ಮಾಡುತ್ತಾರೆ. ಈ ಪ್ರಕರಣದ ಅನ್ವಯ ಅವರು ಆ ಕಮಿಟಿ ಸಭೆಯಲ್ಲಿ ಏನು ತೀರ್ಮಾನ ಮಾಡುತ್ತಾರೋ ಅದನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. "ಇದು ಶೀತಪೀಡಿತವಾಗಿಲ್ಲ, ಹಾಗಾಗಿ alternatively ಅಲ್ಲಿ developmental works ಅನ್ನು ತೆಗೆದುಕೊಳ್ಳಬೇಕು" ಎಂದು ಹೇಳುತ್ತಾರೆ. ಆ developmental works ವಿಷಯವಾಗಿ ನೀರಾವರಿ ಇಲಾಖೆಗೆ ಒಂದು ಅಂದಾಜು ಪಟ್ಟಿಯನ್ನು ಸಲ್ಲಿಸಿ ಎಂದು ಕೇಳುತ್ತಾರೆ. Sub-division ನಿಂದ ಆ ರೂ.27.25 ಕೋಟಿಗಳಷ್ಟು ಅಂದಾಜು ಪಟ್ಟಿ ಮಾಡಿ ನೀರಾವರಿ ಇಲಾಖೆಗೆ ಸಲ್ಲಿಸುತ್ತಾರೆ. ಆದರೆ ಈ ಅಂದಾಜು ಪಟ್ಟಿ ಸಲ್ಲಿಸಿ ಸುಮಾರು ಎರಡೂವರೆ ವರ್ಷಗಳಾಗುತ್ತಾ ಬಂತು. ಈಗ ನಾನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಕೇಳುವುದೇನೆಂದರೆ, ತಮ್ಮ ಉತ್ತರದಲ್ಲಿ "ವಿವರವಾದ ಯೋಜನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುವುದು" ಎಂದು ಹೇಳಿದ್ದಾರೆ. ಇದು ನನಗೆ ಮಾತ್ರ ಕೊಟ್ಟಿರುವ ಉತ್ತರವಲ್ಲ. ನನ್ನದು ಒಂದು ಮುಖ್ಯ ಪ್ರಶ್ನೆ ಏನೆಂದರೆ, ಮಾನ್ಯ ಹೈಕೋರ್ಟ್ 2018ರಲ್ಲಿ 6 ತಿಂಗಳೊಳಗೆ ಮಾಡಿ ಎಂದು ಆದೇಶ ಮಾಡಿದೆ. ಈಗಾಗಲೇ ನ್ಯಾಯಾಂಗದ ನಿಂದನೆ ಆಗಿದೆ.

ಇದಕ್ಕೆ ಯಾವ ರೀತಿ ಮಾಡುತ್ತಾರೆಂದು ಸ್ಪಷ್ಟೀಕರಣ ಕೊಡಬೇಕೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ನನ್ನದು ಇನ್ನೂ ಉಪ ಪ್ರಶ್ನೆ ಇದೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸೂರಜ್ ರೇವಣ್ಣನವರು ಶೀತ ಪ್ರದೇಶ ಗ್ರಾಮಗಳ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ. ಅದು ಅವರ ಜಿಲ್ಲೆಗೆ ಸೇರುತ್ತದೆ. ಸುಮಾರು ರೂ.16.42 ಕೋಟಿಗಳಷ್ಟು ಈಗಾಗಲೇ ಖರ್ಚು ಮಾಡಿದ್ದೇವೆ. ಅವರೇ ಸುಮಾರು ರೂ.27 ಕೋಟಿಗಳು ಬೇಕೆಂದು estimate ಮಾಡಿಸಿದ್ದಾರೆ. ಇದು ಏನು ಆಗಿಲ್ಲವೆಂದು ವರದಿ ಬಂದಿದೆ. Borderನಲ್ಲಿ ಸಾಕಷ್ಟು villages ಬರುತ್ತವೆ. ಮಾನ್ಯ ಸದಸ್ಯರು ಸಾಕಷ್ಟು ಅಧಿಕಾರಿಗಳೆಲ್ಲಾ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆಂದು ಹೇಳಿದರು. ಹಾಗಾಗಿ, ಇದರ ಬಗ್ಗೆ ನಾವು ಗಮನಹರಿಸುತ್ತೇವೆ. Emergency ಏನಿದೆ ಎಂದು financial constraints ನೋಡಿಕೊಂಡು... ಕೆಲವು ಸಂದರ್ಭದಲ್ಲಿ ಎಲ್ಲಾ ಎಂ.ಎಲ್.ಎ.ಗಳು ಬಂದು ನಮಗೆ ರೋಡ್ ಬೇಕು, ಸಮುದಾಯ ಭವನ ಬೇಕು ಮತ್ತು ದೇವಸ್ಥಾನಗಳು ಬೇಕೆಂದು ನೀರಾವರಿ ಇಲಾಖೆಗೆ ಕೇಳುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ತಮ್ಮಿಂದ ಕೂಡ ಒಂದು ಲೆಟರ್ ಬಂತು. ನಾನು ಯಾವುದೇ ರಸ್ತೆಗೆ ಕೊಡುತ್ತಿಲ್ಲ, ಯಾವುದೇ ಸಮುದಾಯ ಭವನಕ್ಕೆ ಕೊಡುತ್ತಿಲ್ಲ. ಹಿಂದಿನ ಸರ್ಕಾರದಲ್ಲಿ ಆಗಿಹೋಗಿದೆ. ನಾನು ಯಾರ ಮೇಲೂ ಅದು ತಪ್ಪು ಎಂದು ಹೇಳುವುದಿಲ್ಲ. ಆದರೆ ಈಗ ನಾವು major works canal ರಿಪೇರಿಗಳಿಗೆ, ಅಚ್ಚುಕಟ್ಟುಗಳಿಗೆ ಕೊಡುತ್ತಿದ್ದೇವೆ. Only water related works ಅನ್ನು ಮಾತ್ರ ನಾವು ತೆಗೆದುಕೊಂಡಿದ್ದೇವೆ. ಇದನ್ನು ಕೂಡ ನಾನು ಗಮನಹರಿಸಿ ಇನ್ನೊಂದು ರಿಪೋರ್ಟ್ ತರಿಸಿಕೊಳ್ಳುತ್ತೇನೆ. Court matter ಅದು contempt ಆಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ವಿಚಾರಿಸಿ ನೋಡುತ್ತೇನೆ. 2017ಲ್ಲೇ ದಾವೆ ಹೂಡಿರುವುದು ನನ್ನ ಹತ್ತಿರ ವರದಿ ಕೂಡ ಇದೆ. ಅದನ್ನು ತರಿಸಿಕೊಂಡು emergency ಏನು ಮಾಡಬಹುದೋ ಅದಕ್ಕೆ ನಮ್ಮಲ್ಲಿ financial structure ಕೂಡ ಇರಬೇಕಲ್ಲವೇ? ಆ ದೃಷ್ಟಿಯಿಂದ finance ನೋಡಿಕೊಂಡು ಖಂಡಿತವಾಗಿಯು ಮಾನ್ಯ ಸೂರಜ್ ರೇವಣ್ಣನವರ ಇಚ್ಛೆಯಂತೆ ಅಲ್ಲಿನ ಜನರಿಗೆ ಒಳ್ಳೆಯದಾಗಬೇಕು ಎಂದು ಕೇಳುತ್ತಾರೆ. ಆದಷ್ಟು ಬೇಗನೆ ಕ್ರಮವಹಿಸುತ್ತೇವೆ.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಆದಷ್ಟು ಬೇಗನೆ ಕ್ರಮ ವಹಿಸುತ್ತೇವೆಂದು ಹೇಳಿದ್ದಾರೆ. ಆ ಕಮಿಟಿ ಏನು ರೆಕಮಂಡ್ ಮಾಡಿದೆಯೋ ಅದನ್ನು ಮಾತ್ರ ತುರ್ತಾಗಿ ಮಾಡಬೇಕೆಂದು ನಾನು ಮೊದಲಿಗೆ ಆಗ್ರಹಿಸುತ್ತೇನೆ. ನಮಗೆ ಯಾವುದೇ non-developmental works ಬೇಡ. ಸಮುದಾಯ ಭವನಗಳಾಗಬಹುದು ಅಥವಾ ದೇವಸ್ಥಾನಗಳಾಗಬಹುದು ಅದಾವುದೂ ಕೊಡುವುದು ಬೇಡ.

ಆದರೆ ಆ ಕಮಿಟಿಯ ಶಿಫಾರಸ್ಸಿನಂತೆ seepage drain ಮುಂತಾದ ಕಾಮಗಾರಿಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಯವರು ಪರಿಗಣಿಸುತ್ತೇನೆಂದು ಹೇಳಿದ್ದಾರೆ. ಆದರೆ ಉತ್ತರದ ಕೊನೆಯಲ್ಲಿ ಕೆ.ಶಿಂಗೇನಹಳ್ಳಿ ಮತ್ತು ತೆವಡೆಹಳ್ಳಿ ಗ್ರಾಮಗಳಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಈ ಕಾಮಗಾರಿಗಳನ್ನು ತಡೆಹಿಡಿಯಲಾಗಿದೆ ಎಂದು ಹೇಳಿದ್ದಾರೆ. ಕೆ.ಶಿಂಗೇನಹಳ್ಳಿ ಗ್ರಾಮದ ಕಾಮಗಾರಿಯನ್ನು ನಾಲ್ಕೂವರೆ ವರ್ಷಗಳಿಂದ ತಡೆಹಿಡಿಯಲಾಗಿದೆ. ಅದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಒಂದು report ತರಿಸಿಕೊಳ್ಳುತ್ತೇನೆ. ಅದನ್ನು ತರಿಸಿಕೊಂಡು ಖಂಡಿತವಾಗಿಯು . . .

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಆನೆಕರೆ ಗ್ರಾಮಕ್ಕೆ ಕೊಡುತ್ತಾರೋ ಅಥವಾ ಇಲ್ಲವೋ ಎಂದು ಸ್ಪಷ್ಟೀಕರಣ ಕೊಡುತ್ತಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಜೊತೆ ಫೋನ್‌ನಲ್ಲಿ ಮಾತನಾಡಿ ಅದಕ್ಕೆ ಏನಾದರೂ ವ್ಯವಸ್ಥೆ ಮಾಡೋಣ. (ಮುಂದು)

(920)21.8.2025/5.40/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಅನುದಾನ ಶೇ.92 ಲಕ್ಷ ರೂಪಾಯಿಗಳಿವೆ. ಅದನ್ನು ಏನು ಮಾಡುತ್ತೀರಿ ಎಂಬುದಕ್ಕೆ ಸ್ಪಷ್ಟೀಕರಣ ಕೊಡಿ. ನ್ಯಾಯಾಲಯದಲ್ಲಿ ಪ್ರಕರಣ ಇದೆ. ಈಗಾಗಲೇ ಮೊನ್ನೆ ದಿವಸ ಮಾನ್ಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲರು ಬಿಲ್ ಪಾಸ್ ಮಾಡಬೇಕಾದರೆ ಎಷ್ಟೋ ಕೇಸ್‌ಗಳು contempt ಆಗಿವೆ ಎಂದು ಹೇಳುತ್ತಿದ್ದರು. ಹಾಗಾದರೆ ನ್ಯಾಯಾಲಯಕ್ಕೆ ಬೆಲೆಯೇ ಇಲ್ಲವೇ? ಇದಕ್ಕೊಂದು ಸ್ಪಷ್ಟೀಕರಣ ಕೊಡಿ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)**:- ಆಗಬಹುದು.

## ಪ್ರಶ್ನೆ ಸಂಖ್ಯೆ: 1192

## ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ.

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಇನ್ನೂ ಭೂಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನಿನ ಕ್ಷೇತ್ರ ಎಷ್ಟು; ಹಳ್ಳಿ, ಪಟ್ಟಣಗಳಾವುವು; ಅವುಗಳ ಕಟ್ಟಡಗಳು ಎಷ್ಟು; (ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು) | **ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1&2:** ಯೋಜನೆಗೆ ಅವಶ್ಯವಿರುವ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ರಾಯಚೂರ, ಯಾದಗಿರಿ & ಕಲಬುರಗಿ ಜಿಲ್ಲೆಗಳಡಿಯ ಜಮೀನು & ಕಟ್ಟಡಗಳನ್ನು ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಯೋಜನೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ. |

| ವಿವರಗಳು | ಭೂಸ್ವಾಧೀನಪಡಿಸಿ-ಕೊಂಡ ಕ್ಷೇತ್ರ | ಸ್ವಾಧೀನಪಡಿಸಿಕೊಂಡ ಕಟ್ಟಡಗಳು |
|---|---|---|
| ಗ್ರಾಮೀಣ | 2,73,798 | 72,396 |
| ಪಟ್ಟಣ(ಬಿಟಿಡಿಎ) | - | 6,458 |
| **ಒಟ್ಟು** | **2,73,798** | **78,854** |

**ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3:** ಯೋಜನೆಯ ಅನುಷ್ಠಾನಕ್ಕಾಗಿ ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಒಳಪಡುವ, ಭೂಸ್ವಾಧೀನಪಡಿಸಿಕೊಂಡ ಮತ್ತು ಇನ್ನು ಭೂಸ್ವಾಧೀನಕ್ಕೆ ಒಳಪಡಿಸಬೇಕಾದ ಜಮೀನು/ಕಟ್ಟಡಗಳ ವಿವರಗಳು ಈ ಕೆಳಗಿನಂತಿವೆ:

(ಕ್ಷೇತ್ರ – ಎಕರೆ, ಕಟ್ಟಡಗಳು-ಸಂಖ್ಯೆ)

| ಕ್ರ ಸಂ | ವಿವರ | ಭೂಸ್ವಾಧೀನಕ್ಕೆ ಒಳಪಡಿಸಲು ಉದ್ದೇಶಿಸಿದ ಕ್ಷೇತ್ರ / ಕಟ್ಟಡ | ಭೂಸ್ವಾಧೀನಪಡಿಸಿಕೊಂಡ ಕ್ಷೇತ್ರ / ಕಟ್ಟಡ | ಬಾಕಿ ಭೂಸ್ವಾಧೀನಕ್ಕೆ ಒಳಪಡಿಸಬೇಕಾದ ಕ್ಷೇತ್ರ/ಕಟ್ಟಡ |
|---|---|---|---|---|
| 1 | ಮುಳುಗಡೆ ಜಮೀನು | 75,563 | 2,543 | 73,035 |
| 2 | ಆರ್.ಸಿ. ನಿರ್ಮಾಣಕ್ಕಾಗಿ ಜಮೀನು | 6,467 | 3,392 | 3,075 |
| ಅ | ಗ್ರಾಮೀಣ(20 ಗ್ರಾಮ) | 4,630 | 1847 | 2,783 |
| ಆ | ನಗರ (ಬಿಟಿಡಿಎ) | 1,837 | 1546 | 291 |
| 3 | ಕಾಲುವೆಗಾಗಿ ಜಮೀನು | 51,837 | 23,631 | 28,206 |
| | **ಒಟ್ಟು (ಎಕರೆ)** | **1,33,867** | **29,566** | **1,04,301** |
| 4 | ಕಟ್ಟಡಗಳು ಸಂಖ್ಯೆ | 25,660 | 2,907 | 22,753 |
| ಅ | ಗ್ರಾಮೀಣ(20 ಗ್ರಾಮ) | 23,330 | 577 | 22,753 |
| ಆ | ನಗರ (ಬಿಟಿಡಿಎ) | 2330 | 2330 | - |

ವಿವರಗಳನ್ನು ಅನುಬಂಧ-1 & 2ರಲ್ಲಿ ನೀಡಲಾಗಿದೆ.

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಆ)</td><td>ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಎಕರೆವಾರು ನೀರಾವರಿ, ಖುಷ್ಕಿ ಜಮೀನುಗಳ ಸದ್ಯದ ಭೂ ಪರಿಹಾರ ದರವನ್ನು ನಿಗದಿಪಡಿಸಲಾಗಿದೆಯೆ, (ವಿವರ ನೀಡುವುದು)</td><td>ಸರ್ಕಾರದ ಕಂದಾಯ ಇಲಾಖೆಯ ಆದೇಶ ಸಂಖ್ಯೆ:ಕಂಇ 24 ಎಕ್ಯೂವಿ 2022 ಬೆಂಗಳೂರು, ದಿನಾಂಕ 25.01.2023 ರಪ್ರಕಾರ ಒಪ್ಪಂದದ ಐತೀರ್ಪು ರಚಿಸಲು ಒಪ್ಪಿಗೆ ನೀಡುವ ಸಂತ್ರಸ್ಥರಿಗೆ ಒಣ ಭೂಮಿಯ, ಮೂಲ ಬೆಲೆ ರೂ. 5.00 ಲಕ್ಷ X 4 = ರೂ. 20.00 ಲಕ್ಷ ಹಾಗೂ ನೀರಾವರಿ/ಬಾಗಾಯ್ತು ಭೂಮಿ, ಮೂಲ ಬೆಲೆ ರೂ. 6.00 ಲಕ್ಷ x 4 = ರೂ. 24.00 ಲಕ್ಷ ಗಳಂತೆ ಪ್ರತಿ ಎಕರೆಗೆ ಇತರೆ ಶಾಸನಬದ್ಧ ಸೌಲಭ್ಯಗಳೊಂದಿಗೆ ಪರಿಹಾರ ನೀಡಲಾಗುತ್ತದೆ.<br><br>ಮೇಲಿನ ಸರ್ಕಾರದ ಆದೇಶದ ಪ್ರಕಾರ ಹಾಗೂ ಇತರೆ ಶಾಸನಬದ್ಧ ಸೌಲಭ್ಯಗಳೊಂದಿಗೆ ಭೂಪರಿಹಾರ ನೀಡಲಾಗುತ್ತದೆ.<br><br>ಒಪ್ಪಿಗೆ ನೀಡದ ಸಂತ್ರಸ್ಥರಿಗೆ ಹೊಸ ಭೂಸ್ವಾಧೀನ ಕಾಯ್ದೆ 2013ರ ಕಲಂ 26 ರಿಂದ 30 ರ ಪ್ರಕಾರ ಪರಿಹಾರ ನಿಗದಿಪಡಿಸಲಾಗುತ್ತಿದೆ.</td></tr>
<tr><td>ಇ)</td><td>ಈ ಯೋಜನೆ ಪೂರ್ಣಗೊಳ್ಳಲು ಸರ್ಕಾರ ಅಂದಾಜಿಸಿದ ಒಟ್ಟು ಮೊತ್ತ ಎಷ್ಟು; ಭೂಸ್ವಾಧೀನ, ಪುನರ್ವಸತಿ ಮತ್ತು ಅಗತ್ಯ ಕಾಲುವೆಗಳ ನಿರ್ಮಾಣ ಇವುಗಳಿಗೆ ತಗಲುವ ವೆಚ್ಚ ಎಷ್ಟು (ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1&2ರ ಯೋಜನೆಗಳಿಗಾಗಿ (ಭೂಸ್ವಾಧೀನ, ಪು ಮತ್ತು ಪು ಒಳಗೊಂಡಂತೆ) ರೂ.13,170 ಕೋಟಿ ಮೊತ್ತದ ವೆಚ್ಚವನ್ನು ಭರಿಸಲಾಗಿರುತ್ತದೆ.<br><br>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಸಿವಿಲ್ ಕಾಮಗಾರಿಗಳನ್ನು 2024-25 ದರಪಟ್ಟಿಯಂತೆ & ಭೂಸ್ವಾಧೀನವನ್ನು ಚಾಲ್ತಿಯಲ್ಲಿರುವ ಒಪ್ಪಂದದ ಐತೀರ್ಪಿನಂತೆ ಈ ಕೆಳಕಂಡಂತೆ ರೂ.87,818.82 ಕೋಟಿಗಳಿಗೆ ಪರಿಷ್ಕೃತ ಅಂದಾಜು ಮೊತ್ತವನ್ನು ತಯಾರಿಸಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br>(ರೂ.ಕೋಟಿಗಳಲ್ಲಿ)<br><table><tr><th>ಕ್ರ. ಸಂ.</th><th>ವಿವರ</th><th>ಪರಿಷ್ಕೃತ ಅನುಮೋದಿತ ಮೊತ್ತ (2014-15 ದರಪಟ್ಟಿಯಂತೆ)</th><th>ಸಿವಿಲ್ ಕಾಮಗಾರಿಗಳನ್ನು 2024-25 ದರಪಟ್ಟಿಯಂತೆ & ಭೂಸ್ವಾಧೀನವನ್ನು ಚಾಲ್ತಿಯಲ್ಲಿರುವ ಒಪ್ಪಂದದ ಐತೀರ್ಪಿನಂತೆ ಅಂದಾಜಿಸಿದ ಮೊತ್ತ</th></tr><tr><td>1</td><td>ಸಿವಿಲ್ ಕಾಮಗಾರಿಗಾಗಿ</td><td>18,028.44</td><td>25,122.53</td></tr><tr><td>2</td><td>ಭೂಸ್ವಾಧೀನಕ್ಕಾಗಿ</td><td>17,627.00</td><td>40,557.09</td></tr><tr><td>3</td><td>ಪು.ಪು (ಬಿಟಿಡಿಎ ಒಳಗೊಂಡಂತೆ)</td><td>12,516.17</td><td>18,012.20</td></tr><tr><td>4</td><td>ಇತರೆ</td><td>2,977.33</td><td>4,127.00</td></tr><tr><td></td><td>ಒಟ್ಟು</td><td>51,148.94</td><td>87,818.82</td></tr></table></td></tr>
<tr><td>ಈ)</td><td>ಭೂ ಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ ಬಾಕಿ ಇರುವ</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಭೂಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ 28,407 ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ ಸುಮಾರು 29,566 ಎಕರೆ ಜಮೀನು ಕ್ಷೇತ್ರವು ಒಳಗೊಂಡಿರುತ್ತದೆ.</td></tr>
</table>

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | ಪ್ರಕರಣಗಳೆಷ್ಟು; ಅವುಗಳಲ್ಲಿ ಒಳಗೊಂಡಿರುವ ಕ್ಷೇತ್ರವೆಷ್ಟು; ಈ ಪ್ರಕರಣಗಳಲ್ಲಿ ಹೆಚ್ಚುವರಿ ಪರಿಹಾರ ನೀಡಬೇಕಾದ ಸದ್ಯ ಅಂದಾಜಿಸಿದ ಮೊತ್ತವೆಷ್ಟು? (ವಿವರ ನೀಡುವುದು) | ಹೆಚ್ಚುವರಿ ಪರಿಹಾರ ಘೋಷಣೆಯಾದ ಪ್ರಕರಣಗಳಿಗೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣಗಳ ಸರಾಸರಿ ದರವನ್ನು ಪರಿಗಣಿಸಿ ಈಗಾಗಲೇ ಭೂಸ್ವಾಧೀನಪಡಿಸಿಕೊಂಡ 29,566 ಎಕರೆ ಜಮೀನುಗಳಿಗೆ ರೂ.66,563.27 ಕೋಟಿಗಳ ಹೆಚ್ಚುವರಿ ಪರಿಹಾರ ಧನವನ್ನು ಪಾವತಿಸಬೇಕಾಗುತ್ತದೆ.<br>ಒಟ್ಟಾರೆ ಹಂತ-3ರ 1,33,867 ಎಕರೆ ಕ್ಷೇತ್ರಕ್ಕೆ ನ್ಯಾಯಾಲಯಗಳಲ್ಲಿ ಆದ ಹೆಚ್ಚುವರಿ ಪರಿಹಾರದ ಸರಾಸರಿಯಂತೆ ಪರಿಗಣಿಸಿದರೆ ರೂ.2,01,097.79 ಕೋಟಿಗಳ ವೆಚ್ಚ ತಗಲಬಹುದೆಂದು ಅಂದಾಜಿಸಲಾಗಿದೆ. |

ಸಂಖ್ಯೆ:ಜಸಂಇ 71 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ಉತ್ತರವನ್ನು ಒದಗಿಸಲಾಗಿದೆ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಸಾಕು ಬಿಡಿ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯಸಚೇತಕರು)(ಶ್ರೀ ಪಿ.ಹೆಚ್.ಪೂಜಾರ್ ಪರವಾಗಿ):-** ಪೂರ್ಣ ಉತ್ತರವನ್ನು ಒದಗಿಸಿದ್ದೇನೆ ಎನ್ನುತ್ತಿದ್ದೀರಿ, ಅವರಿಗೆ ಹಣವನ್ನೇನಾದರೂ ಕೊಟ್ಟಿರಾ?

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಇವರನ್ನೆಲ್ಲಾ ಬೇಕಾದರೆ ನಿಭಾಯಿಸುತ್ತೇನೆ. ಆದರೆ ಮಾನ್ಯ ಪೂಜಾರ್‌ರವರ ಪ್ರಶ್ನೆ ಎಂದರೆ ನನಗೆ ಭಯ. ಏಕೆಂದರೆ ಅವರಿಗೆ ಅಷ್ಟು commitment ಇದೆ. ಅವರಲ್ಲಿ ಕೃಷ್ಣಾ projects ಗೆ ಸಂಬಂಧಪಟ್ಟ ಹಾಗೆ ಬಾಗಲಕೋಟೆ, ಬಿಜಾಪುರ ಆ ಕಡೆ ಎಲ್ಲಾ ಸುಮಾರು 65 ಎಂ.ಎಲ್.ಎ.ಗಳಿದ್ದಾರೆ. ಆದರೆ ಇವರು ಬೆನ್ನತ್ತಿದ ಹಾಗೆ; ಅವರೆಲ್ಲರಿಗಿಂತ ನನಗೆ ಇವರದ್ದೇ ಜಾಸ್ತಿ ತಲೆನೋವಾಗಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ . . .

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಏತಕ್ಕೆ ಮಾತನಾಡುತ್ತೀರಿ? . . . (ಗೊಂದಲ)

**ಶ್ರೀ ಡಿ.ಕೆ. ಶಿವಕುಮಾರ್:-** ನಾನು ತಪ್ಪಿಸಿಕೊಂಡು ಓಡಾಡುತ್ತಿದ್ದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪೂಜಾರ್‌ರವರು ಯಾವಾಗಲೂ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಕೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ರವಿಯವರೇ, ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಶಿವ ಭಕ್ತರ ದಿನ ಎನ್ನುತ್ತಾರೆ. ಪೂಜಾರರ ಮಾತನ್ನು ಶಿವ ಕೇಳದಿದ್ದರೆ ಹೇಗೆ? ಅದಕ್ಕೆ ಅಪವಾದವಾಗುತ್ತದಲ್ಲವೇ?

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಅವರು ಕೇಳುತ್ತಲೇ ಇಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಚಿವರೇ, ಪೂಜಾರರು ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಕೃಷ್ಣಾ ನದಿ ವಿಚಾರವಾಗಿ ಕೇಳುತ್ತಿದ್ದಾರೆ. ಕೊಡುತ್ತೀರಾ?

**ಸಭಾಪತಿಯವರು:-** ಮಾನ್ಯ ರವಿಯವರೇ, ನಿಮಗೇನು ಚಟ ಇದು? ಸುಮ್ಮನೆ ಕುಳಿತುಕೊಳ್ಳಿ. ಬರೀ ಇದನ್ನೆ ಮಾತನಾಡುತ್ತೀರಿ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-** ಮಾನ್ಯ ಸಭಾಪತಿಯವರೇ, ನಮ್ಮ ಕಡೆ 'ಹಾಡಿದ್ದೇ ಹಾಡೋ ಕಿಸಬಾಯಿ ದಾಸ' ಎಂದು ಒಂದು ಗಾದೆ ಮಾತಿದೆ. ಅಂದರೆ ಹಾಡುವುದನ್ನೇ ಹಾಡುವುದು. ಅದೇ ಹಾಡು, ಅದೇ ಪಾಡು. ಮಾನ್ಯ ಸಭಾಪತಿಯವರಿಗೆ ಎಲ್ಲವೂ ಚೆನ್ನಾಗಿ ಗೊತ್ತಿದೆ. ನಮ್ಮ ಪರಿಸ್ಥಿತಿಗೆ ಅದನ್ನೇ ವಾಪಸ್ ಹೇಳಿದರು. ನಾವು ಮೇಲಿಂದ ಮೇಲೆ ಅದನ್ನೇ ಕೇಳುವುದು, ತಾವು ಅದನ್ನೇ ಹೇಳುವುದು. ದಯಮಾಡಿ ಸ್ವಲ್ಪ ಸ್ವರ ಬದಲಾಗಲಿ ಎಂದು ಕೇಳುತ್ತಿದ್ದೇನೆ. ಧ್ವನಿ ಏನೋ ಅದೇ ಇದೆ. ರಾಗಗಳು ಬೇರೆಯಾಗಲಿ, ಅದೇ

ರಾಗವನ್ನು ಹಾಡುತ್ತಿದ್ದರೆ ನಾವು ಎಲ್ಲಿಗೆ ಹೋಗೋಣ? ಏನು ಕಥೆ ಎಂದು ಕೇಳುತ್ತಿದ್ದೇನೆ. ನಾನು ಕೇಳಿದ್ದೇನೆಂದರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ಸಲ ಉತ್ತರ ಕೊಟ್ಟಿದ್ದಾರೆ. ಆದರೆ ಉತ್ತರವೇನೂ ಬದಲಾವಣೆ ಆಗಿಲ್ಲ. Cyclostyle copy ಇದೆ ಎಂದು ಅಧಿಕಾರಿಗಳು ಅದನ್ನೇ ಕೊಡುತ್ತಾರೆ, ಏನೂ progress ಇಲ್ಲ. ನಾನು ಎರಡೂವರೆ ವರ್ಷದಿಂದ ನೋಡುತ್ತಿದ್ದೇನೆ. ಅದೇ ವರದಿ ಇದೆಯೇ ಹೊರತು ಬೇರೆ ಏನೂ ಇಲ್ಲ. ನಾನು ಅಪೇಕ್ಷೆ ಮಾಡಿದ್ದೆ. ಹಿಂದಿನ ಸರ್ಕಾರದ ಅಂಕಿ-ಅಂಶಗಳಂತೂ ಇದೆ. ಎಷ್ಟು ಕಟ್ಟಡಗಳು ಬಾಕಿ ಇವೆ, ಇನ್ನೂ ಎಷ್ಟು ಜಮೀನನ್ನು ಸ್ವಾಧೀನ ಮಾಡಿಕೊಳ್ಳಬೇಕಾಗಿದೆ, ನೀರಾವರಿಗೆ ಎಷ್ಟಿದೆ, ಕೃಷಿಗೆ ಎಷ್ಟು ಜಾಸ್ತಿ ಇದೆ, ಕಾಲುವೆಗೆ ಎಷ್ಟು ಖರ್ಚು ಮಾಡಬೇಕಾಗಿದೆ, ಡ್ಯಾಂ ನಿರ್ವಹಣೆಗೆ ಏನೇನು ಖರ್ಚು ಮಾಡಬೇಕು ಅದಕ್ಕೆ ಕೇಳುತ್ತಿದ್ದೇವೆ, ನೀವು ವರದಿ ಕೊಡುತ್ತಿದ್ದೀರಿ. ನಾನು ಹೇಳುವಂಥದ್ದು ಈಗ ಮತ್ತೆ ಇತ್ತೀಚಿನ ದಿವಸಗಳಲ್ಲಿ 2-3 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ತಾವು ನೇತೃತ್ವ ವಹಿಸಿಕೊಂಡ ಮೇಲೆ ಜಮೀನಿನ ಕಿಮ್ಮತ್ತನ್ನು ಪರಿಷ್ಕರಣೆ ಮಾಡುವ ಬಗ್ಗೆ ಯೋಚನೆ ಮಾಡಿದ್ದೀರಿ, ತೀರ್ಮಾನ ಮಾಡಿದ್ದೀರಿ ಎನ್ನುವ ಅಪೇಕ್ಷೆ ಇಟ್ಟುಕೊಂಡು ನಾನು ಈ ಪ್ರಶ್ನೆ ಕೇಳಿದ್ದೇನೆ. ಏನಾದರೂ ಅದರ ಫಲಶೃತಿ ಇದೆಯೇ ಎಂದು ಹೇಳಿದರೆ ಸಾಕು.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಬಹಳ ಹೋರಾಟ ಮಾಡಿ all party MLAs' ಸೇರಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಸಹ ಒಂದು ತೀರ್ಮಾನವನ್ನು ತೆಗೆದುಕೊಂಡರು. ಹಿಂದೆ ಶ್ರೀ ಬಸವರಾಜ ಬೊಮ್ಮಾಯಿಯವರ ಕಾಲದಲ್ಲಿ ಈ ಭಾಗದಲ್ಲಿ Cabinet Sub-committee ಮಾಡಿ ಒಂದು ತೀರ್ಮಾನ ಮಾಡಿದ್ದಾರೆ. ಅದು ಇವರಿಗೆ ಸಮಾಧಾನವಾಗಿಲ್ಲ. ನಿಮಗೆ ಸಮಾಧಾನವಿದ್ದರೆ ಹೇಳಿ, ಶ್ರೀ ಬಸವರಾಜ ಬೊಮ್ಮಾಯಿಯವರ ತೀರ್ಮಾನದಂತೆ ನಾಳೆ ಬೆಳಗ್ಗೆಯೇ ಒಂದು ತೀರ್ಮಾನ ತೆಗೆದುಕೊಂಡು we will start raising the funds. ಅದು ನಿಮಗೆ ಸಮಾಧಾನವಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ ಮೇಲೆ ಮತ್ತೆ ಇನ್ನೊಂದು ಸಲ ಈ ವಿಷಯವನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ದಯವಿಟ್ಟು ಆ ಕಾನೂನನ್ನು ತೆಗೆಯಿರಿ.

**ಶ್ರೀ ಡಿ.ಕೆ. ಶಿವಕುಮಾರ್:-** ಈಗ ಅದು ಫೈನಲ್‌ಗೆ ಬಂದಿತ್ತು. Local leaders ಜವಾಬ್ದಾರಿ ತೆಗೆದುಕೊಳ್ಳಬೇಕಲ್ಲವೇ? ನಾವು ಏನಾದರೂ ತೀರ್ಮಾನ ತೆಗೆದುಕೊಂಡರೆ ಅದು ಅನುಷ್ಠಾನವಾಗಬೇಕಲ್ಲವೇ? ಬೊಮ್ಮಾಯಿಯವರು ತೆಗೆದುಕೊಂಡ ತೀರ್ಮಾನವನ್ನು, Cabinet Sub-committee ತೀರ್ಮಾನವನ್ನು ಸರ್ಕಾರ ಅನುಷ್ಠಾನ ಮಾಡುವುದಕ್ಕೆ ಆಗಿಲ್ಲ. ನೀವೂ ಒಪ್ಪುವುದಕ್ಕೆ ಆಗಿಲ್ಲ ಕೊನೆಗೆ ರೈತರೂ ಒಪ್ಪುವುದಕ್ಕೆ ಆಗಿಲ್ಲ. ಆದ್ದರಿಂದ ಈಗ ಒಂದು ತೀರ್ಮಾನಕ್ಕೆ ಬಂದಿದ್ದೇವೆ, ಖಂಡಿತವಾಗಿಯೂ ನಿಮ್ಮನ್ನು ಕರೆದು District Minister ಗೆ ಮಾತನಾಡುವುದಕ್ಕೆ ಹೇಳುತ್ತೇನೆ. ಹೇಳುತ್ತೇನೆ ಅಥವಾ ನಾನೇ ನಿಮ್ಮ ಹತ್ತಿರ ಮಾತನಾಡುತ್ತೇನೆ. ನಿಮ್ಮವರೆಲ್ಲಾ ಮಾತನಾಡಿ ಸ್ವಲ್ಪ enhancement ಮಾಡಿ ಇದರ consent ಗೆ ಹೋಗಬೇಕಾಗುತ್ತದೆ. ನಾನು ಈಗಾಗಲೇ 2 ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಉತ್ತರದಲ್ಲಿ ಕೊಟ್ಟಿದ್ದೇನೆ. ಎಲ್ಲಿ ಸಾಧ್ಯವಾಗುತ್ತದೆ? ಇಲ್ಲಿ

ನಡೆಯುತ್ತಿರುವಂತಹ scandals, nexus between farmers... ರೈತರಿಗೂ ಸಿಗುವುದಿಲ್ಲ, ವಕೀಲರುಗಳಿಗೆ adjustment ಮಾಡಿಕೊಂಡು;

**ಶ್ರೀ ಪಿ.ಹೆಚ್. ಪೂಜಾರ್:-** ದಯಮಾಡಿ ಇದರಲ್ಲಿ ಸ್ವಲ್ಪ amendment ಮಾಡಿಕೊಳ್ಳಿ ಎಂದು ಹೇಳುತ್ತಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಇದು nexus ಇದೆ. ನನಗೂ ಸಹ ಸುಪ್ರೀಂ ಕೋರ್ಟ್‌ಗೆ ಎಷ್ಟು ಕೇಸ್ ಹೋಗಿದೆ; ಬೆಂಗಳೂರಿನಲ್ಲಿ 8 ಕೋಟಿ, 10 ಕೋಟಿ ರೂಪಾಯಿಗಳಿಗೆ ಆದೇಶವಾಗಿದೆ. ಇದು ಸಾಧ್ಯವೇ? ಇದನ್ನು ನೀವು ನಂಬುವುದಕ್ಕೆ ಸಾಧ್ಯವೇ? ಆ ರೀತಿ ಆದರೆ ಎಲ್ಲಿಂದ ಹಣವನ್ನು ತರುವುದು? It is impossible to do. ಯಾರಾದರೂ ಇದರಲ್ಲಿ ಭಾಗಿಯಾಗಿದ್ದಾರೋ ಏನು ಎತ್ತ; ಆದ್ದರಿಂದ ಇದನ್ನು ಕಂದಾಯ ಇಲಾಖೆಯಿಂದ ನೀರಾವರಿ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಕ್ಯಾಬಿನೆಟ್‌ಗೆ ಪ್ರಪೋಸಲ್ ಕೊಟ್ಟಿದ್ದೆ. ಅದು ಒಂದು ಹಂತಕ್ಕೆ ಬಂದಿದೆ. ಏಕೆಂದರೆ, ಯಾರನ್ನಾದರೂ watch and ward ಇಡಬೇಕಲ್ಲವೇ? ಎಲ್ಲರೂ ಆ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಪಟ್ಟವರೇ. Rehabilitation.. ಈಗಾಗಲೇ ಬರೀ submerge ಗೆ 75,000 ಎಕರೆ ಬೇಕು. Award pass ಆಗಿರುವುದು 2,543 ಮಾತ್ರ. ಇನ್ನು different level notification 29,562 ಇದೆ, ಉಳಿಕೆ ಇನ್ನು 43,000 ಎಕರೆ ಆಗಬೇಕು. Canal work ಗೆ 51,000 ಎಕರೆ ಬೇಕು. ಅದಕ್ಕೆ ಈಗಾಗಲೇ 23,000 ಎಕರೆ award pass ಮಾಡಿದ್ದೇವೆ, 55 ಪರ್ಸೆಂಟ್. ಅವರು beneficiaries. ಕ್ಯಾನಲ್‌ನ ಅಕ್ಕ ಪಕ್ಕದ ಜಮೀನಿನವರಿಗೆ ಅನುಕೂಲವಾಗುತ್ತದೆ. ಇನ್ನು ಆರ್.ಸಿ. land 6,000 ಎಕರೆ, ಇದೇ ಒಂದು ದೊಡ್ಡ ಕಥೆಯಾಗಿದೆ. ಆರ್.ಸಿ land ಬಗ್ಗೆ ಹೇಳುವುದಕ್ಕೆ ಒಂದು ಗಂಟೆ ಸಮಯ ಬೇಕಾಗುತ್ತದೆ. ಸದ್ಯಕ್ಕೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲವನ್ನೂ ಲೆಕ್ಕ ಹಾಕಿ ನೋಡಿದರೆ 2 ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದನ್ನು ಹೇಗಾದರೂ ಸರಿ ಮಾಡಬೇಕೆಂದು ನಾನು ಕೇಂದ್ರ ಜಲಶಕ್ತಿ ಸಚಿವರಾದ ಶ್ರೀ ಸಿ.ಆರ್. ಪಾಟೀಲರನ್ನು ಭೇಟಿ ಮಾಡಿದ್ದೆ. I should thank Hon'ble Minister. ಅವರು ಗುಜರಾತ್ ರಾಜ್ಯದವರು. ಏನಾದರೂ ಮಾಡಿ ಈ award pass ಮಾಡಿಸಬೇಕೆಂದು ಅವರಿಗೆ ಇಷ್ಟವಿದೆ. ಮಾನ್ಯ ಮುಖ್ಯಮಂತ್ರಿಗಳನ್ನು ಸಹ ಕರೆದುಕೊಂಡು ಹೋಗಿದ್ದೆವು, ಕೇಂದ್ರ ಸಚಿವರಾದ ಶ್ರೀ ವಿ. ಸೋಮಣ್ಣನವರು ಸಹ ಭಾಗವಹಿಸಿದ್ದರು. ಎರಡು ಸಭೆ ಕರೆದರು. ಒಂದು ಸಲ ಆಂಧ್ರಪ್ರದೇಶದವರು ಫೋನ್ ಮಾಡಿಬಿಟ್ಟು ನಿಲ್ಲಿಸಿದರು. ಇನ್ನೊಂದು ಸಲ ಮಹಾರಾಷ್ಟ್ರದವರು ಫೋನ್ ಮಾಡಿ ನಿಲ್ಲಿಸಿದರು. ಈ ವಿಷಯಕ್ಕೆ ತಮಿಳುನಾಡು ಬರುವುದಿಲ್ಲ. ಹೀಗೆ ಪ್ರಯತ್ನ ಮಾಡುತ್ತಿದ್ದೇವೆ.

ಮಾನ್ಯ ಪೂಜಾರರು ಹೇಳಿದ್ದಕ್ಕೆ ಒಂದು ಮಾತನ್ನು ಹೇಳುತ್ತೇನೆ, ''ಅರ್ಚಕಸ್ಯ ಪ್ರಭಾವೇನ ಶಿಲಾಭವತಿ ಶಂಕರಃ'' ಅಂದರೆ ಅರ್ಚಕರ ಪ್ರಭಾವದಿಂದ ಶಿಲೆಯಲ್ಲಿಯೂ ಶಂಕರನನ್ನು ಕಾಣಬಹುದಂತೆ. ಹಾಗೆ ಪೂಜಾರರು ಮನಸ್ಸು ಮಾಡಿದರೆ ಅಲ್ಲಿನ ರೈತರನ್ನೆಲ್ಲಾ ಸಮಾಧಾನ ಮಾಡಿದರೆ ಬೇಕಾದರೆ ನಾನು ಒಂದು ತೀರ್ಮಾನ ಮಾಡುವುದಕ್ಕೆ ಬದ್ಧನಾಗಿದ್ದೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಬಹಳ ಸಂತೋಷ. ನಾನು ರೈತರ ಜೊತೆಗೆ ಇದ್ದೇನೆ, ಸಮಾಧಾನವಾಗುತ್ತೇನೆ. ನಾನು ನಿಮ್ಮ ಜೊತೆಗೆ ಇದ್ದೇನೆ.

**ಸಭಾಪತಿಯವರು:-** ಮಾನ್ಯ ಪೂಜಾರರೇ, ನನಗೇನೋ ನಿಮ್ಮಿಬ್ಬರ ಸಮಸ್ಯೆ ಬರುವ ಹಾಗೆ ಅನಿಸುತ್ತಿದೆ!

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಒಟ್ಟಾರೆ ನೋಡಿದರೆ ಸಂಶಯ ಬರುವ ಹಾಗೆ ಆಯಿತು. ಅವರು ನಮ್ಮ ಬಗ್ಗೆ ಪ್ರೀತಿ ತೋರಿಸುತ್ತಿಲ್ಲ. ಅವರು ಬರೀ ಪೂಜಾರರು ಎಂದು ಹೇಳುತ್ತಾರೆ, ಪೂಜಾರರು ಎಂದರೆ ಪೂಜ್ಯರು ಎಂದು ಹೇಳುತ್ತಾರೆ, ನಾನು ಒಪ್ಪಿಕೊಂಡೆ. ಆದರೆ ಅದಕ್ಕೆ ತಕ್ಕಂತೆ ನೀವು ನಡೆಸಿಕೊಳ್ಳುತ್ತಿಲ್ಲ.

**ಶ್ರೀ ಸಿ.ಟಿ. ರವಿ:-** ಮಾನ್ಯ ಪೂಜಾರರೇ, ''ಅರ್ಚಕಸ್ಯ ಪ್ರಭಾವೇನ ಶಿಲಾಭವತಿ ಶಂಕರಃ'' ಎಂದು ಹೇಳಿದರು, ಇದಕ್ಕೆ ಶರಣರ ನೈವೇದ್ಯ ಆಗುವುದಿಲ್ಲ, ಬೇರೆ ನೈವೇದ್ಯ ಇಡಿ.

**ಸಭಾಪತಿಯವರು:-** ಮಾನ್ಯ ರವಿಯವರೇ, ಇಲ್ಲಿ ಸಭಾಪತಿಗಳಿದ್ದಾರೆ ಎನ್ನುವುದು ನಿಮಗೆ ಗೊತ್ತಿದೆಯಲ್ಲವೇ? ಬೇಕಾದ ಹಾಗೆಲ್ಲಾ ಹೇಳುತ್ತೀರಲ್ಲಾ, ಏನಿದು? ನೀವು ಎಲ್ಲಾ ಕಡೆ ಅಡ್ಡಾಡಿ ಬಂದಿದ್ದೀರಿ, ಸ್ವಲ್ಪ ತಿಳಿದುಕೊಳ್ಳಿ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ನೀವು ನಮ್ಮವರು, ಅಲ್ಲಿ ಇದ್ದವರು. ದಯಮಾಡಿ ಹತ್ತು ನಿಮಿಷ ಅವಕಾಶ ಕೊಡಿ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಬಹಳ ಸಂತೋಷದಿಂದ ಹೇಳಿದರು. ಮಾನ್ಯ ಸಚಿವರಾದ ಹೆಚ್.ಕೆ. ಪಾಟೀಲರು ಸಹ ಇಲ್ಲಿಯೇ ಇದ್ದಾರೆ. ಮೊನ್ನೆ ದಿನಸ ನಾನು ಮಾತನಾಡುತ್ತಿದ್ದೆ, ಅವರು ಕೇಳಿಸಿಕೊಂಡರು ಎಂದು ಅನಿಸುತ್ತದೆ. ತಾವು ಆಗ ಇದ್ದಿರಿ. 22-23 ವರ್ಷದ ಹಿಂದೆ ಆಗ ಶ್ರೀ ಹೆಚ್.ಕೆ. ಪಾಟೀಲರು ನೀರಾವರಿ ಮಂತ್ರಿಗಳಾಗಿದ್ದರು. ದಿ: ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅದೇ ವೇಗದಿಂದ ಈ ಯೋಜನೆಯನ್ನು ತೆಗೆದುಕೊಂಡುಹೋಗಿದ್ದರೆ, 10-15 ವರ್ಷದಲ್ಲಿ ಈ ಯೋಜನೆ ಮುಗಿಯುತ್ತಿತ್ತು. ನಿಶ್ಚಿತವಾಗಿ ನಾವೆಲ್ಲರೂ ನಿರಾಳವಾಗಿ ಇರುತ್ತಿದ್ದೆವು. 130 ಟಿ.ಎಂ.ಸಿ. ನೀರು ವ್ಯರ್ಥವಾಗಿ 12 ವರ್ಷ ಹರಿದು ಹೋಗಿದೆ. ಒಂದು ಟಿ.ಎಂ.ಸಿ. ಕುಡಿಯುವ ನೀರಿನ ಸಲುವಾಗಿ ಬಾಗಲಕೋಟೆ ಜನರು ಹಪಹಪಿಸುತ್ತೇವೆ. ಕಾವೇರಿ ನೀರು ಅರ್ಧ ಟಿ.ಎಂ.ಸಿ. ನೀರು ಹರಿದು ಹೋದರೆ ನೀವು ಚಿಂತೆ ಮಾಡುತ್ತೀರಿ. ನಮಗ್ಯಾಕೆ ಅಷ್ಟು ಅನ್ಯಾಯ ಮಾಡುತ್ತಿದ್ದೀರಿ? ನಿಮಗೆ ಯೋಚನೆ ಏತಕ್ಕೆ ಮಾಡುವುದಕ್ಕಾಗುವುದಿಲ್ಲ? Success ಏತಕ್ಕೆ ಆಗುವುದಿಲ್ಲ? ನಮ್ಮಂಥವರನ್ನು, ರೈತರನ್ನು ಕೂರಿಸಿ valuation ಪ್ರಶ್ನೆ ಬಂದಾಗ delay, 8 ಕೋಟಿ, 10 ಕೋಟಿ ರೂಪಾಯಿಗಳು ಏತಕ್ಕೆ ಖರ್ಚಾಗುತ್ತದೆ? valuation ಎಷ್ಟು ಮಾಡುತ್ತೀರಿ? (ಮುಂದು)

(921) 21.08.2025 5.50 ಹೆಚ್‌ವಿ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸುಮಾರು 25-30 ಲಕ್ಷ ರೂಪಾಯಿಗಳ ವ್ಯಾಲ್ಯುವೇಷನ್ ಮಾಡಿ, ಸಂಬಂಧಪಟ್ಟ ರೈತರಿಗೆ ಪೇಮೆಂಟ್ ಮಾಡದೇ ಹೋದರೆ, ಕೋರ್ಟ್‌ನಲ್ಲಿ ಸುಮಾರು 10 ವರ್ಷಗಳ ಕಾಲ ತಡವಾಗುತ್ತಾ ಹೋದರೆ, ರೈತರು ಎಲ್ಲಿಗೆ ಹೋಗಬೇಕು? ಒಂದು ಜಮೀನಿನ ಬೆಲೆ ಹೆಚ್ಚಾದಾಗ, ಅದರ ಪಕ್ಕದಲ್ಲಿರುವ ಜಮೀನಿನ ಬೆಲೆಯೂ ಸಹಜವಾಗಿಯೇ ಹೆಚ್ಚಾಗುತ್ತದೆ. ಮುಧೋಳದಲ್ಲಿ ಭೂಮಿಯ ಬೆಲೆಯನ್ನು ಒಂದು ರೀತಿಯಲ್ಲಿ ನಿಗದಿಪಡಿಸಲಾಗಿದೆ. ರೈಲ್ವೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಾಗ ಒಂದು ರೀತಿಯಲ್ಲಿ ಭೂಮಿಯ ದರವನ್ನು ನಿಗದಿಪಡಿಸಲಾಗಿದೆ. ಅದೇ ರೀತಿಯಲ್ಲಿ ಬಾಗಲಕೋಟೆ ನವನಗರ ನಿರ್ಮಾಣಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಾಗ ಒಂದು ರೀತಿಯಲ್ಲಿ ಮೌಲ್ಯವನ್ನು ನಿಗದಿಪಡಿಸಿದೆ. ಇಲ್ಲಿ ಒಂದು ಚದುರ ಅಡಿಗೆ 716 ರೂಪಾಯಿಗಳೆಂದು ನಿಗದಿಪಡಿಸಲಾಗಿದೆ. ಅಲ್ಲಿ ಜಮೀನು ಖರೀದಿ ಮಾಡುವುದಕ್ಕೆ ಜಮೀನು ಸಿಗುವುದೇ ಇಲ್ಲ. ಒಂದು ವೇಳೆ ಖರೀದಿ ಮಾಡುವುದಕ್ಕೆ ಹೋದಾಗ, ಅಷ್ಟೇ ಬೆಲೆಯಾಗುತ್ತದೆ. ಈ ರೀತಿಯಾಗುವುದಕ್ಕೆ ಕಾರಣರಾರು? ಪರಿಹಾರವನ್ನು ನೀಡುವುದರಲ್ಲಿ ತಡ ಮಾಡಿರುವುದೇ ಇದಕ್ಕೆ ಕಾರಣವಾಗಿದೆ. ಇದಕ್ಕೆ ಯಾರನ್ನೂ ದೂಷಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನ್ಯಾಯಾಲಯದಲ್ಲಿ ವ್ಯಾಜ್ಯಗಳು ಬಾಕಿ ಇರುವುದರಿಂದ ಈ ರೀತಿಯಾಗಿದೆಯೆಂದು ಅವರು ಹೇಳುವುದಕ್ಕೆ ಹೋಗಬಾರದು.

ಸನ್ಮಾನ್ಯ ಸಭಾಪತಿಯವರೇ, 2014-15ನೇ ಸಾಲಿನಲ್ಲಿ ಇದು ಸುಮಾರು 50,000ರ ಕೋಟಿ ರೂಪಾಯಿಗಳಷ್ಟು ಮೌಲ್ಯವಾಗುತ್ತದೆಂದು ಸರ್ಕಾರ ಹೇಳಿತ್ತು. ಹತ್ತು ವರ್ಷಗಳಾದ ಮೇಲೆ ಸುಮಾರು 36,000 ಕೋಟಿ ರೂಪಾಯಿಗಳು ಹೆಚ್ಚಾಗಿದೆ. ಈಗ ಅದರ ಬೆಲೆ 2 ಲಕ್ಷ ಕೋಟಿ ರೂಪಾಯಿಗಳಾಗಿವೆ. ಮುಂದಿನ 10 ವರ್ಷಕ್ಕೆ ಇದರ ಮೌಲ್ಯ 4 ಲಕ್ಷ ಕೋಟಿ ರೂಪಾಯಿಗಳಾಗುತ್ತವೆ. ಇದಕ್ಕೆ ಪರಿಹಾರವೇನು? ಮಾನ್ಯ ಉಪ ಮುಖ್ಯಮಂತ್ರಿಗಳೇ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಅವರು ಎಲ್ಲರನ್ನು ಕೂಡಿಸಿಕೊಂಡು ಚರ್ಚೆ ಮಾಡಿ, ಒಂದು ಹಂತಕ್ಕೆ ಮುಗಿಸಬೇಕಾಗುತ್ತದೆ. ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳದೇ ಹೋದರೇ ಇದೊಂದು ಬಗೆಹರಿಯದ ಸಮಸ್ಯೆಯಾಗಿಯೇ ಉಳಿಯುತ್ತದೆ. ಜನರು ಸುಮ್ಮನೆ ಕೂಡುವುದಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಿ ಒಂದು ಹಂತಕ್ಕೆ ಬಂದಿದೆ. ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಅವರು ರೈತರನ್ನು ಒಪ್ಪಿಸಿದರೆ, ಮುಂದಿನ 15 ದಿನಗಳೊಳಗಾಗಿ ನಾವು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರ್‌ರವರ 1ನೇ ಪಟ್ಟಿಯಿಂದ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 13(133)ಕ್ಕೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

## ಪ್ರಶ್ನೆ ಸಂಖ್ಯೆ:1403

## ವೀಲಿಂಗ್ ಹಾವಳಿ ತಡೆಗಟ್ಟುವ ಬಗ್ಗೆ

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ ಮೂರು ವರ್ಷಗಳಲ್ಲಿ, ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇನ್ನಿತರ ನಗರಗಳಲ್ಲಿ ವ್ಹೀಲಿಂಗ್ ಹಾವಳಿಯಿಂದ ಘಟಿಸಿರುವ ಅಪಘಾತಗಳು ಪ್ರಾಣಹಾನಿ ಸಂಖ್ಯೆ ಎಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ, ರಾಜಧಾನಿ ಬೆಂಗಳೂರು ಹಾಗೂ ರಾಜ್ಯದ ಇನ್ನಿತರ ನಗರಗಳಲ್ಲಿ ವ್ಹೀಲಿಂಗ್ ಹಾವಳಿಯಿಂದ ಘಟಿಸಿರುವ ಅಪಘಾತಗಳು ಹಾಗೂ ಪ್ರಾಣಹಾನಿಯ ವಿವರಗಳು ಈ ಕೆಳಕಂಡಂತಿರುತ್ತವೆ:-
<table>
<tr><th>ವರ್ಷ</th><th>ವೀಲ್ಹಿಂಗ್‌ನಿಂದ ಸಂಭವಿಸಿರುವ ಅಪಘಾತಗಳು</th><th>ವೀಲ್ಹಿಂಗ್‌ನಿಂದ ಸಂಭವಿಸಿರುವ ಪ್ರಾಣಹಾನಿ</th></tr>
<tr><td>2022</td><td>0</td><td>0</td></tr>
<tr><td>2023</td><td>03</td><td>01</td></tr>
<tr><td>2024</td><td>04</td><td>0</td></tr>
<tr><td>2025 (ಜುಲೈ ಅಂತ್ಯದವರೆಗೆ)</td><td>01</td><td>0</td></tr>
<tr><td>ಒಟ್ಟು</td><td>08</td><td>01</td></tr>
</table></td></tr>
<tr><td>(ಆ)</td><td>ಈ ವ್ಹೀಲಿಂಗ್ ಹಾವಳಿ ತಡೆಗಟ್ಟಲು ಹಾಗೂ ಬೈಕ್ ಸವಾರರ ರಸ್ತೆ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳೇನು;</td><td>➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ನಿಯಮ ಉಲ್ಲಂಘನೆಗಳ ಬಗ್ಗೆ, ಪ್ರವರ್ತನಾ ಚಟುವಟಿಕೆಯನ್ನು ಕೈಗೊಳ್ಳುವ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಸುತ್ತೋಲೆ ಸಂಖ್ಯೆ: 176ನ್ನು ಹೊರಡಿಸಿದ್ದು, ಸುತ್ತೋಲೆ ರೀತ್ಯಾ ಕ್ರಮ ವಹಿಸಲಾಗುತ್ತಿದೆ. ಇದನ್ನು ಅನುಬಂಧ ದಲ್ಲಿರಿಸಲಾಗಿದೆ.<br>➢ ರಾಜ್ಯದ ಎಲ್ಲಾ ಘಟಕಗಳಲ್ಲಿ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ಬೈಕ್ ಸವಾರರುಗಳ ವಿರುದ್ಧ ಬಿ.ಎನ್.ಎಸ್. ಕಾಯ್ದೆಯಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಸವಾರರುಗಳನ್ನು ದಸ್ತಗಿರಿ ಮಾಡಿ, ಸದರಿ ವಾಹನಗಳನ್ನು ಅಮಾನತ್ತುಗೊಳಿಸಲಾಗುತ್ತಿದೆ.<br>➢ ವ್ಹೀಲಿಂಗ್ ಮಾಡುವ ಅಪ್ರಾಪ್ತ ಬೈಕ್ ಸವಾರರುಗಳ ವಿರುದ್ಧ ಜ್ಯುವೆನೈಲ್ ಆಕ್ಟ್ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಹಾಗೂ ಅಪ್ರಾಪ್ತ ಸವಾರರುಗಳ ಪೋಷಕರುಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ.<br>➢ ಬೆಂಗಳೂರಿನ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಹಾಗೂ ಸಂಚಾರ ನಿರ್ವಹಣಾ ಕೇಂದ್ರಕ್ಕೂ ಸಹ ಭೇಟಿ ನೀಡುವ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಬಸ್/ಆಟೋ/ಕ್ಯಾಬ್ ಚಾಲಕರುಗಳಿಗೂ ಸಹ ವ್ಹೀಲಿಂಗ್ ಮಾಡುವುದರಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ತಿಳಿಸಿ, ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.</td></tr>
</table>

| | | |
|---|---|---|
| | | ➢ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ಬೈಕ್ ಸವಾರರುಗಳ ಚಾಲನಾ ಅನುಜ್ಞಾ ಪತ್ರಗಳನ್ನು ಕಡ್ಡಾಯವಾಗಿ ಅಮಾನತ್ತು -ಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ.<br>➢ ವ್ಹೀಲಿಂಗ್ ಪ್ರಕರಣಗಳಲ್ಲಿ ಭಾಗಿಯಾಗುವ ವಾಹನಗಳ ನೋಂದಣಿ ಪುಸ್ತಕಗಳನ್ನು ರದ್ದುಪಡಿಸಲು ಸಂಬಂಧಪಟ್ಟ ಆರ್.ಟಿ.ಓ. ಕಛೇರಿಗೆ ಶಿಫಾರಸ್ಸುಗಳನ್ನು ಕಳುಹಿಸಲಾಗುತ್ತಿದೆ.<br>➢ ರಾಜ್ಯದ ಎಲ್ಲಾ ಘಟಕಗಳಲ್ಲಿ ವ್ಹೀಲಿಂಗ್ ಮಾಡುತ್ತಾ ಇತರೆ ಸಾರ್ವಜನಿಕರ ಸುಗಮ ಸಂಚಾರಕ್ಕೆ ತೊಂದರೆಯನ್ನುಂಟು ಮಾಡುತ್ತಿರುವ ಸವಾರರುಗಳ ವಿರುದ್ಧ ಕಾಲಕಾಲಕ್ಕೆ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.<br>➢ ವ್ಹೀಲಿಂಗ್‌ನಲ್ಲಿ ಭಾಗಿಯಾದ ಸವಾರರುಗಳನ್ನು ಕಲಂ. 107 ಸಿಆರ್‌ಪಿಸಿ ರೀತ್ಯಾ ಸಂಬಂಧಪಟ್ಟ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ರವರ (ಕಾನೂನು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತರು) ಮುಂದ ಪಿ.ಎ.ಆರ್. ದಾಖಲಿಸಲಾಗುತ್ತಿದ.<br>➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್ ನಿಯಮ ಉಲ್ಲಂಘನೆಗೆ ಕಡಿವಾಣ ಹಾಕುವ ದೃಷ್ಠಿಯಿಂದ ನಗರ ಸಂಚಾರ ಪೊಲೀಸ್ ಠಾಣೆಗಳಲ್ಲಿ ಸಾಮಾನ್ಯವಾಗಿ ವ್ಹೀಲಿಂಗ್ ಮಾಡುವ ರಸ್ತೆಗಳನ್ನು ಗುರುತಿಸಿ ಅಂತಹ ರಸ್ತೆಗಳಲ್ಲಿ ಗಸ್ತು ಕರ್ತವ್ಯಕ್ಕೆ ಕೋಬ್ರಾ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿರುತ್ತದೆ.<br>➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ "ಎಕ್ಸ್"ನಲ್ಲಿ ಸವಾರರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ.<br>➢ ಎಸ್.ಎ.ಆರ್.ಎಸ್ ಯೋಜನೆಯಡಿಯಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಸಮಯದಲ್ಲಿ ವ್ಹೀಲಿಂಗ್ ಮಾಡುವುದರಿಂದ ಆಗುವ ಅನಾಹುತಗಳ ಬಗ್ಗೆ ಶಾಲೆಗಳಿಗೆ ಭೇಟಿ ಕೊಟ್ಟು ತಿಳುವಳಿಕೆ ನೀಡಲಾಗುತ್ತಿದೆ.<br>➢ ವ್ಹೀಲಿಂಗ್ ನಿಯಮ ಉಲ್ಲಂಘನೆಯನ್ನು ಹತ್ತಿಕ್ಕಲು ಠಾಣಾ ಮಟ್ಟದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನೊಳಗೊಂಡ ತಂಡವನ್ನು ರಚಿಸಿ, ಸದರಿ ತಂಡಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಹಾಗೂ ನಿಯಮಿತವಾಗಿ ವ್ಹೀಲಿಂಗ್ ನಡೆಸುವ ರಸ್ತೆಗಳಲ್ಲಿ ನಿಗಾವಹಿಸುವ ಮೂಲಕ ಸದರಿ ನಿಯಮ ಉಲ್ಲಂಘನೆಯನ್ನು ತಡೆಗಟ್ಟಲು ಕ್ರಮ ಕೈಗೊಂಡಿರುತ್ತದೆ.<br>➢ ವ್ಹೀಲಿಂಗ್‌ನಲ್ಲಿ ಭಾಗಿಯಾಗುವ ವಾಹನಗಳ ಮಾರ್ಪಾಡಿಗೆ ಸಂಬಂಧಿಸಿದಂತೆ, ವಾಹನಗಳನ್ನು ಮಾರ್ಪಾಡು ಮಾಡುವ ಗ್ಯಾರೇಜ್‌ಗಳು ಹಾಗೂ ಮೆಕ್ಯಾನಿಕ್‌ಗಳ ವಿವರಗಳನ್ನು ಸಂಗ್ರಹಿಸಿ ಅಂತಹ ಗ್ಯಾರೇಜ್‌ಗಳ ಹಾಗೂ 'ಮೆಕ್ಯಾನಿಕ್‌ಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲು ಸಂಚಾರ ವಿಭಾಗದ ಎಲ್ಲಾ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

| | | |
|---|---|---|
| (ಇ) | ಇಂತಹ ಪ್ರಕರಣಗಳಲ್ಲಿನ ತಪ್ಪಿತಸ್ಥರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರಗಳನ್ನು ಒದಗಿಸುವುದು) | ➢ ವ್ಹೀಲಿಂಗ್ ನಿಯಮ ಉಲ್ಲಂಘನೆಯಲ್ಲಿ ಭಾಗಿಯಾಗುತ್ತಿರುವ ಸವಾರರುಗಳ ವಿರುದ್ಧ ಕಲಂ. 281 ಬಿ.ಎನ್.ಎಸ್. ಕಾಯ್ದೆ ಹಾಗೂ ಐ.ಎಂ.ವಿ. ಕಾಯ್ದೆ 184 ಮತ್ತು 189 ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.<br>➢ ವ್ಹೀಲಿಂಗ್ ಪ್ರಕರಣಗಳಲ್ಲಿ ಹೆಚ್ಚಾಗಿ ಅಪ್ರಾಪ್ತರು ಭಾಗಿಯಾಗುತ್ತಿದ್ದು, ಈ ರೀತಿ ಅಪ್ರಾಪ್ತರು ಭಾಗಿಯಾಗಿರುವ ಪ್ರಕರಣಗಳಲ್ಲಿ ಅಪ್ರಾಪ್ತರ ವಿರುದ್ಧ ಜ್ಯುವೆನೈಲ್ ಆಕ್ಟ್ ಅಡಿಯಲ್ಲಿ ಹಾಗೂ ಅಪ್ರಾಪ್ತರ ಪೋಷಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲು ಕ್ರಮ ಕೈಗೊಂಡಿರುತ್ತದೆ.<br>➢ ಬೆಂಗಳೂರು ನಗರದಲ್ಲಿ ವ್ಹೀಲಿಂಗ್‌ನಲ್ಲಿ ಭಾಗಿಯಾಗುವ ವಾಹನಗಳನ್ನು ಅಮಾನತ್ತುಪಡಿಸಿಕೊಂಡು, ವಾಹನದ ಆರ್.ಸಿ. ಪುಸ್ತಕ ಹಾಗೂ ಬೈಕ್ ಸವಾರರ ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳೆದ ಮೂರು ವರ್ಷಗಳಿಂದ ಶಿಫಾರಸ್ಸುಗಳನ್ನು ಮಾಡಲಾಗಿರುತ್ತದೆ. |

ಹೆಚ್‌ಡಿ 399 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

**ಡಾ॥ ಕೆ.ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ಸುದೀರ್ಘವಾಗಿ ಕೊಟ್ಟಿದ್ದಾರೆ. ವೀಲ್ಹಿಂಗ್ ಹಾವಳಿಯಿಂದ 18 ರಿಂದ 25 ವಯಸ್ಸಿನ ಯುವಕರಿಗೆ ಬಹಳ ತೊಂದರೆಗಳಾಗುತ್ತಿವೆ. ಇದು ಕೇವಲ ಬೆಂಗಳೂರು ನಗರ ಒಂದರಲ್ಲಿಯೇ ಅಲ್ಲ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ರಾಮನಗರ ಹಾಗೂ ಇನ್ನಿತರೆ ಜಿಲ್ಲೆಗಳಲ್ಲಿ ಇದು ಅತಿಯಾಗಿ ಆಗುತ್ತಿದೆ. ಇದರಿಂದ ಕೇವಲ ಯುವಕರಿಗೆ ಮಾತ್ರ ತೊಂದರೆಯಾಗುತ್ತಿಲ್ಲ. ಅವರ ಪೋಷಕರು ಮತ್ತು ಪಾಲಕರಿಗೂ ಬಹಳ ತೊಂದರೆಯಾಗುತ್ತಿದೆ. ಬೆಂಗಳೂರು ನಗರದಲ್ಲಿ ಟ್ರಾಫಿಕ್ ಪೋಲೀಸ್‌ನವರು ಬೆಳಗ್ಗೆ 8 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಇರುತ್ತಾರೆ. ರಾತ್ರಿ 10 ಗಂಟೆಯಾದ ಮೇಲೆ ಈ ವೀಲ್ಹಿಂಗ್ ಅನ್ನು ಪ್ರಾರಂಭ ಮಾಡುತ್ತಾರೆ. ಹೊಸ ಏರ್‌ಪೋರ್ಟ್ ರೋಡ್, ಹಳೆ ಏರ್‌ಪೋರ್ಟ್ ರಸ್ತೆ, ನೈಸ್ ರಸ್ತೆ, ಇಂತಹ ಕಡೆಗಳಲ್ಲಿ ಈ ವೀಲ್ಹಿಂಗ್ ಹಾವಳಿ ಹೆಚ್ಚಾಗಿದೆ. ನಾನು ಮಾನ್ಯ ಗೃಹ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಬೆಳಗ್ಗೆ 5 ರಿಂದ 7 ಗಂಟೆಯವರೆಗೆ ಮತ್ತು ರಾತ್ರಿ 10 ಗಂಟೆ ಯಿಂದ 12 ಗಂಟೆಯವರೆಗೆ ನಡೆಯುವಂತಹ ವೀಲ್ಹಿಂಗ್ ಮೇಲೆ ಟ್ರಾಫಿಕ್ ಪೋಲೀಸಿನವರು ಹೆಚ್ಚಿನ ನಿಗಾ ವಹಿಸಿ ಅವರ ಮೇಲೆ ಪ್ರಕರಣವನ್ನು ದಾಖಲು ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ನ್ಯಾಯಾಲಯವೂ ಸಹ ಇಂತಹ ಪ್ರಕರಣಗಳನ್ನು ಬಹಳ ಗಮನಿಸಿದೆ. ವೀಲ್ಹಿಂಗ್ ಪ್ರಕರಣಗಳನ್ನು ನಿಯಂತ್ರಿಸದಿದ್ದರೇ, ಯುವಕರಿಗೆ ಬಹಳಷ್ಟು ತೊಂದರೆಯಾಗುತ್ತದೆ ಎನ್ನುವ ಅಂಶವನ್ನು ಮಾನ್ಯ ಗೃಹ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರಬಹುದು, ಮಂಗಳೂರಿನಲ್ಲಿರಬಹುದು, ಬೇರೆಬೇರೆ ಪಟ್ಟಣಗಳಲ್ಲಿಯೂ ಸಹ ಇದೊಂದು ಪಿಡುಗಾಗಿ ಕಾಡುತ್ತಿದೆ. ಕಳೆದ 10 ವರ್ಷಗಳಿಂದ ಯುವಕರಲ್ಲಿ ವಿಶೇಷವಾಗಿ ಈ ಪಿಡುಗು ಕಂಡು ಬರುತ್ತಿದೆ. ಈಗಾಗಲೇ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. 2023ನೇ ಸಾಲಿನಲ್ಲಿ ಸುಮಾರು 242 ಪ್ರಕರಣಗಳನ್ನು ದಾಖಲಿಸಲಾಗಿದೆ. 2024ನೇ ಸಾಲಿನಲ್ಲಿ 532 ಪ್ರಕರಣಗಳನ್ನು ದಾಖಲಿಸಲಾಗಿದೆ. ಬೆಂಗಳೂರು ನಗರದೊಂದರಲ್ಲಿಯೇ ಸುಮಾರು 563 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಇದರ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಅಂಶವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಯಾರು ವೀಲ್ಹಿಂಗ್ ಮಾಡುತ್ತಾರೆ, ಅವರ ವಾಹನಗಳನ್ನು ಸೀಸ್ ಮಾಡುತ್ತೇವೆ. ಅವರ ಡ್ರೈವಿಂಗ್ ಲೈಸನ್ಸ್‌ಗಳನ್ನು ರದ್ದುಪಡಿಸುತ್ತೇವೆ. ಲೈಸೆನ್ಸ್ ಜೊತೆಗೆ ಆರ್.ಸಿ., ಬುಕ್ ಅನ್ನು ಸಹ ರದ್ದುಗೊಳಿಸುತ್ತೇವೆ. ಬೆಂಗಳೂರು ನಗರವೊಂದರಲ್ಲಿಯೇ 27 ಡ್ರೈವಿಂಗ್ ಲೈಸೆನ್ಸ್‌ಗಳನ್ನು ರದ್ದುಗೊಳಿಸಿದ್ದೇವೆ. ಸುಮಾರು 85 ಆರ್.ಸಿ.ಬುಕ್ ಅನ್ನು ಕ್ಯಾನ್ಸಲ್ ಮಾಡಿದ್ದೇವೆ. ಈ ರೀತಿ ಮಾಡುವುದರಿಂದ ಅವರು ಆ ವಾಹನಗಳನ್ನು ಹೊರಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿ ಮಾಡಿದ್ದೇವೆ. 2024ನೇ ಸಾಲಿನಲ್ಲಿ ಸುಮಾರು 57 ಡ್ರೈವಿಂಗ್ ಲೈಸನ್ಸ್‌ಗಳನ್ನು ರದ್ದುಪಡಿಸಿದ್ದೇವೆ. ಸುಮಾರು 195 ಆರ್.ಸಿ.ಬುಕ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ.

2025ನೇ ಸಾಲಿನಲ್ಲಿ 41 ಡ್ರೈವಿಂಗ್ ಲೈಸನ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. 142 ಆರ್.ಸಿ.ಬುಕ್‌ಗಳನ್ನು ರದ್ದುಗೊಳಿಸಿದ್ದೇವೆ. ಬೆಂಗಳೂರು ನಗರವೊಂದರಲ್ಲಿಯೇ ಇಂತಹ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ. ಬೆಂಗಳೂರು ನಗರದಲ್ಲಿ ವೀಲ್ಹಿಂಗ್ ಮಾಡುವಂತಹ ಸುಮಾರು 35 ರಸ್ತೆಗಳನ್ನು ಗುರುತಿಸಿದ್ದೇವೆ. ಮಾನ್ಯ ಗೋವಿಂದರಾಜುರವರು ಪ್ರಸ್ತಾಪ ಮಾಡಿದಂತೆ, ಬೆಳಗ್ಗಿನ ಜಾವ 4 ರಿಂದ 5 ಗಂಟೆಯವರೆಗೆ ಮತ್ತು ತಡರಾತ್ರಿ 12 ರಿಂದ 1 ಗಂಟೆಯವರೆಗೆ ವೀಲ್ಹಿಂಗ್ ಮಾಡುತ್ತಾರೆ. ರೆಗ್ಯುಲರ್ ಪೋಲೀಸ್‌ನವರು ತಮ್ಮ ರೆಗ್ಯುಲರ್ ಡ್ಯೂಟಿ ಮುಗಿಸಿ ಮನೆಗೆ ಹೋಗಿರುತ್ತಾರೆ ಅಥವಾ ಅವರು ಬೀಟ್ ಡ್ಯೂಟಿಯಲ್ಲಿರುತ್ತಾರೆ. ಇದಕ್ಕೆ ಸ್ಪೆಷಲ್ ಟೀಮ್‌ಗಳನ್ನು ಮಾಡಿ, ಬೆಳಗಿನ ಜಾವ 5 ಗಂಟೆ ಸಂದರ್ಭದಲ್ಲಿ ಅಥವಾ ರಾತ್ರಿ 12 ಗಂಟೆ ಸಮಯದಲ್ಲಿ ಈ 35 ರಸ್ತೆಗಳನ್ನು ಮಾನಿಟರ್ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಈಗಾಗಲೇ ಈ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ್ದೇವೆ. ಆಗ ವೀಲ್ಹಿಂಗ್ ಮಾಡುವವರು ಸಿಕ್ಕಿ ಹಾಕಿಕೊಳ್ಳುತ್ತಾರೆ. ಅವರ ಪೋಷಕರ ಮೇಲೂ ಪ್ರಕರಣವನ್ನು ದಾಖಲು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ವೀಲ್ಹಿಂಗ್ ಎನ್ನುವುದು ಬಹಳ ದೊಡ್ಡ ಪಿಡುಗಾಗಿ ಪರಿಣಮಿಸಿದೆ. ವೀಲ್ಹಿಂಗ್‌ನಿಂದ 2022ರಲ್ಲಿ ಯಾವುದೇ ಅಪಘಾತಗಳು ನಡೆದಿಲ್ಲ. ಬೆಂಗಳೂರು ನಗರದಲ್ಲಿ 2023ರಲ್ಲಿ 3 ಅಪಘಾತಗಳು ಸಂಭವಿಸಿದೆ. ಅದರಲ್ಲಿ ಒಬ್ಬರು ಮೃತಪಟ್ಟಿದ್ದಾರೆ. 2024ನೇ ಸಾಲಿನಲ್ಲಿ ವೀಲ್ಹಿಂಗ್‌ನಿಂದಾಗಿ 4 ಅಪಘಾತಗಳು ಸಂಭವಿಸಿದೆ. ವೀಲ್ಹಿಂಗ್‌ನಿಂದ ಬೇರೆಯವರಿಗೂ ತೊಂದರೆಯಾಗುವುದರ ಜೊತೆಗೆ ರಾತ್ರಿ ಎಲ್ಲರೂ ಮಲಗಿರುವಾಗ ಇವರುಗಳು ವೀಲ್ಹಿಂಗ್ ಮಾಡುವುದು ಮತ್ತು ಹೈಸ್ಪೀಡ್‌ನ ವೆಹಿಕಲ್‌ಗಳನ್ನು ರಸ್ತೆಯ ಮೇಲೆ ತರುವುದರಿಂದ ಬಹಳಷ್ಟು ಶಬ್ಧವನ್ನುಂಟು ಮಾಡುತ್ತಾರೆ. ಇವುಗಳನ್ನು ತಡೆಗಟ್ಟುವುದಕ್ಕಾಗಿ ಸ್ಪೆಷಲ್ ಟೀಂ ಮಾಡಿ ಗುರುತಿಸಲ್ಪಟ್ಟಿರುವ 35 ರಸ್ತೆಗಳಲ್ಲಿ ಮಾನಿಟರ್ ಮಾಡುತ್ತೇವೆ.

**ಡಾ॥ ಕೆ.ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ದೂರದರ್ಶನದಲ್ಲಿ ಮತ್ತು ಮಾಧ್ಯಮಗಳ ಮೂಲಕ ಈ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವನ್ನುಂಟು ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಕೋರ್ಟ್ ಆರ್ಡರ್ ಮೇರೆಗೆ ಕೆಸಿನೋಗಳು ನಡೆಯುತ್ತಿವೆ. ಇವುಗಳ ಬಗ್ಗೆಯೂ ಸರ್ಕಾರ ಗಮನಹರಿಸಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಡಾ॥ ಜಿ.ಪರಮೇಶ್ವರ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡಿದ ಸಲಹೆಯನ್ನು ಪರಿಗಣಿಸಲಾಗುತ್ತದೆ ಮತ್ತು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

## ಪ್ರಶ್ನೆ ಸಂಖ್ಯೆ: 1150

## ಸೈಬರ್ ಕ್ರೈಂ ಗಳನ್ನು ಹತೋಟಿಯಲ್ಲಿಡಲು ಕೈಗೊಂಡಿರುವ ಕ್ರಮಗಳ ಬಗ್ಗೆ

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಇಂಟರ್‌ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವವರ ಸಂಖ್ಯೆ ಪ್ರತಿದಿನ ಏರಿಕೆ ಆಗುತ್ತಿದ್ದು, ಇದಕ್ಕೆ ಅನುಸಾರವಾಗಿ ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಪ್ರತ್ಯೇಕ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಪೊಲೀಸ್ ಠಾಣೆಗಳನ್ನು ಮತ್ತು ಸಿಬ್ಬಂದಿಗಳನ್ನು ನೇಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)</td><td>
ರಾಜ್ಯದಲ್ಲಿ ಇಂಟರ್‌ನೆಟ್, ಮೊಬೈಲ್ ಫೋನ್, ಆನ್‌ಲೈನ್ ಮೂಲಕ ವಂಚನೆಗೆ ಒಳಗಾಗುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಅಲ್ಲದೇ ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/177/ಪಿಓಪಿ/2024, ದಿನಾಂಕ:01/08/2025 ರಲ್ಲಿ, ರಾಜ್ಯದ 43 CEN ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳೆಂದು (Cyber Crime Police Station) ಎಂದು ಮರುಪದನಾಮೀಕರಿಸಿ ಆದೇಶಿಸಿದೆ. ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ Information Technology Act -2000 IPC/BNS ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ದಾಖಲಿಸಲು ಹಾಗೂ ತನಿಖೆ ಕೈಗೊಳ್ಳಲು ಅಧಿಕಾರ ನೀಡಿ, ವ್ಯಾಪ್ತಿ ನಿಗದಿಪಡಿಸಿ ಅಧಿಸೂಚಿಸಲಾಗಿದೆ.<br><br>
ಸೈಬರ್ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕೆಳಕಂಡಂತೆ ಘಟಕ ಹಾಗೂ ಠಾಣೆಗಳಿಗೆ ಅಧಿಕಾರಿ/ಸಿಬ್ಬಂದಿಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.<br><br>
ರಾಜ್ಯದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ರಾಜ್ಯದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆ ಗಳ (CCPS)ಸಂಖ್ಯೆ</th><th>DySP</th><th>PI</th><th>PSI</th><th>ASI</th><th>HC</th><th>PC</th><th>Total</th></tr>
<tr><td>43</td><td>44</td><td>44</td><td>67</td><td>97</td><td>364</td><td>580</td><td>1196</td></tr>
</table>
<table>
<tr><th>ಸಿಐಡಿಯಲ್ಲಿರುವ ವಿಶೇಷ ಸೈಬರ್ ಕ್ರೈಂ ಪೊಲೀಸ್ ಠಾಣೆ ಸಿಐಡಿ (CCPS)</th><th>SP</th><th>DySP</th><th>PI</th><th>ASI</th><th>HC</th><th>PC</th><th>Total</th></tr>
<tr><td>1</td><td>1</td><td>3</td><td>7</td><td>6</td><td>7</td><td>3</td><td>27</td></tr>
</table>
<table>
<tr><th>ಬೆಂಗಳೂರು ನಗರದಲ್ಲಿರುವ ವಿಶೇಷ ಸೈಬರ್ ಕ್ರೈಂ ಪೊಲೀಸ್ ಠಾಣೆ (CCPS)</th><th>ACP</th><th>PI</th><th>PSI</th><th>ASI</th><th>HC</th><th>PC</th><th>Total</th></tr>
<tr><td>1</td><td>1</td><td>3</td><td>6</td><td>8</td><td>19</td><td>56</td><td>93</td></tr>
</table>
</td></tr>
</table>

<table>
<tr>
<td></td>
<td></td>
<td>ಅನುಬಂಧದಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಒದಗಿಸಲಾಗಿದೆ.<br><br>1. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.<br>2. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.<br>3. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಛೇರಿ ಆಗಿದ್ದು, ಇತರ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.</td>
</tr>
<tr>
<td>ಆ)</td>
<td>ಕಳೆದ ಮೂರು ವರ್ಷಗಳಲ್ಲಿ ಇಂಟರ್ ನೆಟ್, ಮೊಬೈಲ್ ಫೋನ್, ಆನ್‌ಲೈನ್ ಬಳಸಿ ವಂಚನೆ ಮಾಡುವ (ಸೈಬರ್ ಕ್ರೈಂ) ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಈ ಪೈಕಿ ಎಷ್ಟು ಪ್ರಕರಣಗಳಿಗೆ ಕೇಸ್ ದಾಖಲಿಸಲಾಗಿದೆ; ಎಷ್ಟು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ; ಈ ಮೂಲಕ ಎಷ್ಟು ಹಣ ವಂಚಿಸಲಾಗಿದೆ; (ವರ್ಷವಾರು ವಿವರ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಇಂಟರ್‌ನೆಟ್, ಮೊಬೈಲ್ ಫೋನ್, ಆನ್‌ಲೈನ್ ಬಳಸಿ ವಂಚನೆ ಮಾಡುವ ಸೈಬರ್ ಕ್ರೈಂ ಪ್ರಕರಣ ಇತ್ಯರ್ಥಪಡಿಸಲಾದ ಹಾಗೂ ವಂಚಿಸಲಾದ ಮೊತ್ತದ ವಿವರಗಳ ಅಂಕಿ-ಅಂಶಗಳು ಈ ಕೆಳಕಂಡಂತಿವೆ:-<br>
<table>
<tr><th>ವರ್ಷ</th><th>ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ</th><th>ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ</th><th>ವಂಚಿಸಲಾದ ಮೊತ್ತ (ರೂ. ಗಳಲ್ಲಿ)</th></tr>
<tr><td>2023</td><td>22253</td><td>6007</td><td>1, 287,50,89,854</td></tr>
<tr><td>2024</td><td>22472</td><td>2858</td><td>2, 515,48,49,720</td></tr>
<tr><td>2025</td><td>8620</td><td>399</td><td>861,14,02,476</td></tr>
</table>
</td>
</tr>
<tr>
<td>ಇ)</td>
<td>ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಆಧುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)</td>
<td>ಹೌದು, ಗಮನಕ್ಕೆ ಬಂದಿರುತ್ತದೆ.<br><br>ಸೈಬರ್ ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಆಧುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:-<br><br>1. ವಿಶೇಷ ಸೈಬರ್ ಅಪರಾಧ ಪೊಲೀಸ್ ಘಟಕಗಳು ಸ್ಥಾಪನೆ<br>1. ರಾಜ್ಯದಲ್ಲಿ DGP ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ. ಇವರು ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಕಮಾಂಡಿಂಗ್ ಅಧಿಕಾರಿಯಾಗಿರುತ್ತಾರೆ. ಎಲ್ಲಾ ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ನೇರವಾಗಿ ಇವರಿಗೆ ಕಾರ್ಯ ವರದಿ ಸಲ್ಲಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿವೆ. ಈ ಕ್ರಮದಿಂದ ಸೈಬರ್ ಅಪರಾಧಗಳ ತನಿಖಾ ವೇಗ ಹೆಚ್ಚಲಿದೆ.</td>
</tr>
</table>

| | | |
|---|---|---|
| | | 2. ಕರ್ನಾಟಕ ರಾಜ್ಯದಲ್ಲಿ ಪ್ರತಿ ಜಿಲ್ಲೆ/ಬೆಂಗಳೂರು ನಗರದ ವಿಭಾಗಗಳಲ್ಲಿ ಒಟ್ಟು 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಿದ್ದು, (CCPS) ಕರ್ತವ್ಯ ನಿರ್ವಹಿಸುತ್ತಿವೆ. ಡಿವೈಎಸ್ಪಿ/ಎಸಿಪಿ ರವರು ಸೈಬರ್ ಕ್ರೈಂ ಪೊಲೀಸ್ ಠಾಣೆ SHO ಆಗಿರುತ್ತಾರೆ. ಈ ಠಾಣೆಗಳು ಸೈಬರ್ ಅಪರಾಧಗಳ ತನಿಖೆಗೆ ಮಾತ್ರ ಮೀಸಲಾಗಿರುತ್ತವೆ.<br>3. ಭಾರತದ ಪ್ರಥಮ ವಿಶೇಷ ಸೈಬರ್ ಪೊಲೀಸ್ ಠಾಣೆಯನ್ನು 2001ರಲ್ಲಿ ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಯಿತು.<br>4. ಸಿಐಡಿ ಅಡಿಯಲ್ಲಿ ಸೈಬರ್ ಕ್ರೈಂ ವಿಭಾಗವು ರಾಜ್ಯದ ಸೈಬರ್ ಅಪರಾಧ ತನಿಖೆಗೆ ಕೇಂದ್ರ ಕಚೇರಿ ಆಗಿದ್ದು, ಗುಪ್ತಚರ ಹಂಚಿಕೆ ಹಾಗೂ ಇತರ ಘಟಕಗಳೊಂದಿಗೆ ಸಮನ್ವಯ ಮಾಡುತ್ತದೆ.<br><br>**2. ಸೈಬರ್ ಫಾರೆನ್ಸಿಕ್ ಸಾಮರ್ಥ್ಯ**<br>1. ಡಿಜಿಟಲ್ ಫಾರೆನ್ಸಿಕ್ ಪ್ರಯೋಗಾಲಯಗಳು ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷಿ ವಿಶ್ಲೇಷಣೆಗೆ ಸ್ಥಾಪಿಸಲಾಗಿದೆ.<br>2. ಬೆಂಗಳೂರು ನಗರದಲ್ಲಿರುವ ರಾಜ್ಯ ಸೈಬರ್ ಫಾರೆನ್ಸಿಕ್ ಲ್ಯಾಬ್‌ನಲ್ಲಿ ಮೊಬೈಲ್, ನೆಟ್‌ವರ್ಕ್, ಫಾರೆನ್ಸಿಕ್ಸ್ ಹಾಗೂ ಮಾಲ್‌ವೇರ್ ವಿಶ್ಲೇಷಣಾ ಸಾಮರ್ಥ್ಯ, Magnet AXIOM, Belkasoft, Cellebrite UFED, Oxygen Forensic Detective ಮುಂತಾದ ಅತ್ಯಾಧುನಿಕ ಸಾಧನಗಳು ಪ್ರಾದೇಶಿಕ ಫಾರೆನ್ಸಿಕ್ ಲ್ಯಾಬ್‌ಗಳು ಸ್ಥಳೀಯ ತನಿಖಾ ಸಾಮರ್ಥ್ಯವನ್ನು ಬಲಪಡಿಸುತ್ತವೆ. ಡೇಟಾ ರಿಕವರಿ, ಸಾಧನ ಇಮೇಜಿಂಗ್, ಸಾಕ್ಷಿ ಕಸ್ಟಡಿ ನಿರ್ವಹಣೆ ಮಾಡಲಾಗುತ್ತಿದೆ.<br><br>**3. ಕೇಂದ್ರ ಮಟ್ಟದ ಸಂಯೋಜನೆ ಮತ್ತು ಮೇಲ್ವಿಚಾರಣೆ**<br>1. ಭಾರತೀಯ ಸೈಬರ್ ಕ್ರೈಂ ಸಂಯೋಜನಾ ಕೇಂದ್ರ (I4C) ರಾಷ್ಟ್ರ ಮಟ್ಟದ ಸಾಮರ್ಥ್ಯ ನಿರ್ಮಾಣ, ಭೀತಿಯ ವಿಶ್ಲೇಷಣೆ ಹಾಗೂ ಕಾನೂನು ಅನುಷ್ಠಾನ ಬೆಂಬಲ ನೀಡುತ್ತದೆ.<br>2. CERT-In (Computer Emergency Response Team – India) ಸೈಬರ್ ಬೆದರಿಕೆಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ, ಘಟನಾವಳಿಗಳನ್ನು ನಿರ್ವಹಿಸುತ್ತದೆ.<br>3. Cyber Swachhata Kendra ಮಾಲ್‌ವೇರ್ ಹಾಗೂ ಬಾಟ್‌ನೆಟ್ ಸೋಂಕು ಪತ್ತೆಮಾಡಿ ತೆರವುಗೊಳಿಸಲು ಸಹಾಯ ಮಾಡುತ್ತದೆ.<br>4. NCIIPC (National Critical Information Infrastructure Protection Centre) ಬ್ಯಾಂಕಿಂಗ್, ಟೆಲಿಕಾಂ, ಇಂಧನ ಹಾಗೂ ರಕ್ಷಣಾ ಮೂಲಸೌಕರ್ಯವನ್ನು ರಕ್ಷಿಸುವ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | **4. ಸಾಮರ್ಥ್ಯ ವೃದ್ಧಿ ಮತ್ತು ತರಬೇತಿ**<br>1. ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕ ಅಭಿಯೋಜಕರಿಗೆ ಸೈಬರ್ ಕಾನೂನು, ಡಿಜಿಟಲ್ ತನಿಖೆ, ಎಲೆಕ್ಟ್ರಾನಿಕ್ ಸಾಕ್ಷಿಗಳ ಕಾನೂನುಬದ್ಧತೆ ಕುರಿತಂತೆ ನಿಯಮಿತ ತರಬೇತಿ ನೀಡಲಾಗುತ್ತಿದೆ.<br>2. 2024ರಲ್ಲಿ 257ಕ್ಕೂ ಹೆಚ್ಚು ಅಧಿಕಾರಿಗಳು 1,367 ಸೈಬರ್ ಫಾರೆನ್ಸಿಕ್ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಲಾಗುತ್ತಿದೆ.<br>3. NASSCOM, DSCI, CERT-In ಸಹಯೋಗದೊಂದಿಗೆ ವಿಶೇಷ ತರಬೇತಿ ಪಡೆಯಲಾಗುತ್ತಿದೆ.<br>4. 2019ರಲ್ಲಿ ಸ್ಥಾಪಿತ CCITR (Centre for Cybercrime Investigation Training & Research) ಡಾರ್ಕ್ ವೆಬ್, ಕ್ರಿಪ್ಟೋ ಕರೆನ್ಸಿ ಅಪರಾಧಗಳಲ್ಲಿ ಪರಿಣತಿ ತರಬೇತಿ ನೀಡಲಾಗುತ್ತಿದೆ.<br>ಅಲ್ಲದೇ, ಸೈಬರ್ ಪ್ರಕರಣಗಳ ಇತ್ಯರ್ಥಪಡಿಸಲು ಆಧುನಿಕ ತಂತ್ರಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದ್ದು, ಹಾಗೂ ಆಧುನಿಕ ವಿದ್ಯುನ್ಮಾನ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಸಹ ಒದಗಿಸಲಾಗಿರುತ್ತದೆ. ಸಿಐಡಿ ಕಛೇರಿಯಲ್ಲಿ ಈಗಾಗಲೇ ಸಿ.ಎಫ್.ಯು (ಸೈಬರ್ ಫಾರೆನ್ಸಿಕ್ ಯುನಿಟ್) ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿ.ಎಫ್.ಯು ವಿಭಾಗದ ಸೈಬರ್ ಲ್ಯಾಬ್‌ನಲ್ಲಿ ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ಸಿ.ಎಫ್.ಯು. ವಿಭಾಗವು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ. |

## ಅನುಬಂಧ

### ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಸೈಬರ್ ಕ್ರೈಂ ಪೊಲೀಸ್ ಠಾಣೆಗಳ ಸಂಖ್ಯೆ ಮತ್ತು ನೇಮಿಸಲಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ

| ಕ್ರ.ಸಂ | ಘಟಕ | ಪೊಲೀಸ್ ಠಾಣೆ | ಡಿವೈಎಸ್‌ಪಿ | ಪಿಐ | ಪಿಎಸ್‌ಐ | ಎಎಸ್‌ಐ | ಹೆಚ್‌ಸಿ | ಪಿಸಿ |
|---|---|---|---|---|---|---|---|---|
| 1 | ಬಾಗಲಕೋಟೆ ಜಿಲ್ಲೆ | 1 | 2 | 1 | 1 | 2 | 10 | 9 |
| 2 | ಬಳ್ಳಾರಿ ಜಿಲ್ಲೆ | 1 | 1 | 1 | 1 | 2 | 6 | 10 |
| 3 | ಬೆಳಗಾವಿ ನಗರ | 1 | 1 | 1 | 1 | 2 | 9 | 4 |
| 4 | ಬೆಳಗಾವಿ ಜಿಲ್ಲೆ | 1 | 1 | 1 | 1 | 2 | 5 | 15 |
| 5 | ಬೆಂಗಳೂರು ನಗರ | 8 | 9 | 12 | 33 | 55 | 119 | 172 |
| 6 | ಬೆಂಗಳೂರು ಜಿಲ್ಲೆ | 1 | 1 | 1 | 0 | 0 | 7 | 14 |
| 7 | ಬೀದರ್ ಜಿಲ್ಲೆ | 1 | 1 | 1 | 1 | 0 | 4 | 8 |
| 8 | ಚಾಮರಾಜನಗರ ಜಿಲ್ಲೆ | 1 | 1 | 1 | 1 | 3 | 10 | 6 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | 1 | 1 | 1 | 2 | 2 | 7 | 14 |
| 10 | ಚಿಕ್ಕ ಮಗಳೂರು ಜಿಲ್ಲೆ | 1 | 1 | 0 | 1 | 2 | 10 | 11 |
| 11 | ಚಿತ್ರದುರ್ಗ ಜಿಲ್ಲೆ | 1 | 1 | 1 | 1 | 2 | 6 | 13 |
| 12 | ದಕ್ಷಿಣ ಕನ್ನಡ ಜಿಲ್ಲೆ | 1 | 1 | 0 | 1 | 1 | 7 | 11 |
| 13 | ದಾವಣಗೆರೆ ಜಿಲ್ಲೆ | 1 | 1 | 1 | 1 | 2 | 7 | 14 |
| 14 | ಧಾರವಾಡ ಜಿಲ್ಲೆ | 1 | 1 | 1 | 1 | 1 | 9 | 4 |
| 15 | ಗದಗ ಜಿಲ್ಲೆ | 1 | 1 | 1 | 0 | 1 | 7 | 12 |
| 16 | ಹಾಸನ ಜಿಲ್ಲೆ | 1 | 1 | 1 | 2 | 1 | 6 | 12 |
| 17 | ಹಾವೇರಿ ಜಿಲ್ಲೆ | 1 | 1 | 1 | 1 | 1 | 5 | 18 |
| 18 | ಹುಬ್ಬಳ್ಳಿ-ಧಾರವಾಡ ನಗರ | 1 | 1 | 1 | 1 | 2 | 10 | 21 |
| 19 | ಕೆ.ಜಿ.ಎಫ್ | 1 | 0 | 1 | 1 | 0 | 5 | 7 |
| 20 | ಕಲಬುರಗಿ ನಗರ | 1 | 1 | 1 | 0 | 1 | 3 | 20 |
| 21 | ಕಲಬುರಗಿ ಜಿಲ್ಲೆ | 1 | 1 | 1 | 1 | 1 | 5 | 10 |
| 22 | ಕರ್ನಾಟಕ ರೈಲ್ವೆಸ್ | 0 | 0 | 0 | 0 | 0 | 0 | 0 |
| 23 | ಕೊಡಗು ಮಡಿಕೇರಿ | 1 | 1 | 0 | 1 | 0 | 7 | 11 |
| 24 | ಕೋಲಾರ ಜಿಲ್ಲೆ | 1 | 1 | 1 | 1 | 0 | 4 | 5 |
| 25 | ಕೊಪ್ಪಳ ಜಿಲ್ಲೆ | 1 | 1 | 1 | 1 | 2 | 6 | 10 |
| 26 | ಮಂಡ್ಯ ಜಿಲ್ಲೆ | 1 | 1 | 1 | 2 | 0 | 9 | 18 |
| 27 | ಮಂಗಳೂರು ನಗರ | 1 | 1 | 1 | 3 | 2 | 13 | 23 |
| 28 | ಮೈಸೂರು ನಗರ | 1 | 1 | 1 | 0 | 1 | 8 | 17 |
| 29 | ಮೈಸೂರು ಜಿಲ್ಲೆ | 1 | 1 | 1 | 1 | 0 | 7 | 11 |
| 30 | ರಾಯಚೂರು ಜಿಲ್ಲೆ | 1 | 1 | 1 | 1 | 1 | 5 | 7 |
| 31 | ರಾಮನಗರ ಜಿಲ್ಲೆ | 1 | 1 | 1 | 1 | 1 | 7 | 10 |
| 32 | ಶಿವಮೊಗ್ಗ ಜಿಲ್ಲೆ | 1 | 1 | 1 | 0 | 3 | 9 | 17 |
| 33 | ತುಮಕೂರು ಜಿಲ್ಲೆ | 1 | 1 | 1 | 1 | 1 | 7 | 10 |
| 34 | ಉಡುಪಿ ಜಿಲ್ಲೆ | 1 | 1 | 1 | 1 | 1 | 9 | 10 |
| 35 | ಉತ್ತರ ಕನ್ನಡ ಕಾರವಾರ | 1 | 1 | 1 | 1 | 0 | 2 | 8 |
| 36 | ವಿಜಯನಗರ ಜಿಲ್ಲೆ |  | 0 | 0 | 0 | 0 | 0 | 0 |
| 37 | ವಿಜಯಪುರ ಜಿಲ್ಲೆ | 1 | 1 | 1 | 1 | 0 | 9 | 11 |
| 38 | ಯಾದಗಿರಿ ಜಿಲ್ಲೆ | 1 | 1 | 1 | 0 | 2 | 5 | 7 |
| | ಒಟ್ಟು | 43 | 44 | 44 | 67 | 97 | 364 | 580 |

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಇಂಟರ್‌ನೆಟ್ ಮೊಬೈಲ್ ಫೋನ್ ಆನ್‌ಲೈನ್ ಮೂಲಕ ಸೈಬರ್ ಕ್ರೈಂ ಕೇಸಗಳನ್ನು ಇತ್ಯರ್ಥಪಡಿಸಲು ಎಷ್ಟು ಸ್ಟೇಷನ್‌ಗಳಿವೆ; ಕಳೆದ 3 ವರ್ಷಗಳ ಅವಧಿಯಲ್ಲಿ ಎಷ್ಟು ಸೈಬರ್ ಕ್ರೈಂಗಳು ಬೆಳಕಿಗೆ ಬಂದಿವೆ; ಎಷ್ಟು ಪ್ರಕರಣಗಳಲ್ಲಿ ಕೇಸ್ ದಾಖಲೆ ಮಾಡಲಾಗಿದೆ ಮತ್ತು ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎನ್ನುವ ಪ್ರಶ್ನೆಗಳನ್ನು ಕೇಳಿದ್ದೆ, ಅದಕ್ಕೆ ಮಾನ್ಯ ಗೃಹ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಅವರು ಕೊಟ್ಟಿರುವ ಲಿಖಿತ ರೂಪದ ಉತ್ತರದಲ್ಲಿ "ನಮ್ಮ ರಾಜ್ಯದಲ್ಲಿ ಇದಕ್ಕೆ ಸಂಬಂಧಪಟ್ಟಂತೆ 43 ಠಾಣೆಗಳನ್ನು ಸ್ಥಾಪನೆ ಮಾಡಲಾಗಿದೆ. 1196 ಜನ ಸಿಬ್ಬಂದಿಗಳು ಇದರಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ, ಅಂದರೆ, 2023ನೇ ಸಾಲಿನಲ್ಲಿ 22,253 ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚಲಾಗಿದೆ" ಎನ್ನುವ ಮಾಹಿತಿಯನ್ನು ನೀಡಿದ್ದಾರೆ. (ಮುಂದು)

(922) 21.8.2025 6.00 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

**ಶ್ರೀ ಎಸ್.ರವಿ (ಮುಂದು)**

**2023** ನೇ ಸಾಲಿನಲ್ಲಿ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ 22,253, ಪತ್ತೆ ಹಚ್ಚಿರುವುದು 6,007 ಪ್ರಕರಣಗಳು. 2024ರಲ್ಲಿ 22,472 ಪ್ರಕರಣಗಳಾಗಿದ್ದು, ಪತ್ತೆ ಹಚ್ಚಿರುವುದು 2,858 ಮತ್ತು 2025ರಲ್ಲಿ 8,620 ಪ್ರಕರಣಗಳ ಪೈಕಿ 399 ಪ್ರಕರಣಗಳನ್ನು ಪತ್ತೆಯಾಗಿವೆ. ಇದು ರಿಕವರಿ ಅಥವಾ ಕನ್‌ವಿಕ್ಷನ್ ಆಗಿರುವಂಥದ್ದಲ್ಲ. ಇದನ್ನು ನೋಡಿದರೆ ಗಾಬರಿಯಾಗುತ್ತದೆ. ಸೈಬರ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ನಾವು ಶಿಕ್ಷೆಯನ್ನು ವಿಧಿಸುವುದಕ್ಕೆ, ನಿಯಂತ್ರಣ ಮಾಡುವುದಕ್ಕೆ ವಿಫಲರಾಗುತ್ತಿದ್ದೇವೇನೋ ಎಂದೆನಿಸುತ್ತದೆ. ನಾನು ಈಗಿನ ಸರ್ಕಾರದ ಬಗ್ಗೆ ಹೇಳುತ್ತಿಲ್ಲ, ಹಿಂದಿನ ಸರ್ಕಾರಗಳನ್ನು ಸೇರಿಸಿಕೊಂಡು ಹೇಳುತ್ತಿದ್ದೇನೆ. ಇದು ಹೊಸ ಕ್ರೈಮ್ ಆಗಿದೆ. ವಿಜ್ಞಾನ ಬೆಳೆದ ಹಾಗೆಲ್ಲಾ, ಆವಿಷ್ಕಾರ ಆದ ಹಾಗೆಲ್ಲಾ ಒಳ್ಳೆಯದಾಗುವ ಬದಲು, ಸೈಬರ್ ಮುಖೇನ ಸಮಾಜದ ಮೇಲೆ ದಾಳಿಯಾಗುತ್ತಿರುವಂತ ಪರಿಸ್ಥಿತಿ ಇದೆ. ಈ ದಾಳಿಯನ್ನು ಸಮರ್ಥವಾಗಿ ಎದುರಿಸುವುದಕ್ಕೆ ನಾವು ಹೇಗೆ ಸೈನ್ಯವನ್ನು ಕಟ್ಟಿದ್ದೇವೆ; ಅಥವಾ ಪೋಲೀಸ್ ತಂಡಗಳನ್ನು ರಚನೆ ಮಾಡಿದ್ದೇವೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು. ನನ್ನ ಪ್ರಕಾರ, ಇವರು ಮಾಹಿತಿ ತಂತ್ರಜ್ಞಾನದ ಅಡಿ BNS (Bharatiya Nyaya Sanhita) Act ಬಳಸಿಕೊಂಡು, ಪ್ರಕರಣಗಳನ್ನು ದಾಖಲು ಮಾಡುತ್ತಿದ್ದಾರೆ. ಹೊಸ ಬೇರೆ ಯಾವುದಾರೂ ಕಾಯಿದೆ ತಿದ್ದುಪಡಿ ತಂದು ಆ ಮೂಲಕ ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಎಂದು ತಿಳಿಸಬೇಕು.

**ಡಾ: ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಗಳೆ, ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಮ್ ಎನ್ನುವುದು ಬಂದಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಮಗೆ ಇದು ಸವಾಲಾಗಿ ಪರಿಗಣಿಸಿದೆ. 2023ನೇ ಸಾಲಿನಲ್ಲಿ 22,253 ಸೈಬರ್ ಅಪರಾಧಿಗಳನ್ನು ರಿಜಿಸ್ಟರ್ ಮಾಡಿದ್ದೇವೆ. ಇದರಲ್ಲಿ, ರೂ.1,287,50,89,854 ಹಣ ವಂಚನೆಯಾಗಿದೆ.

2024ನೇ ಸಾಲಿನಲ್ಲಿ 22472 ಕೇಸ್‌ಗಳು ದಾಖಲು ಮಾಡಿದ್ದೇವೆ. ಇದರಲ್ಲಿ, ರೂ.2,515,48,49,720 ಹಣ ವಂಚನೆಯಾಗಿದೆ. 2025ರಲ್ಲಿ ಇಲ್ಲಿಯವರೆಗೆ ರೂ.8620 ಅಪರಾಧಗಳು, 399 ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆ. ಇದರಲ್ಲಿ ರೂ.861,14,02,476 ಹಣ ವಂಚನೆಯಾಗಿದೆ. 22,253 ಪ್ರಕರಣಗಳಲ್ಲಿ ಕೇವಲ 6007 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ, ಇನ್ನೂ ಸಾಕಷ್ಟು ಉಳಿದಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಇದು ಇಷ್ಟು ಸುಲಭವಾದ ವಿಷಯವಲ್ಲ. ಅದಕ್ಕೆ ತಾಂತ್ರಿಕ ಉಪಕರಣಗಳು ಬೇಕು, ತರಬೇತಿ ಬೇಕು, ಅವರನ್ನು ಹಿಡಿಯುವುದು ಅಷ್ಟು ಸುಲಭವಲ್ಲ. ಅವರು ಯಾವುದೋ ದೇಶದಲ್ಲಿ ಕುಳಿತುಕೊಂಡು ಮಾಡುತ್ತಾರೆ. ಅವರ ಐಪಿ ಅಡ್ರೆಸ್ ಸಿಕ್ಕುವುದಿಲ್ಲ. ಅವರು ಎಲ್ಲಿಂದ ಪೋಸ್ಟ್ ಮಾಡುತ್ತಾರೆ, ಹೇಗೆ ಫ್ರಾಡ್ ಮಾಡುತ್ತಾರೆ ಎಂಬುದನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಅದಕ್ಕಾಗಿ ನಾವು special training ಮಾಡುತ್ತಿದ್ದೇವೆ. ನಾವು special police stations ಮಾಡಿದ್ದೇವೆ. ಇದಕ್ಕಾಗಿ CEN police stations ಎಂದು ಮಾಡಿದ್ದೇವೆ. ಜೊತೆಗೆ Cyber Forensic Laboratory ಮಾಡಿದ್ದೇವೆ. ಅದರಲ್ಲಿ special training ಕೊಡುತ್ತೇವೆ. ನಿಮಗೆ ಆಶ್ಚರ್ಯವಾಗಬಹುದು. ನಮ್ಮ ರಾಜ್ಯದ Cyber Forensic Lab ನಲ್ಲಿ, mobile network, forensics and malware ವಿಶೇಷಣಾ ಸಾಮರ್ಥ್ಯ, Magnet, Axiom, Belkasoft and Cellebrite ಇವೆಲ್ಲವನ್ನೂ ಕೇಳಿದರೆ ಒಂದು ರೀತಿಯ ಹೆಸರು ಕೇಳಿದ ಹಾಗೆ ಆಗುತ್ತದೆ. ನಾವು ಈ ಉಪಕರಣಗಳನ್ನು ಉಪಯೋಗ ಮಾಡಿಕೊಂಡು special training ಮಾಡಬೇಕಾಗುತ್ತದೆ. ಈಗಾಗಲೇ ನಾವು ಅದನ್ನು ಪ್ರಾರಂಭ ಮಾಡಿದ್ದೇವೆ. ಸುಮಾರು 9,000 ಜನರಿಗೆ ಇಲ್ಲಿಯವರೆಗೆ ಸ್ಪೆಷಲ್ ಟ್ರೇನಿಂಗ್ ಕೊಟ್ಟಿದ್ದೇವೆ. ನಮ್ಮಲ್ಲಿ Centre for Cybercrime Investigation Training and Research Institute ಎಂದಿದೆ. ಅದರಿಂದ ನಾವು ಅವರಿಗೆ ತರಬೇತಿ ಕೊಡುತ್ತೇವೆ. ಬಹಳ ಸುಲಭವಾಗಂತೂ ನಾವು ಹಿಡಿಯುವುದಕ್ಕೆ ಆಗುವುದಿಲ್ಲ. ಆದರೂ ಕೂಡ Karnataka ಈ ನಿಟ್ಟಿನಲ್ಲಿ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದೆ ಎಂದು ಹೇಳಬಹುದು. 2023ರಲ್ಲಿ ಸುಮಾರು ರೂ. 861 ಕೋಟಿ ಹಣ ವಂಚನೆಯಾಗಿದೆ. ಅದರಲ್ಲಿ ನಾವು recovery ಮಾಡಿರುವುದು ರೂ. 172 ಕೋಟಿ. ಯಾರು aggrieved party ಇದ್ದಾರೋ ಅವರಿಗೆ ರೂ.136 ಕೋಟಿಗಳನ್ನು ವಾಪಸ್ಸು ಕೊಟ್ಟಿದ್ದೇವೆ. ಇದು ಒಂದು ಪ್ರಯತ್ನ ಅಷ್ಟೆ. ಇದು ನಮಗೆ technical challenge ಆಗಿದೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಗಳೆ, ನಾನು ಸಣ್ಣ ಉದಾಹರಣೆ ಕೊಡುತ್ತೇನೆ. ನಮ್ಮ ಕನಕಪುರದಲ್ಲಿ RSS and PACS ಎನ್ನುವ ಸಣ್ಣ ಕೃಷಿ ಉತ್ಪನ್ನ ಸೊಸೈಟಿ ಇದೆ. ಅದರ ಒಟ್ಟಾರೆ ವಹಿವಾಟು ರೂ. 28 ಕೋಟಿ. ಅಲ್ಲಿರುವ ಸಿಇಓ ನಿವೃತ್ತಿಯಾಗುತ್ತಾನೆ ಮತ್ತು ಅಲ್ಲಿರುವ ಮ್ಯಾನೇಜರ್‌ನನ್ನು ಟೆಂಪರರಿಯಾಗಿ ಸಿಇಓ ಆಗಿ ಮಾಡುತ್ತಾರೆ. ಅಲ್ಲಿ, ಮಕ್ಕಳ ಮದುವೆಗೆಂದು, ಜಮೀನು ಮಾರಿದ ದುಡ್ಡನ್ನು ಹೀಗೆ ಬೇರೆ ಬೇರೆ ಜನ ಅಲ್ಲಿ ರೂ. 28 ಕೋಟಿ ಡೆಪಾಸಿಟ್ ಇಟ್ಟಿರುತ್ತಾರೆ. ನಿವೃತ್ತಿಯಾದ ಸಿಇಓ ಕೂಡ, ಅಲ್ಲಿ 11% ಬಡ್ಡಿ ಕೊಡುತ್ತಾರೆ ಎಂದು ರೂ. 75 ಲಕ್ಷ ಡೆಪಾಸಿಟ್ ಇಟ್ಟಿರುತ್ತಾನೆ. ಎರಡು ವರ್ಷ ಆದಮೇಲೆ, ಜನ ಚೆಕ್ ಮಾಡಿ ನೋಡಿದರೆ, ಒಡವೆಗಳನ್ನು

ಬಿಡಿಸಿಕೊಳ್ಳುವುದಕ್ಕೆ ಹೋದರೆ ಅಲ್ಲಿ ಒಡವೆಯೂ ಇಲ್ಲ, ಮಗಳ ಮದುವೆಗೆಂದು ಇಟ್ಟಿದ್ದ ರೂ. 50 ಲಕ್ಷಗಳು ಇಲ್ಲ. ಯೂಕೋ ಬ್ಯಾಂಕ್‌ನಲ್ಲಿದ್ದ ಅಕೌಂಟ್ಸನ್ನು ತೆಗೆಸಿ ನೋಡಿದರೆ ಅಲ್ಲಿ ರೂ. 12 ಲಕ್ಷಗಳು ಮಾತ್ರ ಇತ್ತು. ಅಲ್ಲಿನ ಮ್ಯಾನೇಜರ್ ಅವರನ್ನು ಕರೆದು, ದುಡ್ಡು ಏನಾಯಿತು ಎಂದು ಕೇಳಿದರೆ ಆತ, ಬರುತ್ತದೆ ಬಿಡಣ್ಣ, ಇನ್ನು 3-4 ದಿವಸಗಳಲ್ಲಿ ಎಲ್ಲವನ್ನೂ ತೀರಿಸಿಬಿಡುತ್ತೇನೆ ಎಂದು ಹೇಳಿದ. ನಾನು ಆನ್‌ಲೈನ್‌ನಲ್ಲಿ ಇನ್ವೆಸ್ಟ್‌ಮೆಂಟ್ ಮಾಡಿದ್ದೇನೆ, ನೀವು ಏಕೆ ಗಾಬರಿಯಾಗುತ್ತೀರಿ ಎಂದು ಹೇಳಿದ. ವಿಧಿ ಇಲ್ಲದೇ ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟು ತನಿಖೆ ಮಾಡಿಸಿದರೆ, ಆ ಹಣದಲ್ಲಿ, ರೂ. 5 ಲಕ್ಷ, ರೂ. 3 ಲಕ್ಷ, ರೂ.8 ಲಕ್ಷ, ತಿಂಗಳಿಗೆ ರೂ. 25 ಲಕ್ಷ, ರೂ. 50 ಲಕ್ಷ ಹೀಗೆ ಹಣವನ್ನು ಡ್ರಾ ಮಾಡಿದ್ದ. ರೂ. 28 ಕೋಟಿ ಹಣದಲ್ಲಿ ರೂ. 12 ಲಕ್ಷಕ್ಕೆ ತಂದು ನಿಲ್ಲಿಸಿದ್ದ. ನಾವು ಸಂಬಂಧಪಟ್ಟ ಎಸ್‌ಪಿ ಮತ್ತು ಇನ್ನಿತರ ಅಧಿಕಾರಿಗಳ ಹತ್ತಿರ ಹೋಗಿ ಮಾತನಾಡಿ, ಈ ರೀತಿಯಲ್ಲ ಆಗಿದೆ, ಜನ ರಸ್ತೆಗೆ ಬಂದುಬಿಟ್ಟಿದ್ದಾರೆ. ಹಣವನ್ನು ರಿಕವರಿ ಮಾಡಿಕೊಡಿ ಎಂದು ಹೇಳಿದರೆ ಅವರು, ಈ ಹಣ ಮೀಜೋರಾಂ, ಮಣಿಪುರ, ನಾಗಲ್ಯಾಂಡ್, ನೇಪಾಳ ಮತ್ತು ಅರುಣಚಲ ಪ್ರದೇಶಕ್ಕೆ ಹೋಗಿದೆ ಎಂದು ಹೇಳಿದರು. ನೇಪಾಳದಲ್ಲಿ ಯಾರೋ ಒಬ್ಬ ವ್ಯಕ್ತಿ ಬೀಡಿ ಸೇದಿಕೊಂಡು ಕುಳಿತಿರುತ್ತಾನೆ. ಆತನ ಅಕೌಂಟ್‌ಗೆ ದುಡ್ಡು ಬಂದಿರುವುದು ಗೊತ್ತಿರುವುದಿಲ್ಲ; ಡ್ರಾ ಆಗಿರುವುದು ಗೊತ್ತಿರುವುದಿಲ್ಲ. ಅವನ ಹೆಸರಿನಲ್ಲಿ ಅಕೌಂಟ್ ಓಪನ್ ಮಾಡಿಸಿದ್ದಾರೆ, ಚೆಕ್‌ಗೆ ಸೈನ್ ಹಾಕಿಸಿಕೊಂಡು ದುಡ್ಡು ಡ್ರಾ ಮಾಡಿಕೊಂಡಿದ್ದಾರೆ ಮತ್ತು ಆತನಿಗೆ ರೂ.5000 ಕೊಟ್ಟು ಹೋಗಿದ್ದಾರೆ, ಇದನ್ನು ಹೇಗೆ ರಿಕವರಿ ಮಾಡುವುದು ಎಂದು ಕೇಳಿದರು. ಈ ಪರಿಸ್ಥಿತಿ ಭಯ ತರುವಂಥದ್ದಾಗಿದೆ. ಸೈಬರ್ ಕ್ರೈಮ್ ಎನ್ನುವುದು ಕುರುಡ ಆನೆ ಮುಟ್ಟಿ ಹೇಳಿದ ಹಾಗೆ ಎಂದರೆ ಅತಿಶಯೋಕ್ತಿ ಆಗಲಾರದು. ಸೈಬರ್ ಕ್ರೈಮ್ ಒಂದು ರೀತಿ ಇಲ್ಲ, financial fraud, bit coin, online gaming, betting apps, sexual scandals, ಈ ರೀತಿ 128 ತರಹ cybercrimes ಗಳಿವೆ. ವಿಜ್ಞಾನ ಎಷ್ಟು ಮುಂದುವರೆಯುತ್ತಿದೆಯೋ ಅಷ್ಟೇ ಇಂಥದ್ದೂ ಕೂಡ ಆಗುತ್ತಿದೆ. ನಮ್ಮ ಪೋಲೀಸ್ ಇಲಾಖೆ ದಾಪುಗಾಲು ಹಾಕಿ, ಅಡ್ವಾನ್ಸ್ ಆಗಲಿಲ್ಲ ಎಂದರೆ ಇದು ಎಲ್ಲ ಕ್ರೈಮ್‌ಗೂ ಮೀರಿದ ದೊಡ್ಡ ಕ್ರೈಮ್ ಆಗುತ್ತದೆ. ಇದೆಲ್ಲಕ್ಕಿಂತ ಹಿಂಸೆ ಎಂದು ಹೇಳುವುದಾದರೆ, ಯೂಟ್ಯೂಬರ್‌ಗಳು. ಸಾಮಾಜಿಕ ಜಾಲತಾಣಗಳ ಮೇಲೆ ನಿಯಂತ್ರಣ ಇಲ್ಲವೇ? ಯಾರ ಬಗ್ಗೆಯಾದರೂ ಯಾರೋ ಏನಾದರೂ ಮಾತನಾಡಬಹುದೇ? ಗೃಹ ಮಂತ್ರಿಗಳಿಗೆ ಬಾಯಿಗೆ ಬಂದ ಹಾಗೆ ಬೈಯುತ್ತಾರೆ, ಸಿಎಂ ಅವರನ್ನು ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ಅಂಥವರಿಗೆ ಹಾಕಿಕೊಳ್ಳಲು ಸರಿಯಾದ ಬಟ್ಟೆ ಇರುವುದಿಲ್ಲ. ಸೋಷಿಯಲ್ ಮೀಡಿಯಾದಲ್ಲಿ, ಫೇಸ್ ಬುಕ್‌ನಲ್ಲಿ, ಇನ್ಸ್‌ಟಾಗ್ರಾಂನಲ್ಲಿ ಯಾರು ಏನು ಬೇಕಾದರೂ ಮಾತನಾಡಬಹುದೇ? ಅವರ ಮೇಲೆ ಕ್ರಮವೇ ಇಲ್ಲವೇ? ಇಂಥದ್ದನ್ನು ಹೇಗೆ ನಿಯಂತ್ರಣ ಮಾಡುತ್ತೀರಿ? ಮುಂದಿನ ದಿನಗಳಲ್ಲಿ ಇದು ದೊಡ್ಡ ಅಪರಾಧವಾಗಿ ಪರಿಣಮಿಸುತ್ತದೆ.

(ಮುಂದು)

(923) 21-8-2025 6.10 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ (ಮುಂದು):-**

ಈಗ ಇದಕ್ಕೆ Artificial Intelligence ಕೂಡ add ಆಗುತ್ತಿದೆ. ಇದು ನಮ್ಮ ಸಮಾಜಕ್ಕೆ threat. ಇದು ನಮ್ಮ ಸಮಾಜದ ಮುಂದೆ ಇರುವಂತಹ ದೊಡ್ಡ ವಿಪತ್ತು. ಇವತ್ತೇ ನಾವು ಇದರ ಬಗ್ಗೆ ಎಚ್ಚೆತ್ತುಕೊಂಡು ಸರಿಯಾದ ಸೂಕ್ತ ಕ್ರಮವನ್ನು ತೆಗೆದುಕೊಳ್ಳದಿದ್ದರೆ ನಮಗೆ ವಿದೇಶಗಳು, ಪಾಕಿಸ್ತಾನ ನಮ್ಮ ಶತ್ರುಗಳಲ್ಲ, ಇನ್ನು ಮುಂದಕ್ಕೆ cybercrime ನಮ್ಮ ಶತ್ರುವಾಗುತ್ತದೆ. ನಾವು ಕೊಡುತ್ತಿರುವಂತಹ ಆದ್ಯತೆ, ನಾವು ಕೊಡುತ್ತಿರುವಂತಹ ಬಜೆಟ್... ಪೊಲೀಸ್ ಸ್ಟೇಷನ್‌ನಲ್ಲಿ ದೂರು ತೆಗೆದುಕೊಳ್ಳುವುದಿಲ್ಲ. ನೀವು ರೆಗ್ಯುಲರ್ ಸ್ಟೇಷನ್‌ಗೆ ಹೋಗಿ cybercrime ನಲ್ಲಿ complaint lodge ಮಾಡಿದರೆ complaint ತೆಗೆದುಕೊಳ್ಳುವುದಿಲ್ಲ. ಇದನ್ನು ನಾವು ಬಹಳ ಉಡಾಫೆಯಾಗಿ ನೋಡುತ್ತಿದ್ದೇವೆ. ಇದನ್ನು ನಾವು ಎಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತೇವೆಯೋ, ಇದಕ್ಕೆ ಎಷ್ಟು ಆದ್ಯತೆ ಕೊಡುತ್ತೇವೆಯೋ ಅಷ್ಟೇ ಸಮಾಜ ಸುರಕ್ಷಿತವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇದು ಸಮಾಜಕ್ಕೆ ದೊಡ್ಡ threat ಇದರ ಬಗ್ಗೆ ಮಾನ್ಯ ಗೃಹ ಸಚಿವರು ರಾಜ್ಯದ ಜನರಿಗೆ ಸರಿಯಾದ ಸಂದೇಶವನ್ನು ಕೊಡಬೇಕಾಗುತ್ತದೆ.

**ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಚಾಲೆಂಜ್ ಎನ್ನುವ ಶಬ್ಧವನ್ನು ಉಪಯೋಗ ಮಾಡಿದೆ. ಆಧುನಿಕ ಜಗತ್ತಿನಲ್ಲಿ ಇವತ್ತೇನಾದರೂ ನಮಗೆ ಸವಾಲು ಇದ್ದರೆ ಈ ಸೈಬರ್ ಕ್ರೈಮ್‌ನದ್ದೇ ದೊಡ್ಡ ಸವಾಲು. ಪೊಲೀಸ್ ಇಲಾಖೆಯವರಿಗೆ ನಮ್ಮ ಸಮಾಜದಲ್ಲಿ ಯಾವುದೋ ಘಟನೆ ನಡೆದಿರುತ್ತದೆ, ಅಲ್ಲಿಗೆ ಹೋಗಿ ಹಿಡಿದುಕೊಂಡು ಬರುತ್ತಾರೆ, ಅವರಿಗೆ ಕೇಸ್ ಹಾಕುತ್ತಾರೆ, ಅದು ನಡೆದು ಹೋಗುತ್ತದೆ. ಆದರೆ ಈ ಸೈಬರ್ ಕ್ರೈಮ್ ಇದೆಯಲ್ಲಾ ಇದು biggest challenge which the World is facing. ಬೆಂಗಳೂರು ನಗರದಲ್ಲಿ ಅಥವಾ ಕರ್ನಾಟಕದಲ್ಲಿ, ಭಾರತದಲ್ಲಿ ಅಲ್ಲ, World is facing. ನಿಮ್ಮ account hack ಮಾಡುತ್ತಾರೆ. ಅಂದರೆ, ನಿಮ್ಮದು ಮಾಡುವುದಿಲ್ಲ. ನೀವು ಹೆದರುಕೊಳ್ಳಬೇಡಿ. ಸಭಾಪತಿಗಳು ಎಂದ ತಕ್ಷಣ ಮಾಡುವುದಿಲ್ಲ. ಈಗ ರಾತ್ರೋರಾತ್ರಿ ಅವರು ಹೇಳಿದ ಹಾಗೆ ನಿಮ್ಮ ಹತ್ತಿರ 26 ಕೋಟಿ ರೂಪಾಯಿಗಳಿದ್ದರೆ ಬೆಳಕು ಹರಿಯುವಷ್ಟರಲ್ಲಿ 10 ಲಕ್ಷ, 12 ಲಕ್ಷ ರೂಪಾಯಿಗಳಿಗೆ ಇಳಿಸಿಬಿಡುತ್ತಾರೆ.

**ಸಭಾಪತಿಯವರು:-** ಪ್ರೊಫೇಸರ್ ಒಬ್ಬರು ಚೆಕ್ ತೆಗೆದುಕೊಂಡು ಹೋಗಿ ಬ್ಯಾಂಕ್‌ಗೆ ಕೊಟ್ಟು ಬಂದಿದ್ದಾರೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಆ ರೀತಿಯ ಕ್ರೈಮ್‌ಗಳು ನಡೆಯುತ್ತಿವೆ. ನಮ್ಮ ಅಕೌಂಟ್‌ನಲ್ಲಿ ಹಣ ಇದ್ದರೆ ಆ ಹಣ ಇರುತ್ತದೆ ಎನ್ನುವ ಗ್ಯಾರಂಟಿಯೂ ಇಲ್ಲ. ಆ ಪರಿಸ್ಥಿತಿ ಇವತ್ತು ಬಂದುಬಿಟ್ಟಿದೆ. ಅದಕ್ಕೆ ನಾವು ಈ hacking ಗೋಸ್ಕರ Drone Forensics, Right Forensics, Wearable Device Forensics, Cloud Forensics, Cryptocurrency Tracing and Investigations, ಇವೆಲ್ಲಾ

ಹೆಸರುಗಳನ್ನು ಕೇಳಿರುವುದಿಲ್ಲ. ಈ ಕ್ಷೇತ್ರದಲ್ಲಿ ತರಬೇತಿಯನ್ನು ಕೊಟ್ಟು ಎಷ್ಟು ಸಾಧ್ಯ ಆಗುತ್ತದೆಯೋ ಅಷ್ಟನ್ನು ಟ್ರೇಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಹೊಸ ಆವಿಷ್ಕಾರವಾಗಿದೆ. ಆದರೆ, ಇದು ಸ್ವಲ್ಪ ಸಮಯ ಹಿಡಿಯಬಹುದು. ಬೆಂಗಳೂರು, ಕರ್ನಾಟಕ ಪೋಲೀಸ್ ಇದರಲ್ಲಿ most advanced ಇದೆ ಎಂದು ನಾನು ಅಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಅವರು ಹೇಳಿದ ಹಾಗೆ ಕೆಲವರು social media postings ಮಾಡುತ್ತಾರೆ. ಅದನ್ನು ನಾನು ಫೇಕ್ ನ್ಯೂಸ್ ಎಂದು ಕರೆಯುವುದಕ್ಕೆ ಹೋಗುವುದಿಲ್ಲ. ನಾನು ಕೆಳಮನೆಯಲ್ಲೂ ಹೇಳಿದ್ದೇನೆ, ಯೂ-ಟ್ಯೂಬ್ ಚಾನಲ್ಸ್ ಎಂದು ಮಾಡಿಕೊಂಡು ಏನಂದ್ರೆ ಅದನ್ನೇ ಹಾಕುತ್ತಾರೆ. ಅದನ್ನು regulate ಮಾಡುವಂಥದ್ದಕ್ಕೂ ಕೂಡ ನಾವು ಈಗಾಗಲೇ ಕಾನೂನು ಅನ್ನು ತರುತ್ತಿದ್ದೇವೆ. ಈಗ ಅಂಥವರ ಮೇಲೆ ನಿಗಾವಹಿಸಿ 24X7 ಅದನ್ನು ವಾಚ್ ಮಾಡುತ್ತಲೇ ಕುಳಿತುಕೊಳ್ಳಬೇಕು. ಯಾವನು ಪೋಸ್ಟ್ ಮಾಡುತ್ತಾನೆ, ಏನು ಪೋಸ್ಟ್ ಮಾಡುತ್ತಾನೆ, ಯಾರ ಬಗ್ಗೆ ಪೋಸ್ಟ್ ಮಾಡುತ್ತಾನೆ, ಆ content ಅನ್ನು identify ಮಾಡುವುದು ಕಷ್ಟವಾಗುತ್ತದೆ. ಅದನ್ನು identify ಮಾಡಿದ ಮೇಲೆ ಅವನ ಮೇಲೆ ಕೇಸ್ ಹಾಕಬೇಕಾಗುತ್ತದೆ. ಈಗ ಒಂದು ವಿಚಾರವನ್ನು ತಿಳಿದುಕೊಳ್ಳಿ. ನಮ್ಮಲ್ಲಿ ಈ ಕ್ಷೇತ್ರದಲ್ಲಿ ಕಾನೂನುಗಳು ಇನ್ನೂ ಕಡಿಮೆ ಇವೆ. ನಾವು ಹೊಸ ಹೊಸ ಕಾನೂನುಗಳನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವರೆಲ್ಲಾ escape ಆಗಿಬಿಡುತ್ತಾರೆ. ಬಿಟ್ ಕಾಯಿನ್ ಕರ್ನಾಟಕದಲ್ಲಿ ನಡೆದಿದೆ ಎಂಬುದನ್ನು ತಾವು ಕೇಳಿರಬಹುದು. ಆ ಬಿಟ್ ಕಾಯಿನ್ ಬಗ್ಗೆ ನಾವು ಇನ್ನೂ conclude ಮಾಡುವುದಕ್ಕಾಗಿಲ್ಲ. Till today we are not able to register those cases. ನಮಗೆ ಚಾರ್ಜ್‌ಶೀಟ್ ಹಾಕುವುದಕ್ಕಾಗಿಲ್ಲ. ಏಕೆಂದರೆ, ಅಷ್ಟೊಂದು ಕಠಿಣವಾಗಿರುವಂತಹ ಕ್ಷೇತ್ರ. ಆದರೂ ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಇಲಾಖೆಯಲ್ಲಿ ಯಾರ್ಯಾರಿಗೆ ತರಬೇತಿ ಕೊಡಬೇಕೆಂದು ಆಯ್ಕೆ ಮಾಡಿ ಅವರಿಗೆಲ್ಲಾ ನಾವು ದೆಹಲಿ, ಅಹಮದಾಬಾದ್, ಈ ಕಡೆಗಳಲ್ಲಿ ಹೊರಗಡೆ ಕಳುಹಿಸುತ್ತಿದ್ದೇವೆ. ಏಕೆಂದರೆ, ನಾವು ಯಾರನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದರೆ, ಸಬ್ ಇನ್ಸ್‌ಪೆಕ್ಟರ್‌ರವರನ್ನು ಅವರು graduation ಮಾಡಿರುತ್ತಾರೆ. ಬಿ.ಎ. ಅಥವಾ ಬಿ.ಎಸ್‌ಸಿ ಓದಿರುತ್ತಾರೆ, ಇತ್ತೀಚೆಗೆ ಕೆಲವರೆಲ್ಲಾ ಡಬಲ್ ಗ್ರಾಜ್ಯುಯೇಟ್ ಮಾಡಿರುವವರು ಬರುತ್ತಿದ್ದಾರೆ. ಆದರೆ, ಬಿ.ಎ. ಓದಿರುವವರಿಗೆ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಸರಿ ಹೊಂದುವುದಿಲ್ಲ. ಅವರು ಪ್ರಮೋಟ್ ಆಗಿ ಇನ್ಸ್‌ಪೆಕ್ಟರ್ ಆಗಿರುತ್ತಾರೆ. ಅವರು ಸರಿ ಹೊಂದುವುದೇ ಇಲ್ಲ. ಇದಕ್ಕೆ ಬಿ.ಇ. ಗ್ರಾಜ್ಯುಯೇಟ್ ಆಗಿರಬೇಕು ಅಥವಾ ಎಂ.ಟೆಕ್. ಆಗಿರಬೇಕು, ಅಂಥವರನ್ನು ನಾವು ನೇಮಕಾತಿ ಮಾಡುವುದೇ ಇಲ್ಲ. ಆದ್ದರಿಂದ ನಮಗೆ ಇರುವಂತಹ ನಿಯಮಗಳಲ್ಲಿ ಇದಕ್ಕೆ ಪ್ರತ್ಯೇಕವಾದ ನಿಯಮಗಳನ್ನು ಪೋಲೀಸ್ ಇಲಾಖೆಯಲ್ಲಿ ಮಾಡಬೇಕಾಗುತ್ತದೆ. ನಾವು forensic lab ನಲ್ಲಿ ಮಾಡಿದ್ದೇವೆ. Forensics Science Lab ನಲ್ಲಿ ರೆಗ್ಯುಲರ್ ಪೋಲೀಸ್‌ನವರು ಅಡ್ಮಿನಿಸ್ಟ್ರೇಟಿವ್‌ನಲ್ಲಿ ಇರುತ್ತಾರೆ. ಆದರೆ laboratory ನಲ್ಲಿ ಕೆಲಸ ಮಾಡುವವರು ಸೈಂಟಿಸ್ಟ್ ಆಗಿರುತ್ತಾರೆ. ಅವರನ್ನೇ ಬೇರೆ ನೇಮಕಾತಿ ಮಾಡಬೇಕಾಗುತ್ತದೆ. ಆ ರೀತಿ ಏನಾದರೂ ನಾವು ಯೋಚನೆ ಮಾಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಅದನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1141**

**ಸಭಾಪತಿಯವರು:-** ಮಾನ್ಯ ಶರವಣರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶ ಕೊಡಿ.

**ಸಭಾಪತಿಯವರು:-** ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ೩೦ ದಿನಗಳ ಮುಂಚೆ ನಾವು ಪ್ರಶ್ನೆ ಹಾಕಿರುತ್ತೇವೆ.

**ಸಭಾಪತಿಯವರು:-** ನೀವು ನನ್ನ ಪರಿಸ್ಥಿತಿಯನ್ನು ಕೇಳಿ, ಮಾನ್ಯ ಸಚಿವರು ಕಾಲಾವಕಾಶ ಕೇಳಿರುವುದರಿಂದ ನಾನೇನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ, ಆಗಲೂ ಉತ್ತರ ಬಂದಿಲ್ಲ. ಉತ್ತರ ಕೊಡಿಸುತ್ತೇನೆಂದು ತಾವು ನನಗೆ ಮನವರಿಕೆ ಮಾಡಿದ್ದೀರಿ. ಆವತ್ತು ಹೀಗೆಯೇ ಕುಳಿತುಕೊಂಡೆ. ಈಗ ಅದೇ ಪ್ರಶ್ನೆಯನ್ನು ಮತ್ತೆ ಕೇಳಿದ್ದೇನೆ. ಈ ರೀತಿಯಾದರೆ ನಾವು ಏಕೆ ಅಧ್ಯಯನ ಮಾಡಿ ಪ್ರಶ್ನೆಯನ್ನು ಕೇಳಬೇಕು?

**ಸಭಾಪತಿಯವರು:-** ಸಭಾನಾಯಕರೇ, ಅವರಿಗೆ ಉತ್ತರ ಹೇಳುವವರಿಗೂ ಅವರು ಕೇಳುವುದಿಲ್ಲ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲೇ ಕುಳಿತ್ತಿದ್ದಾರೆ. ಕಾನೂನು ಸಚಿವರು ಹಿರಿಯರಿದ್ದಾರೆ. ಅವರು ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ, ಏನು ಮಾಡುವುದಕ್ಕಾಗುತ್ತದೆ?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಆದಷ್ಟು ಬೇಗ ತರಿಸಿಕೊಡುತ್ತೇನೆ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ತಾವು ನನ್ನ ರಕ್ಷಣೆಗೆ ಬರಬೇಕು. ಮಾನ್ಯ ಸಚಿವರು ಉತ್ತರ ಕೊಡಬೇಕು.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಪ್ರಶ್ನೋತ್ತರ ಮುಗಿದ ಮೇಲೆ ನಾನು ಏನೇನು ಮಾಡಿದ್ದೇನೆ ಎಂದು ಹೇಳುತ್ತೇನೆ. ಒಂದೊಂದು ಪ್ರಶ್ನೆಗೆ 20 ನಿಮಿಷವಾದರೆ, ನಾನು ಸದನವನ್ನು ಹೇಗೆ ನಡೆಸಬೇಕು?

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆಗಳು starred ಆಗುವುದಕ್ಕೆ ನಮಗೆ ಸ್ಟಾರ್ ಇರುವುದಿಲ್ಲಾ, ಅಂಥದ್ದರಲ್ಲಿ ನಮಗೆ starred ಆದ ಮೇಲೂ ಕೂಡ ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ನಾವು 15 ದಿವಸ ಮುಂಚಿತವಾಗಿ ಪ್ರಶ್ನೆಯನ್ನು ಹಾಕಿರುತ್ತೇವೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ನಿಮಗೆ ಅರ್ಥವಾಗುತ್ತಿದೆಯೇ? ನನ್ನ ಡ್ಯೂಟಿ ಏನು, ಸಚಿವರು ಕಾಲಾವಕಾಶ ಕೇಳಿದ್ದರೆ, ಕಾಲಾವಕಾಶ ಕೇಳಿದ್ದಾರೆ ಎಂದು ಹೇಳುತ್ತೇನೆ. ಪ್ರಶ್ನೋತ್ತರ ಮುಗಿದ ಮೇಲೆ ನಾನು ಹೇಳುತ್ತೇನೆ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನದಲ್ಲೇ ಇರುವುದರಿಂದ ನಾನು ಕೇಳುತ್ತಿದ್ದೇನೆ. ಸಚಿವರು ಸದನದಲ್ಲಿ ಇಲ್ಲದಿದ್ದರೆ ನಾನು ಕೇಳುತ್ತಿರಲಿಲ್ಲ. ಸಚಿವರು ಸದನದಲ್ಲಿ ಇರುವುದರಿಂದ ಉತ್ತರ ಹೇಳಲಿ ಎಂದು ನಾನು ಕೇಳುತ್ತಿದ್ದೇನೆ. ಈ ಪ್ರಶ್ನೆ ಮಾನ್ಯ ಸಚಿವರ ಗಮನಕ್ಕೆ ಬಂದಿಲ್ಲ ಎಂದು ನನಗೆ ಅನುಮಾನವಾಗುತ್ತಿದೆ.

**ಸಭಾಪತಿಯವರು:-** ಪ್ರಶ್ನೋತ್ತರ ಪ್ರಾರಂಭವಾಗಿ ಎರಡು ಗಂಟೆ ಆಗಿದೆ. ಮಾನ್ಯ ಎಚ್.ಕೆ.ಪಾಟೀಲ್‌ರವರೇ, ತಾವು ಏನು ಹೇಳುತ್ತೀರೋ ಹೇಳಿ.

**ಶ್ರೀ ಶರವಣ ಟಿ.ಎ:-** ಮಾನ್ಯ ಸಚಿವರೇ, ಕಳೆದ ಅಧಿವೇಶನದಲ್ಲೂ ಇದೇ ಪ್ರಶ್ನೆಯನ್ನು ಕೇಳಿದ್ದೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ಕುಳಿತುಕೊಳ್ಳಿ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಪ್ರಶ್ನೆಯನ್ನು ಕೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನೀವು ಉತ್ತರ ಹೇಳುತ್ತೀರೋ ಅಥವಾ ಕಾಲಾವಕಾಶ ಕೇಳುತ್ತೀರೋ?

**ಶ್ರೀ ಎಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಕಾಲಾವಕಾಶ ತೆಗೆದುಕೊಳ್ಳುತ್ತೇನೆ. ತಾವು ನನಗೆ ಅನುಮತಿಯನ್ನು ಕೊಟ್ಟರೆ ನಾಳೆ ಈ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

**ಸಭಾಪತಿಯವರು:-** ನಾಳೆ ಉತ್ತರ ಕೊಡಿ.

**ಪ್ರಶ್ನೆ ಸಂಖ್ಯೆ: 1125**

**ಮಾದಕ ವಸ್ತುಗಳ ಕುರಿತು.**

<table>
<tr><th>ಕ್ರಮ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಅತೀ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ಪತ್ತೆಯಾಗುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು : ಕಳೆದ ಎರಡು ವರ್ಷಗಳಲ್ಲಿ ಡ್ರಗ್ಸ್ ಕುರಿತು ಎಷ್ಟು ಪ್ರಕರಣಗಳು ದಾಖಲಾಗಿವೆ? (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯವನ್ನು ಡ್ರಗ್ಸ್/ಮಾದಕ ವಸ್ತುಗಳ ಮುಕ್ತ ರಾಜ್ಯವನ್ನಾಗಿಸುವುದು ಸರ್ಕಾರದ ನಿಲುವಾಗಿದೆ.<br>ಈ ಹಿನ್ನಲೆಯಲ್ಲಿ ಮಾದಕ ವಸ್ತುಗಳ ಸೇವನೆ, ಮಾರಾಟ, ಸಾಗಾಣೆ ಕುರಿತಂತೆ ವರದಿಯಾಗುವ ಪ್ರತಿ ದೂರು/ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿ, ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು, ಮಾದಕ ವಸ್ತಗಳನ್ನು ಜಪ್ತಿಪಡಿಸಿಕೊಳ್ಳುವ ಮೂಲಕ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>ರಾಜ್ಯದಲ್ಲಿ 2023, 2024 ಮತ್ತು 2025 ಜುಲೈ ಅಂತ್ಯದವರೆಗೆ ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಎನ್.ಡಿ.ಪಿ.ಎಸ್ ಯಡಿ ದಾಖಲಾದ ಪ್ರಕರಣಗಳ ಸಂಖ್ಯೆ</th></tr>
<tr><td>2023</td><td>6767</td></tr>
<tr><td>2024</td><td>4188</td></tr>
<tr><td>2025<br>(ಜುಲೈ ಅಂತ್ಯಕ್ಕೆ)</td><td>3530</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ಮುಂಬೈ ಪೊಲೀಸ್‌ರು ಪತ್ತೆ ಮಾಡಿದ್ದು, ಇದು ಸ್ಥಳೀಯ ಪೊಲೀಸ್ ನಿರ್ಲಕ್ಷತೆಗೆ ಸಾಕ್ಷ್ಯ ಎಂಬುದರ ಬಗ್ಗೆ ಸರ್ಕಾರದ ನಿಲುವೇನು; ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ; (ಹೆಸರಿನೊಂದಿಗೆ ವಿವರ ನೀಡುವುದು)</td><td>ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಕುರಿತಂತೆ ವರದಿಯಾಗಿರುವ ಪ್ರಕರಣದ ವಿವರಗಳು:<br>ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ಮೊ.ನಂ. 296/2025 ಕಲಂ. 8(ಸಿ), 22(ಸಿ), 29 ಎನ್.ಡಿ.ಪಿ.ಎಸ್. ಕಾಯ್ದೆ ಮತ್ತು ಕಲಂ. 111 ಬಿ.ಎನ್.ಎಸ್. ಕಾಯ್ದೆ 2023ರ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ ಮುಂಬೈ ನಿವಾಸಿಯಾದ ಆರೋಪಿ ಸಲೀಂ ಇಮ್ತಿಯಾಜ್ ಶೇಖ್, ವಯಸ್ಸು 47 ವರ್ಷ ಈತನ ಮಾಹಿತಿಯ ಮೇರೆಗೆ ಮುಂಬೈ ನಗರದ ಸಾಕಿನಾಕ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣೆಯ ಠಾಣಾಧಿಕಾರಿಗಳೊಂದಿಗೆ ದಿನಾಂಕ: 26/07/2025 ರಂದು</td></tr>
</table>

| | | |
|---|---|---|
| | | ಜಂಟಿ ಕಾರ್ಯಾಚರಣೆ ನಡೆಸಿ 04 ಜನ ಆರೋಪಿಗಳನ್ನು ದಸ್ತಗಿರಿ ಮಾಡಿರುತ್ತಾರೆ.<br><br>ಮೇಲ್ಕಂಡ ಪ್ರಕರಣದಲ್ಲಿನ ಆರೋಪಿಯಾದ ಸಲೀಂ ಇಮ್ತಿಯಾಜ್ ಶೇಖ್ ಈತನು ನೀಡಿದ ಹೇಳಿಕೆಯಲ್ಲಿ ಮೈಸೂರು ನಗರದಲ್ಲಿ ಮೊದಲ ಬಾರಿಗೆ ಜುಲೈ ಮೊದಲನೇ ವಾರದಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದ ಮೇರೆಗೆ ಮೈಸೂರು ನಗರ ಪೊಲೀಸ್ ಹಾಗೂ ಮುಂಬೈ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಮಾದಕ ವಸ್ತು ತಯಾರಿಸುವ ಘಟಕವನ್ನು ಪತ್ತೆ ಮಾಡಲಾಗಿದೆ.<br><br>ಸದರಿ ಘಟನೆಗೆ ಸಂಬಂಧಿಸಿದಂತೆ ಬೀಟ್ ಹಾಗೂ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿಗಳು ಮಾಹಿತಿ ಸಂಗ್ರಹಿಸುವಲ್ಲಿ ವಿಫಲತೆ ಹೊಂದಿರುವವರನ್ನು ಅಮಾನತ್ತುಗೊಳಿಸಲಾಗಿದೆ. ಸದರಿ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿದೆ:<br><br>1. ಶ್ರೀ ಎಲ್. ಅನಿಲ್ ಕುಮಾರ್. ಸಿಪಿಸಿ-500, ಬೀಟ್ ಸಿಬ್ಬಂದಿ<br>2. ಶ್ರೀ ಆಂಜನೇಯ, ಹೆಚ್.ಸಿ.-584, ಠಾಣಾ ಗುಪ್ತ ಮಾಹಿತಿ ಸಂಗ್ರಹಿಸುವ ಸಿಬ್ಬಂದಿ. |
| (ಇ) | ಸರ್ಕಾರವು ಡ್ರಗ್ಸ್ ಮಾರಾಟಗಾರರಿಗೆ ಪ್ರೋತ್ಸಾಹ ನೀಡುತ್ತಿದೆಯೇ : ಅಥವಾ ಪೊಲೀಸ್ ಇಲಾಖೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆ ಈ ಕುರಿತು ಸರ್ಕಾರದ ನಿಲುವೇನು: | ರಾಜ್ಯ ಸರ್ಕಾರವು ಡ್ರಗ್ಸ್ ಪ್ರಕರಣಗಳಲ್ಲಿನ ಆರೋಪಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವ ಧ್ಯೇಯವನ್ನು ಹೊಂದಿದ್ದು, ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ಎನ್.ಡಿ.ಪಿ.ಎಸ್. ಕಾಯ್ದೆ ಪ್ರಕರಣಗಳ ತನಿಖೆಯನ್ನು ಅತಿ ಸೂಕ್ಷ್ಮವಾಗಿ ಪರಿಗಣಿಸಿ, ಕ್ರಮಬದ್ಧ ಹಾಗೂ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.<br><br>**<u>ರಾಜ್ಯವನ್ನು ಮಾದಕ ಮುಕ್ತ ರಾಜ್ಯವನ್ನಾಗಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳು</u>**<br><br>➢ 1. ರಾಜ್ಯದಲ್ಲಿ ಮಾದಕ ವಸ್ತುಗಳ ನಿಯಂತ್ರಣ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ: ಹೆಚ್ ಡಿ/141/ಪಿಓಪಿ/2025 ದಿನಾಂಕ: 02/08/2025ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿ ನಾರ್ಕೋಟಿಕ್ಸ್ ಸಂಬಂಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆಗಾಗಿ ಮಾದಕ ವಸ್ತುಗಳ ವಿರೋಧಿ ಕಾರ್ಯಪಡೆ (Anti Narcotics Task Force) ಘಟಕವನ್ನು ಸೃಜಿಸಲಾಗಿದೆ. ಈ ಕಾರ್ಯ ಪಡೆಯು ದಿನಾಂಕ:02.08.2025 ರಂದು ರಚನೆಯಾಗಿರುತ್ತದೆ.<br><br>➢ ಮಾದಕ ಬೆಳೆಗಳ ಗುರುತಿಸುವಿಕೆ ಮತ್ತು ನಾಶ, ಅಕ್ರಮ ಮಾದಕ ವ್ಯಸನವನ್ನು ಪತ್ತೆ ಹಚ್ಚಲು ಮತ್ತು ನಿರ್ಮೂಲನೆ ಮಾಡಲು ರಾಜ್ಯಾದ್ಯಂತ ಪೊಲೀಸ್ ಸಿಬ್ಬಂದಿಗೆ NCB (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ) ಆನ್‌ಲೈನ್ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುತ್ತಿದೆ. ಈ ಉದ್ದೇಶಕ್ಕಾಗಿ NCB ಮೊಬೈಲ್ ಅಪ್ಲಿಕೇಶನ್/ವೆಬ್ ಪೋರ್ಟಲ್ MAPDRUGS ಅನ್ನು ಸಹ ಪರಿಚಯಿಸಲಾಗಿದೆ. |

| | | |
|---|---|---|
| | | ➢ ಮಾದಕವಸ್ತು ಸಂಬಂಧಿತ ಪ್ರಕರಣಗಳಲ್ಲಿ ರಾಜ್ಯ ಪೊಲೀಸರ ತನಿಖಾ ಸಾಮರ್ಥ್ಯಗಳನ್ನು ಹೆಚ್ಚಿಸಲು NCB ಮತ್ತು ಇತರ ಏಜೆನ್ಸಿಗಳ ಸಹಯೋಗದೊಂದಿಗೆ ಆರು ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಉಪ ಅಧೀಕ್ಷಕರವರಿಗೆ (ಡಿವೈಎಸ್ಪಿ), ಪೊಲೀಸ್ ನಿರೀಕ್ಷಕರು ಮತ್ತು ಅಬಕಾರಿ ಅಧಿಕಾರಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗಿರುತ್ತದೆ. ಮತ್ತಷ್ಟು ಸಾಮರ್ಥ್ಯ ನಿರ್ಮಾಣ ಕಾರ್ಯಾಗಾರಗಳನ್ನು ಯೋಜಿಸಲಾಗಿದೆ.<br><br>➢ ತರಬೇತಿ ಕಾರ್ಯಕ್ರಮಗಳು:- ಸಿಐಡಿ ಅಧಿಕಾರಿಗಳನ್ನು ಭೋಪಾಲ್ ನಲ್ಲಿರುವ ಸೆಂಟ್ರಲ್ ಅಕಾಡೆಮಿ ಫಾರ್ ಪೊಲೀಸ್ ಟ್ರೈನಿಂಗ್ (ಸಿಎಪಿಟಿ) ತರಬೇತುದಾರರಿಗಾಗಿ ತರಬೇತಿ (TOT) ಹಾಗೂ ಮಾದಕ ದ್ರವ್ಯ ತನಿಖೆಯ ಮೇಲೆ ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಕಳುಹಿಸಲಾಗಿದೆ. NDPS ಕಾಯ್ದೆ (Narcotic Drugs and Psychotropic Substances Act-1985) ಕುರಿತು ಇತರ ಸಿಬ್ಬಂದಿಗೆ ಪೊಲೀಸ್ ತರಬೇತಿ ಶಾಲೆಗಳಲ್ಲಿ ಇದೇ ರೀತಿಯ ತರಬೇತಿಯನ್ನು ನೀಡಲಾಗುತ್ತಿದೆ.<br><br>➢ ಬೆಂಗಳೂರು ಪೊಲೀಸರು ಅಕ್ರಮ ಮಾದಕ ದ್ರವ್ಯ ಚಟುವಟಿಕೆಗಳಲ್ಲಿ ತೊಡಗಿರುವ ವಿದೇಶಿಗರು ವಾಸಿಸುವ ಪ್ರದೇಶಗಳ ಮೇಲೆ ಸೂಕ್ತ ನಿಗಾ ವಹಿಸಿ ಅಕ್ರಮ ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲಾಗಿದೆ.<br><br>➢ ಮಾದಕ ದ್ರವ್ಯ ಸೇವನೆ, ಮಾರಾಟ, ಸಂಗ್ರಹಣೆ ಮತ್ತು ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಸಿಐಡಿ ಘಟಕದಲ್ಲಿ ವಿಶೇಷ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದಲ್ಲಿ 167 ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br><br>➢ ಜೂನ್ 26, 2025 ರಂದು "ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಣಿಕೆ ವಿರುದ್ಧ ಅಂತರ ರಾಷ್ಟ್ರೀಯ ದಿನಾಚರಣೆ" ಅಂಗವಾಗಿ ಸುಮಾರು 4000 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಗಾರ ಆಯೋಜಿಸಿ ತಿಳುವಳಿಕೆ ನೀಡಲಾಗಿದೆ.<br><br>➢ Drugs Free Karnataka Mobile App ಅನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಮಾದಕವಸ್ತು ಬಳಕೆ, ಸಂಗ್ರಹಣೆ, ಸರಬರಾಜು ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಕೈಗೊಳ್ಳಲಾಗುತ್ತಿದೆ.<br><br>➢ NDPS ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ-National Integrated Database on Arrested Narco Offenders - NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ. |

<table>
<tr>
<td></td>
<td></td>
<td>
➢ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ NCORD (Narcotics Co- ordination) ಸಮಿತಿ ರಚನೆಗೊಂಡಿರುತ್ತದೆ. NDPS ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರ ಇಲಾಖೆಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>
➢ ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳನ್ನು Passport Act-1920, Foreigners Act-1946 & Foreigners Order-1948ರ ಅಡಿಯಲ್ಲಿ ಗಡಿಪಾರು ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.<br><br>
➢ PITNDPS-1988ರ ಕಾಯ್ದೆ ಅನ್ವಯವಾಗುವ ಆರೋಪಿಗಳ ಆರೋಪಿಗಳ ವಿರುದ್ಧ ನಿಯಾಮಾನುಸಾರ ಬಂಧನ ಕ್ರಮ ಜರುಗಿಸಿ ಮಾನ್ಯ PITNDPS ಸಲಹಾ ಮಂಡಳಿಯ ಮುಂದೆ ಬಂಧಿತ ಆರೋಪಿಯನ್ನು ಹಾಜರುಪಡಿಸಿ, ಮಾನ್ಯ ಸಲಹಾ ಮಂಡಳಿಯ ವರದಿಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>
➢ ಡ್ರಗ್ಸ್ ದಂಧೆಯನ್ನು ಸಂಪೂರ್ಣ ಮಟ್ಟ ಹಾಕಲು ಮತ್ತು ಪೆಡ್ಲರ್‌ಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು NDPS-1985ರ Chapter V / PITNDPS-1988ರ ಕಾಯ್ದೆಗಳು ಮತ್ತು ನಿಯಮಗಳಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br><br>
➢ ಕರ್ನಾಟಕ ರಾಜ್ಯವನ್ನು ದುರುಪಯೋಗದಿಂದ ಮುಕ್ತಗೊಳಿಸುವುದಕ್ಕೆ, ಯುವ ಜನತೆಗೆ ನಶೆಯಿಂದ ಉಂಟಾಗುವ ದೈಹಿಕ, ಮಾನಸಿಕ, ಸಾಮಾಜಿಕ ಹಾನಿಗಳ ಬಗ್ಗೆ ಜಾಗೃತಿ ಮೂಡಿಸುವುದಕ್ಕೆ, ಪುನರ್ವಸತಿ, ಕೇಂದ್ರಗಳು, ಸಲಹಾ ಕೇಂದ್ರಗಳು ಮತ್ತು ಸಲಹಾ ಸೇವೆಗಳ ಮೂಲಕ ಪೀಡಿತ ವ್ಯಸನಿಗಳನ್ನು ಸಮಾಜದಲ್ಲಿ ಮರುಸ್ಥಾಪಿಸುವುದಕ್ಕೆ, ಸಮುದಾಯದ ಭಾಗವಹಿಸುವಿಕೆ ಮೂಲಕ ಪರಿಹಾರ ಸಾಧಿಸುವುದಕ್ಕೆ, ನಿರಂತರವಾಗಿ ಇತರೆ ಎಲ್ಲಾ ಇಲಾಖೆಗಳ ಸಹಭಾಗಿತ್ವ ಮತ್ತು ಸಮನ್ವಯದೊಂದಿಗೆ ಶ್ರಮಿಸುತ್ತಿರುತ್ತದೆ.
</td>
</tr>
<tr>
<td>(ಈ)</td>
<td>ಕಳೆದ 3 ವರ್ಷಗಳಲ್ಲಿ ಪೋಲೀಸರು ದಾಖಲಿಸಿದ ಡ್ರಗ್ಸ್ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗುತ್ತಿರುವುದಕ್ಕೆ ಕಾರಣಗಳೇನು: ನ್ಯಾಯಾಲಯಕ್ಕೆ ಪೂರಕ ದಾಖಲೆಗಳನ್ನು ಒದಗಿಸದೆ ಪ್ರಕರಣಗಳ ಖುಲಾಸೆಗೆ ಸಹಕರಿಸುತ್ತಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ : ಕಳೆದ ಎರಡು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಗೊಂಡಿವೆ? (ಪ್ರಕರಣವಾರು ವಿವರ ನೀಡುವುದು)</td>
<td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಮತ್ತು ಖುಲಾಸೆಗೊಂಡ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:<br><br>
<table>
<tr><th>ವರ್ಷ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ</th><th>ಖುಲಾಸೆಗೊಂಡ ಪ್ರಕರಣಗಳ ಸಂಖ್ಯೆ</th></tr>
<tr><td>2023</td><td>6767</td><td>3275</td><td>32</td></tr>
<tr><td>2024</td><td>4188</td><td>1577</td><td>92</td></tr>
<tr><td>2025 (ಜುಲೈ ಅಂತ್ಯಕ್ಕೆ)</td><td>3530</td><td>452</td><td>66</td></tr>
</table>
</td>
</tr>
</table>

| | | |
|---|---|---|
| | | ಖುಲಾಸೆಗೊಂಡ ಪ್ರಕರಣಗಳ ಪ್ರಕರಣಾವಾರು ಮಾಹಿತಿಯನ್ನು **ಅನುಬಂಧ-2 ರಲ್ಲಿ** ಒದಗಿಸಲಾಗಿದೆ.<br>ಎನ್.ಡಿ.ಪಿ.ಎಸ್. ಕಾಯ್ದೆಯ ಪ್ರಕರಣಗಳಲ್ಲಿ ತನಿಖಾಧಿಕಾರಿಗಳ ಲೋಪದೋಷಗಳಿಂದ ಖುಲಾಸೆಗೊಂಡ ಪ್ರಕರಣಗಳಲ್ಲಿ ಒಟ್ಟು 15 ಅಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.<br><br>ಖುಲಾಸೆ ಪ್ರಕರಣಗಳನ್ನು ವಿಮರ್ಶಿಸಲು ರಾಜ್ಯ ಮಟ್ಟದ, ವಲಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ Acquittal Review Committee ಗಳನ್ನು ಸ್ಥಾಪಿಸಲಾಗಿದೆ. ಈ ಸಮಿತಿಗಳು ಖುಲಾಸೆಗೊಂಡ ಪ್ರಕರಣಗಳನ್ನು ವಿಮರ್ಶೆ ಮಾಡಿ, ಖುಲಾಸೆಗೆ ಕಾರಣರಾದರ ಮೇಲೆ ನಿಯಮಗಳಡಿಯಲ್ಲಿ ನೋಟೀಸ್ ಜಾರಿ ಮಾಡಿ, ನಂತರ ಇಲಾಖಾ ವಿಚಾರಣೆಗೆ ಆದೇಶಿಸಿ, ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಡ್ರಗ್ಸ್ /ಎನ್.ಡಿ.ಪಿ.ಎಸ್. ಪ್ರಕರಣಗಳು ವಜಾ / ಖುಲಾಸೆ ಗೊಳ್ಳಲು ಈ ಕೆಳಕಂಡ ಅಂಶಗಳು ಪ್ರಮುಖ ಕಾರಣಗಳಾಗಿರುತ್ತದೆ.<br><br>ಎನ್‌ಡಿಪಿಎಸ್ ಕಾಯ್ದೆಯ ಬಹುತೇಕ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಆರೋಪಿಯನ್ನು ತಪ್ಪಿತಸ್ಥನೆಂದು ಸಾಬೀತುಪಡಿಸಲು ಬೇಕಾದ ಪ್ರಕ್ರಿಯಾತ್ಮಕ ಅನುಸರಣೆ (Procedural Compliance) ಕೊರತೆ, ಸಾಕ್ಷ್ಯಗಳ ಕೊರತೆ ಮತ್ತು ತನಿಖಾ ದೋಷಗಳು ಮುಖ್ಯ ಕಾರಣಗಳಾಗಿವೆ.<br><br>1. ಕಡ್ಡಾಯ ವಿಧಿ/ನಿಯಮಗಳನ್ನು ಪಾಲಿಸದಿರುವುದು<br>2. ದೋಷಪೂರಿತ ಹುಡುಕಾಟ ಮತ್ತು ವಶಪಡಿಸಿಕೆ<br>3. ಸಾಕ್ಷ್ಯ ಸರಪಳಿ (Chain of Custody) ದೋಷಗಳು<br>4. ವೈಜ್ಞಾನಿಕ ಸಾಕ್ಷ್ಯಗಳ ಕೊರತೆ<br>5. ಪ್ರತಿಕೂಲ ಸಾಕ್ಷಿದಾರರು<br>6. ತನಿಖಾ ದೋಷಗಳು<br>7. ಚಾರ್ಜ್‌ಶೀಟ್ ಸಲ್ಲಿಕೆಯಲ್ಲಿ ವಿಳಂಬ<br>8. ಪೂರಕ ಸಾಕ್ಷ್ಯಗಳ ಕೊರತೆ<br>9. ಆರೋಪಿಗೆ ಸಂದೇಹದ ಲಾಭ<br>10. ನ್ಯಾಯಾಲಯದಲ್ಲಿ ಪ್ರಕರಣ ಪ್ರಸ್ತುತಪಡಿಸುವ ದೋಷಗಳು |

ಒಇ 49 ಪಿಎನ್‌ಡಿ 2025 (ಇ)

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬಹಳ ಗಂಭೀರವಾಗಿರುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಈಗ ಸೈಬರ್ ಕ್ರೈಮ್ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಅದೇ ರೀತಿ ಕರ್ನಾಟಕದ ಅಥವಾ ಇಡೀ ದೇಶದ ಮುಂದೆ ಇರುವಂತಹ ಸವಾಲು ಡ್ರಗ್ಸ್.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಪ್ರಶ್ನೆಯನ್ನು ಕೇಳಿ, ಭಾಷಣ ಮಾಡಬೇಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಡ್ರಗ್ಸ್ ಸಮಸ್ಯೆ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಡ್ರಗ್ಸ್ ಬಗ್ಗೆ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 2023, 2024, 2025, ಈ ಮೂರು ವರ್ಷಗಳು ಸೇರಿ 17,485 ಪ್ರಕರಣಗಳು ದಾಖಲಾಗಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಪ್ರಕರಣಗಳು ಒಂದೇ ಸಮನೇ ಹೆಚ್ಚಾಗುತ್ತಿವೆ ಮತ್ತು ಡ್ರಗ್ಸ್ ಉಪಯೋಗಿಸುವಂಥವರ ಸಂಖ್ಯೆ ಕೂಡ ಹೆಚ್ಚಾಗುತ್ತಿವೆ. ಪ್ರಕರಣಗಳೇ ಹದಿನೇಳೂವರೆ ಸಾವಿರ ಇದೆ ಎಂದರೆ, ಡ್ರಗ್ಸ್ ಉಪಯೋಗಿಸುವಂಥವರ ಸಂಖ್ಯೆ ಲಕ್ಷಾಂತರ ಇರುತ್ತದೆ. ಆದ್ದರಿಂದ ಈ ಡ್ರಗ್ಸ್ ಕಡಿಮೆ ಮಾಡುವುದರ ಬಗ್ಗೆ ತಮ್ಮ ಮೂಲಕ ನಾನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬಹಳಷ್ಟು ವಿಷಯಗಳನ್ನು ಉತ್ತರದಲ್ಲಿ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇನೆ. ಸೈಬರ್ ಕ್ರೈಮ್ ಬಗ್ಗೆ ಈಗ ತಾನೇ ನಾವು ಮಾತನಾಡಿದ್ದೇವೆ. ಅದಕ್ಕಿಂತ ಡ್ರಗ್ಸ್ ಹೆಚ್ಚು ಅಪಾಯಕಾರಿ ಆಗಿದೆ. ಇಡೀ ಜನ ಸಮುದಾಯಕ್ಕೆ ಹರಡುತ್ತದೆ ಎನ್ನುವ ಆತಂಕ ನಮಗೆಲ್ಲರಿಗೂ ಬಂದುಬಿಟ್ಟಿದೆ. ಕೆಳಗಿನ ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಬಗ್ಗೆ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೇಳಿದ್ದರು.

(ಮುಂದು)

(924) 21/08/2025 6:20 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ.ಪರಮೇಶ್ವರ್ (ಮುಂದು):-**

ಕೆಳಗಿನ ಮನೆಯಲ್ಲಿ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ಭಾಷಣ ಮಾಡುವ ಸಂದರ್ಭದಲ್ಲಿ, "we will declare a war against drugs in Karnataka." ಎಂಬುದಾಗಿ ಹೇಳಿದರು. ಅಂದರೆ ಆ ಮಟ್ಟಕ್ಕೆ ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿದೆ ಎಂಬುದನ್ನು ಹೇಳಲು ಬಯಸುತ್ತೇನೆ. 2023 ರಲ್ಲಿ 6,767; 2024 ರಲ್ಲಿ 4,188 ಮತ್ತು 2025 ರಲ್ಲಿ 3,530 ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಆದರೆ, ಎಷ್ಟು ಪ್ರಮಾಣದ ಡ್ರಗ್ಸ್ ನಮ್ಮ ಸಮಾಜದಲ್ಲಿ ಪ್ರತಿದಿನ ಹರಿದಾಡುತ್ತಿದೆ ಎನ್ನುವುದು ಬಹಳ ಮುಖ್ಯವಾಗಿದೆ. ಈಗ

ಪ್ರಕರಣಗಳು ಜಾಸ್ತಿಯಾಗಿವೆ ನಿಜ. ಆದರೆ ಬಹಳಷ್ಟು ಜನರಿಗೆ ಅದರಲ್ಲೂ ವಿಶೇಷವಾಗಿ ಯುವಕರಿಗೆ ಶಾಲಾ ಕಾಲೇಜುಗಳಲ್ಲಿ ಮತ್ತು ಈಗ ಐ.ಟಿ. ಸೆಕ್ಟರ್ ಬಂದ ಮೇಲೆ ಇಲ್ಲಿಯೂ ಹೆಚ್ಚು ಪ್ರಕರಣಗಳನ್ನು ಕಾಣುತ್ತೇವೆ. ಸರ್ಕಾರವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. 2020 ನೇ ಸಾಲಿನಲ್ಲಿ ವಶಪಡಿಸಿಕೊಂಡ ಡ್ರಗ್ಸ್‌ನ ಒಟ್ಟು ಮೊತ್ತ ಅಂದಾಜು 35 ಕೋಟಿ ರೂಪಾಯಿಗಳಷ್ಟು ಇದೆ. ಇದರಲ್ಲಿ ಸುಮಾರು 20,764 ಕೆ.ಜಿ. ಗಾಂಜಾ ಮತ್ತು 220 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ಇದೆ. ಸಿಂಥೆಟಿಕ್ ಡ್ರಗ್ಸ್ ಬಹಳ ಅಪಾಯಕಾರಿಯಾದುದಾಗಿದೆ. 2020 ನೇ ಇಸವಿಯಲ್ಲಿ 5,611 ಜನರನ್ನು ದಸ್ತಗಿರಿ ಮಾಡಿದ್ದೇವೆ. ವಿದೇಶಿಯರ ಪೈಕಿ 92 ಜನರನ್ನು ದಸ್ತಗಿರಿ ಮಾಡಿದ್ದೇವೆ. ಇದೇ ರೀತಿಯಾಗಿ 2021 ಮತ್ತು 2022 ರಲ್ಲಿ ಮಾಡಿದ್ದೇವೆ. 2023 ನೇ ಇಸವಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ 10,000 ಕೆ.ಜಿ. ಪ್ರಮಾಣದಷ್ಟು ಡ್ರಗ್ಸ್ ಅನ್ನು ವಶಪಡಿಸಿಕೊಂಡಿದ್ದು, ಆ ಪೈಕಿ 155 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ಇದೆ. ಆಗ ಸುಮಾರು 133 ಕೋಟಿ ರೂಪಾಯಿಗಳ ಮೌಲ್ಯದಷ್ಟು ಡ್ರಗ್ಸ್ ಅನ್ನು ವಶಪಡಿಸಿಕೊಂಡಿದ್ದೇವೆ. ಇದಕ್ಕಾಗಿ ವಿಶೇಷ ತಂಡಗಳಿದ್ದು, ಇವುಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಲೇ ಇವೆ. ಉದಾಹರಣೆಗೆ ಹೇಳುವುದಾದರೆ, ಡ್ರಗ್ಸ್ ಅನ್ನು ವಶಪಡಿಸಿಕೊಳ್ಳುವುದು, ಇದರಲ್ಲಿ ಭಾಗಿಯಾದವರ ವಿರುದ್ಧ ಪ್ರಕರಣಗಳನ್ನು ದಾಖಲಿಸುವುದು ಮಾಡುತ್ತಾರೆ. ಒಂದು ವೇಳೆ ಅವರುಗಳು ವಿದೇಶಿಗರಾಗಿದ್ದರೆ, ಅವರನ್ನು ಗಡಿಪಾರು ಮಾಡುವಂತಹ ಕೆಲಸಗಳನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಒಂದು ಸಂಗತಿ ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಅದೇನೆಂದರೆ, ಕೆಲವು ಕಡೆಗಳಿಂದ ವಿದೇಶಿಗರು ಇಲ್ಲಿಗೆ ಬರುತ್ತಾರೆ. ಸದರಿ ದೇಶಗಳ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನಾಳೆಯ ದಿನ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ನಮ್ಮ ದೇಶದ ಹೆಸರನ್ನು ಹೇಳಿದರು ಎಂದು ಆ ದೇಶದ ರಾಯಭಾರ ಅಥವಾ ದೂತಾವಾಸ ಕಛೇರಿಗಳು ನಮ್ಮ ಮೇಲೆ ಆಪಾದನೆಗಳನ್ನು ಮಾಡಬಾರದು. ಆದರೆ, 2022 ರಿಂದ 2025 ರ ವರೆಗೆ ಸುಮಾರು 318 ವಿದೇಶಿಗರನ್ನು ನಾವು ದಸ್ತಗಿರಿ ಮಾಡಿದ್ದೇವೆ. ಆ ಪೈಕಿ 200 ವಿದೇಶಿಗರನ್ನು ಗಡಿಪಾರು ಮಾಡಿದ್ದೇವೆ. ಇವರಿಗೆ ಸಂಬಂಧಪಟ್ಟ ಹೈ ಕಮಿಷನ್ ಅಥವಾ ರಾಯಭಾರ ಕಛೇರಿಗಳಿಗೆ ನಾವು ವರದಿ ಮಾಡಬೇಕಾಗುತ್ತದೆ. ಆ ನಂತರದಲ್ಲಿ ಅವರ ಅನುಮತಿಯನ್ನು ಪಡೆದುಕೊಂಡ ನಂತರ ಅವರನ್ನು ಗಡಿಪಾರು ಮಾಡಲಾಗುತ್ತದೆ. ಈಗಷ್ಟೇ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ. ನಮ್ಮ ರಾಜ್ಯವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಅವರೇ ಘೋಷಣೆ ಮಾಡಿದ್ದಾರೆ. ಹೀಗಾಗಿ ಇವತ್ತಿನ ದಿವಸ ನಾವು ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಇದನ್ನು ಬಹಳ ಗಂಭೀವಾಗಿ ಪರಿಗಣಿಸಿದ್ದೇವೆ. ಸದಸ್ಯರು ಜಿಲ್ಲಾವಾರು ಮಾಹಿತಿಗಳನ್ನು ಕೋರಿದ್ದು, 2023, 2024 ಮತ್ತು 2025 ನೇ ಸಾಲಿಗೆ ಸಂಬಂಧಿತ ಜಿಲ್ಲಾವಾರು ಮಾಹಿತಿಗಳನ್ನು ಸಹ ಒದಗಿಸಲಾಗಿರುತ್ತದೆ. 2023 ನೇ ಸಾಲಿನಲ್ಲಿ 6,767; 2024 ನೇ ಸಾಲಿನಲ್ಲಿ 4,188 ಮತ್ತು 2025 ನೇ ಸಾಲಿನಲ್ಲಿ 3,530 ಸಂಖ್ಯೆಯಲ್ಲಿ ಪ್ರಕರಣಗಳು ದಾಖಲು ಮಾಡಿದ್ದೇವೆ. ಇದರ ವಿಚಾರಣೆ ನಡೆದಿದ್ದು, ಕೆಲವು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯೂ ಸಹ ಆಗಿದೆ. ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಬಹಳ ವಿಸ್ತೃತವಾದ ಉತ್ತರವನ್ನು

ನೀಡಲಾಗಿದೆ. ಇದಕ್ಕೂ ಮೀರಿ, ಸದಸ್ಯರಿಗೆ ಇನ್ನೂ ಹೆಚ್ಚಿನ ಮಾಹಿತಿಯು ಅವಶ್ಯಕವಾಗಿದ್ದಲ್ಲಿ ಖಂಡಿತವಾಗಿಯೂ ಸಹ ಅವುಗಳನ್ನು ಒದಗಿಸಲಾಗುವುದು.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಇಲ್ಲಿ ಗಾಬರಿಯಾಗುವ ಅಂಶವೇನೆಂದರೆ, ರಾಜ್ಯದ ಯಾವ ಜಿಲ್ಲೆ, ತಾಲ್ಲೂಕುಗಳು ಡ್ರಗ್ಸ್ ಮುಕ್ತವಾಗಿವೆ ಎಂದು ಹೇಳಲು ಬಹಳ ಕಷ್ಟವಿದೆ. ಸರ್ಕಾರವು ನೀಡಿರುವ ಉತ್ತರದಲ್ಲಿ ಎಲ್ಲಾ ಜಿಲ್ಲೆಗಳ ಹೆಸರುಗಳಿವೆ. ಅಂದರೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಪ್ರಕರಣಗಳು ದಾಖಲಾಗಿವೆ. ಅಂದರೆ ಇದರರ್ಥ ರಾಜ್ಯದ ಪ್ರತಿಯೊಂದು ಹಳ್ಳಿ ಹಳ್ಳಿಗೂ ಸಹ ಡ್ರಗ್ಸ್ ತಲುಪಿದೆ. ರಾಜ್ಯದ ಮುಖ್ಯಮಂತ್ರಿಗಳು ನಮ್ಮ ರಾಜ್ಯವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ತಿಳಿಸಿದ್ದು, ಈ ಮಾತನ್ನು ಅವರು ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಇದು ಬಹು ದೊಡ್ಡ ಹೆಮ್ಮಾರಿಯಾಗಿ ವ್ಯಾಪಿಸಿದೆ. ನೂರಾರು ಸಂಖ್ಯೆಯ ವಿದೇಶಿಗರು ಎಲ್ಲಿಯೋ ಭಾಗದಲ್ಲಿ ಕುಳಿತುಕೊಂಡು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಇವತ್ತಿನ ದಿವಸ, ಕೊರಿಯರ್‌ಗಳ ಮೂಲಕವೂ ಸಹ ಡ್ರಗ್ಸ್ ಸರಬರಾಜಾಗುತ್ತಿದೆ. ಮೈಸೂರಿನಲ್ಲಿ 380 ಕೋಟಿ ರೂಪಾಯಿಗಳ ಮೌಲ್ಯದ ಡ್ರಗ್ಸ್ ಫ್ಯಾಕ್ಟರಿಯು ದೊರೆತಿದೆ. ಈ ಸಮಸ್ಯೆಯು ರಾಜ್ಯದ ಯಾವ ಜಿಲ್ಲೆಯನ್ನೂ ಸಹ ಬಿಟ್ಟಿಲ್ಲ. ಕರಾವಳಿ ಕರ್ನಾಟಕದ ಯಾವ ಹಳ್ಳಿಯನ್ನೂ ಹಾಗೂ ಯಾವುದೇ ಬಿಡಾ ಅಂಗಡಿಯನ್ನೂ ಸಹ ಇದು ಬಿಟ್ಟಿರಲಿಕ್ಕಿಲ್ಲ. ಪ್ರಸ್ತುತ ಸದನದಲ್ಲಿ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಉಪಸ್ಥಿತರಿದ್ದಾರೆ. ಸರ್ಕಾರವು ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ವಿದ್ಯಾರ್ಥಿಗಳ ಜೀವನ, ಯುವಕರು ಮತ್ತು ಮನೆತನಗಳು ಹಾಳಾಗಿ ಹೋಗುತ್ತಿವೆ. ಡ್ರಗ್ಸ್ ಎನ್ನುವುದು ಮಹಾ ಪಿಡುಗು ಆಗಿದೆ. ಇದಕ್ಕೆ ಸಂಬಂಧಿತ ಪ್ರಕರಣಗಳು ಸಾವಿರಾರು ಸಂಖ್ಯೆಯಲ್ಲಿ ದಾಖಲಾಗಿರುವುದರಿಂದ ಸರ್ಕಾರವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಈ ವಿಷಯವಾಗಿ ಬಹಳ ಜೋರಾಗಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಿಂತಲೂ ನೂರು ಪಟ್ಟು ಇದರ ಗಾಂಭೀರ್ಯತೆಯು ಸರ್ಕಾರಕ್ಕೆ ಅರ್ಥವಾಗಿದೆ. ಇದರ ಬಗ್ಗೆ ಹೇಳಿದರೆ ಆಶ್ಚರ್ಯವಾಗಬಹುದು ಅದೇನೆಂದರೆ, ಮಾದಕ ದ್ರವ್ಯ ವಿರೋಧಿ ಅಭಿಯಾನದ ಮೂಲಕ ನಾವು ಸುಮಾರು 15 ಲಕ್ಷ ವಿದ್ಯಾರ್ಥಿಗಳನ್ನು ತಲುಪಿದ್ದೇವೆ. ಈ ಬಗ್ಗೆ ನಾನು ವಿಶೇಷವಾದ ಆದೇಶವನ್ನೂ ಸಹ ಮಾಡಿದ್ದೇನೆ. ಸ್ಥಳೀಯ ಪೋಲೀಸರು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜುಗಳಿಗೆ ಪ್ರತಿ ತಿಂಗಳು ಪೋಲೀಸ್ ಅಧಿಕಾರಿಯು ಹೋಗಿ, ಡ್ರಗ್ಸ್ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿಯನ್ನು ಮೂಡಿಸಬೇಕು. ಮಾದಕ ದ್ರವ್ಯ ವಿರೋಧಿ ಅಭಿಯಾನವನ್ನು ಮಾಡುವಂತೆ ಸೂಚನೆಗಳನ್ನು ನೀಡಿದ್ದೇವೆ. ಇದು ನಿರಂತರವಾಗಿ ನಡೆಯುವ ಕಾರ್ಯಕ್ರಮವಾಗಿದ್ದು, ಒಂದು ದಿನವೂ ಸಹ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನಾವು ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸುತ್ತೇವೆ. ಡ್ರಗ್ಸ್ ಅನ್ನು ಉಪಯೋಗಿಸುವವರು ಕೆಲವು ಸಂದರ್ಭಗಳಲ್ಲಿ ಪೋಲೀಸರ ಕೈಗೆ ಸಿಗುವುದೇ ಇಲ್ಲ. ಹೀಗಾಗಿ ಡ್ರಗ್ಸ್ ಪೆಡ್ಲರ್‌ಗಳನ್ನು

ನಾವು ಹಿಡಿಯುತ್ತೇವೆ. ಸಾವಿರಾರು ಜನರು ಡ್ರಗ್ಸ್ ಅನ್ನು ಬಳಸುತ್ತಾರೆ; ಹೀಗಾಗಿ ನಾವು ಸಾವಿರಾರು ಜನರನ್ನು ಹಿಡಿಯಬೇಕಾಗುತ್ತದೆ. ಹೀಗಾಗಿ ಇದನ್ನು ಒಂದು ದಿನದಲ್ಲಿ, ಒಂದು ವರ್ಷದಲ್ಲಿ ಎನ್ನುವ ನಿಗದಿತ ಕಾಲಮಿತಿಯಲ್ಲಿ ಇದನ್ನು ಸಂಪೂರ್ಣವಾಗಿ ಇದನ್ನು ಮುಕ್ತಾಯಗೊಳಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ, ಸರ್ಕಾರವು ಈ ವಿಚಾರದಲ್ಲಿ ಬದ್ಧವಾಗಿದೆ. ರಾಜ್ಯದ ಮುಖ್ಯಮಂತ್ರಿಗಳು ಈಗಾಗಲೇ ಅನೇಕ ಸಂದರ್ಭದಲ್ಲಿ "ನಮ್ಮ ಸರ್ಕಾರವು ರಾಜ್ಯವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದು, ಇದಕ್ಕಾಗಿ ಕಾರ್ಯಕ್ರಮವನ್ನು ಮಾಡುತ್ತೇವೆ" ಎಂಬುದಾಗಿ ಹೇಳಿದ್ದಾರೆ. ಅದರಂತೆಯೇ ನಾವೂ ಸಹ ತೀರ್ಮಾನವನ್ನು ಮಾಡಿದ್ದೇವೆ. ಇಲ್ಲಿ ಯಾರನ್ನೂ ಸಹ ಬಿಡುವ ಪ್ರಶ್ನೆಯೇ ಇಲ್ಲ. ರಾಜ್ಯದ ಮೈಸೂರಿನಲ್ಲಿ ಆಗಿರುವ ಪ್ರಕರಣದ ಹಿನ್ನೆಲೆ ಏನೆಂದರೆ, ಮಹಾರಾಷ್ಟ್ರದ ಮುಂಬಯಿ ಮಹಾನಗರದಲ್ಲಿ ಯಾರೋ ಸಿಕ್ಕಿಬಿದ್ದಿದ್ದು, ಈತನನ್ನು ಅಲ್ಲಿಯ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೊಳಪಡಿಸಿದಾಗ ಆತನು ಮೈಸೂರಿನಲ್ಲಿ ತಮಗೆ ಡ್ರಗ್ಸ್ ದೊರೆಯುತ್ತಿದೆ ಎಂದು ಹೇಳಿದನು. ಆಗ ಮುಂಬಯಿಯ ತನಿಖಾ ತಂಡವು ನಮ್ಮ ರಾಜ್ಯದ ಮೈಸೂರು ಜಿಲ್ಲೆಗೆ ಭೇಟಿ ನೀಡಿದಾಗ ನಮ್ಮ ಸ್ಥಳೀಯ ಪೊಲೀಸರು ಸಹಕಾರವನ್ನು ನೀಡಿದರು. ಸದರಿ ಫ್ಯಾಕ್ಟರಿ ಅನ್ನು ಕೇವಲ 20 ದಿನಗಳ ಹಿಂದೆ ಮಾತ್ರವೇ ನಿರ್ಮಾಣ ಮಾಡಲಾಗಿತ್ತು; ಇದೇನು ದೊಡ್ಡ ಫ್ಯಾಕ್ಟರಿ ಆಗಿರದೇ, ಕೇವಲ ಶೆಡ್ ಮಾತ್ರವೇ ಆಗಿತ್ತು. ಸದರಿ ಶೆಡ್‌ನಲ್ಲಿ ಡ್ರಗ್ಸ್ ಮಾಡಲಾಗುತ್ತಿತ್ತು ಎಂಬ ಕಾರಣಕ್ಕಾಗಿ ಅವರನ್ನು ಹಿಡಿಯಲಾಗಿತ್ತು. ಸದಸ್ಯರು ಈಗಾಗಲೇ ಹೇಳಿದಂತೆ, ಡ್ರಗ್ಸ್ ಆನ್‌ಲೈನ್ ಮತ್ತು ಪಾರ್ಸಲ್‌ಗಳ ಮುಖಾಂತರವೂ ಸಹ ಸರಬರಾಜಾಗುತ್ತಿದೆ. ಪಾರ್ಸಲ್‌ಗಳು ವಿದೇಶಗಳಿಂದ ಬರುತ್ತಿದ್ದು, ಇದು ಯಾರಿಗೂ ಸಹ ಗೊತ್ತಾಗುವುದಿಲ್ಲ. ಒಂದು ವೇಳೆ ಇದನ್ನು ಕಸ್ಟಮ್ಸ್ ಅಧಿಕಾರಿಗಳು ಹಿಡಿದುಕೊಂಡಿಲ್ಲವೆಂದಾದರೆ, ಇದು ಸಮಾಜಕ್ಕೆ ಬರುತ್ತದೆ. ಇದು ಬಹಳ ಕಠಿಣವಾದ ಕೆಲಸವಾಗಿದೆ. ಇದರಲ್ಲಿ ಅವಶ್ಯಕವಾಗಿರುವ ಕ್ರಮಗಳನ್ನೆಲ್ಲಾ ನಾವು ತೆಗೆದುಕೊಳ್ಳುತ್ತಿದ್ದೇವೆ. ಇದನ್ನು ಹತ್ತಿಕ್ಕಲು ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಎನ್ನುವುದನ್ನು ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಸರ್ಕಾರವು ಕ್ರಮ ತೆಗೆದುಕೊಂಡಿರುವ ಅಂಕಿ ಅಂಶಗಳನ್ನು ನಾವು ನೋಡಿದರೆ, 14,485 ಪ್ರಕರಣಗಳಲ್ಲಿ ಕೇವಲ 15 ಅಧಿಕಾರಿಗಳ ವಿರುದ್ಧ ಕ್ರಮವಾಗಿರುತ್ತದೆ. ಇದನ್ನು ನೋಡಿದರೆ ಎಷ್ಟು ಶೇಕಡಾವಾರು ಆಯಿತು? ಪೊಲೀಸ್ ಇಲಾಖೆಯು ಈ ದೊಡ್ಡ ಜಾಲವನ್ನು ನಿರ್ವಹಣೆ ಮಾಡುವುದರಲ್ಲಿ ವಿಫಲವಾಗುತ್ತಿದೆಯೆ? (ಮುಂದು)

(925) 21-08-2025/6-30/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್(ಮುಂದು)**

ಉದಾಹರಣೆಗೆ, ಸೈಬರ್ ಕ್ರೈಮ್ ವಿಭಾಗಕ್ಕೆ ಇಂಜಿನೀಯರಿಂಗ್ ಪದವೀಧರರು ಬೇಕು, ಆ ರೀತಿಯ ಕೋರ್ಸ್‌ಗಳನ್ನು ಓದಿರತಕ್ಕಂತಹವರು ಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ರೀತಿಯ ಒಂದು

ಅಂತರರಾಷ್ಟ್ರೀಯ ಪಿತೂರಿ ಇರತಕ್ಕಂತಹ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಭಯೋತ್ಪಾದನೆಗೂ ಸಹ ಹೋಗುತ್ತಿದೆ ಎನ್ನುವ ವಿಚಾರ ಗೂಢಾಚಾರ ಇಲಾಖೆಯಿಂದ ವರದಿ ಇದೆ. ಆದ್ದರಿಂದ, ಈ ಡ್ರಗ್ಸ್ ಎನ್ನತಕ್ಕಂತಹ ವಿಷಯವನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು, ಏತಕ್ಕೆ ಇಷ್ಟೊಂದು ಕಡಿಮೆ ಅಧಿಕಾರಿಗಳ ವಿರುದ್ಧ ಕ್ರಮ ಆಗಿದೆ? ಇದನ್ನು ನಿಯಂತ್ರಣ ಮಾಡಲಿಕ್ಕೆ ಪೊಲೀಸರು ಸಮರ್ಥರು ಇಲ್ಲವೇ ಎನ್ನುವುದರ ಬಗ್ಗೆ ನನಗೆ ಮಾನ್ಯ ಗೃಹ ಸಚಿವರು ಉತ್ತರ ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-**ಮಾನ್ಯ ಸಭಾಪತಿಯವರೆ, ಈ ವಿಚಾರ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಲ್ಲ. ಸುಮ್ಮ-ಸುಮ್ಮನೆ ಏತಕ್ಕೆ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು? ಅವರು ಕೆಲಸ ಮಾಡುತ್ತಾರೆ. ಯಾರು ಈ ವಿಚಾರದಲ್ಲಿ ತಪ್ಪು ಮಾಡಿರುತ್ತಾರೆ, ಯಾರು ನೆಗ್ಲೆಟ್ ಮಾಡಿರುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಆದರೆ, ಇಲ್ಲಿ ಯಾರೂ ಸಹ ನೆಗ್ಲೆಟ್ ಮಾಡಿರುವುದಿಲ್ಲ. ಹೀಗಿರುವಾಗ ಅವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬೇಕು?

**ಸಭಾಪತಿಯವರು:-** ಆಯಿತು, ಗೃಹ ಸಚಿವರೆ, ಮಾನ್ಯ ಸದಸ್ಯರು ಹೇಳಿದ್ದನ್ನು ಪರಿಗಣಿಸಿ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ Anti-Narcotics Task Force, Narcotics Control Bureau ಎಂದು ಮಾಡಿದ್ದೇವೆ. ಯಾವುದು, ಯಾವುದರಿಂದ ಇದನ್ನು ನಿಲ್ಲಿಸಲಿಕ್ಕೆ ಹತ್ತಿಕ್ಕಲಿಕ್ಕೆ ಬೇಕಾಗಿದೆಯೋ ಆ ಎಲ್ಲಾ ಕ್ರಮಗಳನ್ನೂ ಕೂಡ ನಾವು ಮಾಡಿದ್ದೇವೆ. ಯಾರು ಅಸಡ್ಡೆಯಿಂದ ಕೆಲಸ ಮಾಡುತ್ತಾರೆ, ಕ್ರಮ ಕೈಗೊಳ್ಳಲಾಗುವುದು. ಯಾವ ಪೊಲೀಸ್‌ನವರು ಸರಿಯಾಗಿ ಕೆಲಸ ಮಾಡುವುದಿಲ್ಲವೆನ್ನುವ ಭಾವನೆ ಬೇಡ. ಯಾರು ತಪ್ಪು ಮಾಡುತ್ತಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ಎಲ್ಲರೂ ತಪ್ಪು ಮಾಡುತ್ತಾರೆಯೇ ಇಷ್ಟೆಲ್ಲಾ ನಾವು narcotic drugs ಗೆ ಸಂಬಂಧಿಸಿದ ವಿವರವನ್ನು ನಾನು ಕೊಟ್ಟಿದ್ದೇನೆ. ಇಷ್ಟೆಲ್ಲಾ ಹೇಗೆ ಬಂತು? ಈ ಸಂಖ್ಯೆ ಹೇಗೆ ಬಂತು, ಈ ಡ್ರಗ್ಸ್ ಅನ್ನು ಹೇಗೆ ಹಿಡಿದರು? ಯಾರು ಹಿಡಿದರು? ಪೊಲೀಸ್‌ನವರೇ ಹಿಡಿದರು ಅಲ್ಲವೇ? ಅವರು ಕೆಲಸ ಮಾಡಿದ್ದಾರೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆಬಯಸುತ್ತೇನೆ.

**(ಗೊಂದಲ)**

## ಆ) ತಡೆಹಿಡಿಯಲಾದ ಪ್ರಶ್ನೆಗಳು

### ಪ್ರಶ್ನೆ ಸಂಖ್ಯೆ493

### ಪೊಲೀಸ್ ಇಲಾಖೆ ಅಧಿಕಾರಿಗಳ ಗೃಹ ಸೇವಕ ಭತ್ಯೆ ಕುರಿತು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಪೊಲೀಸ್ ಇಲಾಖೆಯಲ್ಲಿ ಯಾವ ಯಾವ ವೃಂದದ ಅಧಿಕಾರಿಗಳಿಗೆ ಗೃಹ ಸೇವಕರನ್ನು ನೀಡಲಾಗಿದೆ. (ಘಟಕವಾರು/ಜಿಲ್ಲಾವಾರು ವಿವರಗಳನ್ನು ಪ್ರತ್ಯೇಕವಾಗಿ ಹೆಸರು ಮತ್ತು ಹುದ್ದೆಗಳೊಂದಿಗೆ ವಿವರ ಒದಗಿಸುವುದು) | ಪೊಲೀಸ್ ಮಾನ್ಯೂಯಲ್ನ ಆದೇಶ ಸಂಖ್ಯೆ: 862 ರಲ್ಲಿ ವಿವಿಧ ವೃಂದದ ಅಧಿಕಾರಿಗಳಿಗೆ ನಿಯೋಜಿಸಬಹುದಾದ ಆರ್ಡರ್ಲಿ ಸಿಬ್ಬಂದಿಗಳ ಸಂಖ್ಯೆಯನ್ನು ನಿಗದಿಪಡಿಸಲಾಗಿದ್ದು, ಅನುಬಂಧ-1 ರಲ್ಲಿ ಒದಗಿಸಿದೆ.<br>ಸರ್ಕಾರದ ಆದೇಶ ಸಂಖ್ಯೆ: ಒಇ 289 ಪೊಸಿಇ 2014, ದಿನಾಂಕ: 08.03.2017ರಲ್ಲಿ ಪೊಲೀಸ್ ಇಲಾಖೆಯಲ್ಲಿನ ಆರ್ಡರ್ಲಿ ವ್ಯವಸ್ಥೆಯನ್ನು ಪರಿಷ್ಕರಿಸಿ ಆರ್ಡರ್ಲಿ ಸಿಬ್ಬಂದಿಗಳ ಬದಲಿಗೆ ನಿಗದಿಪಡಿಸಲಾದ ಶೇ. 50 ರಷ್ಟು ಅನುಯಾಯಿಗಳನ್ನು ಅನುಬಂಧ-2 ರಲ್ಲಿ ವಿವರಿಸಲಾದಂತೆ, ನೇಮಿಸಲು ಹಾಗೂ ಬದಲಿಯಾಗಿ ಭತ್ಯೆಯನ್ನು ನೀಡಲು ಆದೇಶಿಸಲಾಗಿದೆ.<br>ಸರ್ಕಾರದ ಆದೇಶದನ್ವಯ ಆರ್ಡರ್ಲಿ ಸಿಬ್ಬಂದಿಗಳ ಬದಲಿಗೆ ಅನುಯಾಯಿಗಳನ್ನು ನೇಮಿಸಲು ಅನುವಾಗುವಂತೆ 373 ಅನುಯಾಯಿ ಹುದ್ದೆಗಳನ್ನು ಸೃಜಿಸಲು ಹಾಗೂ ಅನುಯಾಯಿ ಭತ್ಯೆಯನ್ನು ಪರಿಷ್ಕರಿಸುವ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ | ಆರ್ಡರ್ಲಿ/ ಗೃಹ ಸೇವಕರನ್ನು ಪಡೆದಿರುವ ಬದಲಾಗಿ ಸರ್ಕಾರವು ನಿಗಧಿಗೊಳಿಸಿರುವ, ಮನೆ ಪರಿಚಾರಕರ ಭತ್ಯೆಯನ್ನು ಯಾವ ಯಾವ ಘಟಕಾಧಿಕಾರಿಗಳಿಗೆ/ಅಧಿಕಾರಿಗಳಿಗೆ ಇದುವರೆಗೂ ಭರಿಸಲಾದ ವೆಚ್ಚವೆಷ್ಟು (ವಿವರ ನೀಡುವುದು); | ಯಾವುದೇ ಅಧಿಕಾರಿಗಳು ಆರ್ಡರ್ಲಿ ಸಿಬ್ಬಂದಿಯ ಬದಲಿಗೆ ಭತ್ಯೆಯನ್ನು ಡ್ರಾ ಮಾಡಿರುವುದಿಲ್ಲ. |
| ಇ | ಪೊಲೀಸ್ ಇಲಾಖೆಯಲ್ಲಿ ಯಾವ ಯಾವ ಕಛೇರಿ/ಘಟಕಗಳಲ್ಲಿ ಸರ್ಕಾರದ ಹಣ ದುರುಪಯೋಗವಾಗಿದೆ; ಅಪರಾಧ ಮೊಕ್ಕದ್ದಮೆಗಳ ವಿವರಗಳು ಹಾಗೂ ದುರುಪಯೋಗವಾಗಿರುವ ಒಟ್ಟು ಹಣವೆಷ್ಟು; (ಪ್ರತ್ಯೇಕವಾಗಿ ದಾಖಲೆಗಳೊಂದಿಗೆ ಮಾಹಿತಿ ನೀಡುವುದು) | ಪೊಲೀಸ್ ಇಲಾಖೆಯ ವಿವಿಧ ಕಛೇರಿ/ಘಟಕಗಳಲ್ಲಿ ಸರ್ಕಾರದ ಹಣ ದುರುಪಯೋಗ ಹಾಗೂ ಈ ಕುರಿತು ದಾಖಲಾದ ಅಪರಾಧ ಮೊಕದ್ದಮೆಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ | ಇಂತಹ ಪ್ರಕರಣಗಳ ಘಟಕಾಧಿಕಾರಿಗಳ ವಿರುದ್ಧ ಅಪರಾಧ ಮೊಕ್ಕದ್ದೊಮೆಗಳನ್ನು ದಾಖಲಿಸಿಸದಿರಲು ಕಾರಣಗಳೇನು; ಘಟಕಾಧಿಕಾರಿಗಳು ಸರ್ಕಾರದ ಹಣಕ್ಕೆ ಜವಾಬ್ದಾರರಲ್ಲವೇ? (ಸಂಪೂರ್ಣ ವಿವರ ಒದಗಿಸುವುದು) | ಕ್ರಮ ಸಂಖ್ಯೆ (ಇ) ರಲ್ಲಿ ವಿವರಿಸಲಾಗಿದೆ. |
| ಉ | ಪೊಲೀಸ್ ಇಲಾಖೆಯಲ್ಲಿ ದಿನಾಂಕ: 01.01.2015 ರಿಂದ 31.03.2025 ರವರೆಗೆ ದಾಖಲಾದ ಅಪರಾಧ ಪ್ರಕರಣಗಳ ಸಂಖ್ಯೆ ಎಷ್ಟು; ಸದರಿ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾದ ಪ್ರಕರಣಗಳು /ವಜಾಗೊಂಡ ಪ್ರಕರಣಗಳು ಎಷ್ಟು; ವಜಾಗೊಳಿಸಲು ಪ್ರಮುಖ ಕಾರಣಗಳೇನು: ವೈಫಲ್ಯ / ನಿರ್ಲಕ್ಷತೆ / ಬೇಜವಾಬ್ದಾರಿತನದ ತನಿಖಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡ ಪ್ರಕರಣಗಳೆಷ್ಟು; ಕ್ರಮ ಕೈಗೊಳ್ಳದಿದ್ದಲ್ಲಿ ಕ್ರಮ ಕೈಗೊಳ್ಳದಿರಲು ಕಾರಣಗಳೇನು; ಎಲ್ಲಾ ಪ್ರಕರಣಗಳ ತನಿಖೆಗಾಗಿ, ತನಿಖಾ ವೆಚ್ಚ ಶೀರ್ಷಿಕೆಯಲ್ಲಿ ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟ ಎಷ್ಟು?(ಘಟಕವಾರು/ಠಾಣಾವಾರು ವಿವರವನ್ನು ದಾಖಲೆಗಳೊಂದಿಗೆ ಮಾಹಿತಿ ನೀಡುವುದು) | ಪೊಲೀಸ್ ಇಲಾಖೆಯಲ್ಲಿ ದಿನಾಂಕ: 01.01.2015 ರಿಂದ 31.03.2025 ರವರೆಗೆ ದಾಖಲಾದ ಅಪರಾಧ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ. |

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | ವಜಾಗೊಂಡ ಪ್ರಕರಣಗಳ ಸಂಖ್ಯೆ |
|---|---|---|---|
| 01.01.2015 ರಿಂದ 31.03.2025 | 21,62,372 | 4,91,871 | 2,52,488 |

ವರ್ಷಾವಾರು ವಿವರಗಳನ್ನು ಅನುಬಂಧಲ್ಲಿ-4 ಒದಗಿಸಲಾಗಿದೆ ಪ್ರಕರಣಗಳು ವಜಾ/ಖುಲಾಸೆ ಗೊಳ್ಳಲು ಈ ಕೆಳಕಂಡ ಅಂಶಗಳು ಪ್ರಮುಖ ಕಾರಣಗಳಾಗಿರುತ್ತದೆ.

1. ಆರೋಪವನ್ನು ಸಾಬೀತುಪಡಿಸಲು ಬೇಕಾದ ದೃಢವಾದ ಸಾಕ್ಷ್ಯಗಳ (Physical, documentary, scientific) ಅಲಭ್ಯತೆ.
2. ಸಾಕ್ಷಿದಾರರ ಹೇಳಿಕೆಗಳಲ್ಲಿ ಪರಸ್ಪರ ವ್ಯತ್ಯಾಸ ಅಥವಾ ಸಾಕ್ಷ್ಯ ಹಿಂಪಡೆಯುವುದು (hostile witness)
3. ತನಿಖಾ ಪ್ರಕ್ರಿಯಾ ನಿಯಮ ಉಲ್ಲಂಘನೆ.
4. ಆರೋಪಿಗಳಿಗೆ ಅನುಕೂಲಕರ ಅನುಮಾನ (Benefit of Doubt) ಪ್ರಕರಣದಲ್ಲಿ ಸಂಶಯ ಸೃಷ್ಟಿಯಾದಾಗ.
5. ಕಾನೂನು ಅನುಸಾರ ಸಂಗ್ರಹಿಸದ ಸಾಕ್ಷ್ಯ ನ್ಯಾಯಾಲಯದಲ್ಲಿ ತಿರಸ್ಕೃತವಾದಾಗ.
6. ವಿಜ್ಞಾನಾಧಾರಿತ ವರದಿ ಕೊರತೆ ಇತ್ಯಾದಿ.
7. ಅಪರಾಧವನ್ನು ಸಾಬೀತುಪಡಿಸಲು ಬೇಕಾದ ಸರಪಳಿಯ ವ್ಯತ್ಯಾಸ (Chain of Custody Break).
8. ಅರ್ಜಿದಾರ ಅಥವಾ ನೊಂದವರು ತನ್ನ ದೂರನ್ನು ಹಿಂಪಡೆಯುವುದು.
9. ದೀರ್ಘಕಾಲ ವಿಚಾರಣೆ ವಿಳಂಬದಿಂದ ಸಾಕ್ಷಿದಾರರ ಅಸಕ್ತಿ ಕುಗ್ಗುವುದು ಮತ್ತು ಸಾಕ್ಷ್ಯ ನಾಶ.

ಕರ್ತವ್ಯದಲ್ಲಿ ನಿರ್ಲಕ್ಷತೆ/ ಬೇಜವಾಬ್ದಾರಿತನ ತೋರಿರುವ ಒಟ್ಟು 3051 ತನಿಖಾಧಿಕಾರಿಗಳ ವಿರುದ್ಧ ಇಲಾಖಾ ಶಿಸ್ತು ನಿಯಮಗಳಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

498 ತನಿಖಾಧಿಕಾರಿಗಳ ವಿರುದ್ಧ ಈ ಕೆಳಕಂಡ ಕಾರಣಗಳಿಂದ ಶಿಸ್ತು ಕ್ರಮ ಕೈಗೊಂಡಿರುವುದಿಲ್ಲ.

1. ಪೂರ್ವಭಾವಿ ವಿಚಾರಣೆ/ಇಲಾಖಾ ವಿಚಾರಣೆ ನಂತರ ಆರೋಪ ಸಾಬೀತಾಗದ ಪ್ರಯುಕ್ತ.
2. ತನಿಖಾಧಿಕಾರಿ ವಯೋನಿವೃತ್ತಿಯಾದ ಪ್ರಯುಕ್ತ.
3. ಹಳೆಯ ಪ್ರಕರಣವಾದ್ದರಿಂದ ಸಾಕ್ಷಿಗಳನ್ನು ಸಂಗ್ರಹಿಸಲು ಸಾಧ್ಯವಾಗದ ಪ್ರಯುಕ್ತ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-5 ರಲ್ಲಿ ಒದಗಿಸಲಾಗಿದೆ.

ತನಿಖಾ ವೆಚ್ಚ ಅಡಿ ಬಿಡುಗಡೆಗೊಳಿಸಿರುವ ಅನುದಾನ ಮತ್ತು ಬಳಕೆ ಮಾಡಿರುವ ವಿವರಗಳು ಈ ಕೆಳಕಂಡಂತಿದೆ.

| ವರ್ಷ | ತನಿಖಾ ವೆಚ್ಚಕ್ಕೆ ಬಿಡುಗಡೆಯಾದ ಅನುದಾನ | ಬಳಕೆಯಾದ ಅನುದಾನ |
|---|---|---|
| 01.01.2015 ರಿಂದ 31.03.2025 | 81,27,62,005 | 75,56,87,519 |

ವರ್ಷಾವಾರು ಘಟಕವಾರು ಮತ್ತು ಪೊಲೀಸ್ ಠಾಣಾವಾರು ವಿವರಗಳನ್ನು ಅನುಬಂಧಲ್ಲಿ-6 ರಲ್ಲಿ ಒದಗಿಸಲಾಗಿದೆ. ಬಿಡುಗಡೆ ಮಾಡಿರುವ ತನಿಖಾ ವೆಚ್ಚವನ್ನು ಅಪರಾಧ ತನಿಖೆಗಳಲ್ಲಿ ಸಮರ್ಪಕವಾಗಿ ಬಳಕೆ ಮಾಡಿದ್ದು ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

**ಶ್ರೀ ಅಡಗೂರು ಹೆಚ್ ವಿಶ್ವನಾಥ್( ನಾಮನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೆ, ತಡೆ ಹಿಡಿಯಲಾದ ನನ್ನ ಪ್ರಶ್ನೆಯನ್ನು ಗೃಹ ಸಚಿವರಿಗೆ ಕೇಳಲಿಕ್ಕೆ ಬಯಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಗೃಹ ಸಚಿವರು):–**ಮಾನ್ಯ ಸಭಾಪತಿಯವರೆ, ಇದು ತಡೆ ಹಿಡಿದು ಬಹಳ ದಿನಗಳ ನಂತರ ಬಂದಂತಹ ಪ್ರಶ್ನೆಯಾಗಿದೆ. ಏಕೆಂದರೆ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಬಹಳ ವಿವರವಾದಂತಹ ಉತ್ತರವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ವಿಶ್ವನಾಥ್‌ರವರು ಕೇಳಿದ್ದಾರೆ. ಇಡೀ ರಾಜ್ಯದ ಡಾಟಾವನ್ನು ಕೇಳಿದ್ದಾರೆ. ಅದನ್ನು ನಾನು ಆದಷ್ಟು ಒದಗಿಸಿಕೊಟ್ಟಿದ್ದೇನೆ. ಅವರು ಯಾವ ಯಾವ ವೃಂದದ ಅಧಿಕಾರಿಗಳಿಗೆ ಗೃಹ ಸೇವಕರನ್ನು ನೀಡಲಾಗಿದೆ ಎಂದು ಕೇಳಿದ್ದಾರೆ. ಅಂದರೆ, ಅವರು ಆರ್ಡರ್ಲಿಗಳು. ಮಾನ್ಯ ಸಭಾಪತಿಯವರೆ, ನಾನು ಮೊದಲ ಬಾರಿಗೆ ಅಂದರೆ 2015 ರಲ್ಲಿ ಗೃಹ ಸಚಿವನಾದಂತಹ ಸಂದರ್ಭದಲ್ಲಿ ಮೊದಲಿಗೆ ನನಗೆ ನಮ್ಮ ಮಾಧ್ಯಮ ಸ್ನೇಹಿತರು ಕೇಳಿದ್ದು ಏನೆಂದರೆ, ನೀವು ಹೊಸದಾಗಿ ಗೃಹ ಸಚಿವರಾಗಿ ಬಂದಿದ್ದೀರಿ, ಈ ಆರ್ಡರ್ಲಿಗಳನ್ನು ನಿಲ್ಲಿಸುತ್ತೀರಾ ಎಂದು ಕೇಳಿದರು. ಪ್ರತಿಯೊಬ್ಬ ಅಧಿಕಾರಿಯ ಮನೆಯಲ್ಲೂ 3 ಜನ, 4 ಜನ ಮತ್ತು 5 ಜನ ತರಬೇತಿ ಹೊಂದಿದ ಕಾನ್ಸ್‌ಟೇಬಲ್‌ಗಳನ್ನು ಬಟ್ಟೆ ಒಗೆಯುವುದಕ್ಕೆ menial jobs

ಮಾಡುವುದಕ್ಕೆ ಮಾರುಕಟ್ಟೆಗೆ ಹೋಗಿ ತರಕಾರಿ ತರುವುದಕ್ಕೆ, ಮಕ್ಕಳನ್ನು ಶಾಲೆಗಳಿಗೆ ಬಿಡಲಿಕ್ಕೆ ಉಪಯೋಗಿಸುತ್ತಿದ್ದು, ನೀವು ಇದನ್ನು ನಿಲ್ಲಿಸುತ್ತೀರಾ ಎಂದವರು ನನ್ನನ್ನು ಕೇಳಿದರು. ಆಗ ನಾನು ದಿನಾಂಕ: 8-3-2017ರಲ್ಲಿ ಆದೇಶ ಮಾಡಿ, ಈ ಆರ್ಡರ್ಲಿಗಳನ್ನು ನಿಲ್ಲಿಸಬೇಕೆಂದು ಬ್ಯಾನ್ ಮಾಡಬೇಕೆಂದು ಹೇಳಲಾಯಿತು. ಅವರಿಗೆ ಅದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಬೇಕಲ್ಲವೇ? ಅವರುಗಳ ಮನೆಯಲ್ಲಿ ಕೆಲಸ ಮಾಡುವವರು ಬೇಕಾಗುತ್ತಾರೆ, ಸಹಾಯಕರು ಬೇಕಾಗುತ್ತಾರೆ ಎಂದು ಹೇಳಿ ಅವರಿಗೆ ಫಾಲೋಯರ್ಸ್ ಎಂದು ಹೇಳಿ ಅನುಯಾಯಿಗಳು ಎಂದು ಹೇಳಿ ಇದ್ದಾರೆ. ಆ ಅನುಯಾಯಿಗಳು ತರಬೇತಿ ಪೋಲೀಸರು ಆಗಿರುವುದಿಲ್ಲ. ಅವರುಗಳನ್ನು ಉಪಯೋಗ ಮಾಡಿಕೊಳ್ಳಿ, ಇಲ್ಲವೆಂದರೆ, ನಿಮಗೆ ಹಣ ಕೊಡುತ್ತೇವೆ, ನೀವು ನಿಮಗೆ ಬೇಕಾದ ಅಟೆಂಡರ್ಸ್‌ಗಳನ್ನು ನೇಮಕ ಮಾಡಿಕೊಳ್ಳಿ ಎಂದು ಹೇಳಿ ನಾವು ಅವರುಗಳಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಹೀಗಾಗಿ, ಇವತ್ತಿಗೆ ಏನು ಮೂರು-ಮೂರುವರೆ ಸಾವಿರ ಜನ ಆರ್ಡರ್ಲಿಗಳು ಇದ್ದರು, ಅವರುಗಳನ್ನು ತೆಗೆದು ಹಾಕಿದ್ದು, ಈಗ ಕೇವಲ 373 ಜನರು ಇದ್ದು, ಅವರುಗಳನ್ನೂ ಸಹ ನಾವು ಈಗ ತೆಗೆದು ಹಾಕುತ್ತೇವೆ. ಆ ಅರ್ಡರ್ಲಿಗಳ ಬದಲು ಫಾಲೋಯರ್ಸ್ ಎಂದು ಹೇಳಿ, ಅನುಯಾಯಿಗಳು ಎಂದು ಹೇಳಿ ನಾವು ಅವರುಗಳಿಗೆ ಕೊಡುವಂತಹ ಕೆಲಸಗಳನ್ನು ಮಾಡುತ್ತೇವೆ.

ಮತ್ತೊಂದು ಬಹಳ ಪ್ರಾಮುಖ್ಯವಾದ ವಿಚಾರವನ್ನು ಕೇಳಿದ್ದಾರೆ. ಪೋಲೀಸ್ ಇಲಾಖೆಯಲ್ಲಿ 2015 ರಿಂದ 31-03-2025 ರವರೆಗೆ ಅಂದರೆ 2015 ರಿಂದ 2025 ರವರೆಗೆ ದಾಖಲಾದ ಅಪರಾಧಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಅಷ್ಟು ವರ್ಷಗಳದ್ದು ಮಾಹಿತಿಯನ್ನು ಕೇಳಿದ್ದಾರೆ. ಆಮೇಲೆ ಇಡೀ ಇಲಾಖೆಯಲ್ಲಿಯೇ ಎಲ್ಲಾ ಅಪರಾಧಿಗಳ ಮಾಹಿತಿಯನ್ನು ಕೇಳಿದ್ದಾರೆ. ಅದಕ್ಕೆ ನಾನು ಬಹಳ ಸಮಯವನ್ನು ತೆಗೆದುಕೊಂಡು ಇವತ್ತು ಅವರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಸುಮಾರು 21,62,372 ದಾಖಲಾಗಿರತಕ್ಕಂತಹ ಪ್ರಕರಣಗಳು, ಇದ್ದು, ಅದರಲ್ಲಿ ಶಿಕ್ಷೆ ಎಷ್ಟು ಜನರಿಗೆ ಆಗಿದೆ ಎಂದರೆ 4,91, 871 ಪ್ರಕರಣಗಳಿಗೆ ಸಂಬಂಧಪಟ್ಟಂತೆ ಶಿಕ್ಷೆಯಾಗಿದೆ. ಪ್ರಕರಣಗಳು ವಜಾ ಆಗಿರುವಂತಹದ್ದು 2,52,488 ಪ್ರಕರಣಗಳು. ಇದು ಮಾನ್ಯ ಶ್ರೀ ವಿಶ್ವನಾಥ್‌ರವರು ಕೇಳಿದಂತಹ ಮಾಹಿತಿಯ ವಿವರಗಳನ್ನು ನಾನು ಇವತ್ತು ಅವರಿಗೆ ಕೊಟ್ಟಿದ್ದೇನೆ. ಅವರು ಬೇರೆ ಬೇರೆ ವಿಚಾರಗಳನ್ನು ಸಹ ಕೇಳಿದ್ದಾರೆ. ಯಾವ ಅಧಿಕಾರಿಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದ್ದು, ಅದೆಲ್ಲವನ್ನೂ ಸಹ ನಾನು ಉತ್ತರದಲ್ಲಿ ಒದಗಿಸಿಕೊಟ್ಟಿದ್ದೇನೆ. ಅವರು ಇನ್ನು ಬೇರೆ ಏನಾದರೂ ಪ್ರಶ್ನೆಯನ್ನು ಕೇಳುವುದು ಇದ್ದರೆ ಉತ್ತರವನ್ನು ನಾನು ಕೊಡುತ್ತೇನೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಗೆ ಉತ್ತರ ಇಷ್ಟೆಲ್ಲಾ ಇದೆ. ಸ್ವಲ್ಪ ಸಮಯದ ಹಿಂದೆ ನಮ್ಮ ಅಬಕಾರಿ ಸಚಿವರು ಸದನದಲ್ಲಿದ್ದರು. ಅವರ ಜೊತೆ ರಾತ್ರಿಯೆಲ್ಲಾ ಕುಳಿತು ಚರ್ಚೆ ಮಾಡೋಣ ಎಂದರೆ ಅವರು ಹೊರಟೇ ಹೋಗಿದ್ದಾರೆ. ಆ ರೀತಿಯ ಪರಿಸ್ಥಿತಿ

ಇದೆ. ಅವರು ನನಗೆ ಏನಾದರೂ ಕೇಳಬಹುದು ಎಂದು ಹೇಳಿ ಹೋಗಿಬಿಟ್ಟಿದ್ದಾರೆ. ಹಾಗಾಗಿ, ಇಲ್ಲಿ ವಿಷಯ ಇಷ್ಟೆ ಇದೆ. ಏಕೆಂದರೆ, ಆರ್ಡರ್ಲಿಗಳ ವಿಚಾರ ಇಲ್ಲಿ ಇದೆ. ಅದರ ಬಗ್ಗೆ ಹೇಳಿದ್ದೀರಿ. ವಾಸ್ತವವಾಗಿ 5,000ಕ್ಕೂ ಮೀರಿ ಪೋಲೀಸ್ ಕಾನ್ಸ್‌ಟೇಬಲ್‌ಗಳು ಇವತ್ತು ಆರ್ಡರ್ಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಅಧಿಕಾರಿಗಳ ಮನೆ ಬಟ್ಟೆ ಒಗೆಯುವುದು, ಹೆಣ್ಣು ಮಕ್ಕಳ ಸೀರೆಯನ್ನು ಒಗೆಯುವುದು, ಮಕ್ಕಳುಗಳನ್ನು ಶಾಲೆಗಳಿಗೆ ಬಿಟ್ಟು ಬರುವುದು, ಇದು ಒಂದು ರೀತಿಯಲ್ಲಿ ಅಮಾನವೀಯವಾದಂತಹ ಕೆಲಸಗಳನ್ನು ನಾವು ಪೋಲೀಸ್ ಕಾನ್ಸ್‌ಟೇಬಲ್‌ಗಳಿಂದ ಮಾಡಿಸುತ್ತಿದ್ದೇವೆ. ನಾವು ಅವರಿಗೆ ಎಷ್ಟು ಸಂಬಳವನ್ನು ಕೊಡುತ್ತಿದ್ದೇವೆ? ನಾವು ಒಬ್ಬೊಬ್ಬರಿಗೆ ಸುಮಾರು 75,000 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮತ್ತೆ ಎರಡು ಜೊತೆ ಷೂ.ಗಳು, ಎರಡು ಜೊತೆ ಸಾಕ್ಸ್‌ಗಳು ಮತ್ತು ಅವರುಗಳಿಗೆ ಯೂನಿಫಾರಂ ಇವುಗಳೆಲ್ಲವೂ ಇದ್ದು, ಮತ್ತೆ ಬೇರೆ ಬೇರೆ ಇಲಾಖೆಗಳವರಿಗೆ 12 ತಿಂಗಳುಗಳ ಸಂಬಳವಾದರೆ, ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ 13 ತಿಂಗಳುಗಳ ಸಂಬಳವನ್ನು ಕೊಡುತ್ತಾರೆ. ಏಕೆಂದರೆ, ಅವರುಗಳು ರಜಾದಿನಗಳಲ್ಲಿಯೂ ಸಹ ಕೆಲಸ ಮಾಡುತ್ತಾರೆ. ಆಮೇಲೆ ಅವರುಗಳಿಗೆ ರೇಷನ್ ಕೊಡುತ್ತೇವೆ. ಇಷ್ಟೆಲ್ಲವನ್ನು ಕೊಟ್ಟು, ಅವರುಗಳು ಯಾರದ್ದೋ ಮನೆಯಲ್ಲಿ ಸೀರೆ ಒಗೆಯುವ ಕೆಲಸವನ್ನು ಮಾಡುತ್ತಿದ್ದಾರೆಂದರೆ, what is this? ತಾವು ಹೇಳಿದ್ದು ನಿಜ. ಬಹಳ ಕಟ್ಟುನಿಟ್ಟಿನ ಕ್ರಮ ಜರುಗಿಸದರೆ ಮಾತ್ರ ಇದನ್ನು ನಿಲ್ಲಿಸಲಿಕ್ಕೆ ಸಾಧ್ಯವಿದೆ. ಏಕೆಂದರೆ, ಈಗ ಇವರಿಗಿಂತ ಕಂದಾಯ ಇಲಾಖೆಯಲ್ಲಿ ಬರುವಂತಹ ಡಿ.ಸಿ. ಗಳಿಗೆ ಏತಕ್ಕೆ ಇದನ್ನು ಕೊಡುತ್ತಿಲ್ಲ, ಎ.ಸಿ.ಗಳಿಗೆ ಏತಕ್ಕೆ ಕೊಡುತ್ತಿಲ್ಲ, ತಹಶೀಲ್ದಾರ್‌ಗಳಿಗೆ ಏತಕ್ಕೆ ಕೊಡುತ್ತಿಲ್ಲ,? ಬರೀ ಪೋಲೀಸ್‌ನವರಿಗೆ ಮಾತ್ರ ಏಕೆ? ಪೋಲೀಸ್ ಇಲಾಖೆಯವರ ಜೀವ ಬಹಳ ದೊಡ್ಡದು ಆಗಿದೆಯೇ? ನಮ್ಮ exchequer ನಿಂದ ಎಷ್ಟು ಹೋಗುತ್ತಿದೆ? ಬಹಳಷ್ಟು ಹೋಗುತ್ತಿದೆ. ಮತ್ತೆ, ತಾವು ಕೂಡ ಹೇಳಿದ್ದೀರಿ. ನಾವು ಇರುವಂತಹ ಕೇಸ್‌ಗಳನ್ನು ಎಷ್ಟರಮಟ್ಟಿಗೆ ವಿಚಾರಣೆಗಳನ್ನು ಮಾಡುತ್ತಿದ್ದೇವೆ ಎಂದರೆ 21,62,372 ಕೇಸ್‌ಗಳಲ್ಲಿ 4,091 ಕೇಸ್‌ಗಳ ವಿಚಾರಣೆ ಮಾತ್ರ ಆಗಿದೆ. ಏತಕ್ಕೆ ಇವತ್ತು ಕ್ರೈಮ್ ರೇಟ್ ಜಾಸ್ತಿಯಾಗುತ್ತಿದೆ ಎನ್ನುವುದಕ್ಕೆ ಕಾರಣ, ನಮ್ಮಲ್ಲಿ ವಿಚಾರಣೆ ಸರಿಯಾಗಿ ಆಗುತ್ತಿಲ್ಲ. ಹಿಂದೆ ನನಗೆ ಗೊತ್ತಿರುವ ಪ್ರಕಾರ ಅಂದರೆ ನಾನು 1978 ರಲ್ಲಿ ಈ ಕಡೆ ಬಂದವನಾಗಿರುತ್ತೇನೆ. ಆ ಸಂದರ್ಭದಲ್ಲಿ ಶ್ರೀಯುತ ಗರುಡಾಚಾರ್‌ರವರು ಡಿ.ಜಿ.ಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಏನಾದಾರೂ ಕೂಡ ಆಪಾದಿತರು ಏನಾದರು acquit ಆಗಿಬಿಟ್ಟರೆ ಸರಿಯಾಗಿ ನೀನು ವಿಚಾರಣೆ ಮಾಡಲಿಲ್ಲವೆಂದು ಹೇಳಿ, ಪೋಲೀಸ್‌ನವರಿಗೆ ದಂಡ ಹಾಕುತ್ತಾರೆ. ಇವತ್ತು ಇಲ್ಲಿ ಎಷ್ಟು acquit ಆಗಿದೆ. 95% ನಷ್ಟು acquit ಆಗಿದೆ. ಈ ರೀತಿಯಾದಾಗ ಕ್ರೈಮ್ ರೇಟ್ ಜಾಸ್ತಿಯಾಗಿಯೇ ಆಗುತ್ತದೆ. ನಾನು ಮೊನ್ನೆ ನಮ್ಮ ಮೈಸೂರಿನಲ್ಲಿ ಎ.ಸಿ.ಪಿ.ಯವರಿಗೆ ನೀವು ಏನು ಈ ರೀತಿಯಲ್ಲಿ ಮಾಡುತ್ತಿದ್ದೀರಲ್ಲಾ ಎಂದು ಹೇಳಿ ನಾನು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತೇನೆಂದು ಹೇಳಿದಾಗ " ಅಯ್ಯೋ ಮಾತನಾಡಿ ಸರ್, ಏನೋ ಒಂದು ನೋಟೀಸ್

ಅನ್ನು ನನಗೆ ಕೊಡಬಹುದು ಅಷ್ಟೆ" ಎಂದವರು ಹೇಳಿದರು. The mindset of the Police, higher officers ಈ ರೀತಿಯಾದರೆ, ನಾವು ಎಲ್ಲಿ ಯಾರನ್ನು ಕೇಳಬೇಕು? ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೂಡ ಸದನದಲ್ಲಿ ಇರುವುದರಿಂದ, ಹಿಂದೆ ಪ್ರತಿಯೊಂದು ಇಲಾಖೆಯಲ್ಲೂ ಕೂಡ consultative committee ಇತ್ತು ಎನ್ನುವುದನ್ನು ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್ ರವರ ಗಮನಕ್ಕೆ ತರುತ್ತೇನೆ. (ಮುಂದು)

(926) 21.08.20225 06.40 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ಮುಂದು):-**

ಆ Consultative Committee ಯನ್ನು ನಮ್ಮ ಈ ಮನೆಯ ಸಭಾಪತಿಯವರು, ಆ ಮನೆಯ ಸಭಾಧ್ಯಕ್ಷರು, ಸಂಬಂಧಪಟ್ಟ ಮಂತ್ರಿಗಳನ್ನೊಳಗೊಂಡಂತೆ ರಚನೆ ಮಾಡಬೇಕು.

**ಸಭಾಪತಿಯವರು:-** ಸಾಕು, ಸಾಕು.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೆ, Consultative Committee ಯಲ್ಲಿ ಬಹಳಷ್ಟು ರೀತಿಯಲ್ಲಿ ಆಗಿಂದಾಗ್ಗೆ ಚರ್ಚೆ ಮಾಡಬೇಕು.

**ಸಭಾಪತಿಯವರು:-** ಎರಡು ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳಿದಿರಿ. 20 ನಿಮಿಷ ಮಾತನಾಡುತ್ತೀರಿ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಆ Consultative Committee ಆಗಬೇಕೆಂದು ಹೇಳಿ ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರುವುದರಿಂದ ನಾನು ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ. ಮಿಕ್ಕಿದ್ದು ಆಮೇಲೆ ಮಾತನಾಡೋಣ.

**ಡಾ:ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಸುದೀರ್ಘವಾದ ಉತ್ತರವನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಎಷ್ಟು ಪುಟಗಳ ಉತ್ತರ ಕೊಟ್ಟಿದ್ದೇನೆಂದು ಡಾಕ್ಯುಮೆಂಟ್ ತೋರಿಸಿದರು.

**ಸಭಾಪತಿಯವರು:-** ಮಾನ್ಯ ಸಚಿವರೆ, ಅವರು ನನಗೆ ಚೀಟಿ ಕಳುಹಿಸಿದ್ದಾರೆ. ಪ್ರಶ್ನೋತ್ತರ ಮುಗಿದ ಕೂಡಲೇ ನಿಮ್ಮ ಜೊತೆ ಮಾತನಾಡುತ್ತಾರಂತೆ. ತಾವು ಅವರೊಂದಿಗೆ ಮಾತನಾಡಿಬಿಡಿ.

**ಡಾ: ಜಿ. ಪರಮೇಶ್ವರ:-** ಆಗಬಹುದು ಮಾನ್ಯ ಸಭಾಪತಿಯವರೆ.

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 21ನೇ ಆಗಸ್ಟ್ 2025, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 142 ಪ್ರಶ್ನೆಗಳ ಪೈಕಿ 104 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಿದೆ)**

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ 2 ತಾಸು 25 ನಿಮಿಷ ಆಯಿತು. ನಡುವೆ ಏಳುತ್ತೀರಿ, ಮಾತನಾಡುತ್ತೀರಿ. ಸದನವನ್ನು ಹೇಗೆ ನಡೆಸಬೇಕು ಎಂಬುದನ್ನು ನೀವೇ ನನಗೆ ಹೇಳಿ. ಬೆಲ್ ಮಾಡಿದರೆ ಬೆಲ್ ಅನ್ನು ಕೇಳಿಸಿಕೊಳ್ಳುವುದಿಲ್ಲ. ಯಾರು ಬೇಕಾದರೂ ಎದ್ದು ನಿಲ್ಲುತ್ತಾರೆ, ಏನು ಬೇಕಾದರೂ ಮಾತನಾಡುತ್ತಾರೆ. ಹೇಗೆ ಕಲಾಪವನ್ನು ನಡೆಸಬೇಕು? 2 ತಾಸು 25 ನಿಮಿಷಗಳಲ್ಲಿ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಕಾಲಾವಕಾಶ ಕೇಳಿದ್ದಾರೆ. ಅದನ್ನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ. ನೀವು ನಮಗೆ ಸಹಕಾರ ನೀಡದೆ, ನೀವು ಅವರೊಡನೆ ನಿಲ್ಲುತ್ತೀರಿ. ಸದನವನ್ನು ಹೇಗೆ ನಡೆಸಬೇಕು ಹೇಳಿ.

**12. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಆದೇಶ ಬಂದಿರುತ್ತದೆ.

“ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕ 2025 ಅನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.”

**13. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ 2025ನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

## 14. ಅಧಿಕೃತ ನಿರ್ಣಯಗಳು

**ಅ) “ಸುಸ್ಥಿರ ಶಾಂತಿಯು ಅಂತರರಾಷ್ಟ್ರೀಯ ಸಮುದಾಯದ ಜವಾಬ್ದಾರಿ ಮಾತ್ರವಲ್ಲದೆ ಸ್ಥಳೀಯ ಸಮುದಾಯಗಳು ಮತ್ತು ಪಾಲುದಾರರು ಸಾಮೂಹಿಕವಾಗಿ ನಿರ್ಮಿಸಬೇಕಾದ ಹಂಚಿಕೆಯ ಬಾಧ್ಯತೆಯ ಬಗ್ಗೆ.**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಈ ಕೆಳಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

“ಸುಸ್ಥಿರ ಶಾಂತಿಯು ಅಂತರರಾಷ್ಟ್ರೀಯ ಸಮುದಾಯದ ಜವಾಬ್ದಾರಿ ಮಾತ್ರವಲ್ಲದೆ, ಸ್ಥಳೀಯ ಸಮುದಾಯಗಳು ಮತ್ತು ಪಾಲುದಾರರು ಸಾಮೂಹಿಕವಾಗಿ ನಿರ್ಮಿಸಬೇಕಾದ ಹಂಚಿಕೆಯ ಬಾಧ್ಯತೆಯಾಗಿರುತ್ತದೆ.

ದಿವ್ಯತೆಯ ಸಂಸ್ಕೃತಿ, ವಿಶ್ವ ಶಾಂತಿ, ಬೆಳಕಿನ ಮರುಸ್ಥಾಪನೆಯಿಂದ (HWPL-Heavenly Culture, World Peace, Restoration of Light) ಮಾರ್ಚ್ 14, 2016 ರಂದು ಉದ್ಘೋಷಿಸಲಾದ ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW- Declaration of Peace and Cessation of War), ಸಂಘರ್ಷ ತಡೆಗಟ್ಟುವಿಕೆ ಮತ್ತು ಪರಿಹಾರ, ನಿಶ್ಶಸ್ತ್ರೀಕರಣ ಮತ್ತು ಶಾಂತ ಸಂಸ್ಕೃತಿಯ ಪ್ರಸರಣಕ್ಕಾಗಿ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡ ಅಂತರರಾಷ್ಟ್ರೀಯ ಸಮಗ್ರ ಕಾನೂನಾತ್ಮಕ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW), ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳು ಮತ್ತು ವಿಶ್ವಸಂಸ್ಥೆ ಸನ್ನದಿನ ತತ್ವಗಳನ್ನು ಆಧರಿಸಿದೆ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭವಿಷ್ಯದ ಒಪ್ಪಂದಗಳು ಅಥವಾ ನಿರ್ಣಯಗಳಿಗೆ ಕಾರ್ಯಸಾಧ್ಯವಾಗಬಲ್ಲ ಕರಡು ಘೋಷಣೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ತತ್ವಗಳ ಅನುಷ್ಠಾನವನ್ನು ಸ್ವಯಂಪ್ರೇರಣೆಯಿಂದ ತಳಮಟ್ಟದಲ್ಲಿಯೇ ಮುನ್ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಯುವ ಸಂಘಟನೆಗಳು ಮತ್ತು ಧಾರ್ಮಿಕ ಸಮುದಾಯಗಳನ್ನು ಒಳಗೊಂಡಂತೆ ಬೆಳೆಯುತ್ತಿರುವ ಭಾರತೀಯ ನಾಗರಿಕ ಸಮಾಜದ ಪಾತ್ರವು ಸ್ಮರಣೀಯವಾಗಿದೆ.

ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯ (HWPL) ಶಾಂತಿ ಉಪಕ್ರಮಗಳಾದ ಯುವ ನಾಯಕತ್ವ ಅಭಿವೃದ್ಧಿ, ಪ್ರತಿಬಂಧಕ ಶಾಂತಿ ಶಿಕ್ಷಣ ಮತ್ತು ನಾಗರಿಕ ಮುಂದಾಳತ್ವದ ಪರಿಸರ ಅಭಿಯಾನಗಳು ಪ್ರತಿನಿಧಿಸುವ ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆ ಮತ್ತು ಸಾರ್ವಜನಿಕ ಹಿತದ ಆಧಾರದ ಮೇಲಿನ ಸಮುದಾಯ ಕೇಂದ್ರಿತ ಶಾಂತಿ ಮಾದರಿಯನ್ನು ಪರಿಗಣಿಸಬೇಕಾಗಿದೆ.

ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW) ನಮ್ಮ ಕಾಲಘಟ್ಟದ ಶಾಂತಿಯುತ ಸಹಬಾಳ್ವೆಗಾಗಿನ ಘೋಷಣೆ ಮಾತ್ರವಲ್ಲದೆ, ಭವಿಷ್ಯದ ಪೀಳಿಗೆಗಾಗಿ ದೀರ್ಘಾವಧಿಯ ಕಾನೂನಾತ್ಮಕ

ಪರಂಪರೆಯಾಗಿ ಮಾನದಂಡ ಮತ್ತು ಸಾಂಸ್ಥಿಕ ನೀಲನಕ್ಷೆಯಾಗಿ, ಶಾಂತಿಯನ್ನು ಶಾಶ್ವತ ಸಮರ್ಪಿಸುವುದನ್ನು ದೃಢೀಕರಿಸಬೇಕಾಗಿದೆ.

ಆದ್ದರಿಂದ, ಈ ಸದನವು ಸರ್ವಾನುಮತದಿಂದ ಈ ಮೂಲಕ ಕೆಳಗಿನಂತೆ ನಿರ್ಣಯಿಸಬೇಕೆಂದು ಕೋರುತ್ತೇನೆ.

1) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿ (DPCW) ಪ್ರತಿಪಾದಿಸಲಾದ ತತ್ವಗಳು ಮತ್ತು ಲೇಖನಗಳಿಗೆ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ.

2) ಶಾಂತಿ ಶಿಕ್ಷಣ, ಸಮುದಾಯ ಆಧಾರಿತ ಪರಿಸರ ಉಪಕ್ರಮಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಜಾಗೃತಿ ಅಭಿಯಾನಗಳನ್ನು ಒಳಗೊಂಡ ಕಾರ್ಯಕ್ರಮಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಮತ್ತು ಕಾರ್ಯಗತಗೊಳಸಲು ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯೊಂದಿಗೆ (HWPL) ಸಹಭಾಗಿ ಹಂದರವನ್ನು (framework) ಸ್ಥಾಪಿಸಲು ಬದ್ಧವಾಗಿರುತ್ತದೆ.

3) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಶಾಸನಾತ್ಮಕ ಚರ್ಚೆಗಳನ್ನು ಮತ್ತು ವ್ಯಾಪಕ ಪ್ರಸರಣವನ್ನು ಉತ್ತೇಜಿಸುವುದಕ್ಕಾಗಿ, ಈ ನಿರ್ಣಯವನ್ನು ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳೊಂದಿಗೆ ಹಂಚಿಕೊಳ್ಳಲು ಶಿಫಾರಸ್ಸು ಮಾಡುತ್ತದೆ.

4) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯ (DPCW) ಆಧಾರದ ಮೇಲೆ "ಸುಸ್ಥಿರ ಶಾಂತಿ ಗ್ರಾಮಗಳು" ಅಥವಾ "ಶಾಂತಿ ನಗರಗಳು" ಎಂಬ ಪದನಾಮದ ಪ್ರಾಯೋಗಿಕ ಅನುಷ್ಠಾನವನ್ನು ಬೆಂಬಲಿಸುತ್ತದೆ ಮತ್ತು ಈ ಪ್ರಯತ್ನಗಳನ್ನು ವಿಸ್ತರಿಸುವುದಕ್ಕಾಗಿ ಅಂತರ-ನಗರ ಸಹಕಾರವನ್ನು ಪ್ರೋತ್ಸಾಹಿಸುತ್ತದೆ.

5) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಅನುಚ್ಛೇದ 10ರಲ್ಲಿ ವಿವರಿಸಿರುವ ತತ್ವಗಳನ್ನು ಒಳಗೊಂಡಂತೆ ನಾಗರಿಕ ಪಾಲ್ಗೊಳ್ಳುವಿಕೆ, ಶಾಂತಿ ಶಿಕ್ಷಣ ಮತ್ತು ಸಾಂಸ್ಕೃತಿಕ ಪ್ರಸರಣವನ್ನು ಸ್ಥಳೀಯ ಸರ್ಕಾರದ ಶಾಂತಿ ನೀತಿಗಳು ಮತ್ತು ಯೋಜನಾ ಚೌಕಟ್ಟುಗಳಲ್ಲಿ ಸಂಯೋಜಿಸಲಾಗುತ್ತಿದೆ ಎಂಬುದನ್ನು ಖಾತ್ರಿಪಡಿಸುತ್ತದೆ.

6) ಈ ನಿರ್ಣಯವು ರಾಷ್ಟ್ರೀಯ ಮಟ್ಟದಲ್ಲಿ ವೈಯಕ್ತಿಕ ನಿರ್ಣಯಗಳ ಸಂಭಾವ್ಯ ಸಲ್ಲಿಕೆಯನ್ನು ಬೆಂಬಲಿಸಲು ಒಂದು ಮೂಲಭೂತ ದಸ್ತಾವೇಜಿನಂತೆ

ಕಾರ್ಯನಿರ್ವಹಿಸುತ್ತದೆ ಹಾಗೂ ಇದನ್ನು ದಾಖಲಿಸುವುದಕ್ಕಾಗಿ ಮತ್ತು ಹೆಚ್ಚಿನ ತೊಡಗಿಸಿಕೊಳ್ಳುವಿಕೆಗಾಗಿ ಸಂಬಂಧಪಟ್ಟ ಮಂತ್ರಾಲಯಗಳು ಮತ್ತು ವಿಶ್ವಸಂಸ್ಥೆಯ ಮಾಹಿತಿ ಕೇಂದ್ರಕ್ಕೆ ಕಳುಹಿಸಲಾಗುವುದೆಂದು ಈ ಮೂಲಕ ಘೋಷಿಸುತ್ತದೆ."

**ಸಭಾಪತಿಯವರು:-** "ಶ್ರೀ ಹೆಚ್.ಕೆ.ಪಾಟೀಲ್, ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮಂಡಿಸಿರುವ ನಿರ್ಣಯವನ್ನು ಸದನವು ಅಂಗೀಕರಿಸುವುದು."

**ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು**

**ಆ) ವಿಷಯ:- ಭಾರತ ಸಂವಿಧಾನದ 252ನೇ ಅನುಚ್ಛೇದದ ಖಂಡ(1)ರಡಿ ಮತ್ತು ಸದರಿ ಅಧಿನಿಯಮದಲ್ಲಿನ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಕುರಿತು**

***

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಭಾರತ ಸಂವಿಧಾನದ 252ನೇ ಅನುಚ್ಛೇದದ ಖಂಡ(1)ರಡಿ ಮತ್ತು ಸದರಿ ಅಧಿನಿಯಮದಲ್ಲಿನ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ."

**ಸಭಾಪತಿಯವರು:-** ನಿರ್ಣಯ ಏನೆಂದರೆ

"ಭಾರತ ಸಂವಿಧಾನದ 252ನೇ ಅನುಚ್ಛೇದದ ಖಂಡ(1)ರಡಿ ಮತ್ತು ಸದರಿ ಅಧಿನಿಯಮದಲ್ಲಿನ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಮಾನ್ಯ ಕಾನೂನು, ಶಾಸನ ರಚನೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಮಂಡಿಸಿರುವ ನಿರ್ಣಯವನ್ನು ಅಂಗೀಕರಿಸುವುದು."

**ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು**

(ಮುಂದು)

(927) 21-08-2025 (6.50) ಕೆಜಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**15. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಎ) ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕ, 2025**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "ಕರ್ನಾಟಕ ಧನವಿನಿಯೋಗ (ಸಂಖ್ಯೆ : 3) ವಿಧೇಯಕ, 2025" ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, this Bill is regarding supplementary estimates, ಪೂರಕ ಅಂದಾಜುಗಳು. 2025-26ನೇ ಸಾಲಿನಲ್ಲಿ ಪೂರಕ ಅಂದಾಜುಗಳನ್ನು ಮಂಡಿಸುವಂತಹದ್ದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದಕ್ಕೆ ಸಂವಿಧಾನವು ಅವಕಾಶ ಮಾಡಿಕೊಟ್ಟಿದೆ. Article 205 (1) (a) of the Constitution of India ನ ಅಡಿಯಲ್ಲಿ ಸರ್ಕಾರ ಪೂರಕ ಅಂದಾಜುಗಳನ್ನು ಮಂಡಿಸಬಹುದು ಎಂದು ಇದೆ. ಅದಕ್ಕಾಗಿ ನಾನು ಈ ವರ್ಷದ ಮೊದಲನೆ ಕಂತು 3,352.57 ಕೋಟಿ ರೂಪಾಯಿಗಳನ್ನು ಮಂಡಿಸುತ್ತಿದ್ದೇನೆ. ಇದು ಬಜೆಟ್‌ನಲ್ಲಿ ಎಷ್ಟು percentage ಆಗುತ್ತದೆ ಎಂದರೆ, 0.78% ಆಗುತ್ತದೆ. ಇದರಲ್ಲಿ 2,562.14 ಕೋಟಿ ರೂಪಾಯಿಗಳು Revenue Expenditure ಆಗುತ್ತದೆ. ರಾಜಸ್ವ ವೆಚ್ಚವಾಗುತ್ತದೆ. 790.42 ಕೋಟಿ ರೂಪಾಯಿಗಳು Capital Expenditure ಆಗುತ್ತದೆ. ಬಂಡವಾಳ ವೆಚ್ಚವಾಗುತ್ತದೆ. ಈ ಒಟ್ಟು ವೆಚ್ಚದಲ್ಲಿ ಕೇಂದ್ರ ಸರ್ಕಾರದಿಂದ 820.20 ಕೋಟಿ ರೂಪಾಯಿಗಳನ್ನು ಸ್ವೀಕೃತಿಗಳಿಂದ ಬರುತ್ತದೆ. ಮತ್ತೆ 262.20 ಕೋಟಿ ರೂಪಾಯಿಗಳನ್ನು reserve fund ನಿಂದ ಭರಿಸುತ್ತೇವೆ. ಒಟ್ಟು outgoing cash 2,269.66 ಕೋಟಿ ರೂಪಾಯಿಗಳು ಮಾತ್ರವಾಗಿರುತ್ತದೆ. ಇದನ್ನು ಹೇಗೆ ಭರಿಸುತ್ತೀರಿ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅದಕ್ಕೆ Revenue Receipts ಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜೊತೆಗೆ reappropriation ಮಾಡುತ್ತೇವೆ. ಮೂರನೆಯದಾಗಿ, ಅಗತ್ಯ ಬಿದ್ದರೆ ಸಾಲಗಳನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಸಹ ಮಾಡುತ್ತೇವೆ. ಈ ಬಾಬುಗಳಿಂದ ಈ ಹಣವನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಜೊತೆಗೆ 3,352.57 ಕೋಟಿ ರೂಪಾಯಿಗಳಲ್ಲಿ ಇದರಲ್ಲಿ 50 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇರುವಂತಹ ಖರ್ಚುಗಳನ್ನು ಮಾತ್ರ ಇದರಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದು, ಈ ಸದನದ ಮುಂದೆ ಇಡುವುದಕ್ಕೆ ಬಯಸುತ್ತಿದ್ದೇನೆ. ಇದು 'ಖಾತ್ರಿ ವಿಮೋಚನಾ ನಿಧಿ'ಗೆ ವರ್ಗಾವಣೆ ಅಂದರೆ, transfer to GRF (Guarantee Redemption Fund). ಖಾತ್ರಿ ವಿಮೋಚನಾ ನಿಧಿಗೆ ವರ್ಗಾವಣೆ ಎಂದರೆ, public undertaking ಗಳು ಸಾಲವನ್ನು ತೆಗೆದುಕೊಳ್ಳುತ್ತವೆ. ನಾವು open market ನಿಂದ ಸಾಲ ತೆಗೆದುಕೊಳ್ಳುತ್ತೇವೆ ಅಥವಾ ಬೇರೆ ಸಂಸ್ಥೆಗಳು ತೆಗೆದುಕೊಳ್ಳುತ್ತವೆ. ಇನ್ನೂ ಮುಂತಾದ ಸಂಸ್ಥೆಗಳು ಸಾಲ ತೆಗೆದುಕೊಳ್ಳುತ್ತವೆ. ಒಂದು ವೇಳೆ ಅವರು ಸಾಲ ತೀರಿಸುವುದಕ್ಕೆ ಆಗದಿದ್ದರೆ, ನಾವೇ ಕೊಡಬೇಕಾಗುತ್ತದೆ. ಸಾಲಕ್ಕೆ ಯಾರು ಗ್ಯಾರಂಟಿ ಹಾಕುತ್ತೇವೆ ಅವರೇ ಕೊಡಬೇಕಾಗುತ್ತದೆ. ಅದಕ್ಕಾಗಿ RBI (Reserve Bank of India) ನವರು ನೀವು Guarantee Redemption Fund ಅನ್ನು ಸ್ಥಾಪಿಸಬೇಕು, ಇದನ್ನು ಸ್ಥಾಪಿಸಬೇಕಾದರೆ 5% ರಷ್ಟು ಮೊತ್ತವನ್ನು ಖಾತ್ರಿ ವಿಮೋಚನಾ ನಿಧಿಗೆ ವರ್ಗಾವಣೆ ಮಾಡಬೇಕಾಗಿದೆ ಎಂದು ಹೇಳಿದೆ. ಒಟ್ಟು ಎಷ್ಟು ಸಾಲ ಇರುತ್ತದೆ ಅದರಲ್ಲಿ 5% ಅನ್ನು ವರ್ಗಾವಣೆ ಮಾಡಬೇಕು. ಈಗ ಉದಾಹರಣೆಗೆ ದಿನಾಂಕ 31-03-2025ರ ಅಂತ್ಯಕ್ಕೆ ಸರ್ಕಾರದ ಒಟ್ಟು ಖಾತ್ರಿಗಳ ಮೊತ್ತ 46,271 ಕೋಟಿ ರೂಪಾಯಿಗಳು. ಇದರಲ್ಲಿ 5% ಇಡಬೇಕು. ಇಲ್ಲಿಯವರೆಗೆ 760 ಕೋಟಿ ರೂಪಾಯಿಗಳು ಇದೆ. ನಾವು GRF ನಲ್ಲಿ 2,314 ಕೋಟಿ ರೂಪಾಯಿಗಳನ್ನು ಇಡಬೇಕು. 760 ಕೋಟಿ ರೂಪಾಯಿಗಳು ಇರುವುದರಿಂದ ಅದು ಬಹಳ ಕಡಿಮೆಯಾಗುತ್ತದೆ. ಅದಕೋಸ್ಕರ 1,500 ಕೋಟಿ ರೂಪಾಯಿಗಳನ್ನು ಇಡಬೇಕಾಗುತ್ತದೆ. ಅದಕ್ಕೆ ಈ ಸದನದಲ್ಲಿ ಒಪ್ಪಿಗೆ ಪಡೆಯಲು ಈ ಬಿಲ್‌ನ್ನು ಮಂಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಜೊತೆಗೆ ಅಮೃತ ಯೋಜನೆ-2 ಗೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪಾಲು 472 ಕೋಟಿ ರೂಪಾಯಿಗಳು. ರಾಜ್ಯ ವಿಪತ್ತು ಉಪಶಮನ ಕಾರ್ಯಗಳಿಗೆ ಅನುದಾನ ಅಂದರೆ SDMF (State Disaster Mitigation Fund) ಗೆ 197.60 ಕೋಟಿ ರೂಪಾಯಿಗಳು ಇದು ಕೇಂದ್ರದ ಮತ್ತು ರಾಜ್ಯದ ಪಾಲು. 'ಪಿಎಂಶ್ರೀ ಯೋಜನೆ'ಗೆ ಕೇಂದ್ರದ ಮತ್ತು ರಾಜ್ಯದ ಪಾಲು 138.47 ಕೋಟಿ ರೂಪಾಯಿಗಳು. 'ಸ್ವಚ್ಛಭಾರತ ಅಭಿಯಾನ ನಗರ ಯೋಜನೆ-2' 'ನೀರಿನ ಸಂಸ್ಕರಣೆ ಮತ್ತು ನಿರ್ವಹಣೆಗೆ' ಕೇಂದ್ರದ ಮತ್ತು ರಾಜ್ಯದ ಪಾಲು 71.74 ಕೋಟಿ ರೂಪಾಯಿಗಳು. 'ಸ್ವಚ್ಛಭಾರತ ಅಭಿಯಾನ ನಗರ ಯೋಜನೆ-1' ಕ್ಕೆ ಕೇಂದ್ರದ ಮತ್ತು ರಾಜ್ಯದ ಪಾಲು 166,67 ಕೋಟಿ ರೂಪಾಯಿಗಳು. 'ಅಮೃತ್ ಯೋಜನೆ-1' ಗೆ ಕೇಂದ್ರ ಪಾಲು 60 ಕೋಟಿ ರೂಪಾಯಿಗಳು. 'ವಿಪತ್ತು ಉಪಶಮನ ಕಾರ್ಯಕ್ರಮಗಳಿಗೆ' ಅನುದಾನ 55 ಕೋಟಿ ರೂಪಾಯಿಗಳು. 'ವಿಪತ್ತು ಪರಿಹಾರ ಕಾರ್ಯಗಳಿಗೆ ಅನುದಾನ 52.57 ಕೋಟಿ ರೂಪಾಯಿಗಳು. ನೋಂದಾಯಿಸಿದ ಪತ್ರಗಳ ಪೂರೈಕೆ ವೆಚ್ಚ 50 ಕೋಟಿ ರೂಪಾಯಿಗಳು. ಒಟ್ಟು 2,664.06 ಕೋಟಿ ರೂಪಾಯಿಗಳು. 50 ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರುವಂತಹ ಇತರೆ ಯೋಜನೆಗಳಿಗೆ ನಿಗದಿ ಮಾಡಿರುವಂತಹ ಹಣ 688.51 ಕೋಟಿ

ರೂಪಾಯಿಗಳು. ಒಟ್ಟು ಪೂರಕ ಅಂದಾಜುಗಳ ಮೊತ್ತ 3,352.57 ಕೋಟಿ ರೂಪಾಯಿಗಳು. ಇದನ್ನು ಮೊದಲನೆ ಕಂತಾಗಿ ಮಾಡುತ್ತಿದ್ದೇವೆ. ಬರಿ 0.78% ಮಾತ್ರ ಅಂದರೆ, 1% ಇಲ್ಲ. 1% ಗಿಂತ ಕಡಿಮೆ. ಅದನ್ನು ಮಂಡಿಸುತ್ತಿದ್ದೇವೆ. ಒಟ್ಟು ಬಜೆಟ್ ಗಾತ್ರದ 1% ನಷ್ಟು ಇಲ್ಲ. ಬರಿ 0.78% ಅನ್ನು ಮಾತ್ರ ಮಂಡಿಸುತ್ತಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರುಗಳು ಒಪ್ಪಿಗೆ ಕೊಡಬೇಕು, ಈ ಖರ್ಚು ಮಾಡುವುದಕ್ಕೆ ಎನ್ನುವಂತಹ ಮನವಿಯನ್ನು ತಮ್ಮ ಮುಖಾಂತರ ಸದನಕ್ಕೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರೇ, ತಾವು ಮಾತನಾಡಿ. ಆದರೆ, short ಆಗಿ ಮಾತನಾಡಿ. ತಾವು ಭಾಷಣ ಮಾಡುವಂತಿಲ್ಲ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು short ಆಗಿ ಮಾತನಾಡುತ್ತೇನೆ. "ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2025" ಅನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ್ದಾರೆ. ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. RBI guidelines ನ ಪ್ರಕಾರ, GRF ಅಡಿಯಲ್ಲಿ 5% of the total loan amount ಅನ್ನು ನಾವು ಡಿಪಾಸಿಟ್ ಆಗಿ ಇಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಈಗಾಗಲೇ 760 ಕೋಟಿ ರೂಪಾಯಿಗಳನ್ನು ಇಡಲಾಗಿದೆ. Differential amount ಅನ್ನು ಇದರಲ್ಲಿ 2,200 ಕೋಟಿ ರೂಪಾಯಿಗಳನ್ನು ಅದಕೋಸ್ಕರ ಜೋಡಿಸಬೇಕಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಪ್ರಾರಂಭದಲ್ಲಿಯೇ Revenue Expenditure 2,562.14 ಕೋಟಿ ರೂಪಾಯಿಗಳಷ್ಟು ಇದ್ದು, ಉಳಿದಿದ್ದು Capital Expenditure ಗೆ ಹೋಗುತ್ತಿದೆ ಎಂದು ಹೇಳಿದ್ದಾರೆ. ಈಗ GRF ಎನ್ನುವಂತಹದ್ದರಲ್ಲಿ ಡಿಪಾಸಿಟ್ ಇಡುವುದನ್ನು ಹೇಗೆ Revenue Expenditure ಆಗುತ್ತದೆ. ಅದು Guarantee Redemption Fund ಅದು ನಮಗೆ ವಾಪಸ್ಸು ಬರುತ್ತದೆ. ಅದು ಏನಿದ್ದರೂ ಲೈಕ್ ಡಿಪಾಸಿಟ್ ನಮ್ಮ ಆ ಸಾಲಕ್ಕೆ 5% ಡಿಪಾಸಿಟ್ ಇಡುವುದು. ಅದನ್ನು ಬುಕ್‌ನಲ್ಲಿ expenditure ಎಂದು ಕ್ಲೇಮ್ ಮಾಡಿ ಅದನ್ನು ನಾವು ಒಂದಲ್ಲ ಒಂದು ದಿವಸ ಸಾಲ ವಾಪಸ್ ಕಟ್ಟುವಂತಹ ಸಂದರ್ಭದಲ್ಲಿ ಆ ಹಣ ನಮಗೆ ಬರುತ್ತದೆ. It has to be treated as a deposit or F.D. against the loan that the Government of Karnataka is raising. ಹಾಗಾಗಿ, ಬಹುಶಃ Revenue Expenditure ಕ್ಲೇಮ್ ಮಾಡುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ಉಳಿದಂತೆ 'ಅಮೃತ್ ಯೋಜನೆ', 'ಪಿಎಂಶ್ರೀ ಯೋಜನೆ' ಮತ್ತು 'ಸ್ವಚ್ಛ ಭಾರತ ಇಂತಹ ಯೋಜನೆ'ಗಳಿಗೆ Centrally Sponsored Schemes ಗೆ ನಮ್ಮ participation amount ಅನ್ನು ಸಹ ನಾವು 50 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ.

(ಮುಂದು)

**ಶ್ರೀ ಕೆ.ಎಸ್.ನವೀನ್ (ಮುಂದು):-**
ಇದೆಲ್ಲವೂ ಕೂಡ ongoing ಬಜೆಟ್‌ನಲ್ಲಿ ಜೋಡಿಸಿಕೊಂಡಿರುತ್ತದೆಂದು ನಾನು ಭಾವಿಸಿಕೊಂಡಿರುತ್ತೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಾರಿ ಮಂಡನೆ ಮಾಡಿರುವಂತಹ ಬಜೆಟ್‌ನಲ್ಲಿ ಇದೆಲ್ಲವೂ ಕೂಡ ರಾಜ್ಯ ಸರ್ಕಾರದ ಪಾಲಿನಲ್ಲಿ ಇಷ್ಟು commitment ಇದೇ ಎನ್ನುವುದು ಈಗಾಗಲೇ ನಿಗದಿಯಾಗಿದೆ. ಅಂದರೆ, ರಾಜ್ಯಕ್ಕೆ ಇಷ್ಟರಲ್ಲಿ ಪಾಲನ್ನು ಕೊಡಬೇಕಾಗಿದೆ ಎಂದು. ಹಾಗಾಗಿ, ಇದು ಏನು ನಮಗೆ ಹೊಸದಾಗಿ ಬರುತ್ತಿರುವಂತಹ ಹೆಚ್ಚುವರಿ ಯೋಜನೆಗಳೇ ಅಥವಾ ಈ ಹಿಂದೆ ಮಾಡಿರುವಂತಹ ಯೋಜನೆಗೆ ನಮ್ಮ ಹಣದ commitment ಗಳೇ ಎಂಬುದು ಸ್ಪಷ್ಟವಾಗಬೇಕು. ಆಮೇಲೆ 46 ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ಲೋನ್ ಇದೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾವು ಅಷ್ಟು ದುಡ್ಡುಗಳಿಗೆ ಗ್ಯಾರಂಟಿ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಸಾಲವನ್ನು raise ಮಾಡಿರುವುದಕ್ಕೆ ಗ್ಯಾರಂಟಿಗಳನ್ನು ಕೊಟ್ಟಿರುವುದು.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾವು ಏನು raise ಮಾಡಿರುವುದು ಅಲ್ಲ. ಈಗ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿರುತ್ತವೆ. ನಾವು ಅದನ್ನು Public Sector Undertakings ಗಳು ಎಂದು ಕರೆಯುತ್ತೇವೆ. ಅವರು ಸಾಲಗಳನ್ನು ತೆಗೆದುಕೊಳ್ಳುತ್ತಾರೆ. ಆ ಸಾಲಕ್ಕೆ ಸರ್ಕಾರ ಗ್ಯಾರಂಟಿ ಕೊಡಬೇಕು. ಒಂದು ವೇಳೆ ಅವರು ಕಟ್ಟಲಿಲ್ಲವೆಂದರೆ, ನಾವು ಕೊಡಬೇಕು. ಅಂದರೆ, ನಾವು ಗ್ಯಾರಂಟಿ ನೀಡಿರುತ್ತೇವೆ, ಅದನ್ನು ಕೊಡಬೇಕಾಗುತ್ತದೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಈಗ Public Sector Undertakings ರಾಜ್ಯ ಸರ್ಕಾರದ ಅಡಿಯಲ್ಲಿಯೇ ಬರುವಂತಹ ಸಂಸ್ಥೆಗಳೇ ಆಗಿರುವುದರಿಂದ, ನಮ್ಮ commitment ಅನ್ನು ಗ್ಯಾರಂಟಿಯಾಗಿ ಕೊಡುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುವಂಥದ್ದೇನೆಂದರೆ, ಸರ್ಕಾರಿ ಸಂಸ್ಥೆಗಳು Public Sector Undertakings ನೇರವಾಗಿ ಅನೇಕ ಸಂಸ್ಥೆಗಳು ತಮ್ಮ Balance Sheet ನ ಆಧಾರದ ಮೇಲೆ ಸಾಲಗಳನ್ನು ತೆಗೆದುಕೊಳ್ಳುವಂಥದ್ದನ್ನು ಈಗಾಗಲೇ ಮಾಡುತ್ತಿದ್ದಾರೆ. ಅದರ ಮೇಲೆಯೂ ಕೂಡ ಈಗಾಗಲೇ budget expenditure ನ plan ಆಗಿದೆ. ಅದರ ಮೇಲೆ ಮತ್ತೆ ಅವರಿಗೆ ಹೊಸದಾಗಿ ಅವಕಾಶಗಳನ್ನು ಮಾಡಿಕೊಟ್ಟು, ಅದಕ್ಕೆ ಶೇಕಡಾ 5ರಷ್ಟು ಗ್ಯಾರಂಟಿಗಳನ್ನು ಕೊಡುವುದರಿಂದ ಇದು ಸರ್ಕಾರಕ್ಕೆ ಹೊರೆಯಾಗುತ್ತದೆ ಎನ್ನುವಂಥದ್ದು ಕೂಡ ಇರುವುದರಿಂದ ಇದಕ್ಕೆ ಎಲ್ಲೋ ಒಂದು ಕಡೆ ತಾವು ಅದನ್ನು management ದೃಷ್ಟಿಯಿಂದ ಹೇಗೆ ಕಡಿಮೆ ಮಾಡಬೇಕು ಎನ್ನುವಂಥದ್ದನ್ನು ಕೂಡ ಗಮನಿಸಬೇಕಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಧನ ವಿನಿಯೋಗ ವಿಧೇಯಕವನ್ನು ಮಂಡಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಕೇಳತಕ್ಕಂಥದ್ದು ಏನೆಂದರೆ, ರಾಜ್ಯ ಸರ್ಕಾರ ಸಾಲವನ್ನು ನಂಬಿ ತನ್ನ ಕೆಲಸವನ್ನು ಮಾಡುವಂತಹ ಪರಿಸ್ಥಿತಿ ಬಂದಿದೆ. ಇದರ ಮಧ್ಯದಲ್ಲಿ ಹಣ ಇಲ್ಲ, ಅಭಿವೃದ್ಧಿ ಇಲ್ಲ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ನಾನು ಕೇಳತಕ್ಕಂಥದ್ದು ಏನೆಂದರೆ, ಈಗ ಕ್ಯಾಬಿನೆಟ್ ಮೀಟಿಂಗ್‌ಗಳನ್ನು ಮಾಡುತ್ತಾರೆ. ವಿಧಾನಸೌಧದಲ್ಲಿಯೇ ಕ್ಯಾಬಿನೆಟ್ ಮೀಟಿಂಗ್ ಮಾಡಿದರೆ ಒಂದು ಪೈಸೆ ಖರ್ಚಾಗುವುದಿಲ್ಲ. ಏಕೆಂದರೆ, ಅದು ಅದಕ್ಕೆಂದು ಇರತಕ್ಕಂತಹ ಸ್ಥಳ. ಅದರೆ, ಕ್ಯಾಬಿನೆಟ್ ಸಭೆಯನ್ನು ನಂದಿ ಹಿಲ್ಸ್‌ನಲ್ಲಿ ಮಾಡಿದರು, ಅದಕ್ಕೆ ಸುಮಾರು ರೂ.3,69,00,000/- ಖರ್ಚಾಯಿತು. ಅದು ದುಂದುವೆಚ್ಚ ಅಲ್ಲವೇ? ಈಗ ವಿಜಯನಗರದಲ್ಲಿ ಸಾಧನಾ ಸಮಾವೇಶವೆಂದು ಮಾಡಿದರು, ಅವರೇ mention ಮಾಡಿರುವಂತೆ ಅದಕ್ಕೆ ಸುಮಾರು ಹತ್ತು ಕೋಟಿ ರೂಪಾಯಿ ಖರ್ಚಾಯಿತು ಎಂದು ತಿಳಿಸಿದ್ದಾರೆ. ಈಗ ಹಣದ ಕೊರತೆ ಇಲ್ಲವೆಂದು ಇದ್ದಿದ್ದರೆ, ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಹಣವನ್ನು ಗ್ಯಾರಂಟಿಗಳಿಗೆ ಏಕೆ ಬಳಕೆ ಮಾಡಿದರು? ಈಗ ಅವರ ಹತ್ತಿರ ಬಹಳಷ್ಟು ದುಡ್ಡು ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ಹೇಳುವುದಾದರೆ, ಎಲ್ಲರಿಗೂ ಕೂಡ ಖಜಾನೆಯಿಂದ ಹಣ ಕೊಟ್ಟು, ಗ್ಯಾರಂಟಿಗಳಿಗೆ ಈ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಮೀಸಲಿಟ್ಟಿರತಕ್ಕಂತಹ ಮತ್ತು ಅವರ ಶ್ರೇಯೋಭಿವೃದ್ಧಿಗೆ ಇಟ್ಟಿರತಕ್ಕಂತಹ ಹಣವನ್ನು ಏಕೆ ಖರ್ಚು ಮಾಡಿದರು? ಇದಕ್ಕೆಲ್ಲಾ ಮಿಗಿಲಾಗಿ ಜಸ್ಟಿಸ್ ನಾಗಮೋಹನ್ ದಾಸ್‌ರವರ ಸಮಿತಿಗೆ ಸುಮಾರು 115 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಗಾದರೆ, ಅದು ಕಡಿಮೆ ಹಣವೇ? ಅದು ಕೂಡ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಅನುದಾನದಿಂದ ಹೋಗಿರುತ್ತದೆ. ಈಗ ಎರಡೇ ದಿನದಲ್ಲಿ ಒಳಮೀಸಲಾತಿಯ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಅದಕ್ಕೆ ತೀರ್ಮಾನ ಕೊಟ್ಟಾಗ, ಜಸ್ಟಿಸ್ ನಾಗಮೋಹನ್ ದಾಸ್ ರವರ ವರದಿ ತಿರಸ್ಕೃತವಾಗಿದೆ. ಅಂದಮೇಲೆ ವೆಚ್ಚವಾದ ಹಣ ದುಂದುವೆಚ್ಚ ಅಲ್ಲವೇ? ಅಂದರೆ, ಇದನ್ನು Exchequer ನಿಂದಲೇ ಕೊಡುವುದು ಅಲ್ಲವೇ? ಈ ರೀತಿ ಸಾಧನಾ ಸಮಾವೇಶಗಳನ್ನು ಮಾಡಿ, ದುಂದುವೆಚ್ಚಗಳನ್ನು ಮಾಡುವಂಥದ್ದು ಆಗಿದೆ. ಅವರು ಯಾವ ವೆಚ್ಚಗಳನ್ನೂ ಸಹ ಕಡಿಮೆ ಮಾಡಿಲ್ಲ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಗುಂಡಿಗಳನ್ನು ಮುಚ್ಚುವುದಕ್ಕೆ ಆಗುತ್ತಿಲ್ಲ. ಈಗ ಹೆದ್ದಾರಿಗಳಲ್ಲೂ ಕೂಡ ಅದೇ ಪರಿಸ್ಥಿತಿ ಇದೆ. ತಾಲ್ಲೂಕು ಮಟ್ಟಕ್ಕೆ ಹೋದರೆ ಅದನ್ನು ಕೇಳುವವರೇ ಇಲ್ಲದಂತಾಗಿದೆ. ಇದಕ್ಕೆ ಶಾಸಕರು ಜನರ ಮುಂದೆ ತಲೆತಗ್ಗಿಸಬೇಕೆಂದು ಮಾತನಾಡುತ್ತಿದ್ದಾರೆ. ಇಂಥದ್ದೆಲ್ಲಾ ಇರುವಾಗ, ಈ ರೀತಿಯ ದುಂದುವೆಚ್ಚಗಳನ್ನು ಮಾಡಿ, ಮತ್ತೆ ಸಾಲಕ್ಕೆ ಮೊರೆ ಹೋಗುವಂಥದ್ದು ಏಕೆ? ಈಗಾಗಲೇ ಸರ್ಕಾರ ಬೇಕಾದಷ್ಟು ಸಾಲವನ್ನು ಮಾಡಿದೆ ಅಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ; ಮಾನ್ಯ ವಿರೋಧ ಪಕ್ಷದ ನಾಯಕರೆ ಅದು ಯಾವ ಗ್ಯಾರಂಟಿಗೆ ಎಂದು ಅದನ್ನು ತೋರಿಸಿರುವುದು. ಮಾನ್ಯ ನವೀನ್‌ರವರು ಹೇಳಿದಂತೆ

ಅವರ ಪರವಾಗಿ ಗ್ಯಾರಂಟಿ ಕೊಡಬೇಕು. ಈಗ ಯಾರಿಗೆ ಗ್ಯಾರಂಟಿ ಕೊಟ್ಟಿರುತ್ತೇವೆ, ನಾವು ಅವರ ಪರವಾಗಿ ಕೊಡಬೇಕು ಎಂದು ಹೇಳಿರುವುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವಂತೆ ಬೇರೆ ಬೇರೆ ಸಂಸ್ಥೆಗಳು ತೆಗೆದುಕೊಂಡಿರುವುದಕ್ಕೆ ಸರ್ಕಾರದ ಗ್ಯಾರಂಟಿ ಎಂದು ಹೇಳಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಇದು limited. ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿ ದುಂದುವೆಚ್ಚ ಮಾಡಿ, ಜನರ ಮೇಲೆ ಹೊರೆ ಹಾಕತಕ್ಕಂಥದ್ದು ಸರಿಯಲ್ಲ.

**ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಏನು ಈ ಧನ ವಿನಿಯೋಗ ವಿಧೇಯಕವನ್ನು ತಂದಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಪ್ರಶ್ನೆ ಏನೆಂದರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬೆಳಗ್ಗೆ ಹೇಳಿದ ಹಾಗೆ ಕರ್ನಾಟಕ ರಾಜ್ಯ ಅಭಿವೃದ್ಧಿಯಲ್ಲಿ ಬಹಳ ದೊಡ್ಡಮಟ್ಟದಲ್ಲಿ ಇದೆ. ಖಜಾನೆ ತುಂಬಿದೆ. ಎಲ್ಲಿಯೂ ಕೂಡ ಖಜಾನೆ ಖಾಲಿಯಾಗಿಲ್ಲ. ಎಲ್ಲಾ ರೀತಿಯಲ್ಲೂ ಸಹ ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ನಡೆಯುತ್ತಿದೆ ಎಂದು. ಅದಕ್ಕೆ ಸಂತೋಷವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಬೆಂಗಳೂರು ನಗರ ಪ್ರದರ್ಶನವನ್ನು ಮಾಡಿದ್ದಾರೆ. ಈಗ ಒಂದು flood ಬಂದರೆ ಸಾಕು ಅವರು ಅಲ್ಲಿಗೆ ಹೋಗುತ್ತಾರೆ. ಅಂದರೆ, 'ಹೋದ ಪುಟ್ಟ, ಬಂದ ಪುಟ್ಟ' ಎಂದಷ್ಟೆ. ಇನ್ನೇನೂ ಆಗುವುದಿಲ್ಲ. ಈಗ ಜನರಿಗೆ ಸುಮ್ಮನೆ ಕಣ್ಣೊರೆಸುವುದು ಆಗಬಾರದು. ಈಗ ನಿಜವಾದ ಅಭಿವೃದ್ಧಿ ಆಗಿದೆಯೇ? ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಬಡವರ ಪರವಾಗಿ ದಿವಂಗತ ದೇವರಾಜ ಅರಸು ಆದಮೇಲೆ ಇವರು ಎರಡನೇ ಬಾರಿಗೆ ಐದು ವರ್ಷ ಪೂರ್ಣ ಮಾಡುತ್ತೇವೆಂದು ಎರಡನೇ ಬಾರಿಗೆ ಮುಖ್ಯಮಂತ್ರಿಗಳಾಗಿ ಪೂರ್ಣಾವಧಿ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ನನಗೆ ಬಹಳ ಖುಷಿಯಾಯಿತು.

**ಸಭಾಪತಿಯವರು:-** ತಾವು ವಿಧೇಯಕದ ಬಗ್ಗೆ ಮಾತನಾಡಿ ಎಂದರೆ, ತಾವು ಏನೇನೋ ಮಾತನಾಡುತ್ತಿದ್ದೀರಲ್ಲ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಮಾತನಾಡುತ್ತಿದ್ದಾರೆಯೇ? ಅವರು ಸಂಬಂಧಪಟ್ಟ ವಿಷಯದ ಬಗ್ಗೆ ಮಾತನಾಡಲಿ.

**ಶ್ರೀ ಶರವಣ.ಟಿ.ಎ:-** ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಬಗ್ಗೆಯೇ ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನದ ದಾರಿ ಮತ್ತು ಜನರ ದಾರಿ ತಪ್ಪಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಶರವಣ.ಟಿ.ಎ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ statement ಬಗ್ಗೆಯೇ ಮಾತನಾಡುತ್ತಿದ್ದೇನೆ. ಈಗ ಅವರು ಹೇಳಿರುವುದಕ್ಕೆ ನಮಗೆ ತುಂಬಾ ಖುಷಿ ಇದೆ. ಇವತ್ತು ಅವರು ಏನು ವರದಿಯನ್ನು ಕೊಟ್ಟಿದ್ದಾರೆ, ಆ ವರದಿಯನ್ನು ನಾನು ಓದಿದ್ದೇನೆ. ಈ ವರದಿಯ ಬಗ್ಗೆ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಸಾಧನಾ ಸಮಾವೇಶಕ್ಕೆ ಸಂಬಂಧಪಟ್ಟಂತೆ ಎಲ್ಲೋ ಒಂದು ಕಡೆಯಲ್ಲಿ ಪಕ್ಷದ ನಾಯಕರುಗಳು ಪಕ್ಷದ ವತಿಯಿಂದ ಮಾಡುವಂಥದ್ದನ್ನು ನೋಡಿದ್ದೇನೆ. ಸಾಧನಾ ಸಮಾವೇಶಕ್ಕೆ ಸುಮಾರು 10 ಕೋಟಿ ರೂಪಾಯಿಗಳು. ಈಗ ಸಾಧನಾ ಸಮಾವೇಶಕ್ಕೆ ಖರ್ಚಾಗಿರುವಂಥದ್ದನ್ನು ಕೂಡ ಗಮನಿಸಿದ್ದೇನೆ. ಈಗ SDRF (State Disaster Response Fund) ಎಂದು ಇದೆ. ನಾವು ಅದನ್ನು ‘ರಾಜ್ಯ ವಿಪತ್ತು ಪರಿಹಾರ ನಿಧಿ’ ಎಂದು ಕರೆಯುತ್ತೇವೆ. ಅದರಲ್ಲಿ ಎ, ಬಿ ಮತ್ತು ಸಿ ಕಟ್ಟಡಗಳಿಗೋಸ್ಕರ ವಿಂಗಡಣೆ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಒಂದು ಮನೆಗೆ 5,00,000/- ರೂಪಾಯಿಗಳೆಂದು ತೋರಿಸಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಕೇರಳ ರಾಜ್ಯದ ವಯನಾಡ್‌ನಲ್ಲಿ 100 ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೌದು, ಅದು ನಮ್ಮ ನೆರೆ ರಾಜ್ಯ. ನಮಗೆ ಅವರು ಸಹ ಬೇಕು. ಈಗ ಅಲ್ಲಿ ಅನಾಹುತವಾಗಿದೆ ಎಂದು ಅವರಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ.

(ಮುಂದು)

(929) 21.08.2025 07.10 LL-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ. ಶರವಣ(ಮುಂದು):-**

ಅವರಿಗೆ ರೂ.10,00,000/- ಗಳನ್ನು ಕೊಡುತ್ತೀರಿ. ಆದರೆ, ನಮ್ಮ ರಾಜ್ಯ, ನಮ್ಮ ತವರು ಮನೆಗೆ ರೂ.5,00,000/- ಗಳನ್ನು ಕೊಡುತ್ತೀರಿ. ನಮ್ಮ ರಾಜ್ಯದವರಿಗೆ ಮಾಮೂಲಿ ಬಟ್ಟೆ ಕೊಟ್ಟು, ಪಕ್ಕದ ರಾಜ್ಯಕ್ಕೆ ರೇಷ್ಮೆ ಬಟ್ಟೆ ಕೊಟ್ಟಂಥದ್ದಾಗಿದೆ. ಏತಕ್ಕೆ ಈ ತಾರತಮ್ಯ? ಹಾಗಾಗಿ, ಇಲ್ಲಿಗೂ ಅದೇ ಅವಕಾಶ ಕೊಡಬೇಕು. ಪಕ್ಕದ ರಾಜ್ಯದವರಿಗೆ ಕೊಡಬಾರದು ಎಂದು ನಾನು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿರುವ ಮನೆಗಳಿಗೂ ಸಹ ರೂ.10,00,000/- ಗಳನ್ನು ಕೊಡಬಹುದಾಗಿತ್ತಲ್ಲವೇ? ಅದನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರ ಮೇಲೆ ರಾಜ್ಯದ ಬಡಜನರು ಬಹಳ ಭರವಸೆಯನ್ನು ಇಟ್ಟಿರುತ್ತಾರೆ. ಅವರು ಒಳ್ಳೆಯ ಕೆಲಸ ಮಾಡುತ್ತಾರೆಂಬುದು ನಮಗೂ ಸಹ ಗೊತ್ತಿದೆ. ಹಾಗಾಗಿ, ಈ ವಿಚಾರದ ಕಡೆ ಗಮನಹರಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ Guarantee Redemption Fund ಇದೆಯಲ್ಲಾ, ಈ ಸಾಲವನ್ನು ನಾವು ತೆಗೆದುಕೊಳ್ಳುವುದಲ್ಲ. ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಈ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. Public Undertakings ಗಳು ಸಾಲ ಮಾಡಿರುತ್ತವೆ. ಇತರ ಸಂಘ ಸಂಸ್ಥೆಗಳು ಸಾಲ ಮಾಡಿರುತ್ತವೆ. ಅದಕ್ಕೆ ನಾವು ಗ್ಯಾರಂಟಿ ಕೊಡುತ್ತೇವೆ. ಆ ಗ್ಯಾರಂಟಿ ಹಣ ರೂ.46,271/- ಕೋಟಿಗಳಾಗಿದೆ. ಅದರಲ್ಲಿ ಶೇಕಡ 5 ರಷ್ಟು ಖಾತರಿ ವಿಮೋಚನಾ ನಿಧಿ ಎಂದು ಮಾಡಬೇಕು. ಈ Guarantee Redemption Fund ಎಂದು ಅದನ್ನು ಕರೆಯುತ್ತಾರೆ. ಅದಕ್ಕೆ ಶೇಕಡ 5 ರಷ್ಟು ಇಡಬೇಕು. ಇದು ಆರ್.ಬಿ.ಐ. ನವರ ಗೈಡ್‌ಲೈನ್ ಆಗಿರುತ್ತದೆ. ಆ ಹಣವನ್ನು ನಾವು ಇಟ್ಟಿರಲಿಲ್ಲ. ಅದು Consolidated Fund ನಿಂದ ಹೊರಗಡೆ ಹೋಗುತ್ತದೆ. ಅದಕ್ಕೋಸ್ಕರ ನಾವು ಅದನ್ನು ಸದನದಲ್ಲಿಟ್ಟು ಪಾಸ್ ಮಾಡಿಕೊಳ್ಳಬೇಕಾಗಿರುತ್ತದೆ. ಅದಕ್ಕೋಸ್ಕರ ಈ ಬಿಲ್ ಅನ್ನು ಕೆಳಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಇಟ್ಟು ಉಭಯ ಸದನಗಳ ಸದಸ್ಯರ ಒಪ್ಪಿಗೆ ಪಡೆಯಬೇಕಾಗಿರುತ್ತದೆ. ಏಕೆಂದರೆ, Consolidated Fund ನಿಂದ ಈ ಹಣ ಹೊರಗಡೆ ಹೋಗುತ್ತಿರುತ್ತದೆ. ಅದು ವಾಪಸ್ಸು ಬರುವುದು ಬೇರೆ ವಿಚಾರ.

ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಮಾತನಾಡುತ್ತಾ, ಸರ್ಕಾರದ ಬಳಿ ಹಣ ಇದ್ದರೆ ಏತಕ್ಕಾಗಿ ಸಾಲ ಮಾಡುತ್ತಿದ್ದಾರೆ ಎಂದು ಕೇಳಿದರು. ಸರ್ಕಾರ ಸಾಲ ಮಾಡಬೇಕಾಗುತ್ತದೆ. ಸಾಲ ಮಾಡದೇ ಯಾವುದೇ ರಾಜ್ಯಗಳು ಇರುವುದಕ್ಕೆ ಸಾಧ್ಯವಿಲ್ಲ. ಹಾಗಾದರೆ, ಕೇಂದ್ರ ಸರ್ಕಾರ ಸಾಲ ಮಾಡಿರುವುದಿಲ್ಲವೇ? ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ರೂ.130/- ಲಕ್ಷ ಕೋಟಿಗಳ ಸಾಲ ಮಾಡಿರುತ್ತದೆ. ಇದನ್ನು ಕಳೆದ ಲೋಕಸಭೆಯಲ್ಲಿ ಶ್ರೀಮತಿ ನಿರ್ಮಲಾ ಸೀತರಾಮನ್‌ರವರು ಹೇಳಿರುತ್ತಾರೆ. ಇದನ್ನು ನಾನು ಹೇಳಿರುವುದಿಲ್ಲ. **(ಗೊಂದಲ)** ಕೇಂದ್ರ ಸರ್ಕಾರದವರು ರೂ.200/- ಲಕ್ಷ ಕೋಟಿಗಳ ಸಾಲ ಮಾಡಿರುತ್ತಾರೆ. ಸ್ವಾತಂತ್ರ್ಯ ಬಂದ ನಂತರದಿಂದ ಮಾನ್ಯ ನರೇಂದ್ರ ಮೋದಿಯವರ ಪ್ರಧಾನ ಮಂತ್ರಿಯಾಗುವುದಕ್ಕೆ ಮೊದಲು ಇದ್ದಂತಹ ಅವಧಿಯಲ್ಲಿ ದೇಶದ ಮೇಲಿದ್ದಂತಹ ಒಟ್ಟು ಸಾಲ ರೂ.53/- ಲಕ್ಷ ಚಿಲ್ಲರೆ ಕೋಟಿ ಸಾಲ ಇತ್ತು. ಈಗ ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದ ನಂತರ, ತಾವು ಮಾತನಾಡಿ. ಈ ರೀತಿ ಮಧ್ಯೆ ಮಧ್ಯೆ ಮಾತನಾಡಬೇಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ರವಿಕುಮಾರ್‌ರವರೇ, ತಾವು ಪದೇ ಪದೇ ಏತಕ್ಕೆ ಎದ್ದು ನಿಲ್ಲುತ್ತೀರಿ? ನಾನು ಮಾತನಾಡಿದ ನಂತರ, ತಾವು ಏನಾದರೂ ಪ್ರಶ್ನೆ ಕೇಳುವುದಿದ್ದರೆ ಕೇಳಿ. ಎಲ್ಲಾ ರಾಜ್ಯಗಳು ಸಹ ಸಾಲವನ್ನು ಮಾಡುತ್ತವೆ. ಅಲ್ಲದೇ, ಕೇಂದ್ರ ಸರ್ಕಾರ ಕೂಡ ಸಾಲ ಮಾಡುತ್ತದೆ. 2025-26 ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರೂ.12/- ಲಕ್ಷ ಚಿಲ್ಲರೆ ಕೋಟಿಯಷ್ಟು ಸಾಲದ ಮೇಲಿನ ಬಡ್ಡಿಯನ್ನು ಕಟ್ಟಬೇಕು ಮತ್ತು ರೂ.4/- ಲಕ್ಷ ಚಿಲ್ಲರೆ ಕೋಟಿಯಷ್ಟು ಸಾಲ ಮರುಪಾವತಿ ಮಾಡಬೇಕಾಗಿರುತ್ತದೆ. ಆದುದರಿಂದ, ನಾವು ಸಾಲ ಮಾಡುತ್ತೇವೆ, ಕೇಂದ್ರ

ಸರ್ಕಾರ ಸಾಲ ಮಾಡುತ್ತದೆ ಮತ್ತು ಬೇರೆ ರಾಜ್ಯಗಳು ಸಹ ಸಾಲ ಮಾಡುತ್ತವೆ. ಸಾಲ ಮಾಡದೆಯೇ ಬಜೆಟ್ ಮಂಡಿಸುವುದಕ್ಕೆ ಸಾಧ್ಯವೇ ಇಲ್ಲ. ಖರ್ಚುಗಳನ್ನು ಭರಿಸುವುದಕ್ಕೆ ಸಾಧ್ಯವೇ ಇಲ್ಲ. ಸಾಲ ಮಾಡಬೇಕಾಗುತ್ತದೆ. ಆದರೆ, ಸಾಲ ಒಂದು ಮಿತಿಯೊಳಗೆ ಇರಬೇಕು. The Karnataka Fiscal Responsibility Act ಎಂದು 2002ನೇ ಇಸವಿಯಲ್ಲಿ ನಾವು ಪಾಸ್ ಮಾಡಿಕೊಂಡಿರುತ್ತೇವೆ. ಅದರಂತೆ, ಜಿಡಿಪಿ ಯ ಶೇಕಡ 25 ಕ್ಕೆ ಒಳಗಡೆ ಸಾಲ ಇರಬೇಕೆಂದು ಇದೆ. ಇಲ್ಲದೇ ಹೋದರೆ, ಅಂತಹ ಸರ್ಕಾರಗಳು ಸಾಲದ ಭಾದೆಯನ್ನು ಎದುರಿಸುತ್ತಿವೆ ಎಂದು ಆಗುತ್ತದೆ. ಆದರೆ, ನಮ್ಮ ರಾಜ್ಯ ಶೇಕಡ 25 ಕ್ಕೆ ಒಳಗಡೆಯೇ ಇದೆ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಶೇಕಡ 5 ರಷ್ಟು ಮಾತ್ರ ಕಡಿಮೆ ಇದೆ.

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರೇ, ತಾವು ಇನ್ನು ಮಲಗಿಕೊಂಡು ಮಾತನಾಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಕೇಶವ ಪ್ರಸಾದ್‌ರವರೇ, ತಾವು ಸುಮ್ಮನೆ ಇರಿ. ತಾವು ಏತಕ್ಕೆ ಕುಳಿತುಕೊಂಡೇ ಮಾತನಾಡುತ್ತೀರಿ?

**ಸಭಾಪತಿಯವರು:-** ಎದ್ದು ನಿಂತು ಮಾತನಾಡಬೇಕೆಂದು ತಮಗೆ ತಿಳಿಯುವುದಿಲ್ಲವೇ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, the Karnataka Fiscal Responsibility Act ನಲ್ಲಿ ಏನು ಹೇಳಿದ್ದಾರೆಂದರೆ, ಒಂದು ರಾಜ್ಯದ ಆರ್ಥಿಕ ಪರಿಸ್ಥಿತಿ ಆರೋಗ್ಯಕರವಾಗಿದೆ ಇದೆ ಎಂದು ಹೇಳಬೇಕಾದರೆ, ಮೊದಲನೆಯದಾಗಿ, fiscal deficit ಶೇಕಡ 3 ರೊಳಗೆ ಇರಬೇಕು, revenue surplus ಇರಬೇಕು, revenue deficit ಗೆ ಹೋಗಬಾರದು. ಸಾಲ ಜಿಎಸ್‌ಡಿಪಿ ಯ ಶೇಕಡ 25 ರೊಳಗೆ ಇರಬೇಕು. ನಾನು ಯಾವಾಗ ಹಣಕಾಸಿನ ಮಂತ್ರಿಯಾಗಿದ್ದೇನೆ, ಈ Karnataka Fiscal Responsibility Act ನ target ಒಳಗಡೆಯೇ ಇದ್ದೇನೆ. ಆದುದರಿಂದ, ನಾವು ಯಾವತ್ತೂ ಕೂಡ ಕರ್ನಾಟಕ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿಬಿಟ್ಟಿದ್ದೇವೆ ಎನ್ನುವುದನ್ನು ಅಥವಾ ಆರ್ಥಿಕವಾಗಿ ಸಾಲಗಾರರನ್ನಾಗಿ ಮಾಡಿದ್ದೇವೆಂದು ಹೇಳುವಂಥದ್ದು ಯಾವಾಗಲೂ ಇರುವುದಿಲ್ಲ. ಆದುದರಿಂದ, ಈ ಪೂರಕ ಅಂದಾಜುಗಳನ್ನು ಎಲ್ಲಾ ಸರ್ಕಾರಗಳು ಕೂಡ ಮಂಡಿಸುತ್ತೇವೆ. ಅದಕ್ಕೋಸ್ಕರ ನಮ್ಮ ದೇಶದ ಸಂವಿಧಾನ ಅವಕಾಶ ಮಾಡಿಕೊಟ್ಟಿರುತ್ತದೆ. ಹೊಸ ಯೋಜನೆಗಳನ್ನು ಮಾಡುತ್ತೇವೆ ಅಥವಾ ನಾವು ಬಜೆಟ್‌ನಲ್ಲಿ ನಿಗದಿತ ಯೋಜನೆಗಳಿಗೆ ಇಟ್ಟಿರುವಂತಹ ಹಣ ಸಾಕಾಗುವುದಿಲ್ಲ. ಆ ಸಂದರ್ಭದಲ್ಲಿ ಇಟ್ಟಿರುವಂತಹ ಹಣ ಸಾಲದೇ ಹೋದಾಗ, ಹೆಚ್ಚುವರಿಯಾಗಿ ಹಣ ಕೊಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾವು ಪೂರಕ ಅಂದಾಜುಗಳೆಂದು ಇದನ್ನು ಕರೆಯುತ್ತೇವೆ. ಇಷ್ಟೆಲ್ಲಾ ಆದರೂ ಸಹ, ಗ್ಯಾರಂಟಿ ಯೋಜನೆಗಳಿಗೆ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣ ಏತಕ್ಕೆ ತೆಗೆದುಕೊಂಡಿದ್ದೀರಿ ಎಂದು ಅನೇಕ ಸದಸ್ಯರು ಹೇಳುತ್ತಿದ್ದಾರೆ. ಅದು ಸುಳ್ಳು. ಬಿಜೆಪಿ ಅಧಿಕಾರದಲ್ಲಿರುವಂತಹ ರಾಜ್ಯಗಳಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಏತಕ್ಕೆ ಜಾರಿ ಮಾಡಿರುವುದಿಲ್ಲ? ಕೇಂದ್ರ ಸರ್ಕಾರದಲ್ಲಿ ಏತಕ್ಕೆ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಜಾರಿ ಮಾಡಿರುವುದಿಲ್ಲ. ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ ತಾವು ಹೇಳಿ ನೋಡೋಣ. ತಾವು ಕೂಡ ದಲಿತ

ಕುಟುಂಬದಿಂದ ಬಂದಿರುವಂತಹವರು. ಕೇಂದ್ರ ಸರ್ಕಾರದವರು ಏತಕ್ಕೆ ಮಾಡಿರುವುದಿಲ್ಲ? ಬಿಜೆಪಿ ಅಧಿಕಾರಿದಲ್ಲಿರುವ ಯಾವುದಾದರೂ ರಾಜ್ಯಗಳಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಜಾರಿಯಲ್ಲಿದೆ ಎಂದು ತೋರಿಸಲಿ ನೋಡೋಣ. ಯಾವ ರಾಜ್ಯದಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯನ್ನು ಜಾರಿ ಮಾಡಿದೆ, ನಾವು ಮಾಡಿರುವುದರಲ್ಲಿ ಮೊಸರಲ್ಲಿ ಕಲ್ಲು ಹುಡುಕುವಂತಹ ಕೆಲಸವನ್ನು ವಿರೋಧ ಪಕ್ಷದವರು ಮಾಡುತ್ತಿದ್ದಾರೆ. ನಮ್ಮ ಯೋಜನೆಯಲ್ಲಿ ಸ್ವಲ್ಪ ದೋಷಗಳಿರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವ ಯಾವುದೇ ರಾಜ್ಯಗಳಲ್ಲಿ ಈ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯನ್ನು ಇದುವರೆವಿಗೂ ಜಾರಿಗೆ ತಂದಿರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿ ಹಣದಲ್ಲಿ ಖರ್ಚು ಮಾಡಬೇಕೆಂದು ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಜಾರಿಗೆ ತಂದಿರುತ್ತಾರೆ? ಯಾವುದಾದರೂ ಒಂದು ರಾಜ್ಯ ಇದ್ದರೆ ತೋರಿಸಲಿ ಅಥವಾ ಕೇಂದ್ರ ಸರ್ಕಾರದವರು ಮಾಡಿದ್ದರೂ ಸಹ ತೋರಿಸಲಿ. ಯಾವುದೇ ರಾಜ್ಯಗಳಲ್ಲಿ ಅಥವಾ ಕೇಂದ್ರ ಸರ್ಕಾರದಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಜಾರಿ ಮಾಡಿರುವುದಿಲ್ಲ. ಆದುದರಿಂದ, ನಾವು ಎಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿದ್ದಾರೆ ಅಲ್ಲಿ ನಮ್ಮ ಸರ್ಕಾರ 2013ರಲ್ಲಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯನ್ನು ಜಾರಿಗೆ ತಂದಿರುತ್ತೇನೆ. ಆ ಸಂದರ್ಭದಲ್ಲಿ ನಾನು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದು, ನಾನೇ ಸದರಿ ಯೋಜನೆಯನ್ನು ಜಾರಿಗೆ ತಂದಿರುತ್ತೇನೆ. ನಾನು ಇವೊತ್ತಿಗೂ ಒತ್ತಾಯ ಮಾಡುವುದೇನೆಂದರೆ, ಕೇಂದ್ರ ಸರ್ಕಾರ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯನ್ನು ಜಾರಿಗೆ ತರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿ ಹಣದಲ್ಲಿ ಖರ್ಚು ಮಾಡುತ್ತೇವೆಂದು ಯೋಜನೆ ಜಾರಿಗೆ ತರಲಿ. ಅದೇ ರೀತಿ, ಬಿಜೆಪಿ ಅಧಿಕಾರದಲ್ಲಿರುವಂತಹ ಬೇರೆ ರಾಜ್ಯಗಳಲ್ಲಿಯೂ ಈ ಯೋಜನೆಯನ್ನು ಜಾರಿಗೆ ತರಲಿ. I demand it. ಅದನ್ನು ವಿರೋಧ ಪಕ್ಷದವರು ಮಾಡುವುದಿಲ್ಲ. ಬದಲಾಗಿ, ಮೊಸರಲ್ಲಿ ಕಲ್ಲು ಹುಡುಕುವಂತಹ ಕೆಲಸ ಮಾಡುತ್ತಾರೆ. ಆದುದರಿಂದ, ಈ ಪೂರಕ ಅಂದಾಜುಗಳನ್ನು ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಸಹ ಮಾಡಿದ್ದಾರೆ. ನಾವು ಕೂಡ ಸಂವಿಧಾನ ರಚನೆಯಾದಂತಹ ಕಾಲದಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ಎಲ್ಲಾ ಸರ್ಕಾರದಲ್ಲಿ ಕೂಡ ಮಾಡಿರುತ್ತೇವೆ. ಆದುದರಿಂದ, ಇದು ಯಾವುದೇ ಖರ್ಚು ಮಾಡಬೇಕಾದರೂ ಕೂಡ ಸದನದ ಒಪ್ಪಿಗೆ/ಅನುಮತಿ ಇಲ್ಲದೇ ಮಾಡುವುದಕ್ಕೆ ಆಗುವುದಿಲ್ಲ.

(ಮುಂದು)

(931) 21.08.2025/7.30/ ಎಸ್‌ಕೆ-ಎಕೆ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು:-** ಇಲ್ಲಿಗೆ ಸಾಕು ಮಾಡಿ. ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ನೀವು ದಲಿತ ವಿರೋಧಿಗಳು. ದಲಿತರ ಹಣವನ್ನು ನುಂಗಿದವರು ನೀವು.

**(ಗೊಂದಲ)**

**Sri SIDDARAMAIAH:** The BJP is anti-national and anti-SC/ST people. ...*(Interruptions)*... What moral right you have?

**(ಗೊಂದಲ)**

**ಶ್ರೀ ಎನ್. ಬೋಸರಾಜು (ಸಭಾನಾಯಕರು):- ...**ನಿಮಗೆ ಕೇಳುವುದಕ್ಕೆ ನೈತಿಕತೆ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ...ದ್ರೋಹ ಮಾಡಿದ.... The SCSP/TSP Act is a bundle. ಅದು ಬರಿ ಬಂಡಲ್. ದಲಿತರ ಹಣವನ್ನು ನುಂಗುವುದಕ್ಕೆ ಮಾಡಿರುವಂತಹ ವ್ಯವಸ್ಥೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ನಾವು ಮಾಡಿ ತೋರಿಸಿದ್ದೇವೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅದು ಬಂಡಲ್.

**ಶ್ರೀ ಸಿದ್ದರಾಮಯ್ಯ:-** ನೀವು ಮಾಡಿರಿ.

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 22ನೇ ಆಗಸ್ಟ್ ಮಾಹೆ 2025 ರಂದು ಶುಕ್ರವಾರ ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**